ಸೋಮವಾರ, ಫೆಬ್ರುವರಿ 28, 2022 | ₹ 6.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಬಿಡದಿಯಲ್ಲಿ ಭಾನುವಾರ ರಾತ್ರಿ ನಡೆದ ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿದರು

ಮೇಕೆದಾಟು ಪಾದಯಾತ್ರೆಯಲ್ಲಿ ಎಚ್‌.ಡಿ. ಕುಮಾರಸ್ವಾಮಿಗೆ ಡಿಕೆಶಿ ತಿರುಗೇಟು

ನಾನು ಮಣ್ಣಿನ ಮಗನಲ್ಲ, ಕಲ್ಲಿನ ಮಗ

ಪ್ರಜಾವಾಣಿ ವಾರ್ತೆ

ರಾಮನಗರ: 'ನಾನು ಮಣ್ಣಿನ ಮಗ ಅಲ್ಲ, ಕಲ್ಲಿನ ಮಗ. ಹಾಗಂತ ನಮ್ಮಣ್ಣ ಹೇಳಿದ್ದಾನೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಎಚ್‌.ಡಿ. ಕುಮಾರಸ್ವಾಮಿಗೆ ಟಾಂಗ್ ನೀಡಿದರು.

ಮೊದಲ ದಿನದ ಮೇಕೆದಾಟು ಪಾದಯಾತ್ರೆ ಮುಕ್ತಾಯದ ಬಳಿಕ ಬಿಡದಿಯಲ್ಲಿ ಭಾನುವಾರ ರಾತ್ರಿ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಾರ್ಯಕ್ರಮದ ವೇದಿಕೆಯಲ್ಲಿ ತಮ್ಮನ್ನು ಮಣ್ಣಿನ ಮಗ ಎಂದು ಬಣ್ಣಿಸಿದಕ್ಕೆ ಪ್ರತಿಕ್ರಿಯಿಸಿದ ಡಿಕೆಶಿ 'ನಾನು ಬಂಡೆ ಎಂದು ನಮ್ಮಣ್ಣ ಹೇಳುತ್ತಾನೆ. ಕಲ್ಲು ಪ್ರಕೃತಿ, ಅದನ್ನು ಕಡಿದರೆ ಆಕೃತಿ. ಪೂಜಿಸಿದರೆ ಸಂಸ್ಕೃತಿ. ಬಂಡೆ ಕೆತ್ತಿದರೆ ತಾನೇ ಚಪ್ಪಡಿ, ದಿಂಡು, ವಿಗ್ರಹ ಎಲ್ಲ ಆಗುವುದು. ಅದನ್ನು ಹೇಗೆ ಬೇಕಾದರೂ ಉಪಯೋಗಿಸಿಕೊಳ್ಳಬಹುದು. ನಮ್ಮಣ್ಣನೂ ಬೇಕಾದರೆ ಉಪಯೋಗಿಸಿಕೊಳ್ಳಲಿ' ಎಂದು ಟಾಂಗ್ ನೀಡಿದರು.



ಕರಡಿಮಜಲು ಕಲಾವಿದರೊಂದಿಗೆ ಡಿ.ಕೆ. ಶಿವಕುಮಾರ್

'ನಾಲಿಗೆ ಇದೆ ಅಂತ ಯಾಕಣ್ಣ ಹರಿಬಿಡುತ್ತೀಯಾ. ಜನ ಛೀ.. ಥೂ... ಅಂತ ಬಯ್ಯುತ್ತಾರೆ ಕಣಣ್ಣ' ಎಂದು ಕುಮಾರಸ್ವಾಮಿ ಅವರನ್ನು ಡಿಕೆಶಿ ಕೆಣಕಿದರು.

'ಜನತಾದಳದಿಂದ ಜಲಧಾರೆ ಹೆಸರಿನಲ್ಲಿ ಹೋರಾಟ ಮಾಡುವುದಾಗಿ ಕುಮಾರಸ್ವಾಮಿ ಹೇಳಿದ್ದಾರೆ. ಅದನ್ನು ಸ್ವಾಗತಿಸುತ್ತೇನೆ. ಚಾಮರಾಜನಗರದಿಂದ ಬೀದರ್‌ವರೆಗೂ ಹೋರಾಟ ಮಾಡಲಿ ನಮ್ಮದೇನು ಅಭ್ಯಂತರ ಇಲ್ಲ. ನಮ್ಮ ಸಂಪೂರ್ಣ ಬೆಂಬಲ ಅವರಿಗೆ ಇದೆ. ಕಾಂಗ್ರೆಸ್‌ನವರು ಮಾತ್ರ ಕಾರ್ಯಕ್ರಮ ಮಾಡುತ್ತಿಲ್ಲ. ಪಾದಯಾತ್ರೆಗೆ ಜೆಡಿಎಸ್ ಕಾರ್ಯಕರ್ತರೂ ಬೆಂಬಲ ಸೂಚಿಸಿದ್ದಾರೆ' ಎಂದರು.

'ನೀರಿಗೆ ರುಚಿ, ಬಣ್ಣ ಇಲ್ಲ. ಇದನ್ನು ಹೇಗೆ ಬೇಕಾದರೂ ಹರಿಸಬಹುದು. ನೀರಿಲ್ಲದೇ ನಾವು ಬದುಕಲು ಆಗದು. ಅದಕ್ಕಾಗಿಯೇ ನಾವು ಹೋರಾಟ ಮಾಡುತ್ತಿದ್ದೇವೆ. ನಾವು ಯಾರನ್ನೂ ದುಡ್ಡು ಕೊಟ್ಟು ಪಾದಯಾತ್ರೆಗೆ ಕರೆಯಿಸಿಲ್ಲ. ಜನರೇ ಸ್ವಯಂಪ್ರೇರಿತರಾಗಿ ಹೋರಾಟದಲ್ಲಿ ಪಾಲ್ಗೊಂಡಿದ್ದಾರೆ.

'ದೇವೇಗೌಡರು ಈ ರಾಜ್ಯದಲ್ಲಿ ಹೋರಾಟ ಮಾಡಿದ್ದಾರೆ. ಕುಣಿಗಲ್, ವಿಠಲೇನಹಳ್ಳಿ ಹೋರಾಟದಲ್ಲಿ ಹೆಜ್ಜೆ ಹಾಕಿದ್ದಾರೆ. ಎಸ್‌.ಎಂ. ಕೃಷ್ಣ ಸಹ ಕಾವೇರಿಗಾಗಿ ಹೋರಾಟ ಮಾಡಿದ್ದಾರೆ. ಮಾಜಿ ಪ್ರಧಾನಿ ಚಂದ್ರಶೇಖರ್, ಆಂಧ್ರದ ಮಾಜಿ ಮುಖ್ಯಮಂತ್ರಿ ಚಂದ್ರಶೇಖರ್ ಸೇರಿದಂತೆ ದೇಶದಾದ್ಯಂತ ಹಲವು ನಾಯಕರು ಪಾದಯಾತ್ರೆ ಮಾಡಿದ ಉದಾಹರಣೆ ಇದೆ' ಎಂದು ವಿವರಿಸಿದರು.

ಮಾಜಿ ಸಚಿವರಾದ ಟಿ.ಬಿ. ಜಯಚಂದ್ರ, ಚಲುವರಾಯಸ್ವಾಮಿ, ಸಂಸದ ಡಿ.ಕೆ. ಸುರೇಶ್, ವಿಧಾನ ಪರಿಷತ್ ಸದಸ್ಯರಾದ ಸಿ.ಎಂ. ಲಿಂಗಪ್ಪ, ಎಸ್‌. ರವಿ, ಮಾಜಿ ಶಾಸಕ ಎಚ್‌.ಸಿ. ಬಾಲಕೃಷ್ಣ ಮತ್ತಿತರರು ಇದ್ದರು.

ಎನ್‌ಟಿಐ ಲೇಔಟ್: ಹೌಸಿಂಗ್ ಸೊಸೈಟಿಯಿಂದ ಜಲಮಂಡಳಿಗೆ ಶುಲ್ಕ ಪಾವತಿ ಬಾಕಿ

ಒಳಚರಂಡಿ ಸಂಪರ್ಕ ಇಲ್ಲದ ಲೇಔಟ್!

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಬಿಡಿಎ ನಿಯಮಗಳನ್ನು ಗಾಳಿಗೆ ತೂರಿ ಎನ್‌ಟಿಐ (ರಾಷ್ಟ್ರೀಯ ಕ್ಷಯರೋಗ ಸಂಸ್ಥೆ) ಹೌಸಿಂಗ್ ಸೊಸೈಟಿ ಅಭಿವೃದ್ಧಿಪಡಿಸಿರುವ ರಾಜೀವ್ ಗಾಂಧಿ ಬಡಾವಣೆಯಲ್ಲಿ ಮೂಲ-ಸೌಕರ್ಯಗಳೇ ಇಲ್ಲ. ನೀರು ಸರಬರಾಜು ಕೊಳವೆ ಮಾರ್ಗ, ಗ್ರೇಟರ್ ಬೆಂಗಳೂರು ನೀರು ಮತ್ತು ಒಳಚರಂಡಿ ಯೋಜನೆಗೆ ಸೊಸೈಟಿ ನಿಗದಿತ ಶುಲ್ಕವನ್ನು ಜಲಮಂಡಳಿಗೆ ಪಾವತಿಸದ ಕಾರಣ ಇನ್ನು ಕಾಮಗಾರಿ ಆರಂಭವಾಗಿಲ್ಲ.


ಅನುಮೋದಿತ ನಕ್ಷೆಯಂತೆ ಬಡಾವಣೆಯ 2,102 ವಸತಿ ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇವುಗಳ ಪೈಕಿ ಮೊದಲ ಹಂತದಲ್ಲಿ ಶೇ 60ರಷ್ಟು ಅಂದರೆ 1,262 ಮತ್ತು ಎರಡನೇ ಹಂತದಲ್ಲಿ ಶೇ 10ರಷ್ಟು ಅಂದರೆ 210 ನಿವೇಶನಗಳನ್ನು ಸದಸ್ಯರಿಗೆ ಹಂಚಿಕೆ ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿವೇಶನಗಳನ್ನು ಬಿಡುಗಡೆ ಮಾಡಿದೆ.

ರಸ್ತೆ, ಉದ್ಯಾನ, ಅಂತರಿಕ ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆ, ನೀರು ಸರಬರಾಜಿನ ಸಂಪರ್ಕ ಕೊಳವೆ ಹಾಗೂ ಉಪಕೊಳವೆಗಳ ಅಗತ್ಯ ಶುಲ್ಕಗಳು, ಮುಖ್ಯ ಒಳಚರಂಡಿ ವ್ಯವಸ್ಥೆಗೆ ಸಂಪರ್ಕ ಕಲ್ಪಿಸಲು ತಗಲುವ ಹೆಚ್ಚುವರಿ ಶುಲ್ಕಗಳನ್ನು ಸೊಸೈಟಿಯೇ ಪಾವತಿಸಬೇಕ ಎಂಬ ಷರತ್ತುಗಳನ್ನು ಶೇ 60ರಷ್ಟು ನಿವೇಶನಗಳ ಬಿಡುಗಡೆಗೆ ಕಾರ್ಯಾದೇಶ ನೀಡಿದ ಸಂದರ್ಭದಲ್ಲೇ (2011ರಲ್ಲೇ) ಬಿಡಿಎ ವಿಧಿಸಿತ್ತು.

‘ಕಾರ್ಯಾದೇಶ ನೀಡಿದ ಐದು ವರ್ಷಗಳಲ್ಲೇ ಬಡಾವಣೆಯನ್ನು ಸಂಪೂರ್ಣ ಅಭಿವೃದ್ಧಿಪಡಿಸಬೇಕು. ನಿಗದಿತ ಸಮಯದೊಳಗೆ ಈ ಕಾಮಗಾರಿಗಳನ್ನು ಸೊಸೈಟಿ ಪೂರ್ಣಗೊಳಿಸದಿದ್ದರೆ, ಬಾಕಿ ಕಾಮಗಾರಿಗಳನ್ನು ಬಿಡಿಎ ವತಿಯಿಂದಲೇ ಕೈಗೊಂಡು ಇದಕ್ಕೆ ತಗಲುವ ವೆಚ್ಚವನ್ನು ಉಳಿದ ಶೇ40ರಷ್ಟು ನಿವೇಶನಗಳನ್ನು ಪ್ರಾಧಿಕಾರವೇ ಮಾರಾಟ ಮಾಡಲಿದೆ. ಕಾಮಗಾರಿಗೆ ತಗುಲುವ ವೆಚ್ಚ ಹೊಂದಾಣಿಕೆ ಮಾಡಿಕೊಂಡು ಉಳಿದ ಮೊತ್ತವನ್ನು ಸೊಸೈಟಿಗೆ ಹಿಂದಿರುಗಿಸ-ಲಾಗುವುದು’ ಎಂದೂ ಷರತ್ತಿನಲ್ಲಿ ಉಲ್ಲೇಖಿಸಿತ್ತು.

‘ಕೊಳಚೆ ನೀರನ್ನು ಸಂಸ್ಕರಿಸಿ ಆ ನೀರನ್ನು ಕುಡಿಯುವ ಹೊರತಾಗಿ ಉಳಿದ ಉದ್ದೇಶಕ್ಕೆ ಬಳಸಬೇಕು ಎಂದೂ ತಿಳಿಸಿತ್ತು. ಆದರೆ, 2015ರಲ್ಲಿ ಎರಡನೇ ಹಂತದಲ್ಲಿ ಶೇ10ರಷ್ಟು ಅಂದರೆ 210 ನಿವೇಶನಗಳನ್ನು ಬಿಡಿಎ ಬಿಡುಗಡೆ ಮಾಡಿದೆ. ಆಗಲೂ ಈ ಷರತ್ತುಗಳು ಪಾಲನೆ ಆಗಿವೆಯೇ ಎಂಬುದನ್ನು ಗಮನಿಸಿಲ್ಲ. ಇಂದಿಗೂ ಒಳಚರಂಡಿ, ಕುಡಿಯುವ ನೀರಿನ ಸಂಪರ್ಕ ಕಲ್ಪಿಸುವ ಕಾಮಗಾರಿಯೇ ಆರಂಭವಾಗಿಲ್ಲ’ ಎನ್ನುತ್ತಾರೆ ಸ್ಥಳೀಯರು ‘ಜಲಮಂಡಳಿಗೆ ಸೊಸೈಟಿ ಪಾವತಿಸಬೇಕಾದ ₹4.74 ಕೋಟಿ ಬಾಕಿ ಉಳಿಸಿಕೊಂಡಿರುವ ಬಗ್ಗೆ 2021ರ ಮೇನಲ್ಲೇ ಸೊಸೈಟಿಗೆ ನೋಟಿಸ್ ಜಾರಿ ಮಾಡಲಾಗಿದೆ. ಪೂರ್ಣ ಮೊತ್ತ ಪಾವತಿಸದ ಕಾರಣ ಇನ್ನೂ ಕಾಮಗಾರಿ ಆರಂಭವಾಗಿಲ್ಲ’ ಎನ್ನುತ್ತಾರೆ ಅಧಿಕಾರಿಗಳು.

‘ಅನುಮೋದಿತ ನಕ್ಷೆಯನ್ನು ರದ್ದುಪಡಿಸಬೇಕು’



ಬಿಡಿಎ ವಿಧಿಸಿರುವ ಷರತ್ತುಗಳಲ್ಲಿ ಒಂದನ್ನೂ ಎನ್‌ಟಿಐ ಹೌಸಿಂಗ್ ಸೊಸೈಟಿ ಪಾಲಿಸಿಲ್ಲ. ಇದರಿಂದಾಗಿ ರಸ್ತೆಯಲ್ಲೇ ಕೊಳಚೆ ನೀರು ಹರಿಯುವಂತಾಗಿದೆ. ಪಾರ್ಕ್ ಜಾಗವನ್ನೇ ನಿವೇಶನ ಮಾಡಿ ಮಾರಾಟ ಮಾಡಲಾಗಿದೆ. ಸಾಲ ಪಡೆಯಲು ಅವಕಾಶ ಇಲ್ಲದಿದ್ದರೂ ಬಿಬಿಎಂಪಿಗೆ ಖಾತೆ ಮಾಡಿಸಿ ರಾಷ್ಟ್ರೀಯ ಬ್ಯಾಂಕ್‌ನಿಂದ ಸಾಲ ಪಡೆದುಕೊಳ್ಳಲಾಗಿದೆ. ಎಲ್ಲಾ ಷರತ್ತುಗಳನ್ನು ಉಲ್ಲಂಘನೆ ಮಾಡಿರುವುದರಿಂದ ಅನುಮೋದಿತ ವಸತಿ ಬಡಾವಣೆ ನಕ್ಷೆಯನ್ನು ಬಿಡಿಎ ರದ್ದುಪಡಿಸಬೇಕು. ಈ ಎಲ್ಲಾ ಅಕ್ರಮಗಳ ಬಗ್ಗೆ ಸಿಸಿಬಿ ಮೂಲಕ ತನಿಖೆ ಮಾಡಿಸಬೇಕು.

ಕೆ.ಎನ್.ಚಕ್ರಪಾಣಿ, ಚಕ್ರಪಾಣಿ ಫೌಂಡೇಷನ್ ಅಧ್ಯಕ್ಷ



ನಾಟಕ ಪ್ರದರ್ಶನ

ನಗರದ ಅಶ್ವತ್ಥ ಕಲಾಭವನದಲ್ಲಿ ಭಾನುವಾರ ಥೇಮಾ ತಂಡದಿಂದ ಎಲ್‌ಎಸ್‌ಡಿ ನಾಟಕ ಪ್ರದರ್ಶಿಸಲಾಯಿತು

ಪ್ರಜಾವಾಣಿ ಚಿತ್ರ

ಮತ್ತೊಬ್ಬ ಮಹಿಳೆಯ ಶವ ಪತ್ತೆ

ರಾಮನಗರ: ಕನಕಪುರ ತಾಲ್ಲೂಕಿನ ಸಂಗಮ ಬಳಿ ಕಾವೇರಿ ನದಿಯಲ್ಲಿ ಶನಿವಾರ ಮತ್ತೊಬ್ಬ ಮಹಿಳೆಯರ ಶವ ಪತ್ತೆ ಆಗಿದೆ.

ಹನೂರು ಅರಣ್ಯ ವಲಯದಲ್ಲಿ ಶುಕ್ರವಾರ ವೃದ್ಧೆಯೊಬ್ಬರ ಶವ ಸಿಕ್ಕಿತ್ತು. ಇದರಿಂದ ಸಾವಿಗೀಡಾದವರ ಸಂಖ್ಯೆ ಎರಡಕ್ಕೆ ಏರಿಕೆ ಆಗಿದೆ. ಮಾದಪ್ಪನ ಭಕ್ತರು ಕನಕಪುರದಿಂದ ಮಹದೇಶ್ವರನ ಬೆಟ್ಟಕ್ಕೆ ಕಾಲ್ನಡಿಗೆ ಕೈಗೊಂಡಿದ್ದು, ನದಿ ದಾಟುವ ವೇಳೆ ನೀರಿನ ಪ್ರವಾಹಕ್ಕೆ ಸಿಲುಕಿ ಹಲವರು ಕೊಚ್ಚಿ ಹೋಗಿರುವ ಶಂಕೆ ವ್ಯಕ್ತವಾಗಿತ್ತು.

ಕೋವಿಡ್: ಹೊಸ ಪ್ರಕರಣ 366ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ 366ಕ್ಕೆ ಹಾಗೂ ಸೋಂಕು ದೃಢ ಪ್ರಮಾಣ ಶೇ 0.69ಕ್ಕೆ ಇಳಿಕೆಯಾಗಿದೆ.

24 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಒಂದಂಕಿಗೆ ಇಳಿಕೆಕಂಡಿದೆ. ಒಂದು ದಿನದಲ್ಲಿ 52 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಬೆಂಗಳೂರಿನಲ್ಲಿ 224 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಬೆಳಗಾವಿ, ಮೈಸೂರಿನಲ್ಲಿ ತಲಾ 17, ದಕ್ಷಿಣ ಕನ್ನಡದಲ್ಲಿ 10 ಪ್ರಕರಣ ಪತ್ತೆಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ ಒಂದಂಕಿಯಲ್ಲಿವೆ. ಬೆಂಗಳೂರು ಗ್ರಾಮಾಂತರ, ಗದಗದಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ. ಒಟ್ಟು ಪ್ರಕರಣಗಳ ಸಂಖ್ಯೆ 39.40 ಲಕ್ಷಕ್ಕೆ ಏರಿಕೆಯಾಗಿದೆ.

ಸೋಂಕಿತರ ಪೈಕಿ ಬೆಂಗಳೂರಿನಲ್ಲಿ 326 ಮಂದಿ ಸೇರಿದಂತೆ ರಾಜ್ಯದಲ್ಲಿ 801 ಮಂದಿ ಚೇತರಿಸಿಕೊಂಡಿ-ದ್ದಾರೆ. ರಾಜ್ಯದಲ್ಲಿ ಗುಣಮುಖ-ರಾದವರ ಒಟ್ಟು ಸಂಖ್ಯೆ 38.94 ಲಕ್ಷಕ್ಕೆ ತಲುಪಿದೆ. ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆಯಾಗಿದೆ. 6,488 ಸೋಂಕಿತರು ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆ-ದುಕೊಳ್ಳುತ್ತಿದ್ದಾರೆ.

ಕೊರೊನಾ ಸೋಂಕಿತರಲ್ಲಿ 17 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ 11, ಉಡುಪಿ, ರಾಯಚೂರು, ಕೊಡಗು, ದಕ್ಷಿಣ ಕನ್ನಡ, ಚಾಮರಾಜನಗರ ಹಾಗೂ ಬೀದರ್ ಜಿಲ್ಲೆಯಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 4.64 ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 39,936ಕ್ಕೆ ತಲುಪಿದೆ.

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್ / ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	43.53 ಕೋಟಿ ▲	4.29 ಕೋಟಿ
ಸಕ್ರಿಯ ಪ್ರಕರಣ	6.37 ಕೋಟಿ ▼	1.11 ಲಕ್ಷ ▼
ಗುಣಮುಖ	36.55 ಕೋಟಿ ▲	4.22 ಕೋಟಿ
ಸಾವು	59.65 ಲಕ್ಷ ▲	5.13 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	13.08 ಲಕ್ಷ ▼	10,273 ▼
ಗುಣಮುಖ	17.24 ಲಕ್ಷ ▼	20,439 ▼
ಸಾವು	6,548 ▼	243 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಜರ್ಮನಿ	ರಷ್ಯಾ	ಟರ್ಕಿ
1.29 ಲಕ್ಷ ▼	1.22 ಲಕ್ಷ ▼	61,764 ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು

ಅಮೆರಿಕ	ಜರ್ಮನಿ	ರಷ್ಯಾ
2.65 ಕೋಟಿ ▼	36.67 ಲಕ್ಷ ▲	24.81 ಲಕ್ಷ ▼

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.43 ಲಕ್ಷ
ಕೇರಳ	65,161 ▲
ತಮಿಳುನಾಡು	38,002 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	78.64 ▲
ಕೇರಳ	64.94 ▲
ತಮಿಳುನಾಡು	34.48

ಭಾರತದ ಕೋವಿಡ್ ಸಂಖ್ಯೆ ವಿವರ: ಭಾನುವಾರ ಬೆಳಿಗ್ಗೆ 8ರವರೆಗಿನ ಮಾಹಿತಿ

ಪ್ರಜಾವಾಣಿ ಗ್ರಾಫಿಕ್ಸ್

ವಿಮೆ ಪಾಲಿಸಿ ಖರೀದಿಸಲು ಆಸಕ್ತಿ ತೋರಿದ ನಾಗರಿಕರು

ಕೋವಿಡ್ ಬಳಿಕ ಉಳಿತಾಯದ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್-19ರ ನಂತರ ಹಣಕಾಸು ವಿಷಯದ ಬಗ್ಗೆ ನಾಗರಿಕರಲ್ಲಿ ಹೆಚ್ಚು ತಿಳಿವಳಿಕೆ ಕಂಡು ಬಂದಿದ್ದು, ಖರ್ಚುಗಳನ್ನು ಕಡಿಮೆ ಮಾಡಿ ಉಳಿತಾಯದ ಬಗ್ಗೆ ಹೆಚ್ಚು ಆಸಕ್ತಿ ತೋರಿದ್ದಾರೆ ಎನ್ನುವುದು ಸಮೀಕ್ಷೆಯಿಂದ ತಿಳಿದು ಬಂದಿದೆ.

‘ಎಸ್‌ಬಿಐ ಲೈಫ್’ ವಿಮಾ ಸಂಸ್ಥೆಯು ‘ನೀಲ್ಸನ್‌ಐಕ್ಯು (ಇಂಡಿಯಾ)’ ಸಹಯೋಗದೊಂದಿಗೆ ಮಾಡಿದ ಗ್ರಾಹಕರ ವಾರ್ಷಿಕ ಅಧ್ಯಯನ ಇದಾಗಿದೆ ಎಂದು ‘ಎಸ್‌ಬಿಐ ಲೈಫ್’ನ ವಲಯ–2ರ ಅಧ್ಯಕ್ಷ ಎವಿಎಸ್ ಶಿವರಾಮ ಕೃಷ್ಣ ವಿವರಿಸಿದ್ದಾರೆ.

‘ಹಣಕಾಸು ಪ್ರತಿರಕ್ಷೆ 2.0’ ಹೆಸರಿನಲ್ಲಿ ಸಮೀಕ್ಷೆ ಕಾರ್ಯ ಕೈಗೊಳ್ಳಲಾಗಿದ್ದು, ಕೋವಿಡ್-19ರ ನಂತರ ಹಣಕಾಸು ವಿಷಯದ ಬಗ್ಗೆ ಗ್ರಾಹಕರ ತಿಳಿವಳಿಕೆಯಲ್ಲಿ ಹೆಚ್ಚಳ ಕಂಡು ಬಂದಿದೆ. ವಿಮೆ ವಿಷಯದಲ್ಲಿ ದೇಶದ ಗ್ರಾಹಕರ ಮನೋಭಾವ ಬದಲಾಗುತ್ತಿದೆ. ಶೇ 57ರಷ್ಟು ಭಾರತೀಯರು ಆರ್ಥಿಕ ಭದ್ರತೆ ಮತ್ತು ಕುಟುಂಬ ಸ್ಥಿರತೆ ಕಾಪಾಡಿಕೊಳ್ಳಲು ಹಣಕಾಸು ಪ್ರತಿರಕ್ಷೆ ಹೊಂದಲು ಒಲವು ಹೊಂದಿದ್ದಾರೆ ಎಂಬುದು ಸಮೀಕ್ಷೆಯ ಸಂಶೋಧನೆಗಳು ಸೂಚಿಸುತ್ತವೆ ಎಂದು ವಿವರಿಸಿದ್ದಾರೆ.

ಕೋವಿಡ್ ಪ್ರಾರಂಭವಾದಾಗಿನಿಂದ ದೇಶದ ಗ್ರಾಹಕರ ವೈಯಕ್ತಿಕ ಖರ್ಚು-ವೆಚ್ಚದ ವಿಷಯದಲ್ಲಿ ಬದಲಾವಣೆ ಕಂಡು ಬಂದಿದೆ. ಬಳಕೆದಾರರು ಈಗ ಎಚ್ಚರಿಕೆಯ ಧೋರಣೆ ಹೊಂದಿದ್ದಾರೆ ಮತ್ತು ವಿವೇಚನೆಯಿಂದ ಖರ್ಚು ಮಾಡುತ್ತಿದ್ದಾರೆ. ಉಳಿತಾಯ ಮತ್ತು ಹೂಡಿಕೆಗಳನ್ನು ಹೆಚ್ಚಿಸಿದ್ದಾರೆ ಎಂದಿದ್ದಾರೆ.

ಶೇ 65ರಷ್ಟು ಭಾರತೀಯರು ಅನಿವಾರ್ಯವಲ್ಲದ ವಸ್ತುಗಳ ಮೇಲೆ ಕಡಿಮೆ ಖರ್ಚು ಮಾಡಲು ಆರಂಭಿಸಿದ್ದಾರೆ ಮತ್ತು ಆದಾಯದ ಶೇ 50ರಷ್ಟು ಉಳಿತಾಯ ವಿಮೆ, ಹೂಡಿಕೆಗಳಿಗೆ ಮೀಸಲಿಡುತ್ತಿದ್ದಾರೆ. ಸಮೀಕ್ಷೆಯ ಪ್ರಕಾರ, ಹಣಕಾಸು ಯೋಜನೆ ಪ್ರಕ್ರಿಯೆಯಲ್ಲಿ ವಿಮೆ ಅತ್ಯಂತ ಮಹತ್ವದ್ದಾಗಿದೆ ಎಂದು ಶೇ 78ರಷ್ಟು ಭಾರತೀಯರು ಭಾವಿಸುತ್ತಾರೆ. ಹೀಗಾಗಿ, ಕುಟುಂಬದ ಆರ್ಥಿಕ ಭವಿಷ್ಯವನ್ನು ಸುರಕ್ಷಿತವಾಗಿರಿಸಲು ಈ ಅವಧಿಯಲ್ಲಿ ಜೀವ ವಿಮೆಯನ್ನು ಆಯ್ಕೆ ಮಾಡಿಕೊಳ್ಳುವುದು ಬುದ್ಧಿವಂತ ನಿರ್ಧಾರವಾಗಿದೆ ಎಂದು ತಿಳಿಸಿದ್ದಾರೆ.

ಬೆಂಗಳೂರು ನಗರ ಜಿಲ್ಲಾ
ಕೋವಿಡ್ ಅಂಕಿ–ಅಂಶ

17,78,361 ▲ ಒಟ್ಟು ಸೋಂಕಿತರು (17,78,137 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
3,648 ▼	17,57,805 ▲	16,907 ▲

ದಿನದ ಏರಿಕೆ

ಹೊಸ ಪ್ರಕರಣ	224 ▼
ಗುಣಮುಖ	326 ▼
ಸಾವು	11 ▼

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ವಿಮರ್ಶಕಿ ಎಂ.ಎಸ್.ಆಶಾದೇವಿ ಅಭಿಮತ

ಶಿವಪ್ರಕಾಶ್ ಕಾವ್ಯಗಳಲ್ಲಿ ಮಾತ್ರ ಹೃದಯದ ದನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕವಿ ಎಚ್.ಎಸ್. ಶಿವಪ್ರಕಾಶ್ ಅವರ ಕಾವ್ಯಗಳಲ್ಲಿ ಮಾತ್ರ ಹೃದಯದ ದನಿಯನ್ನು ಕಾಣಬಹುದು. ಕಾವ್ಯದಲ್ಲಿ ಅವರ ಒಟ್ಟು ಸಾಧನೆಯನ್ನು ಕನ್ನಡ ವಿಮರ್ಶಕ ಜಗತ್ತು ಸಂಪೂರ್ಣವಾಗಿ ವಿಶ್ಲೇಷಿಸುವ ಅಗತ್ಯವಿದೆ’ ಎಂದು ವಿಮರ್ಶಕಿ ಎಂ.ಎಸ್. ಆಶಾದೇವಿ ಅಭಿಪ್ರಾಯಪಟ್ಟರು.

ಸಮಾಜಮುಖಿ ಪ್ರಕಾಶನವು ಗಾಂ-ಧಿಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಎಚ್.ಎಸ್.ಶಿವಪ್ರಕಾಶ್ ಅವರ ಸಮಗ್ರ ಕಾವ್ಯ ಚರ್ಚೆ ಮತ್ತು ‘ಸಮಾಜಮುಖಿ’ ವಾರ್ಷಿಕ ಕಥಾ ಸಂಕಲನ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ನಾಲ್ಕು ದಶಕಗಳಿಂದ ಕಾವ್ಯ ಕೃಷಿಯಲ್ಲಿ ತೊಡಗಿರುವ ಎಚ್.ಎಸ್. ಶಿವಪ್ರಕಾಶ್ ಅವರು ಕನ್ನಡದಲ್ಲಿ ಕಾವ್ಯ ರಚಿಸುವಾಗ ಬೇರೆ ಭಾಷಾ ಸಾಹಿತ್ಯಗಳನ್ನೂ ತಮ್ಮದಾಗಿಸಿಕೊಂಡವರು. ಕನ್ನಡದ ಶ್ರೇಷ್ಠ ಕವಿಗಳ ಸ್ಥಾನದಲ್ಲಿ-ರುವ ಅವರನ್ನು ಯುಗದ ಕವಿ ಎಂದೂ ಕರೆಯಬಹುದು’ ಎಂದರು.



‘ಸಮಾಜಮುಖಿ ವಾರ್ಷಿಕ ಕಥಾ ಸಂಕಲನ’ ಬಿಡುಗಡೆ ಕಾರ್ಯಕ್ರಮದಲ್ಲಿ (ಎಡದಿಂದ) ಜಯರಾಂ ರಾಯಪುರ, ಕವಿ ಎಚ್.ಎಸ್.ಶಿವಪ್ರಕಾಶ್, ಕೆ.ಸತ್ಯನಾರಾಯಣ, ಎಂ.ಎಸ್.ಆಶಾದೇವಿ, ಕಮಲಾಕರ ಕಡವೆ ಹಾಗೂ ಕವಿ ಆರೀಫ್ ರಾಜಾ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಕವಿ ಎಚ್.ಎಸ್.ಶಿವಪ್ರಕಾಶ್, ‘ಕಾವ್ಯ ಒಂದು ಥೆರಪಿ ಹಾಗೂ ಅಶರೀರ ರೂಪದ ಯಾತ್ರೆ. ನೀವು ವಿಶ್ವಯಾತ್ರೆ ಮಾಡದಿದ್ದರೂ ಪರವಾಗಿಲ್ಲ. ನಿಮ್ಮ ಕಾವ್ಯಗಳು ವಿಶ್ವಯಾತ್ರೆ ಮಾಡಬೇಕು’ ಎಂದರು.

ಪ್ರಾಧ್ಯಾಪಕ ಕಮಲಾಕರ ಕಡವೆ, ‘ಎಚ್.ಎಸ್.ಶಿವಪ್ರಕಾಶ್ ಅವರು ಬಹುಭಾಷಿಕ ಮನಸ್ಸಿನ ಕವಿ. ಭಾಷಾವಾರು ರಾಜ್ಯಗಳು ರಚನೆಯಾಗಿ ದಶಕಗಳು ಕಳೆದರೂ ನಮ್ಮಲ್ಲಿನ ಬಹುಭಾಷಿಕತೆ ವಿಂಗಡಣೆ ಆಗಿಲ್ಲ ಎಂಬುದು ಅವರ ಕಾವ್ಯಗಳಿಂದ ತಿಳಿಯುತ್ತದೆ. ಅವು-ಆತ್ಮಪ್ರಾರ್ಥನೆಯಾಗಿದ್ದು, ಕೇವಲ ಸಾಹಿತ್ಯವಲ್ಲ’ ಎಂದರು. ಕವಿ ಕೆ.ಸತ್ಯ-ನಾರಾಯಣ, ‘ಶಿವಪ್ರಕಾಶ್ ಅವರ ಕಾವ್ಯ ಪಾವಿತ್ರ್ಯವನ್ನು ನಿರಾಕರಿಸವುದಿಲ್ಲ. ತಮ್ಮ ಕಾವ್ಯಕ್ಕೆ ಅಗತ್ಯವಾದ ಪಾವಿತ್ರ್ಯವನ್ನು ಸಂದರ್ಭಾನುಸಾರ ನೀಡಿರುತ್ತಾರೆ. ಪ್ರಾರ್ಥನಾ ಮನೋಭಾವದ ಕವಿಯಾದ ಅವರು, ಕಾವ್ಯಗಳಲ್ಲಿ ತಮ್ಮ ಬಗ್ಗೆ ಹಾಗೂ ನಮ್ಮ ಪರವಾಗಿಯೂ ಪ್ರಾರ್ಥಿಸಿಕೊಳ್ಳು-ತ್ತಾರೆ’ ಎಂದರು.

ಸೋಮವಾರ, ಫೆಬ್ರುವರಿ 28, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 59 | ಪುಟ 16

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಉಕ್ಕುವ ಹಾಲು, ಕುದಿಯುವ ನೀರು, ಅಡುಗೆ ಮನೆಯ ಪದಾರ್ಥಗಳು.. ಹೀಗೆ ಮನೆಯಲ್ಲಿನ ಹಲವು ವಸ್ತುಗಳ ಮೂಲಕ ಮಕ್ಕಳಿಗೆ ವಿಜ್ಞಾನವನ್ನು ಕಲಿಸಬಹುದು.



ಅಣ್ವಸ್ತ್ರ ಸಜ್ಜಿತ ಪಡೆಗೆ ಕಟ್ಟೆಚ್ಚರದಲ್ಲಿರಲು ವ್ಲಾಡಿಮಿರ್ ಪುಟಿನ್ ಆದೇಶ

ಅಣು ಸಮರದ ಭೀತಿ

ಕೀವ್/ಮಾಸ್ಕೊ (ರಾಯಿಟರ್ಸ್): ರಷ್ಯಾ-ಉಕ್ರೇನ್ ಸಂಘರ್ಷವು ಇನ್ನಷ್ಟು ತೀವ್ರಗೊಂಡಿದೆ. ಅಣ್ವಸ್ತ್ರ ಹೊಂದಿರುವ ಪಡೆಗಳನ್ನು ಕಟ್ಟೆಚ್ಚರದಲ್ಲಿ ಇರಿಸುವಂತೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಸೇನೆಗೆ ಭಾನುವಾರ ಆದೇಶಿಸಿದ್ದಾರೆ. ಆದರೆ, ಉಕ್ರೇನ್‌ನ ಎರಡನೇ ಅತಿ ದೊಡ್ಡ ನಗರ ಹಾರ್ಕಿವ್‌ನಿಂದ ರಷ್ಯಾ ಸೈನಿಕರನ್ನು ಹೊರಗಟ್ಟಲಾಗಿದೆ ಎಂದು ನಗರದ ಗವರ್ನರ್ ಹೇಳಿಕೊಂಡಿದ್ದಾರೆ.

ಅಣ್ವಸ್ತ್ರ ಹೊಂದಿರುವ ಪಡೆಗಳನ್ನು ಸಜ್ಜಾಗಿ ಇರಿಸಲು ಪುಟಿನ್ ಆದೇಶ ನೀಡಿದ್ದಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಪುಟಿನ್ ಅವರು ಯುದ್ಧವನ್ನು ತೀವ್ರಗೊಳಿಸುತ್ತಿರುವ ರೀತಿಯು ಸ್ವೀಕಾರಾರ್ಹ ಅಲ್ಲವೇ ಅಲ್ಲ ಎಂದು ಅಮೆರಿಕ ಹೇಳಿದೆ.

ಎರಡನೇ ಮಹಾಯುದ್ಧದ ನಂತರ ಉಕ್ರೇನ್‌ನ ಮೇಲೆ ನಡೆದ ಅತ್ಯಂತ ದೊಡ್ಡ ದಾಳಿ ಆರಂಭವಾಗಿ ನಾಲ್ಕು ದಿನಗಳಾಗಿವೆ. ಉಕ್ರೇನ್-ಬೆಲರೂಸ್ ಗಡಿಯಲ್ಲಿ ರಷ್ಯಾ ಜತೆಗೆ ಮಾತುಕತೆ ನಡೆಯಲಿದೆ ಎಂದು ಉಕ್ರೇನ್ ಅಧ್ಯಕ್ಷರ ಕಚೇರಿಯು ತಿಳಿಸಿದೆ. ಯಾವುದೇ ಪೂರ್ವಷರತ್ತು ಇಲ್ಲದೆಯೇ ಮಾತುಕತೆ ನಡೆಯಲಿದೆ ಎಂದು ಕಚೇರಿಯು ಹೇಳಿದೆ.

ಉಕ್ರೇನ್‌ನ ವಿವಿಧ ನಗರಗಳ ಮೇಲೆ ರಷ್ಯಾದ ಕ್ಷಿಪಣಿ ದಾಳಿಯು ಮತ್ತಷ್ಟು ತೀವ್ರಗೊಂಡಿದೆ. ಲಕ್ಷಾಂತರ ನಾಗರಿಕರು ದೇಶ ತೊರೆದಿದ್ದಾರೆ. ಮುಖ್ಯವಾಗಿ ಮಹಿಳೆಯರು ಮತ್ತು ಮಕ್ಕಳು ನೆರೆಯ ದೇಶಗಳಿಗೆ ವಲಸೆ ಹೋಗುತ್ತಿದ್ದಾರೆ.

ರಾಜಧಾನಿ ಕೀವ್, ಉಕ್ರೇನ್ ನಿಯಂತ್ರಣದಲ್ಲಿಯೇ ಇದೆ. ಜನವಸತಿ ಪ್ರದೇಶಗಳ ಮೇಲೆಯೇ ರಷ್ಯಾ ದಾಳಿ ನಡೆಸುತ್ತಿದ್ದರೂ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಎದೆಗುಂದಿಲ್ಲ. ಜನರ ಜತೆಯಲ್ಲಿಯೇ ನಿಂತು, ರಷ್ಯಾವನ್ನು ಎದುರಿಸಲು ಹುರಿದುಂಬಿಸುತ್ತಿದ್ದಾರೆ.

ಆದರೆ, ಆಕ್ರಮಣವನ್ನು 'ವಿಶೇಷ ಸೇನಾ ಕಾರ್ಯಾಚರಣೆ' ಎಂದು ಬಣ್ಣಿಸಿದ್ದ ಪುಟಿನ್ ಅವರು ಅಣ್ವಸ್ತ್ರಗಳನ್ನೂ ಹೊಂದಿರುವ 'ದಾಳಿ ಪ್ರತಿರೋಧ ಪಡೆ'ಯನ್ನು ಕಟ್ಟೆಚ್ಚರದಲ್ಲಿ ಇರಲು ಸೂಚಿಸಿರುವುದು ನ್ಯಾಟೊ ಕಳವಳಕ್ಕೆ ಕಾರಣವಾಗಿದೆ.

ನ್ಯಾಟೊ ನಾಯಕರ ಆಕ್ರಮಣಕಾರಿ ಹೇಳಿಕೆ ಮತ್ತು ರಷ್ಯಾ ಮೇಲೆ ಹೇರಲಾಗಿರುವ ಆರ್ಥಿಕ ನಿರ್ಬಂಧಗಳನ್ನು ಪುಟಿನ್ ಅವರು ಉಲ್ಲೇಖಿಸಿದ್ದಾರೆ.

ರಷ್ಯಾ ಸೇನೆಯ ಕಾರ್ಯಾಚರಣೆಗೆ ಯಾರೇ ಅಡ್ಡಿ ಬಂದರೂ ಅವರು ಹಿಂದೆಂದೂ ಕಂಡಿರದಂತಹ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನು ಪುಟಿನ್ ಅವರು ಈ ಹಿಂದೆಯೂ ನೀಡಿದ್ದರು. ಈ ಎಚ್ಚರಿಕೆಯಲ್ಲಿ ಅಣ್ವಸ್ತ್ರ ಬಳಕೆಯ ಧ್ವನಿ ಇತ್ತು ಎಂದು ವಿಶ್ಲೇಷಿಸಲಾಗಿತ್ತು. ಫ್ರಾನ್ಸ್ ವಿದೇಶಾಂಗ ಸಚಿವ ಇದಕ್ಕೆ ತಿರುಗೇಟು ನೀಡಿದ್ದರು. ನ್ಯಾಟೊ ಕೂಡ ಅಣ್ವಸ್ತ್ರ ಹೊಂದಿರುವ ಮೈತ್ರಿಕೂಟ ಎಂಬುದನ್ನು ಪುಟಿನ್ ಮರೆಯಬಾರದು ಎಂದಿದ್ದರು.

ರಷ್ಯಾದ ದಾಳಿಗೆ ಪಶ್ಚಿಮದ ದೇಶಗಳು ನಿರ್ಬಂಧ ಮತ್ತು ನಿಷೇಧಗಳ ಮೂಲಕವೇ ತಿರುಗೇಟು ನೀಡುತ್ತಿವೆ.

6ನೇ ಪುಟ ನೋಡಿ

ವಿಶೇಷ ಪುಟ 6



ಉಕ್ರೇನ್‌ನಿಂದ ವಿಶೇಷ ವಿಮಾನದ ಮೂಲಕ ಭಾನುವಾರ ಚೆನ್ನೈ ವಿಮಾನ ನಿಲ್ದಾಣಕ್ಕೆ ಬಂದಿಳಿದ ಮಗನನ್ನು ತಂದೆ ಬಿಗಿದಪ್ಪಿದ ಕ್ಷಣ –ಎಎಫ್‌ಪಿ ಚಿತ್ರ

- ಉಕ್ರೇನ್ ತೊರೆದು ನೆರೆಯ ದೇಶಗಳಿಗೆ ಹೋಗಿ ಆಶ್ರಯ ಪಡೆದವರ ಸಂಖ್ಯೆ 4 ಲಕ್ಷಕ್ಕೆ ಏರಿದೆ ಎಂದು ವಿಶ್ವ ಸಂಸ್ಥೆಯ ನಿರಾಶ್ರಿತರ ಹೈಕಮಿಷನರ್ ಕಚೇರಿ ಹೇಳಿದೆ. ಕನಿಷ್ಠ 1.96 ಲಕ್ಷ ಜನರು ಪೋಲೆಂಡ್‌ಗೆ ಮತ್ತು ಇತರರು ಹಂಗೆರಿ ಮತ್ತು ರೊಮೇನಿಯಾಕ್ಕೆ ಹೋಗಿದ್ದಾರೆ
- ರಷ್ಯಾದ 4,300 ಸೈನಿಕರನ್ನು ಹತ್ಯೆ ಮಾಡಲಾಗಿದೆ ಎಂದು ಉಕ್ರೇನ್ ಹೇಳಿಕೊಂಡಿದೆ. ಆದರೆ, ಇದನ್ನು ದೃಢಪಡಿಸಿಕೊಳ್ಳಲು ಸಾಧ್ಯವಾಗಿಲ್ಲ
- ಹಾರ್ಕಿವ್‌ನಲ್ಲಿ ಭಾನುವಾರ ಮುಂಜಾವಿಗೂ ಮುನ್ನವೇ ನೈಸರ್ಗಿಕ ಅನಿಲ ಪೈಪ್‌ಲೈನ್ ಅನ್ನು ರಷ್ಯಾ ಪಡೆಗಳು ಸ್ಫೋಟಿಸಿವೆ. ಪರಿಣಾಮವಾಗಿ ಮುಗಿಲೆತ್ತರ ದಟ್ಟ ಹೊಗೆ ಆವರಿಸಿತ್ತು
- ಉಕ್ರೇನ್-ಬೆಲರೂಸ್‌ನ ಗಡಿಯಲ್ಲಿ ಉಕ್ರೇನ್– ರಷ್ಯಾ ನಿಯೋಗದ ಮಾತುಕತೆ ನಡೆಯಲಿದೆ ಎಂದು ಉಕ್ರೇನ್ ಅಧ್ಯಕ್ಷರ ಕಚೇರಿ ಹೇಳಿದೆ. ಆದರೆ, ಸಮಯ ಮತ್ತು ಸ್ಥಳವನ್ನು ಬಹಿರಂಗಪಡಿಸಲಾಗಿಲ್ಲ

ಬೆಂಗಳೂರಿಗೆ ಬಂದಿಳಿದ 12 ವಿದ್ಯಾರ್ಥಿಗಳು

ದೇವನಹಳ್ಳಿ: ಯುದ್ಧಪೀಡಿತ ಉಕ್ರೇನ್‌ನಲ್ಲಿ ತೊಂದರೆಗೆ ಸಿಲುಕಿದ್ದ ರಾಜ್ಯದ 12 ವಿದ್ಯಾರ್ಥಿಗಳ ಮೊದಲ ತಂಡ ಭಾನುವಾರ ಬೆಳಿಗ್ಗೆ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿಯಿತು. ಉಕ್ರೇನ್‌ನಲ್ಲಿದ್ದ 219 ಭಾರತೀಯ ವಿದ್ಯಾರ್ಥಿಗಳನ್ನು ವಿಮಾನದ ಮೂಲಕ ಕರೆತರಲಾಯಿತು. ಶನಿವಾರ ರಾತ್ರಿ ಮುಂಬೈಗೆ ಬಂದಿಳಿದ ರಾಜ್ಯದ ವಿದ್ಯಾರ್ಥಿಗಳು ಬೆಳಿಗ್ಗೆ ಬೆಂಗಳೂರಿಗೆ ಬಂದರು.

ವಾರದಿಂದ ಆತಂಕದಲ್ಲಿ ಕಾಲಕಳೆಯುತ್ತಿದ್ದ ಪೋಷಕರು, ಮಕ್ಕಳನ್ನು ಬರಮಾಡಿಕೊಳ್ಳಲು ವಿಮಾನ ನಿಲ್ದಾಣದಲ್ಲಿ ಕಾಯುತ್ತಿದ್ದರು.

6ನೇ ಪುಟ ನೋಡಿ

688 ಭಾರತೀಯರು ತಾಯ್ನಾಡಿಗೆ

ನವದೆಹಲಿ (ಪಿಟಿಐ): ಉಕ್ರೇನ್‌ನಲ್ಲಿ ಸಿಲುಕಿದ್ದ 688 ಭಾರತೀಯರು ಏರ್ ಇಂಡಿಯಾ ವಿಮಾನಗಳಲ್ಲಿ ಭಾನುವಾರ ಬೆಳಿಗ್ಗೆ ತಾಯ್ನಾಡಿಗೆ ಮರಳಿ ಬಂದಿದ್ದಾರೆ.

ರೊಮೇನಿಯಾದ ರಾಜಧಾನಿ ಬುಕಾರೆಸ್ಟ್‌ನಿಂದ 250 ಮತ್ತು 198 ಮಂದಿ ಹಾಗೂ ಹಂಗೆರಿಯ ರಾಜಧಾನಿ ಬುಡಾಪೆಸ್ಟ್‌ನಿಂದ 240 ಭಾರತೀಯರನ್ನು ಕರೆತರಲಾಯಿತು. ಯುದ್ಧ ಪೀಡಿತ ಉಕ್ರೇನ್‌ನಿಂದ ಹಂಗೆರಿ, ರೊಮೇನಿಯಾ, ಪೋಲೆಂಡ್ ಗಡಿಗೆ ಸ್ಥಳಾಂತರವಾಗಿರುವ ಭಾರತೀಯರನ್ನು ಕರೆತರಲು ಕೇಂದ್ರ ಸರ್ಕಾರ 'ಆಪರೇಷನ್ ಗಂಗಾ' ತೆರವು ಕಾರ್ಯಾಚರಣೆ ಕೈಗೆತ್ತಿಕೊಂಡಿದೆ.



ರಾಮನಗರದಲ್ಲಿ ಭಾನುವಾರ ಆರಂಭಗೊಂಡ ಮೇಕೆದಾಟು ಎರಡನೇ ಹಂತದ ಪಾದಯಾತ್ರೆಯಲ್ಲಿ ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ. ಶ್ರೀನಿವಾಸ, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಜೊತೆಯಾಗಿ ಹೆಜ್ಜೆ ಹಾಕಿದರು –ಪ್ರಜಾವಾಣಿ ಚಿತ್ರ

ಮೇಕೆದಾಟು ಎರಡನೇ ಹಂತದ ಪಾದಯಾತ್ರೆ ಆರಂಭ

'ಪಾದಯಾತ್ರೆ ಮುಗಿದರೂ ಹೋರಾಟ ನಿಲ್ಲದು'

● ಆರ್. ಜಿತೇಂದ್ರ

ರಾಮನಗರ: ಕಾವೇರಿ ನೀರು ಬಳಕೆಯ ಹಕ್ಕು ಜನರಿಗೆ ದೊರೆಯುವವರೆಗೂ ಹೋರಾಟ ಮುಂದುವರಿಸುವುದಾಗಿ ಕಾಂಗ್ರೆಸ್ ನಾಯಕರು ಭಾನುವಾರ ಇಲ್ಲಿ ಆರಂಭಗೊಂಡ ಮೇಕೆದಾಟು ಎರಡನೇ ಹಂತದ ಪಾದಯಾತ್ರೆಯಲ್ಲಿ ಘೋಷಿಸಿದರು. ಬಿಜೆಪಿಯ 'ಡಬಲ್ ಎಂಜಿನ್' ಸರ್ಕಾರದ ವಿರುದ್ಧ ಹರಿಹಾಯ್ದರು.

ಇಲ್ಲಿನ ಟಿ.ಆರ್. ಮಿಲ್ ಮೈದಾನದಲ್ಲಿ ಪಾದಯಾತ್ರೆಗೆ ಮರು ಚಾಲನೆ ನೀಡಿದ ಕರ್ನಾಟಕ ಕಾಂಗ್ರೆಸ್‌ನ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ 'ಕಾವೇರಿ ನೀರಿನ ಪ್ರತಿ ಹನಿ ಮೇಲೂ ಈ ಪ್ರದೇಶದ ಜನರಿಗೆ ಹಕ್ಕು ಇದೆ. ಇದು ಚಲಾವಣೆ ಆಗಬೇಕಾದರೆ ಮೇಕೆದಾಟು ಅಣೆಕಟ್ಟೆ ನಿರ್ಮಾಣ ಆಗಬೇಕು. ಆದರೆ ಬೆಂಗಳೂರಿನಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರವೇ ಇದಕ್ಕೆ ಅಡ್ಡಿಯಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಜನರು ತಮ್ಮ ನೀರಿನ ಹಕ್ಕಿಗಾಗಿ ನಡೆಸಿರುವ ಈ ಹೋರಾಟದಲ್ಲಿ ಯಶಸ್ಸು ಸಿಗುವವರೆಗೂ ಕಾಂಗ್ರೆಸ್ ಅವರ ಜೊತೆ ನಿಲ್ಲಲಿದೆ. ಪಾದಯಾತ್ರೆ ಮುಗಿದರೂ ಹೋರಾಟ ಮುಗಿಯದು' ಎಂದು ಹೇಳಿದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದು ಎರಡು ವರ್ಷ ಕಳೆದರೂ ಕೇಂದ್ರ ಪರಿಸರ ಸಚಿವಾಲಯದಿಂದ ಯೋಜನೆಗೆ ಅನುಮತಿ ಪಡೆದುಕೊಳ್ಳಲು ಆಗದಿರುವುದು ನಾಚಿಕೆಗೇಡು. ಅನುಮತಿ ನೀಡಲು ಕಾನೂನಿನ ಯಾವುದೇ ಅಡೆತಡೆಯೂ ಇಲ್ಲ. ತಮಿಳುನಾಡು ಸಹ ರಾಜಕೀಯಕ್ಕಾಗಿ ವಿರೋಧಿಸುತ್ತಿದೆಯೇ ಹೊರತು ಅದಕ್ಕೆ ಕಾನೂನಿನ ಬಲ ಇಲ್ಲ. ಆದರೂ ಬಿಜೆಪಿ ಜನರನ್ನು ಮಾತಿನಲ್ಲೇ ಮರುಳು ಮಾಡುತ್ತಿದೆ' ಎಂದು ಆಕ್ಷೇಪ ವ್ಯಕ್ತಪಡಿಸಿದರು. 'ಕೇಂದ್ರದಿಂದ ಕೂಡಲೇ ಅನುಮತಿ ಕೊಡಿಸಬೇಕು. ಇಲ್ಲದೇ ಹೋದರೆ ಅದು ನಾಡಿನ ಜನರಿಗೆ ಮಾಡುವ ದ್ರೋಹ' ಎಂದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

4ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 4

ಒಳ ಪುಟಗಳು



ಚಿನಕುರುಳಿ

ಪ್ರಕಾಶ್ ಶೆಟ್ಟಿ



ನಾಲ್ಕು ತಾಸು ತಡವಾಗಿ ಬಂದ ಸಚಿವ!

ದೇವನಹಳ್ಳಿ: ನಗರದಲ್ಲಿ ಭಾನುವಾರ ಪಲ್ಸ್ ಪೋಲಿಯೊ ಅಭಿಯಾನಕ್ಕೆ ಚಾಲನೆ ನೀಡಬೇಕಿದ್ದ ಸಚಿವ ಡಾ.ಕೆ. ಸುಧಾಕರ್ ಅವರು ನಾಲ್ಕು ತಾಸು ವಿಳಂಬವಾಗಿ ಬಂದರು. ಇದಕ್ಕೆ ಮೊದಲೇ ಶಾಸಕ ನಿಸರ್ಗ ನಾರಾಯಣ ಸ್ವಾಮಿ ಕಾರ್ಯಕ್ರಮ ಉದ್ಘಾಟಿಸಿದ್ದು, ಸುಧಾಕರ್ ಇರಿಸುಮುರಿಸು ಎದುರಿಸಬೇಕಾಯಿತು.

ಭಾನುವಾರ ಬೆಳಿಗ್ಗೆ 9.30ಕ್ಕೆ ಜಿಲ್ಲಾ ಪಲ್ಸ್ ಪೋಲಿಯೊ ಕಾರ್ಯಕ್ರಮ ನಿಗದಿಯಾಗಿತ್ತು. ಸಮಯಕ್ಕೆ ಸರಿಯಾಗಿ ತಾಯಂದಿರು ಎಳೆ ಹಸುಗೂಸುಗಳನ್ನು ಹೊತ್ತು ಬಂದಿದ್ದರು. ಸಚಿವ ಎಂ.ಟಿ.ಬಿ ನಾಗರಾಜ್ ಶಾಸಕ ನಿಸರ್ಗ ನಾರಾಯಣ ಸ್ವಾಮಿ ಹಾಗೂ ಅಧಿಕಾರಿಗಳು ಸಚಿವರಿಗಾಗಿ ಕಾಯುತ್ತಿದ್ದರು. ಒಂದು ತಾಸು ಕಾಯ್ದರೂ ಸಚಿವರ ಸುದ್ದಿ ಇಲ್ಲ.

ಒಂದು ಹಂತದಲ್ಲಿ ಶಾಸಕರು, 'ಹೀಗೇ ಮಕ್ಕಳು ಮತ್ತು ತಾಯಂದಿರನ್ನು ಕಾಯಿಸುವುದು ಒಳ್ಳೆಯದಲ್ಲ. ಸಚಿವರು ಮತ್ತು ಅವರ ಆಪ್ತ ಸಹಾಯಕರು ಕರೆ ಸ್ವೀಕರಿಸುತ್ತಿಲ್ಲ' ಎಂದು ಸಿಡುಕಿದರು.

ಅಮೃತ ನಗರೋತ್ಥಾನ ಯೋಜನೆ • ಮೊದಲ ಕಂತಿನಲ್ಲಿ ₹1,793 ಕೋಟಿ ಮಂಜೂರು

ಬಿಜೆಪಿ ಶಾಸಕರ ಕ್ಷೇತ್ರಗಳಿಗಷ್ಟೇ ಅನುದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೃತ ನಗರೋತ್ಥಾನ ಯೋಜನೆಯಡಿ ರಾಜ್ಯ ಸರ್ಕಾರವು ಬಿಬಿಎಂಪಿ ವ್ಯಾಪ್ತಿಯ ವಿವಿಧ ಕ್ಷೇತ್ರಗಳ ಅಭಿವೃದ್ಧಿ ಕಾಮಗಾರಿಗಳಿಗೆ ಮೊದಲ ಕಂತಿನಲ್ಲಿ ₹ 1,793 ಕೋಟಿ ಅನುದಾನ ಮಂಜೂರು ಮಾಡಿದೆ.

ಅಮೃತ ನಗರೋತ್ಥಾನ ಯೋಜನೆಯಡಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ₹6 ಸಾವಿರ ಕೋಟಿ ಅನುದಾನ ಒದಗಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 2021ನೇ ಸಾಲಿನ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಘೋಷಿಸಿದ್ದರು. ಈ ಯೋಜನೆಯನ್ನು ₹ 6 ಸಾವಿರ ಕೋಟಿ ವೆಚ್ಚದಲ್ಲಿ ಜಾರಿಗೊಳಿಸುವುದಕ್ಕೆ 2022ರ ಜ. 6ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತಾತ್ವಿಕ ಅನುಮೋದನೆ ನೀಡಲಾಗಿತ್ತು.

ಆಡಳಿತ ಪಕ್ಷದ ಶಾಸಕರಿಗಷ್ಟೇ ಅನುದಾನ?

'ಅಮೃತ ನಗರೋತ್ಥಾನ ಯೋಜನೆಗೆ ಮೊದಲ ಕಂತಿನಲ್ಲಿ ಆಡಳಿತ ಪಕ್ಷದ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಿಗಷ್ಟೇ ಅನುದಾನ ಮಂಜೂರು ಮಾಡಲಾಗಿದೆ. ವಿರೋಧ ಪಕ್ಷಗಳಾದ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಿಗೆ ಚಿಕ್ಕಾಸು ಅನುದಾನವನ್ನೂ ನೀಡಿಲ್ಲ' ಎಂದು ಕಾಂಗ್ರೆಸ್ ಶಾಸಕರೊಬ್ಬರು ದೂರಿದರು.

'5 ವಾರ್ಡ್‌ಗಳಿರುವ ಕ್ಷೇತ್ರಕ್ಕೆ ₹200 ಕೋಟಿ ಅನುದಾನ ನೀಡಲಾಗಿದೆ. ಅದರ ದುಪ್ಪಟ್ಟು ವಾರ್ಡ್‌ಗಳನ್ನು ಹೊಂದಿರುವ ನನ್ನ ಕ್ಷೇತ್ರಕ್ಕೂ ಅಷ್ಟೇ ಅನುದಾನ ಕೊಡಲಾಗಿದೆ' ಎಂದು ಬಿಜೆಪಿ ಶಾಸಕರೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

'ಮೊದಲ ಹಂತದಲ್ಲಿ 10 ಕ್ಷೇತ್ರಗಳಿಗೆ ಅನುದಾನ ಮಂಜೂರು ಮಾಡಲಾಗಿದೆ. ಉಳಿದ ಕ್ಷೇತ್ರಗಳಿಗೆ ಸಹ ಕೆಲವೇ ದಿನಗಳಲ್ಲಿ ಅನುದಾನ ಬಿಡುಗಡೆ ಆಗಲಿದೆ' ಎಂದು ಮುಖ್ಯಮಂತ್ರಿ ಸಚಿವಾಲಯದ ಅಧಿಕಾರಿಯೊಬ್ಬರು ಹೇಳಿದರು.

2022ರ ಜ.2ರಂದು ಮುಖ್ಯಮಂತ್ರಿ ಅವರ ಅಧ್ಯಕ್ಷತೆಯಲ್ಲಿ ನಡೆದಿದ್ದ ಸಭೆಯಲ್ಲಿ ಬಿಬಿಎಂಪಿ ವ್ಯಾಪ್ತಿಯ ರಸ್ತೆ ಅಭಿವೃದ್ಧಿ, ಗ್ರೇಡ್ ಸಪರೇಟರ್ ನಿರ್ಮಾಣ, ಕೆರೆಗಳ ಅಭಿವೃದ್ಧಿ, ಕಸ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕೊಳೆಗೇರಿಗಳ ಅಭಿವೃದ್ಧಿ, ಉದ್ಯಾನಗಳ ಅಭಿವೃದ್ಧಿ ಕಾಮಗಾರಿಗಳನ್ನು ತುರ್ತಾಗಿ ಕೈಗೆತ್ತಿಕೊಳ್ಳುವ ಅಗತ್ಯದ ಬಗ್ಗೆ ಪರಾಮರ್ಶೆ ನಡೆದಿತ್ತು. ಕಾಮಗಾರಿಗಳ ಅಗತ್ಯದ ಆಧಾರದಲ್ಲಿ ಅಮೃತ ನಗರೋತ್ಥಾನ ಯೋಜನೆಯಡಿ ಕ್ರಿಯಾಯೋಜನೆ ರೂಪಿಸಲು ಅನುಮೋದನೆ ನೀಡಲಾಗಿತ್ತು. ಶಾಸಕರ ಕೋರಿಕೆಗಳಿಗೆ ಪರಿಗಣಿಸಿ ಕ್ಷೇತ್ರವಾರು ಕಾಮಗಾರಿಗಳನ್ನು ಇದೇ 25ರಂದು (ಶುಕ್ರವಾರ) ಅಂತಿಮಗೊಳಿಸಲಾಗಿದೆ.

ಅಮೃತ ನಗರೋತ್ಥಾನ ಯೋಜನೆ: ಅನುದಾನ ಹಂಚಿಕೆ

ಕ್ಷೇತ್ರ	ಮೊತ್ತ (₹ ಕೋಟಿ)
ಆರ್.ಆರ್.ನಗರ	208
ಮಹಾಲಕ್ಷ್ಮೀ ಬಡಾವಣೆ	170
ರಾಜಾಜಿನಗರ	150
ಯಲಹಂಕ	175
ಬೊಮ್ಮನಹಳ್ಳಿ	207
ಯಶವಂತಪುರ	202
ಬಸವನಗುಡಿ	125
ಗೋವಿಂದರಾಜನಗರ	200
ಬೆಂಗಳೂರು ದಕ್ಷಿಣ	206
ಸಿ.ವಿ.ರಾಮನ್‌ನಗರ	150

ಕ್ಷೇತ್ರವಾರು ಅನುಮೋದನೆಗೊಂಡ ಅನುದಾನದ ಅಂದಾಜು ಮೊತ್ತಕ್ಕೆ ಕ್ರಿಯಾಯೋಜನೆ ತಯಾರಿಸಿ 15 ದಿನಗಳ ಒಳಗೆ ಸರ್ಕಾರಕ್ಕೆ ಸಲ್ಲಿಸಬೇಕು. ಸಾಧ್ಯವಾದಷ್ಟು ಮಟ್ಟಿಗೆ, ಬೃಹತ್ ಮೂಲಸೌಕರ್ಯ ಯೋಜನೆಗಳು ಹಾಗೂ ವಾರ್ಡ್ ಮಟ್ಟದ ಮೂಲಸೌಕರ್ಯ ಯೋಜನೆಗಳನ್ನು ಶೇ 50:50 ಅನುಪಾತದಲ್ಲಿ ಕೈಗೆತ್ತಿಕೊಳ್ಳಬೇಕು. ಯೋಜನೆಗಳನ್ನು ಶಾಸಕರ ಕೋರಿಕೆ ಪರಿಗಣಿಸಿ ಅಂತಿಮಗೊಳಿಸಬೇಕು ಎಂದು ನಗರಾಭಿವೃದ್ಧಿ ಇಲಾಖೆಯ ಆದೇಶದಲ್ಲಿ ತಿಳಿಸಲಾಗಿದೆ.

ಸುದ್ದಿ 2 ನಿಮಿಷ

'ಮೀಸಲಾತಿ ಇತ್ಯರ್ಥವಾಗದೇ ಪಂಚಾಯಿತಿ ಚುನಾವಣೆಯಿಲ್ಲ'

ಕಲಬುರಗಿ: 'ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಇತರೆ ಹಿಂದುಳಿದ ವರ್ಗದವರಿಗೆ ಮೀಸಲಾತಿ ನೀಡುವ ವಿಷಯದ ಬಗ್ಗೆ ಚರ್ಚೆ ನಡೆದಿದೆ. ಅಂತಿಮ ನಿರ್ಣಯವಾದ ಬಳಿಕ ಚುನಾವಣೆ ನಡೆಯಲಿದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದರು.



'ಹಿಂದುಳಿದ ವರ್ಗದವರಿಗೆ ಮೀಸಲಾತಿಯಿಲ್ಲದೇ ಚುನಾವಣೆ ನಡೆಸದಿರಲು ತೀರ್ಮಾನಿಸಲಾಗಿದೆ. ಈ ಬಗ್ಗೆ ಮುಖ್ಯಮಂತ್ರಿ ಮತ್ತು ಕಾನೂನು ತಜ್ಞರ ಜೊತೆ ಚರ್ಚಿಸಿರುವೆ' ಎಂದು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

'ಮೇಕೆದಾಟು ಪಾದಯಾತ್ರೆ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ, ಯೋಜನೆ ಏಕೆ ಜಾರಿ ಮಾಡಲಿಲ್ಲ. ಪಾದಯಾತ್ರೆಯನ್ನು ಕಾಂಗ್ರೆಸ್ ರಾಜಕೀಯ ಅಸ್ತ್ರವಾಗಿ ಬಳಸುತ್ತಿದೆ' ಎಂದರು.

ಗ್ರಾಮ ಪಂಚಾಯಿತಿ ಸದಸ್ಯರ ಗೌರವ ಧನ ಹೆಚ್ಚಿಸಲು ಆಗ್ರಹ

ಬೆಂಗಳೂರು: ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರ ಗೌರವಧನ ಹೆಚ್ಚಿಸುವಂತೆ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದೆ.

ಶೇ 80ಕ್ಕೂ ಹೆಚ್ಚು ಮಂದಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದವರೇ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಜನಪ್ರತಿನಿಧಿಗಳಾಗಿ ಪರಿಣಾಮಕಾರಿಯಾಗಿ ಹಾಗೂ ಪ್ರಾಮಾಣಿಕವಾಗಿ ಸೇವೆ ಮಾಡಲು ಅವರ ಜೀವನ ನಿರ್ವಹಣೆಗೆ ಬೇಕಾದ ಆರ್ಥಿಕ ಬೆಂಬಲ ನೀಡಬೇಕಾದ್ದು ಸರ್ಕಾರದ ಜವಾಬ್ದಾರಿಯಾಗಿದೆ ಎಂದು ಒಕ್ಕೂಟ ತಿಳಿಸಿದೆ.

ಆದರೆ, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರಿಗೆ ನೀಡುತ್ತಿರುವ ಗೌರವ ಧನ ಅತ್ಯಂತ ಕಡಿಮೆಯಾಗಿದೆ. 2017ರಲ್ಲಿ ಅಂದಿನ ಸರ್ಕಾರ ಗೌರವ ಧನವನ್ನು ಹೆಚ್ಚಿಸಿತ್ತು. ಈಗ ಜೀವನ ವೆಚ್ಚದಲ್ಲಿ ಗಣನೀಯವಾಗಿ ಹೆಚ್ಚಳವಾಗಿರುವ ಅಂಶವನ್ನು ಸರ್ಕಾರ ಪರಿಗಣಿಸಬೇಕು ಎಂದು ಕೋರಿದೆ.

'ಕೇರಳದಲ್ಲಿರುವಂತೆ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ₹13,200, ಉಪಾಧ್ಯಕ್ಷರಿಗೆ ₹10,600, ಸದಸ್ಯರಿಗೆ ₹7000 ನೀಡಬೇಕು ಎಂದು ಕೋರಿದೆ. ಈ ಬಗ್ಗೆ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಲಾಗಿದೆ ಎಂದು ಒಕ್ಕೂಟದ ಕಾಡಶೆಟ್ಟಿಹಳ್ಳಿ ಸತೀಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಲ್ಸ್ ಪೋಲಿಯೊ– ಶೇ 96ರಷ್ಟು ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಲ್ಸ್ ಪೋಲಿಯೊ ವಿತರಣೆ ಅಭಿಯಾನಕ್ಕೆ ರಾಜ್ಯದಾದ್ಯಂತ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. 5 ವರ್ಷದೊಳಗಿನ ಶೇ 93.50ರಷ್ಟು ಮಕ್ಕಳು ಪೋಲಿಯೊ ಹನಿ ಹಾಕಿಸಿಕೊಂಡಿದ್ದಾರೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ನಿಗದಿತ ಗುರಿಯಲ್ಲಿ ಶೇ 96ರಷ್ಟು ಮಕ್ಕಳಿಗೆ ಹನಿ ಹಾಕಲಾಗಿದೆ.

ಗೃಹ ಕಚೇರಿ 'ಕೃಷ್ಣಾ'ದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಕ್ಕಳಿಗೆ ಪೋಲಿಯೊ ಹನಿ ಹಾಕುವ ಮೂಲಕ ಲಸಿಕೆ ವಿತರಣೆ ಅಭಿಯಾನಕ್ಕೆ ಚಾಲನೆ ನೀಡಿದರು.

ದಾಸಪ್ಪ ಆಸ್ಪತ್ರೆಯ ಆವರಣದಲ್ಲಿ ಶಾಸಕ ಉದಯ ಗರುಡಾಚಾರ್, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಮಕ್ಕಳಿಗೆ ಪಲ್ಸ್ ಪೋಲಿಯೊ ಹನಿ ಹಾಕುವ ಮೂಲಕ ಬಿಬಿಎಂಪಿ ವ್ಯಾಪ್ತಿಯ ಅಭಿಯಾನಕ್ಕೆ ಅವರು ಚಾಲನೆ ನೀಡಿದರು.

ಅಂಕಿ-ಅಂಶಗಳು

15,198	760	26
ಪಾಲಿಕೆ ವ್ಯಾಪ್ತಿಯಲ್ಲಿ ಲಸಿಕಾ ಅಭಿಯಾನದಲ್ಲಿ ಪಾಲ್ಗೊಂಡ ಕಾರ್ಯಕರ್ತರು	ಲಸಿಕಾ ಅಭಿಯಾನದಲ್ಲಿ ಪಾಲ್ಗೊಂಡ ಮೇಲ್ವಿಚಾರಕರು	ಲಸಿಕಾ ಅಭಿಯಾನದಲ್ಲಿ ಪಾಲ್ಗೊಂಡ ನೋಡಲ್ ಅಧಿಕಾರಿಗಳು

'ಪೋಲಿಯೊ ಹನಿ ಹಾಕಲು ನಗರದಾದ್ಯಂತ 3,404 ಬೂತ್‌ಗಳನ್ನು ಸ್ಥಾಪಿಸಲಾಗಿತ್ತು. ಐದು ವರ್ಷದೊಳಗಿನ 10.80 ಲಕ್ಷ ಮಕ್ಕಳಿಗೆ ಪೋಲಿಯೊ ಹನಿ ಹಾಕಲು ಬಿಬಿಎಂಪಿ ಸಿದ್ಧತೆ ಮಾಡಿಕೊಂಡಿದೆ. ಶಾಲೆಗಳು, ಉದ್ಯಾನಗಳು, ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಸೇರಿದಂತೆ ವಿವಿಧ ಜನನಿಬಿಡ ಪ್ರದೇಶಗಳಲ್ಲೂ ಮಕ್ಕಳಿಗೆ ಪೋಲಿಯೊ ಹನಿ ಹಾಕಲಾಗುತ್ತಿದೆ' ಎಂದು ಗೌರವ್‌ಗುಪ್ತ ತಿಳಿಸಿದರು.

'ಬಿಬಿಎಂಪಿ ವ್ಯಾಪ್ತಿಯ ಪಲ್ಸ್ ಪೋಲಿಯೊ ಅಭಿಯಾನದ ಮೊದಲ ದಿನ ಶೇ 96ರಷ್ಟು ಗುರಿ ಸಾಧನೆ ಮಾಡಲಾಗಿದೆ. ಪೋಲಿಯೊ ಹಾಕಿಸಿಕೊಳ್ಳದ ಮಕ್ಕಳನ್ನೂ ಗುರುತಿಸಿ, ಅವರಿಗೂ ಹನಿ ಹಾಕಲಾಗುತ್ತದೆ. ಆರೋಗ್ಯ ಕಾರ್ಯಕರ್ತೆಯರು ಇನ್ನೂ ಮೂರು ದಿನಗಳ ಕಾಲ ಮನೆ ಮನೆಗೆ ತೆರಳಿ ಹನಿ ಹಾಕಲಿದ್ದಾರೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ ಡಾ.ಕೆ.ವಿ.ತ್ರಿಲೋಕಚಂದ್ರ ಅವರು ತಿಳಿಸಿದರು.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಪಲ್ಸ್ ಪೋಲಿಯೊ ಲಸಿಕೆ ಹಾಕುವ ಕಾರ್ಯಕ್ರಮಕ್ಕೆ ಬೆಂಗಳೂರಿನಲ್ಲಿ ಭಾನುವಾರ ಚಾಲನೆ ನೀಡಿದರು. ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್‌ಕುಮಾರ್, ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಇದ್ದರು– ಪ್ರಜಾವಾಣಿ ಚಿತ್ರ

ಬಡ ಯುವತಿ ವಿವಾಹ; ಎಚ್‌ಡಿಕೆ ಭಾಗಿ

ಮೇಲುಕೋಟೆ (ಮಂಡ್ಯ): ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಪ್ರಚಾರದ ವೇಳೆ ಮೃತಪಟ್ಟಿದ್ದ ವ್ಯಕ್ತಿಯೊಬ್ಬರ ಪುತ್ರಿಯ ವಿವಾಹ ಭಾನುವಾರ ನಡೆಯಿತು.

ಈ ಸಂದರ್ಭದಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಭಾಗಿಯಾಗಿದ್ದರು. ನಿಖಿಲ್ ಪ್ರಚಾರ ಸಭೆಯಲ್ಲಿ ಪಾಲ್ಗೊಂಡಿದ್ದ ಜಕ್ಕನಹಳ್ಳಿ ಗ್ರಾಮದ ಶಿವಕುಮಾರ್ (40) ವಿಶ್ವೇಶ್ವರಯ್ಯ ನಾಲೆಯಲ್ಲಿ ಕಾಲುಜಾರಿ ಮೃತಪಟ್ಟಿದ್ದರು. ಈ ಘಟನೆಯಿಂದಾಗಿ ಇಡೀ ಕುಟುಂಬ ಬೀದಿಗೆ ಬಂದಿತ್ತು.

ಅಂದು ಸಚಿವರಾಗಿದ್ದ ಸಿ.ಎಸ್. ಪುಟ್ಟರಾಜು, ಶಿವಕುಮಾರ್ ಕುಟುಂಬಕ್ಕೆ ಸಾಂತ್ವನ ಹೇಳಿ ಮೃತನ ಪತ್ನಿಗೆ ತಮ್ಮದೇ ಶಿಕ್ಷಣ ಸಂಸ್ಥೆಯಲ್ಲಿ ಕೆಲಸಕೊಟಿದ್ದರು. ಪುತ್ರಿ ಸಹನಾ ಅವರ ನರ್ಸಿಂಗ್ ವಿದ್ಯಾಭ್ಯಾಸಕ್ಕೆ, ಪುತ್ರನ ಪದವಿ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿದ್ದರು.



ಸಿಲಿಕಾನ್ ಸಿಟಿ ಅಕಾಡೆಮಿ ಶಿಕ್ಷಣ ಸಂಸ್ಥೆಯಲ್ಲಿ 'ರಾಷ್ಟ್ರೀಯ ಶಿಕ್ಷಣ ನೀತಿ' ಅನುಷ್ಠಾನಕ್ಕೆ ನಟ ರಮೇಶ್ ಅರವಿಂದ್ ಚಾಲನೆ ನೀಡಿದರು. ಸಂಸ್ಥೆಯ ಕಾರ್ಯದರ್ಶಿ ರವಿ ಲಕ್ಷ್ಮಣ್, ಅಧ್ಯಕ್ಷ ಕೆ.ಎಸ್.ಸಮೀರ ಸಿಂಹ, ಟ್ರಸ್ಟಿ ಶ್ರೀಧರ್ ಲಕ್ಷ್ಮಣ್, ಸಂಸ್ಥೆಯ ಫಿನ್ಲೆಂಡ್ ಶಿಕ್ಷಣಶಾಸ್ತ್ರ ನಿರ್ದೇಶಕಿ ಸಿಮ್ರಾನ್ ಬಾಲಾನಿ, ಪ್ರಾಂಶುಪಾಲರಾದ ಸುಮಾಲಿನಿ ಬಿ.ಸ್ವಾಮಿ, ಜಮೀಲ್ ಸವನ್ನಾ ಇದ್ದಾರೆ.

'ಎನ್‌ಇಪಿಯಿಂದ ಭಿನ್ನವಾಗಿ ಯೋಚಿಸಲಿದೆ ಮಗು'

ಬೆಂಗಳೂರು: 'ಆಟದೊಂದಿಗೆ ಪಾಠ ಕಲಿಯಲು ಹಾಗೂ ಶಿಕ್ಷಣದಲ್ಲಿ ವೈಜ್ಞಾನಿಕ ಕಲಿಕೆ ಅಳವಡಿಸಲು ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಸಹಕಾರಿ' ಎಂದು ಚಿತ್ರನಟ ರಮೇಶ್ ಅರವಿಂದ್ ಹೇಳಿದರು.

ಕೋಣನಕುಂಟೆಯ ಸಿಲಿಕಾನ್ ಸಿಟಿ ಅಕಾಡೆಮಿ ಶಿಕ್ಷಣ ಸಂಸ್ಥೆಯಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) ಅನುಷ್ಠಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಹೊಸ ಆವಿಷ್ಕಾರ ಸೇರಿದಂತೆ ಉನ್ನತ ಶಿಕ್ಷಣದ ಹಂತದಲ್ಲಿನ ಶಿಕ್ಷಣವನ್ನು ಮಗುವು ನರ್ಸರಿಯಲ್ಲಿಯೇ ಕಲಿಯಬಹುದು. ಪ್ರತಿಯೊಂದು ಮಗು ವಿಭಿನ್ನ ರೀತಿಯ ಯೋಚನೆ ಹೊಂದುವುದಕ್ಕೆ ಪ್ರೇರೇಪಿಸಬಹುದು. ಮಕ್ಕಳು ದೇಶದ ಆಸ್ತಿ. ಅವರ ಯೋಚನಾ ಲಹರಿ ದೇಶದ ಪ್ರಗತಿಗೆ ಮುನ್ನುಡಿಯಾಗಲಿದೆ' ಎಂದರು.

ಸಿಲಿಕಾನ್ ಸಿಟಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ರವಿ ಲಕ್ಷ್ಮಣ್,'ಎನ್‌ಇಪಿ ಈ ಶತಮಾನದ ಮೊದಲ ಶಿಕ್ಷಣ ನೀತಿ. ಹೊಸತನ, ಅದ್ಭುತ ಜ್ಞಾನಮಾರ್ಗದ ಸಮಾಜ ನಿರ್ಮಾಣ ಹಾಗೂ ಜಾಗತಿಕ ಮಟ್ಟದಲ್ಲಿ ಸಮಾನತೆ, ಗುಣಮಟ್ಟದ ಶಿಕ್ಷಣ ಈ ನೀತಿಯ ಗುರಿ' ಎಂದರು.

ಸಿಲಿಕಾನ್ ಸಿಟಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಕೆ.ಎಸ್.ಸಮೀರ ಸಿಂಹ, ಟ್ರಸ್ಟಿ ಶ್ರೀಧರ್ ಲಕ್ಷ್ಮಣ್, ಪ್ರಾಂಶುಪಾಲರಾದ ಸುಮಾಲಿನಿ. ಬಿ.ಸ್ವಾಮಿ ಮಾತನಾಡಿದರು.

500 ಕುಟುಂಬಗಳಿಗೆ ತಿಂಗಳ ದಿನಸಿ ಕಿಟ್ ವಿತರಣೆ

ಸ್ವಾಮಿ ವಿವೇಕಾನಂದ ರಸ್ತೆ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಕಪುರ ರಸ್ತೆಯಲ್ಲಿರುವ ಗುಬ್ಬಲಾಳದ ಮುನಿರಾಜು ಬಡಾವಣೆಯ ಮುಖ್ಯರಸ್ತೆಗೆ 'ಸ್ವಾಮಿ ವಿವೇಕಾನಂದರ ರಸ್ತೆ' ಎಂದು ಭಾನುವಾರ ನಾಮಕರಣ ಮಾಡಲಾಯಿತು.

ಇದೇ ವೇಳೆ ಸ್ಫೂರ್ತಿ ವೆಲ್‌ಫೇರ್ ಅಸೋಸಿಯೇಷನ್‌ನ ಉದ್ಘಾಟನೆಯೂ ನಡೆಯಿತು. ಎಚ್‌ಎಸ್‌ಬಿಸಿ ಸಂಸ್ಥೆ, ಅಕ್ಷಯಪಾತ್ರ ಹಾಗೂ ನಿರಂತರ ಆಕ್ಸೆಸ್ ಸಂಸ್ಥೆಗಳ ಸಹಯೋಗದಲ್ಲಿ ಸಂಘದ ವತಿಯಿಂದ 500 ಕುಟುಂಬಗಳಿಗೆ ಒಂದು ತಿಂಗಳಿಗೆ ಆಗುವಷ್ಟು ದಿನಸಿ ಒಳಗೊಂಡ ಕಿಟ್‌ಗಳನ್ನು ವಿತರಿಸಲಾಯಿತು.



ಸ್ವಾಮಿ ವಿವೇಕಾನಂದ ರಸ್ತೆಯನ್ನು ಬಿಜೆಪಿ ಮುಖಂಡ ಹನುಮಂತಯ್ಯ ಉದ್ಘಾಟಿಸಿದರು. ಬಿಜೆಪಿ ಮುಖಂಡರಾದ ರಮೇಶ್ ರಾಜು, ವಿಜಯ್ ಕುಮಾರ್, ಸ್ಫೂರ್ತಿ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷ ಮಂಜಪ್ಪ ಹಾಗೂ ಪದಾಧಿಕಾರಿಗಳು, ವೆಂಕಟ್, ಕೃಷ್ಣಮೂರ್ತಿ, ವೆಂಕಟೇಶ್ ಇದ್ದಾರೆ –ಪ್ರಜಾವಾಣಿ ಚಿತ್ರ

ರಸ್ತೆ ಹಾಗೂ ಸಂಘ ಉದ್ಘಾಟಿಸಿ ಮಾತನಾಡಿದ ಬಿಜೆಪಿ ಮುಖಂಡ ಹನುಮಂತಯ್ಯ, 'ಮುನಿರಾಜು ಬಡಾವಣೆ ರಸ್ತೆಗಳ ನಿರ್ವಹಣೆ, ಬೀದಿ ದೀಪಗಳ ಅಳವಡಿಕೆ, ಒಳಚರಂಡಿ ಸೇರಿದಂತೆ ನಿವಾಸಿಗಳಿಗೆ ಮೂಲ ಸೌಕರ್ಯಗಳನ್ನು ಕಲ್ಪಿಸಲಾಗುವುದು. ಸಂಘಕ್ಕೂ ಕೆಲಸಗಳಿಗೂ ಎಲ್ಲ ರೀತಿಯ ಸಹಕಾರ ನೀಡುತ್ತೇನೆ' ಎಂದು ಭರವಸೆ ನೀಡಿದರು.

'ಪೌರಕಾರ್ಮಿಕರು, ಸ್ವಚ್ಛತಾ ಸಿಬ್ಬಂದಿ, ಅಂಚೆ ಸಿಬ್ಬಂದಿ, ಬೀದಿ ದೀಪ ನಿರ್ವಹಣೆ ಮಾಡುವವರು, ಜಲಮಂಡಳಿ ಸಿಬ್ಬಂದಿ ಸೇರಿದಂತೆ ಬಡಾವಣೆಯ ಜನರಿಗೆ ಸೇವೆ ನೀಡುವವರಿಗೆ ಸ್ಫೂರ್ತಿ ವೆಲ್‌ಫೇರ್ ಅಸೋಸಿಯೇಷನ್ ವತಿಯಿಂದ ಸನ್ಮಾನ ಮಾಡಲಾಯಿತು' ಎಂದು ಸಂಘದ ಕಾರ್ಯದರ್ಶಿ ಮಹದೇವಸ್ವಾಮಿ ಹೇಳಿದರು.

ಸಂಘದ ಅಧ್ಯಕ್ಷ ಮಂಜಪ್ಪ, ಬಿಜೆಪಿ ಮುಖಂಡರಾದ ರಮೇಶ್ ರಾಜು, ವಿಜಯ್ ಕುಮಾರ್ ಭಾಗವಹಿಸಿದ್ದರು.



ಬಾಗ್ಚಿ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರ ಹಾಗೂ ಒಪಿಡಿ ಘಟಕವನ್ನು ಡಾ. ಪ್ರತಿಮಾ ಮೂರ್ತಿ ಉದ್ಘಾಟಿಸಿದರು. ಸುಬ್ರೊತೊ ಬಾಗ್ಚಿ ಮತ್ತುಸುಷ್ಮಿತಾ ಬಾಗ್ಚಿ ಇದ್ದರು – ಪ್ರಜಾವಾಣಿ ಚಿತ್ರ

ಕರುಣಾಶ್ರಯ: ಒಪಿಡಿ ಘಟಕಕ್ಕೆ ಚಾಲನೆ

ಬೆಂಗಳೂರು: ಕುಂದಲಹಳ್ಳಿಯಲ್ಲಿರುವ ಬೆಂಗಳೂರು ಹಾಸ್ಪಿಕ್ ಟ್ರಸ್ಟ್–ಕರುಣಾಶ್ರಯದಲ್ಲಿ ನಿರ್ಮಿಸಿರುವ ಬಾಗ್ಚಿ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರ ಹಾಗೂ ಹೊರರೋಗಿಗಳ ಘಟಕಕ್ಕೆ (ಒಪಿಡಿ) ಭಾನುವಾರ ಚಾಲನೆ ದೊರೆಯಿತು.

ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ನಿರ್ದೇಶಕಿ ಡಾ.ಪ್ರತಿಮಾ ಮೂರ್ತಿ ಅವರು ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದರು.

'ಕೆಲ ವರ್ಷಗಳಿಂದ ಸಂಸ್ಥೆಯು ಕ್ಯಾನ್ಸರ್ ಪೀಡಿತರಿಗೆ ಉಪಶಾಮಕ ಚಿಕಿತ್ಸೆ ಒದಗಿಸುತ್ತಿದೆ. ಬದುಕಿನ ಕಡೇ ದಿನಗಳನ್ನು ನೋವು ರಹಿತವಾಗಿ ಕಳೆಯಲು ಈ ಚಿಕಿತ್ಸೆ ಸಹಕಾರಿ. ಆಧುನಿಕ ತಂತ್ರಜ್ಞಾನಗಳ ನೆರವಿನಿಂದ ಈ ಚಿಕಿತ್ಸೆಯಲ್ಲಿಯೂ ಹೊಸ ಆವಿಷ್ಕಾರಗಳು ನಡೆದಿದ್ದು, ಈ ಬಗ್ಗೆ ಜಾಗೃತಿ ಮೂಡಿಸಬೇಕು' ಎಂದರು.

ಸುಷ್ಮಿತಾ ಬಾಗ್ಚಿ ಮತ್ತು ಸುಬ್ರೊತೊ ಬಾಗ್ಚಿ ಹಾಗೂ ಇತರ ದಾನಿಗಳ ನೆರವಿನಿಂದ ನೂತನ ಕಟ್ಟಡ ನಿರ್ಮಿಸಲಾಗಿದೆ. 18,983 ಚದರ ಅಡಿ ಪ್ರದೇಶದಲ್ಲಿರುವ ಎರಡು ಮಹಡಿ ಕಟ್ಟಡವು 100 ಆಸನಗಳ ಸಭಾಂಗಣ, ಗ್ರಂಥಾಲಯ, ಒಪಿಡಿ ಘಟಕ, ಕ್ಯಾಂಟೀನ್ ಸೇರಿ ವಿವಿಧ ಸೌಲಭ್ಯಗಳನ್ನು ಒಳಗೊಂಡಿದೆ.

ಬೆಂಗಳೂರು ಹಾಸ್ಪಿಕ್ ಟ್ರಸ್ಟ್–ಕರುಣಾಶ್ರಯವು ಇಂಡಿಯನ್ ಕ್ಯಾನ್ಸರ್ ಸೊಸೈಟಿ ಮತ್ತು ರೋಟರಿ ಬೆಂಗಳೂರು ಇಂದಿರಾನಗರದ ಸಹಯೋಗದಲ್ಲಿ ಅಂತಿಮ ಹಂತದ ಕ್ಯಾನ್ಸರ್ ಪೀಡಿತರಿಗೆ ಉಚಿತವಾಗಿ ಉಪಶಾಮಕ ಚಿಕಿತ್ಸೆ ಒದಗಿಸುತ್ತಿದೆ.

'ಕಾವ್ಯವನ್ನೇ ಜೀವನವಾಗಿಸಿಕೊಂಡಿದ್ದ ಕಣವಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚೆನ್ನವೀರ ಕಣವಿ ಅವರು ಕನ್ನಡನಾಡಿನಲ್ಲಿ ಕಾವ್ಯ ಸಂಸ್ಕೃತಿಯ ಜತೆಗೆ ಪುಸ್ತಕ ಸಂಸ್ಕೃತಿಯನ್ನೂ ಪ್ರಸಾರ ಮಾಡಿದರು. ಕನ್ನಡದಲ್ಲಿ ಸಮೃದ್ಧ ಕಾವ್ಯ ಪರಂಪರೆಯನ್ನು ನಿರ್ಮಿಸಿದ್ದರು. ಕಾವ್ಯವನ್ನೇ ಜೀವನವಾಗಿಸಿಕೊಂಡಿದ್ದರು. ತಮ್ಮ ಕಾವ್ಯದ ಮೂಲಕ ಅವರು ಚಿರಸ್ಥಾಯಿಯಾಗಿದ್ದಾರೆ.'

ಇವು, ಕರ್ನಾಟಕ ಸುಗಮ ಸಂಗೀತ ಪರಿಷತ್ತು ನಗರದಲ್ಲಿ ಭಾನುವಾರ ಆಯೋಜಿಸಿದ ಚೆನ್ನವೀರ ಕಣವಿ ಅವರಿಗೆ ನುಡಿನಮನ ಹಾಗೂ ಗೀತ ಗೌರವ ಕಾರ್ಯಕ್ರಮದಲ್ಲಿ ವ್ಯಕ್ತವಾದ ಮೆಚ್ಚುಗೆಯ ಮಾತುಗಳು.

ಕವಿ ಎಚ್.ಎಸ್.ವೆಂಕಟೇಶಮೂರ್ತಿ, 'ಕನ್ನಡ ಕಾವ್ಯ ಲೋಕಕ್ಕೆ ಕಣವಿ ಅವರ ಕೊಡುಗೆ ಅಪಾರ. ಕಣವಿ ಅವರ ಕವಿತೆಗಳಲ್ಲಿ ಸಮಾಧಾನದ ನೆಲೆಯನ್ನು ಕಾಣಬಹುದು. ಭಿನ್ನ ಶೈಲಿಯ ಕವಿತೆಗಳನ್ನು ರಚಿಸುವ ಮೂಲಕ ಅವರು ಕನ್ನಡ ಕಾವ್ಯ ಲೋಕವನ್ನು ಶ್ರೀಮಂತಗೊಳಿಸಿದರು' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಲೇಖಕಿ ಹೇಮಾ ಪಟ್ಟಣಶೆಟ್ಟಿ, 'ಕಣವಿ ಅವರು ಭೌತಿಕವಾಗಿ ನಮ್ಮ ಜತೆಗೆ ಇಲ್ಲದಿದ್ದರೂ ಅವರ ಕವಿತೆಗಳು ನಮ್ಮ ನಡುವೆ ಜೀವಂತವಾಗಿವೆ. ಅವರು ಮಾಧ್ಯಮಿಕ ಶಾಲೆಯಲ್ಲಿ ಇರುವಾಗಲೇ ಕವಿತೆಗಳನ್ನು ಬರೆಯಲು ಶುರುಮಾಡಿದರು. ಅವರ ಕವಿತೆಗಳು ಓದುಗರ ಮನ್ನಣೆಗೆ ಪಾತ್ರವಾಗಿವೆ' ಎಂದರು.

ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ವೈ.ಕೆ.ಮುದ್ದುಕೃಷ್ಣ, 'ಕಣವಿ ಅವರು ಕನ್ನಡ ಜನತೆಯ ಪ್ರೀತಿಯ ಕವಿ ಆಗಿದ್ದರು. ಮೃದು ಮಾತಿನ ಸಜ್ಜನಿಕೆಯ ಅವರು, ಯುವ ಮನಸ್ಸುಗಳಿಗೆ ಕಾವ್ಯಪ್ರೀತಿಯನ್ನು ಕಲಿಸಿದರು' ಎಂದು ಹೇಳಿದರು.

ಮರಿ ಮಾಡಿದ ಉದ್ದಕೊಕ್ಕಿನ ರಣಹದ್ದು!

ರಾಮನಗರ: ಇಲ್ಲಿನ ರಾಮದೇವರ ಬೆಟ್ಟದಲ್ಲಿ ಅಳಿವಿನಂಚಿನಲ್ಲಿರುವ ಉದ್ದಕೊಕ್ಕಿನ ರಣಹದ್ದು ಜೋಡಿಯೊಂದು ಮರಿಗೆ ಜನ್ಮ ನೀಡಿದ್ದು, ಅನೇಕ ವರ್ಷಗಳ ನಂತರ ಹಕ್ಕಿಗಳ ಸಂತಾನೋತ್ಪತ್ತಿ ಕಾರ್ಯ ಯಶಸ್ವಿ ಆಗಿದೆ.

ರಾಮದೇವರ ಬೆಟ್ಟವು ಉದ್ದ ಕೊಕ್ಕಿನ ರಣಹದ್ದುಗಳ ವಾಸಸ್ಥಾನವಾಗಿದ್ದು, ಇದನ್ನು ಸರ್ಕಾರ ರಣಹದ್ದು ಸಂರಕ್ಷಣಾ ಧಾಮವನ್ನಾಗಿ ಘೋಷಿಸಿದೆ. ಹಿಂದೊಮ್ಮೆ ಸಾವಿರ ಸಂಖ್ಯೆಯಲ್ಲಿ ಇದ್ದ ರಣಹದ್ದುಗಳು ಈಗ ಬೆರಳೆಣಿಕೆಯಷ್ಟು ಮಾತ್ರ ಕಂಡುಬಂದಿವೆ. ಅದರಲ್ಲೂ ಈಚಿನ ವರ್ಷಗಳಲ್ಲಿ ಅವುಗಳ ಸಂತಾನೋತ್ಪತ್ತಿ ಕಾರ್ಯ ಯಶಸ್ವಿ ಆಗಿರಲಿಲ್ಲ. ಹೀಗಾಗಿ ಈ ಜಾತಿಯ ಹದ್ದುಗಳ ಸಂತತಿ ಸಂಪೂರ್ಣ ನಶಿಸಬಹುದು ಎನ್ನುವ ಆತಂಕ ಪರಿಸರ ಪ್ರಿಯರದ್ದಾಗಿತ್ತು.

ಕಳೆದ ನಾಲ್ಕು ದಿನಗಳ ಹಿಂದೆ ಹದ್ದುಗಳ ಜೊತೆ ಮರಿ ಕಂಡುಬಂದಿದ್ದು, ಸುರಕ್ಷಿತವಾಗಿದೆ. ಇದು ಅಳಿವಿನಂಚಿನಲ್ಲಿರುವ ರಣಹದ್ದು ಸಂಕುಲದ ಬೆಳವಣಿಗೆಗೆ ಪೂರಕ ಎನ್ನುವ ಭಾವನೆ ಮೂಡಿಸಿದೆ. ಉದ್ದಕೊಕ್ಕಿನ ರಣಹದ್ದುಗಳು ಸಾಮಾನ್ಯವಾಗಿ ವರ್ಷಕ್ಕೆ ಒಂದೇ ಮೊಟ್ಟೆ ಇಟ್ಟು ಮರಿಮಾಡುತ್ತವೆ. ನವೆಂಬರ್‌ನಿಂದ ಮಾರ್ಚ್ ನಡುವೆ ಮರಿಮಾಡುವ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ.



ಬಿ.ಎಸ್. ಯಡಿಯೂರಪ್ಪ ಅವರ ಜನ್ಮದಿನದ ಪ್ರಯುಕ್ತ ಎಂ.ಆರ್.ಗ್ರೂಪ್ ವತಿಯಿಂದ ರೈತರಿಗೆ ಭಾನುವಾರ ಉಚಿತವಾಗಿ ಟ್ರ್ಯಾಕ್ಟರ್ ವಿತರಿಸಿದ್ದು, ಸಾಂಕೇತಿಕವಾಗಿ ಕೀ ಮಾದರಿ ಹಸ್ತಾಂತರಿಸಲಾಯಿತು. ಬಿ.ವೈ.ರಾಘವೇಂದ್ರ, ಬಿ.ವೈ. ವಿಜಯೇಂದ್ರ, ಕೆಆರ್‌ಐಡಿಎಲ್ ಅಧ್ಯಕ್ಷ ಎಂ.ರುದ್ರೇಶ್ ಇದ್ದರು –ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ರಾಷ್ಟ್ರೀಯ ವಿಜ್ಞಾನ ದಿನ ಹಾಗೂ 'ವಿದ್ಯಾರ್ಥಿ ಉಪಗ್ರಹ ಉಡಾವಣೆ ಯೋಜನೆ' ಉದ್ಘಾಟನೆ: ಸಂಸದ ಡಿ.ವಿ.ಸದಾನಂದಗೌಡ, ಅತಿಥಿಗಳು–ಎಸ್.ಅಯ್ಯಪ್ಪನ್, ಎ.ಎಸ್.ಕಿರಣ್ ಕುಮಾರ್, ಅಶೋಕ್ ಎಂ.ರಾಯಚೂರ್, ನವಕಾಂತ್ ಭಟ್, ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಎಂ.ರಾಜೀವ್ ಚಂದ್ರಶೇಖರ್, ಸಚಿವ ಬಿ.ಸಿ.ನಾಗೇಶ್, ಅಧ್ಯಕ್ಷತೆ–ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ–ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಸ್ಥಳ–ಸರ್ಕಾರಿ ಪದವಿ ಪೂರ್ವ ಕಾಲೇಜು, 18ನೇ ಕ್ರಾಸ್, ಮಲ್ಲೇಶ್ವರ, ಬೆಳಿಗ್ಗೆ 9




ಎ.ಎಸ್.ಕಿರಣ್ ಕುಮಾರ್

'ಸಾಮಾಜಿಕ ಸಾಂಸ್ಕೃತಿಕ ಮತ್ತು ಧಾರ್ಮಿಕ ಸಹಿಷ್ಣುತೆ' ಉಪನ್ಯಾಸ: ಋಷಿ ಮಿತ್ರ, ಉದ್ಘಾಟನೆ–ಶಿವರುದ್ರ ಸ್ವಾಮೀಜಿ, ಅಧ್ಯಕ್ಷತೆ–ವೂಡೇ ಪಿ.ಕೃಷ್ಣ, ಅತಿಥಿ–ಮೋಹನ್‌ದೇವ್ ಆಳ್ವ, ಆಯೋಜನೆ–ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸ್ಥಳ–ಗಾಂಧಿಭವನ, ಬೆಳಿಗ್ಗೆ 11

ಜನನಿ ವತ್ಸಲ ಅವರ 'ಹೈ ಹೀಲ್ಸ್' ಕವನ ಸಂಕಲನ ಬಿಡುಗಡೆ: ಕೆ.ಕವಿರಾಜ್, ಅಧ್ಯಕ್ಷತೆ–ಬೈರಮಂಗಲ ರಾಮೇಗೌಡ, ಅತಿಥಿಗಳು–ಷರೀಫಾ, ಬೇಲೂರು ರಘುನಂದನ್, ರವಿ ಕೃಷ್ಣಾರೆಡ್ಡಿ, ಮುರುಡಯ್ಯ, ಆಯೋಜನೆ–ಜನನಿ ಸಾಹಿತ್ಯ ಪ್ರಕಾಶನ, ಸ್ಥಳ–ನಯನ ಸಭಾಂಗಣ, ಸಂಜೆ 5.30

ಅಮೃತ ಕಲಾ ಮಹೋತ್ಸವ: ಉದ್ಘಾಟನೆ–ಟಿ.ತಿಮ್ಮೇಗೌಡ, ಅತಿಥಿಗಳು–ಮೈಸೂರು ವಿ.ಸುಬ್ರಹ್ಮಣ್ಯ, ಎಂ.ಆರ್. ಸತ್ಯನಾರಾಯಣ, ಆರ್.ಕೃಷ್ಣಮೂರ್ತಿ, ಬಂಡ್ಲಹಳ್ಳಿ ವಿಜಯಕುಮಾರ್, ದೊಡ್ಡಿ ಶಿವರಾಂ, ಆಯೋಜನೆ–ರಂಗಸಂಸ್ಥಾನ, ಸ್ಥಳ–ಸೇವಾಸದನ, ಮಲ್ಲೇಶ್ವರ, ಸಂಜೆ 5.30

ಪ್ರೊ.ನಾರಾಯಣ ಘಟ್ಟ ಅವರ ಪುಸ್ತಕಗಳ ಬಿಡುಗಡೆ: ಎಸ್. ಜಿ.ಸಿದ್ದರಾಮಯ್ಯ, ಅಧ್ಯಕ್ಷತೆ–ಆರ್. ಕೆ.ನಲ್ಲೂರು ಪ್ರಸಾದ್, ಅತಿಥಿಗಳು–ಮೂಡ್ನಾಕೂಡು ಚಿನ್ನಸ್ವಾಮಿ, ರಾಜಶೇಖರ ಮಠಪತಿ, ನಿಡಸಾಲೆ ಪುಟ್ಟಸ್ವಾಮಯ್ಯ, ಆಯೋಜನೆ–ಮೇಘಮೈತ್ರಿ ಕನ್ನಡ ಸಾಹಿತ್ಯ ಸಂಘ, ಸ್ಥಳ–ಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 6



ಎಸ್ ಜಿ. ಸಿದ್ದರಾಮಯ್ಯ

'ಮೇಘದೂತ ದರ್ಶನಂ' ನಾಟಕ ಪ್ರದರ್ಶನ: ಆಯೋಜನೆ–ಅದಮ್ಯ ರಂಗ ಸಂಸ್ಕೃತಿ ಟ್ರಸ್ಟ್, ಸ್ಥಳ–ಸಮುಚ್ಚಯ ಕಲಾಭವನ, ಕಲಾಗ್ರಾಮ, ಸಂಜೆ 7

ಮಕ್ಕಳನ್ನು ತಬ್ಬಿ ಕಣ್ಣೀರಾದ ಪೋಷಕರು

ಬಸ್‌ನಲ್ಲಿ ಗಡಿ ದಾಟಿ ಬಂದೆವು..!

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: 'ಉಕ್ರೇನ್ ವಿಮಾನ ನಿಲ್ದಾಣವನ್ನು ರಷ್ಯಾ ಸೇನೆ ಬಾಂಬ್ ಹಾಕಿ ಹಾನಿಗೊಳಿಸಿದ ಕಾರಣ ಬಸ್‌ನಲ್ಲಿ ಉಕ್ರೇನ್ ಗಡಿ ದಾಟಿ ನೆರೆಯ ರೊಮೇನಿಯಾ ತಲುಪಿದೆವು. ಮೂರು ದಿನ ಪ್ರಯಾಣ ಬೆಳೆಸಿ ತಾಯ್ನಾಡು ತಲುಪಿದ್ದೇವೆ'

ಭಾನುವಾರ ಬೆಳಿಗ್ಗೆ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ರಾಜ್ಯದ ವಿದ್ಯಾರ್ಥಿಗಳು ಯುದ್ಧಪೀಡಿತ ಉಕ್ರೇನ್ ಅನುಭವಗಳನ್ನು ಬಿಚ್ಚಿಟ್ಟರು.

'ರಸ್ತೆ ಮಾರ್ಗವಾಗಿ ರೊಮೇನಿಯಾ ತಲುಪುವಾಗ ಯುದ್ಧ ಟ್ಯಾಂಕರ್, ದೊಡ್ಡ ದೊಡ್ಡ ಗನ್ ಹಿಡಿದು ನಿಂತಿದ್ದ ಸೈನಿಕರನ್ನು ಕಂಡು ಭಯವಾಗುತ್ತಿತ್ತು. -1 ಡಿಗ್ರಿ ಕೊರೆಯುವ ಚಳಿಯಲ್ಲಿ ಎಲ್ಲ ಅಗತ್ಯ ವಸ್ತುಗಳೊಂದಿಗೆ ರಸ್ತೆ ಮೂಲಕ ಮೂರು ದಿನ ಪ್ರಯಾಣಿಸಿದೆವು' ಎಂದು ಯಶವಂತ್, ಗಣಪತಿ ಅನುಭವ ಹಂಚಿಕೊಂಡರು.

'ಯುದ್ಧ ಘೋಷಣೆಯಾದ ಮೇಲೆ ಅನೇಕ ಸ್ನೇಹಿತರು ಬಂಕರ್, ಮೆಟ್ರೊ ನಿಲ್ದಾಣ, ನೆಲಮಹಡಿ ಅಡಗುತಾಣಗಳಲ್ಲಿ ಅವಿತುಕೊಂಡಿದ್ದಾರೆ. ಇನ್ನೂ ಅನೇಕ ಭಾರತೀಯ ವಿದ್ಯಾರ್ಥಿಗಳು ಅಲ್ಲಿ ಸಿಲುಕಿದ್ದಾರೆ. ಅದಷ್ಟು ಬೇಗ ಸುರಕ್ಷಿತವಾಗಿ ಮರಳಲಿ ಎಂದು ಪ್ರಾರ್ಥಿಸುತ್ತೇವೆ' ಎಂದು ವಿಜಯಲಕ್ಷ್ಮಿ ಪ್ರತಿಕ್ರಿಯಿಸಿದರು.

> ಉಕ್ರೇನ್‌ನ ಪರಿಸ್ಥಿತಿ ಹಿನ್ನೆಲೆಯಲ್ಲಿ ಆಪರೇಷನ್ ಗಂಗಾ ಹೆಸರಿನಲ್ಲಿ ಭಾರತೀಯರ ರಕ್ಷಣೆ ಮಾಡುವ ಕೆಲಸ ನಡೆಯುತ್ತಿದೆ. ರಾಜ್ಯದ ಎಲ್ಲ ವಿದ್ಯಾರ್ಥಿಗಳನ್ನು ತವರಿಗೆ ಕರೆತರುವ ಜವಾಬ್ದಾರಿ ನಮ್ಮದು
>
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

ಕೆಲವು ದಿನಗಳಿಂದ ಸಾಕಷ್ಟು ಸ್ನೇಹಿತರು ಬಂಕರ್‌ಗಳಲ್ಲಿದ್ದಾರೆ. ಅವರಿಗೆ ಊಟ, ನೀರಿಗೆ ತೊಂದರೆ ಆಗಿದೆ. ಎಲ್ಲರನ್ನು ರಕ್ಷಣೆ ಮಾಡಬೇಕು ಎಂದು ವಿದ್ಯಾರ್ಥಿಗಳು ಕೋರಿದರು.

'ಉಕ್ರೇನ್‌ನಲ್ಲಿ ಚಳಿಗಾಲವಿದ್ದು, ನಮ್ಮ ಮಕ್ಕಳ ಬಳಿ ಚಳಿಗಾಲಕ್ಕೆ ಬೇಕಾಗುವ ಸೂಕ್ತ ಉಡುಪುಗಳಿಲ್ಲ. ಅಲ್ಲಿನ ವಿಶ್ವವಿದ್ಯಾಲಯದ ಸಿಬ್ಬಂದಿ ಸಹ ವಿದೇಶಿ ವಿದ್ಯಾರ್ಥಿಗಳ ಬಗ್ಗೆ ಹೆಚ್ಚಿನ ಆಸಕ್ತಿವಹಿಸುತ್ತಿಲ್ಲ. ಉಕ್ರೇನ್ ಗಡಿದಾಟಿ ಹೊರಬರುವುದು ಕಷ್ಟ ಎಂದು ರಾಯಭಾರಿ ಕಚೇರಿ ಮಾಹಿತಿ ನೀಡಿದೆ. ಸಾಕಷ್ಟು ಗೊಂದಲ ಉಂಟಾಗಿದೆ' ಎಂದು ಉಕ್ರೇನ್‌ನಲ್ಲಿ ಸಿಲುಕಿರುವ ವಿದ್ಯಾರ್ಥಿಗಳ ಪೋಷಕರು ಅಳಲು ತೋಡಿಕೊಂಡರು.

'ಉಕ್ರೇನ್‌ನಲ್ಲಿರುವ ರಾಜ್ಯದ 386 ವಿದ್ಯಾರ್ಥಿಗಳನ್ನು ಸಂಪರ್ಕಿಸಲು ಪ್ರಯತ್ನಿಸುತ್ತಿದ್ದೇವೆ. ಹಂತ, ಹಂತವಾಗಿ ಎಲ್ಲರನ್ನೂ ಕರೆ ತರುತ್ತೇವೆ. ಮತ್ತೊಂದು ವಿಮಾನ ಇಂದು ದೆಹಲಿ ತಲುಪಿದ್ದು, ಅದರಲ್ಲಿ ರಾಜ್ಯದ 18 ಜನರಿದ್ದಾರೆ. ಅವರನ್ನು ಬೆಂಗಳೂರಿಗೆ ಕರೆತರಲು ವ್ಯವಸ್ಥೆ ಮಾಡಲಾಗಿದೆ' ಎಂದು ಸಚಿವ ಅಶೋಕ್ ತಿಳಿಸಿದರು.

ಉಕ್ರೇನ್‌ನಲ್ಲಿ ಸಿಲುಕಿಕೊಂಡಿರುವ ಸುದೀಕ್ಷಾ



ದೇವನಹಳ್ಳಿ: ಇಲ್ಲಿಯ ಶಾಂತಿನಗರ ನಿವಾಸಿ ಎನ್. ಮುನಿರಾಜುರವರ ಪುತ್ರಿ ಸುದೀಕ್ಷಾ ಅಂತಿಮ ವರ್ಷದ ಎಂಬಿಬಿಎಸ್ ವ್ಯಾಸಂಗ ಮಾಡುತ್ತಿದ್ದು, ಉಕ್ರೇನ್‌ನ ಕೀವ್‌ನಲ್ಲಿ ಸಿಲುಕಿದ್ದಾರೆ.

'ಯುದ್ಧದ ಮುನ್ಸೂಚನೆ ಹಿನ್ನೆಲೆಯಲ್ಲಿ ತಾಯ್ನಾಡಿಗೆ ಮರಳುವಂತೆ ಪೋಷಕರು ಒತ್ತಾಯಿಸುತ್ತಿದ್ದರು. ಕಳೆದ ಹತ್ತು ವರ್ಷಗಳಿಂದ ರಷ್ಯಾ ಯುದ್ಧದ ಬೆದರಿಕೆ ಹಾಕುತ್ತಲೇ ಇದೆ. ಏನೂ ಆಗದು ಎಂದು ವಿಶ್ವವಿದ್ಯಾಲಯದ ಆಡಳಿತ ಮಂಡಳಿ ತಿಳಿಸಿತ್ತು. ಹಾಗಾಗಿ ವಾಪಾಸ್ ಬರಲು ಹಿಂಜರಿದೆ' ಎಂದು ಸುದೀಕ್ಷಾ ತಿಳಿಸಿದರು.

ಕೀವ್‌ನಿಂದ ವಿಡಿಯೋ ಕರೆಯಲ್ಲಿ ಮಾತನಾಡಿದ ಅವರು, 'ಇಲ್ಲಿನ ದಿನ ಸನ್ನಿವೇಶ ನೋಡಿದರೆ ಮೈನಡುಗುತ್ತದೆ. ಕಾಲೇಜು ಆಡಳಿತ ಮಂಡಳಿ ವಿದ್ಯಾರ್ಥಿಗಳನ್ನು ಬಂಕರ್‌ಗಳಲ್ಲಿ ಸುರಕ್ಷಿತವಾಗಿ ಇಟ್ಟಿದೆ. ಬಾಂಬ್, ಶೆಲ್, ಯುದ್ಧ ವಿಮಾನಗಳ ಹಾರಾಟದ ಸದ್ದಿನ ನಡುವೆಯೇ ಆನ್‌ಲೈನ್ ತರಗತಿಯೂ ನಡೆಯುತ್ತಿವೆ' ಎಂದು ಮಾಹಿತಿ ನೀಡಿದರು.

ಷೇರು ಹೂಡಿಕೆ ಆಮಿಷ: ₹ 15.85 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಷೇರು ಮಾರುಕಟ್ಟೆಯಲ್ಲಿ ಹೂಡಿಕೆಯಿಂದ ದುಪ್ಪಟ್ಟು ಲಾಭ ಬರಲಿದೆ ಎಂದು ಆಮಿಷವೊಡ್ಡಿ ನಗರದ ವಿ.ವಿ.ಪುರ ನಿವಾಸಿಯೊಬ್ಬರಿಂದ ₹15.85 ಲಕ್ಷ ಪಡೆದು ವಂಚಿಸಲಾಗಿದೆ.

‘ಆರೋಪಿ ಎನ್ನಲಾದ ಆನಂದ್ ಸೀತಾರಾಮ್ ಶರ್ಮಾ ಹಾಗೂ ಇತರರ ವಿರುದ್ಧ ಎಫ್ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಷೇರು ಮಾರುಕಟ್ಟೆಯಲ್ಲಿ ಆಸಕ್ತಿ ಹೊಂದಿರುವ ಯುವಕ ಹೂಡಿಕೆಗೆ ಡಿಮ್ಯಾಟ್ ಖಾತೆ ತೆರೆದಿದ್ದರು. 2021ರಲ್ಲಿ ಅವರಿಗೆ ಕರೆ ಮಾಡಿದ್ದ ಆರೋಪಿ, ಸೆಬಿ ಪ್ರತಿನಿಧಿ ಎಂದು ಪರಿಚಯಿಸಿಕೊಂಡಿದ್ದ. ಹೆಚ್ಚು ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ಮಾಡಿಕೊಡುವ ಆಮಿಷವೊಡ್ಡಿದ್ದ. ಅದನ್ನು ನಂಬಿದ್ದ ಯುವಕ, ಹಂತ ಹಂತವಾಗಿ ₹15.85 ಲಕ್ಷ ಹೂಡಿಕೆ ಮಾಡಿದ್ದ. ಡಿಮ್ಯಾಟ್ ಖಾತೆಗಳ ವಿವರ, ಪಾಸ್‌ವರ್ಡ್ ಪಡೆದಿದ್ದ ಆರೋಪಿ ಪರಾರಿಯಾಗಿದ್ದಾನೆ’ ಎಂದೂ ತಿಳಿಸಿವೆ.

ಮಾವನಿಂದ ಲೈಂಗಿಕ ಕಿರುಕುಳ: ದೂರು

ಬೆಂಗಳೂರು: ‘ಲೈಂಗಿಕವಾಗಿ ಸಹಕರಿಸುವಂತೆ ಪೀಡಿಸುತ್ತಿರುವ ಮಾವ, ನಿರಂತರವಾಗಿ ಕಿರುಕುಳ ನೀಡುತ್ತಿದ್ದಾನೆ’ ಎಂದು ಆರೋಪಿಸಿ ಮಹಿಳೆಯೊಬ್ಬರು ಬಸವನಗುಡಿ ಮಹಿಳಾ ಠಾಣೆಗೆ ದೂರು ನೀಡಿದ್ದಾರೆ.

‘ನಗರದ ನಿವಾಸಿ, 24 ವರ್ಷದ ಮಹಿಳೆ ದೂರು ಆಧರಿಸಿ 63 ವರ್ಷದ ಮಾವನ (ಪತಿಯ ತಂದೆ) ವಿರುದ್ಧ ಎಫ್ಐಆರ್ ದಾಖಲಿಸಿದ್ದು, ತನಿಖೆ ನಡೆದಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದೂರುದಾರ ಮಹಿಳೆಗೆ 2015ರಲ್ಲಿ ವಿವಾಹವಾಗಿದ್ದು, ದಂಪತಿಗೆ 6 ವರ್ಷಗಳ ಮಗು ಇದೆ. ಆದರೆ, ಮೂರು ತಿಂಗಳ ಹಿಂದಷ್ಟೇ ಪತಿ ಹೃದಯಾಘಾತದಿಂದ ತೀರಿಕೊಂಡಿದ್ದಾರೆ’ ಎಂದು ತಿಳಿಸಿವೆ.

‘ಸ್ನಾನ ಮಾಡುವಾಗ ಇಣುಕಿ ನೋಡುತ್ತಿದ್ದ ಮಾವ, ಪ್ರಶ್ನಿಸಿದ್ದಕ್ಕೆ ಜೀವಬೆದರಿಕೆಯೊಡ್ಡಿದ್ದ’ ಎಂದೂ ದೂರಿನಲ್ಲಿ ತಿಳಿಸಲಾಗಿದೆ.

ತಪಾಸಣಾ ಶಿಬಿರ

ಬೆಂಗಳೂರು: ಸುಮನ್ ಚಾರಿಟಬಲ್ ಫೌಂಡೇಷನ್ ಮಾರ್ಚ್ 1ರಂದು ಬೆಳಿಗ್ಗೆ 10ರಿಂದ 6ರವರೆಗೆ ಮೂಳೆ ತಪಾಸಣೆ ಶಿಬಿರ ಏರ್ಪಡಿಸಿದೆ.

ವೈಷ್ಣವಿ ಆಸ್ಪತ್ರೆ ಸಹಯೋಗದಲ್ಲಿ ಶಿಬಿರ ಆಯೋಜಿಸಲಾಗುತ್ತಿದೆ ಎಂದು ಫೌಂಡೇಷನ್‌ನ ಮ್ಯಾನೇಜಿಂಗ್ ಟ್ರಸ್ಟಿ ಸತೀಶ್ ಚಂದ್ರ ತಿಳಿಸಿದ್ದಾರೆ. ನೋಂದಣಿಗೆ 8296621134, 9916783354 ಸಂಪರ್ಕಿಸಬಹುದು.

ಅಪಘಾತ: ಇಬ್ಬರು ಎಂಜಿನಿಯರ್‌ಗಳ ಸಾವು

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಶನಿವಾರ ತಡರಾತ್ರಿ ಕಾರು ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಎಂಜಿನಿಯರಿಂಗ್ ಪದವೀಧರರಿಬ್ಬರು ಮೃತಪಟ್ಟಿದ್ದಾರೆ.

‘ಸ್ಥಳೀಯ ನಿವಾಸಿ ಯತೀಶ್ (22), ಕಿರಣ್ (22) ಮೃತರು. ಇಬ್ಬರು ಸಂಬಂಧಿಕರು. ಅಪಘಾತದ ಬಗ್ಗೆ ಹೆಬ್ಬಾಳ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಇತ್ತೀಚೆಗಷ್ಟೇ ಎಂಜಿನಿಯರಿಂಗ್ ಪದವಿ ಮುಗಿಸಿದ್ದ ಕಿರಣ್ ಹಾಗೂ ಯತೀಶ್, ಒಟ್ಟಿಗೆ ಇರುತ್ತಿದ್ದರು. ಶನಿವಾರ ತಡರಾತ್ರಿ 1ಗಂಟೆ ಸುಮಾರಿಗೆ ಬ್ಯಾಟರಾಯನಪುರ ಜಂಕ್ಷನ್‌ಗೆ ಬೈಕ್‌ನಲ್ಲಿ ಬಂದಿದ್ದರು. ಅದೇ ವೇಳೆ ಅತೀ ವೇಗವಾಗಿ ಬಂದ ಕಾರು, ಬೈಕ್‌ಗೆ ಡಿಕ್ಕಿ ಹೊಡೆದಿತ್ತು.’

‘ಅಪಘಾತದಿಂದಾಗಿ ಕಿರಣ್ ಹಾಗೂ ಯತೀಶ್, ಮೇಲಕ್ಕೆ ಹಾರಿ ರಸ್ತೆಗೆ ಬಿದ್ದಿದ್ದರು. ತಲೆಗೆ ತೀವ್ರ ಪೆಟ್ಟು ಬಿದ್ದಿದ್ದು, ರಕ್ತಸ್ರಾವವಾಗಿ ಮೃತಪಟ್ಟಿದ್ದಾರೆ. ಕಾರು ಚಾಲಕನ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ ಎಂದು ಮೇಲ್ನೋಟಕ್ಕೆ ಗೊತ್ತಾಗಿದೆ. ಕಾರು ಸ್ಥಳದಲ್ಲೇ ಬಿಟ್ಟು ಚಾಲಕ ಪರಾರಿಯಾಗಿದ್ದಾನೆ’ ಎಂದು ಹೇಳಿದರು.

ಗಾಂಜಾ ಮಾರುತ್ತಿದ್ದವರ ಬಂಧನ

ಬೆಂಗಳೂರು: ನೆರೆಯ ಆಂಧ್ರಪ್ರದೇಶದಿಂದ ಗಾಂಜಾ ತಂದು ನಗರದಲ್ಲಿ ಮಾರುತ್ತಿದ್ದ ಇಬ್ಬರು ಆರೋಪಿಗಳನ್ನು ರಾಜಗೋಪಾಲನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

‘ತಮಿಳುನಾಡಿನ ಪ್ರಕಾಶ್, ಸುಂದರ್ ಪಾಂಡೆ ಬಂಧಿತರು. ಅವರಿಂದ 21 ಕೆ.ಜಿ 180 ಗ್ರಾಂ ಗಾಂಜಾ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಸ್ನೇಹಿತರಾಗಿದ್ದ ಇವರು ಕೆಲಸ ಹುಡುಕಿಕೊಂಡು ಹಲವು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಚಕ್ಕುಲಿ, ನಿಪ್ಪಟ್ಟು ಹಾಗೂ ಇತರೆ ತಿನಿಸುಗಳನ್ನು ತಯಾರಿಸಿ ಅಂಗಡಿಗಳಿಗೆ ಮಾರಾಟ ಮಾಡುತ್ತಿದ್ದರು. ಕೋವಿಡ್‌ನಿಂದ ವ್ಯಾಪಾರದಲ್ಲಿ ನಷ್ಟವಾಗಿತ್ತು. ಬಳಿಕ ಗಾಂಜಾ ಮಾರಾಟಕ್ಕೆ ಇಳಿದಿದ್ದರು. ಚಿಕ್ಕ ಪೊಟ್ಟಣಗಳಲ್ಲಿ ತುಂಬಿ ತಿನಿಸು ರೀತಿ ಮಾರುತ್ತಿದ್ದು, ಹೆಚ್ಚು ಹಣ ಸಂಪಾದಿಸುತ್ತಿದ್ದರು’ ಎಂದೂ ಪೊಲೀಸರು ಹೇಳಿದರು.

ಪೀಣ್ಯದಲ್ಲಿ ಸಿಕ್ಕಿಬಿದ್ದರು: ‘ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಕಂಪನಿಗಳ ಉದ್ಯೋಗಿಗಳು ಹಾಗೂ ಕೆಲ ಕಾರ್ಮಿಕರು ಗ್ರಾಹಕರಾಗಿದ್ದು, ತಮ್ಮದೇ ಜಾಲದ ಮೂಲಕ ತಲುಪಿಸುತ್ತಿದ್ದರು’ ಎಂದು ವಿವರಿಸಿದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಎಚ್ಚರಿಕೆ ಫಲಕವಿದ್ದರೂ ರಾಶಿ ಕಸ!

ಎಚ್‌ಎಸ್‌ಆರ್ ಬಡಾವಣೆಯ ಟೀಚರ್ಸ್ ಕಾಲೊನಿಯ 6ನೇ ಮುಖ್ಯರಸ್ತೆ ಬದಿಯಲ್ಲಿ ವ್ಯಾಪಾರಿಗಳು ಕಸ ತಂದುಸುರಿಯುತ್ತಾರೆ. ಹಸಿ, ಒಣ ಕಸ ಸೇರಿದಂತೆ ಎಲ್ಲ ರೀತಿಯ ಕಸ ಇಲ್ಲಿ ರಾಶಿ ಬಿದ್ದಿರುತ್ತದೆ. ಪಾಲಿಕೆಯ ನಿರ್ಲಕ್ಷ್ಯದಿಂದ ಸೊಳ್ಳೆಗಳ ತಾಣವಾಗಿ ಬದಲಾಗಿದೆ. ಸ್ಥಳೀಯರ ಆರೋಗ್ಯದ ಮೇಲೂ ಪರಿಣಾಮ ಬೀರಿದೆ. ಆಹಾರ ಅರಸಿ ಬರುವ ಜಾನುವಾರುಗಳು ಪ್ಲಾಸ್ಟಿಕ್ ವಸ್ತುಗಳನ್ನು ತಿಂದು ಅಪಾಯಕ್ಕೆ ಸಿಲುಕುತ್ತಿವೆ.

ವಿಪರ್ಯಾಸವೆಂದರೆ ಕಸ ಬಿದ್ದಿರುವ ಜಾಗದಲ್ಲೇ 'ಇಲ್ಲಿ ಕಸ ಹಾಕಬಾರದು, ಹಾಕಿದ್ದಲ್ಲಿ ₹5 ಸಾವಿರ ದಂಡ ವಿಧಿಸಲಾಗುವುದು' ಎಂಬ ಸೂಚನಾಫಲಕ ಅಳವಡಿಸಲಾಗಿದೆ. ಆದರೂ ಅದೇ ಜಾಗದಲ್ಲಿ ಕಸ ರಾಶಿ ಬೀಳುತ್ತಿದೆ. ಕಸ ಹಾಕುವವರ ಬೆಂಬಲಕ್ಕೆ ಯಾರೋ ಇದ್ದಂತಿದೆ.

ಶ್ರೀಧರ್, ಎಚ್‌ಎಸ್‌ಆರ್‌ಬಡಾವಣೆ



ಟೀಚರ್ಸ್ ಕಾಲೊನಿಯಲ್ಲಿ ಫಲಕ ಇರುವ ಸ್ಥಳದಲ್ಲೇ ಕಸ ಹಾಕಿರುವುದು



ಎಜಿಬಿ ಬಡಾವಣೆಯಲ್ಲಿರುವ ಉದ್ಯಾನದಲ್ಲಿ ಆಸನ ಹಾಳಾಗಿರುವುದು

ಉದ್ಯಾನದ ಆಸನ ಬದಲಿಸಿ

ಹೆಸರಘಟ್ಟ ಮುಖ್ಯರಸ್ತೆಯ ಎಜಿಬಿ ಬಡಾವಣೆಯಲ್ಲಿರುವ ಉದ್ಯಾನದಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಆಸನಗಳ ವ್ಯವಸ್ಥೆ ಇದೆ. ಸಿಮೆಂಟ್‌ನಿಂದ ತಯಾರಿಸಿದ ಈ ಆಸನಗಳು ಹಳೆಯದಾಗಿರುವುದರಿಂದ ಹಾಳಾಗಿವೆ. ಕೆಲವು ಮುರಿದುಕೊಂಡಿದ್ದು, ಕೂರಲು ಯೋಗ್ಯವಾಗಿಲ್ಲ.

ಸಾರ್ವಜನಿಕರು ಉದ್ಯಾನಕ್ಕೆ ಪ್ರತಿದಿನ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ದಣಿವಾದರೂ ಆಸನಗಳ ದುಸ್ಥಿತಿ ಕಂಡು ಕುಳಿತುಕೊಳ್ಳಲು ಹೆದರುತ್ತಾರೆ. ಈ ಬಗ್ಗೆ ಪಾಲಿಕೆ ಅಧಿಕಾರಿಗಳು ಗಮನಹರಿಸಬೇಕು. ಉದ್ಯಾನದಲ್ಲಿ ಈಗಿರುವ ಆಸನಗಳನ್ನು ತೆರವು ಮಾಡಿ, ಹೊಸದನ್ನು ಅಳವಡಿಸಿದರೆ ಅನುಕೂಲ.

ಮೋಹನ್ ಕೃಷ್ಣ, ಸ್ಥಳೀಯ

ಕಸ ತುಂಬಿಕೊಂಡ ರಾಜಕಾಲುವೆ

ಬಸವನಪುರ ವಾರ್ಡ್ ವ್ಯಾಪ್ತಿಯ ಮೇಡಹಳ್ಳಿ ಇಂದಿರಾ ಕ್ಯಾಂಟೀನ್ ಬಳಿ ರಾಜಕಾಲುವೆ ಹಾದುಹೋಗಿದೆ. ಇದಕ್ಕೆ ತಡೆಗೋಡೆ ಹಾಗೂ ಸರಿಯಾದ ನಿರ್ವಹಣೆ ಇಲ್ಲದ ಕಾರಣ, ಕಸ, ಪ್ಲಾಸ್ಟಿಕ್ ವಸ್ತುಗಳಿಂದ ತುಂಬಿದೆ. ಇದರಿಂದ ಚರಂಡಿ ನೀರು ಸರಾಗವಾಗಿ ಹರಿಯಲಾಗದೇ ಒಂದೇ ಜಾಗದಲ್ಲಿ ನಿಂತು ದುರ್ನಾತ ಬೀರುತ್ತದೆ. ಪಕ್ಕದಲ್ಲೇ ಇರುವ ಇಂದಿರಾ ಕ್ಯಾಂಟೀನ್‌ನಲ್ಲಿ ಆಹಾರ ಸೇವಿಸಲು ಬರುವ ಸಾರ್ವಜನಿಕರು ಇದರಿಂದ ಕಿರಿಕಿರಿ ಅನುಭವಿಸುತ್ತಿದ್ದಾರೆ. ಈ ಬಗ್ಗೆ ಪಾಲಿಕೆ ಅಧಿಕಾರಿಗಳಿಗೆ ದೂರು ಕೊಟ್ಟರೂ ಕ್ರಮ ತೆಗೆದುಕೊಂಡಿಲ್ಲ.



ಮೇಡಹಳ್ಳಿಯ ಇಂದಿರಾ ಕ್ಯಾಂಟೀನ್ ಬಳಿ ರಾಜಕಾಲುವೆಯಲ್ಲಿ ಕಸ

ಕಿರಣ್, ಮೇಡಹಳ್ಳಿ

ಚರಂಡಿ ಸ್ವಚ್ಛಗೊಳಿಸಿ

ಎಂ.ಸಿ.ಬಡಾವಣೆಯಲ್ಲಿರುವ ಅಲ್ಪಸಂಖ್ಯಾತರ ಬಾಲಕಿಯರ ವಿದ್ಯಾರ್ಥಿನಿಲಯದ ಎದುರು ಹಾಗೂ ಗೀತಾಂಜಲಿ ಅಪಾರ್ಟ್‌ಮೆಂಟ್ ಸಮುಚ್ಛಯದ ಮುಂದೆ ಇರುವ ಚರಂಡಿ ಹಲವು ತಿಂಗಳುಗಳಿಂದ ಕಟ್ಟಿಕೊಂಡಿದೆ. ಕ್ರಮೇಣ ಕಸ, ಪ್ಲಾಸ್ಟಿಕ್, ದಿನಬಳಕೆ ವಸ್ತುಗಳೆಲ್ಲ ಸಂಗ್ರಹಗೊಂಡು ಕೊಳೆಯುತ್ತಿವೆ.

ಇದರಿಂದ ಕೆಟ್ಟ ವಾಸನೆ ಬರುತ್ತಿದೆ. ಇದು ಸೊಳ್ಳೆಗಳ ಉಗಮ ಸ್ಥಾನವಾಗುತ್ತಿದ್ದು, ಸ್ಥಳೀಯರನ್ನು ಅನಾರೋಗ್ಯಕ್ಕೆ ದೂಡುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸಬೇಕು. ಚರಂಡಿಯಲ್ಲಿ ನೀರು ಸರಾಗವಾಗಿ ಹರಿಯುವಂತೆ ಕ್ರಮ ಕೈಗೊಳ್ಳಬೇಕು.

ಕುಮಾರಸ್ವಾಮಿ, ಎಂ.ಸಿ.ಬಡಾವಣೆ

ಪಾದಚಾರಿ ಮಾರ್ಗ ದುರಸ್ತಿ ಮಾಡಿ

ಬನಶಂಕರಿ 3ನೇ ಹಂತದಲ್ಲಿ ಅಂಚೆ ಕಚೇರಿ ಮಾರ್ಗವಾಗಿ ದತ್ತಾತ್ರೇಯ ನಗರ, ಹೊಸಕೆರೆಹಳ್ಳಿ ಮತ್ತು ಬ್ಯಾಂಕ್ ಕಾಲೊನಿಗಳತ್ತ ಹೋಗುವ ರಸ್ತೆಯಲ್ಲಿ ವಾಹನದಟ್ಟಣೆ ಅಧಿಕ. ರಸ್ತೆಯ ಪಕ್ಕದಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ನಿರ್ಮಿಸಿರುವ ಪಾದಚಾರಿ ಮಾರ್ಗ ಅಲ್ಲಲ್ಲಿ ಹಾಳಾಗಿದೆ. ಇದರಿಂದ ಪಾದಚಾರಿ ಮಾರ್ಗದ ಬದಲಿಗೆ ಜನ ಮುಖ್ಯರಸ್ತೆಗೆ ಬರುತ್ತಾರೆ. ಪಾದಚಾರಿ ಮಾರ್ಗವನ್ನು ಶೀಘ್ರವಾಗಿ ದುರಸ್ತಿ ಮಾಡಿ.

ಸತ್ಯಬೋಧ, ಹೊಸಕೆರೆಹಳ್ಳಿ ಬಡಾವಣೆ



ಬನಶಂಕರಿ 3ನೇ ಹಂತದಲ್ಲಿ ಪಾದಚಾರಿ ಮಾರ್ಗದ ಸ್ಥಿತಿ

ನಿಧಾನಗತಿಯಲ್ಲಿ ಚರಂಡಿ ಕಾಮಗಾರಿ

ಗಾಂಧಿನಗರ ವಿಧಾನಸಭಾ ಕ್ಷೇತ್ರಕ್ಕೆ ಸೇರುವ ಗೋಪಾಲಪುರದ ಎಲ್ಲ ಬೀದಿ ಮತ್ತು ರಸ್ತೆಗಳಲ್ಲಿ ಐದು ತಿಂಗಳುಗಳಿಂದ ಚರಂಡಿ ದುರಸ್ತಿ ಕಾಮಗಾರಿ ನಡೆಯುತ್ತಿದೆ. ಕೆಲವೆಡೆ ಕಳಪೆ ಕಾಮಗಾರಿ ಮಾಡಿದ್ದಾರೆ. ದುರಸ್ತಿ ಕಾರ್ಯ ನಿಧಾನಗತಿಯಲ್ಲಿ ಸಾಗುತ್ತಿರುವುದರಿಂದ ಇಲ್ಲಿನ ಮಕ್ಕಳು, ಮಹಿಳೆಯರು ಹಾಗೂ ವೃದ್ಧರಿಗೆ ಬಹಳ ಸಮಸ್ಯೆಯಾಗಿದೆ.

ಮನೆಗಳ ಎದುರೇ ಕಾಮಗಾರಿ ನಡೆಯುತ್ತಿರುವುದರಿಂದ ಆಳವಾದ ಚರಂಡಿಗೆ ಹೆದರಿ, ಮಕ್ಕಳನ್ನು ಮನೆಯಿಂದ ಹೊರಬಿಡದೆ, ಜೋಪಾನ ಮಾಡುತ್ತಿದ್ದೇವೆ. ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಇತ್ತ ಮುಖ ಮಾಡಿಲ್ಲ. ಅವಘಡಗಳು ಜರುಗುವ ಮುನ್ನ ಅದನ್ನು ತಡೆಯುವುದು ಒಳ್ಳೆಯದು. ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಬೇಕು.

ಗಿರೀಶ್, ಸ್ಥಳೀಯ

'ಭಾರತ್ ಮಾತಾ ಕೀ ಜೈ ಹೇಳಲೇಬೇಕು'

ಪ್ರಜಾವಾಣಿ ವಾರ್ತೆ

ಧಾರವಾಡ: 'ಹಿಂದೂ, ಮುಸಲ್ಮಾನ, ಕ್ರೈಸ್ತ, ಯಾರೇ ಆದರೂ ಭಾರತದಲ್ಲಿ ಇರಬೇಕಾದರೆ 'ಭಾರತ್ ಮಾತಾ ಕೀ ಜೈ', 'ವಂದೇ ಮಾತರಂ' ಹೇಳುವುದು ಅನಿವಾರ್ಯ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಬಜರಂಗದಳ ಕಾರ್ಯಕರ್ತ ಹರ್ಷ ಕೊಲೆ ಖಂಡಿಸಿ ನಗರದ ಕಲಾಭವನ ಮೈದಾನದಲ್ಲಿ ಭಾನುವಾರ ನಡೆದ ಬೃಹತ್ ಹಿಂದೂ ಜಾಗೃತಿ ಸಮಾವೇಶ ಹಾಗೂ ಶ್ರದ್ಧಾಂಜಲಿ ಸಭೆಯಲ್ಲಿ ಅವರು ಮಾತನಾಡಿದರು.

'ಹಿಂದೂಗಳ ಬಹುಮತ ಇದ್ದರೆ ಮಾತ್ರ ದೇಶದಲ್ಲಿ ಜಾತ್ಯತೀತತೆ ಉಳಿಯುತ್ತದೆ. ಯಾವ ದೇಶದಲ್ಲಿ ಹಿಂದೂಗಳ ಬಹುಮತ ಇಲ್ಲವೋ, ಅಲ್ಲಿ ಜಾತ್ಯತೀತ ಎಂಬ ಪದವೇ ಇಲ್ಲ' ಎಂದು ಹೇಳಿದರು.



ಜಾತ್ಯತೀತ ಎಂದು ಬಾಯಿ ಬಡಿದುಕೊಳ್ಳುವ ಕಾಂಗ್ರೆಸ್ ನಾಯಕರು, ಇಸ್ಲಾಂ ಬಹುಮತವಿರುವ ಪಾಕಿಸ್ತಾನಕ್ಕೆ ಹೋಗಿ ಮಾತನಾಡಿದರೆ ಉಳಿಯುವುದೇ ಇಲ್ಲ

ಪ್ರಹ್ಲಾದ ಜೋಶಿ, ಕೇಂದ್ರ ಸಚಿವ

'ಎಲ್ಲಿಯವರೆಗೆ ಮುಸಲ್ಮಾನರು ಅಲ್ಪಸಂಖ್ಯಾತರಾಗಿರುತ್ತಾರೋ ಅಲ್ಲಿಯವರೆಗೆ ಸುಮ್ಮನಿರುತ್ತಾರೆ. ಬಹುಸಂಖ್ಯಾತರಾದರೆ ತಮ್ಮೊಳಗೆ ಬಡಿದಾಡಿಕೊಳ್ಳುತ್ತಾರೆ. ಅವರಲ್ಲಿಯೂ ಶಿಯಾ, ಸುನ್ನಿ ಎಂಬ ಪಂಗಡಗಳಿದ್ದು, ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ಆಗದು. ಇದರಿಂದಾಗಿಯೇ ಅನೇಕ ಮುಸ್ಲಿಂ ದೇಶಗಳಲ್ಲಿ ಮೂಲಭೂತವಾದ ಮನೆ ಮಾಡಿದ್ದು, ಇಡೀ ಜಗತ್ತನ್ನೇ ಕೆಡಿಸುತ್ತಿದೆ' ಎಂದು ವಾಗ್ದಾಳಿ ನಡೆಸಿದರು.

ಹರ್ಷ ಅವರ ಕುಟುಂಬಕ್ಕೆ ₹50 ಸಾವಿರ ನೀಡುವುದಾಗಿ ಶಾಸಕ ಅಮೃತ್ ದೇಸಾಯಿ ತಿಳಿಸಿದರು.

'ಕಲಬುರಗಿ ಉದ್ಯೋಗ ಮೇಳ: 2,240 ಮಂದಿಗೆ ಕೆಲಸ'

ಬೆಂಗಳೂರು: 'ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ ಫೆ.12ರಂದು ಕಲಬುರಗಿಯಲ್ಲಿ ನಡೆದ ಉದ್ಯೋಗ ಮೇಳದಲ್ಲಿ ಒಟ್ಟು 2,240 ಜನರಿಗೆ ಉದ್ಯೋಗ ಸಿಕ್ಕಿದೆ' ಎಂದು ಉನ್ನತ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಒಂದು ದಿನದ ಈ ಮೇಳದಲ್ಲಿ ವಿವಿಧ ವಿದ್ಯಾರ್ಹತೆಯ 8,670 ಉದ್ಯೋಗಾಕಾಂಕ್ಷಿಗಳು ಭಾಗವಹಿಸಿದ್ದರು.

'83 ಕಂಪನಿಗಳು ಭಾಗವಹಿಸಿದ್ದವು. ಉದ್ಯೋಗ ದೊರಕಿಸಿಕೊಂಡಿರುವ ಅಭ್ಯರ್ಥಿಗಳಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಹತೆಯ 382, ಪಿಯುಸಿ ಮಟ್ಟದ 342, ಐಟಿಐ ವಿದ್ಯಾರ್ಹತೆಯ 520, ಡಿಪ್ಲೊಮಾ ಓದಿರುವ 343, ಪದವಿ ಓದಿರುವ 425, ಸ್ನಾತಕೋತ್ತರ ಶಿಕ್ಷಣ ಹೊಂದಿರುವ 72, ಬಿ.ಇ., ಬಿ.ಟೆಕ್ ಓದಿರುವ 133 ಮತ್ತು ಎಂ.ಟೆಕ್ ಕಲಿತ 23 ಮಂದಿ ಇದ್ದಾರೆ' ಎಂದಿದ್ದಾರೆ.

ಮಲ್ಲೇಶ್ವರ ಉದ್ಯೋಗ ಮೇಳ: ಮಲ್ಲೇಶ್ವರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮರಿಯಪ್ಪ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ (ಫೆ. 26) ನಡೆದ ಉದ್ಯೋಗ ಮೇಳದಲ್ಲಿ 115 ಮಂದಿಗೆ ಉದ್ಯೋಗ ಸಿಕ್ಕಿದೆ. ಈ ಮೇಳದಲ್ಲಿ 44 ಕಂಪನಿಗಳು ಭಾಗವಹಿಸಿದ್ದು, ಒಟ್ಟು 1,085 ಉದ್ಯೋಗಾಕಾಂಕ್ಷಿಗಳು ಹೆಸರು ನೋಂದಾಯಿಸಿಕೊಂಡಿದ್ದರು ಎಂದೂ ಸಚಿವರು ತಿಳಿಸಿದ್ದಾರೆ.



ಶಾಸಕ ಕೃಷ್ಣ ಬೈರೇಗೌಡ ಅವರು ರೈತರಿಗೆ ಬೆಳೆ ಸಾಲಸೌಲಭ್ಯದ ಚೆಕ್ ವಿತರಿಸಿದರು. ಸಂಘದ ಅಧ್ಯಕ್ಷ ಎಂ.ಜಿ. ರಾಜಕುಮಾರ್, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಉದಯ ಶಂಕರ್, ಗ್ರಾಮಪಂಚಾಯಿತಿ ಮಾಜಿ ಅಧ್ಯಕ್ಷರಾದ ಪುಟ್ಟು ಆಂಜಿನಪ್ಪ, ಎನ್‌.ಕೆ.ಮಹೇಶ್ ಕುಮಾರ್ ಇದ್ದರು.

ಗೋದಾಮು ಕಟ್ಟಡ ನಿರ್ಮಾಣಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಬಂಡಿಕೊಡಿಗೇಹಳ್ಳಿ ಸೇವಾ ಸಹಕಾರ ಸಂಘದ ಮೈಲನಹಳ್ಳಿ ಶಾಖೆಯಲ್ಲಿ ವಾಣಿಜ್ಯ ಮತ್ತು ಗೋದಾಮು ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕ ಕೃಷ್ಣ ಬೈರೇಗೌಡ ಗುದ್ದಲಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, 'ರೈತರಿಗೆ ₹ 3 ಕೋಟಿಗೂ ಹೆಚ್ಚು ಬಡ್ಡಿರಹಿತ ಸಾಲ ವಿತರಿಸಲಾಗುತ್ತಿದೆ. ಇದರಲ್ಲಿ ಕೆಲವರಿಗೆ ಹಳೇ ಸಾಲವನ್ನು ನವೀಕರಿಸಲಾಗುತ್ತಿದ್ದು, ಕೆಲವರಿಗೆ ಹೊಸದಾಗಿ ಸಾಲಮಂಜೂರು ಮಾಡಲಾಗುತ್ತಿದೆ. ₹40 ಲಕ್ಷ ವೆಚ್ಚದಲ್ಲಿ ನೂತನ ಕಟ್ಟಡ ನಿರ್ಮಿಸಲಾಗುತ್ತಿದೆ. ಆದಷ್ಟು ಬೇಗ ಕಟ್ಟಡ ನಿರ್ಮಾಣವಾಗಿ ಈ ಭಾಗದ ಜನರಿಗೆ ಅನುಕೂಲವಾಗಲಿ' ಎಂದು ಆಶಿಸಿದರು.

ಇದೇ ಸಂದರ್ಭದಲ್ಲಿ 28 ರೈತರಿಗೆ ₹33 ಲಕ್ಷ ಬೆಳೆ ಸಾಲಸೌಲಭ್ಯದ ಚೆಕ್ ವಿತರಿಸಲಾಯಿತು. ಸಂಘದ ಅಧ್ಯಕ್ಷ ಎಂ.ಜಿ.ರಾಜಕುಮಾರ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷರಾದ ನಳಿನಾ ರಾಜಕುಮಾರ್, ಮಾಜಿ ಸದಸ್ಯ ಉದಯ ಶಂಕರ್, ಗ್ರಾಮಪಂಚಾಯಿತಿ ಮಾಜಿ ಅಧ್ಯಕ್ಷರಾದ ಪುಟ್ಟು ಆಂಜಿನಪ್ಪ, ಎನ್.ಕೆ.ಮಹೇಶ್ ಕುಮಾರ್, ಮಾರೇನಹಳ್ಳಿ ನಾಗರಾಜ್ ಇದ್ದರು.

'ಜನರ ಬಳಿಗೆ ಸಂಗೀತ ಕೊಂಡೊಯ್ದ ಜೋಶಿ'

ಬೆಂಗಳೂರು: 'ಪಂಡಿತ ಭೀಮಸೇನ ಜೋಶಿ ಅವರು ತಮ್ಮ ಸರಳತೆ ಮತ್ತು ಕಂಚಿನ ಕಂಠದ ಮೂಲಕ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವನ್ನು ಸಾಮಾನ್ಯ ಜನರ ಬಳಿ ಕೊಂಡೊಯ್ದರು' ಎಂದು ಗಾಯಕ ನಾಗರಾಜ ರಾವ್ ಹವಾಲ್ದಾರ್ ಹೇಳಿದರು.

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಪಂ.ಭೀಮಸೇನ ಜೋಶಿ ಜನ್ಮಶತಮಾನೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಭೀಮಸೇನ ಜೋಶಿಯವರ ಸಂಗೀತದ ಧ್ವನಿಸುರಳಿಗಳು ಮತ್ತು ಧ್ವನಿಮುದ್ರಿಕೆಗಳು ಪ್ರತಿಯೊಬ್ಬರ ಮನೆ-ಮನವನ್ನು ತಲುಪಿವೆ. ಕನ್ನಡದಲ್ಲಿ ಅನೇಕ ದಾಸರ ಪದಗಳನ್ನು ಹಾಡುವ ಮೂಲಕ ಅವರು ಮನೆ ಮಾತಾಗಿದ್ದಾರೆ. ಸವಾಯಿ ಗಂಧರ್ವರ ಶಿಷ್ಯರಾಗಿದ್ದ ಅವರು, ಹಿಂದುಸ್ತಾನಿ ಸಂಗೀತದ ಒಂದು ಪದ್ಧತಿಯಾದ ಕಿರಾಣಾ ಘರಾನಾದಲ್ಲಿ ಪರಿಣಿತರಾಗಿದ್ದರು. ದೇಶದ ಪ್ರತಿಷ್ಠಿತ ಪ್ರಶಸ್ತಿಗಳು ಅರಸಿಬಂದರೂ ಕೊನೆಯವರೆಗೂ ಅತ್ಯಂತ ಸರಳ ಜೀವನ ನಡೆಸಿದರು' ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ, 'ಬಡ ಕುಟುಂಬದಲ್ಲಿ ಜನಿಸಿದ ಭೀಮಸೇನ ಜೋಶಿ ಅವರು, ಸಂಗೀತವನ್ನು ತಮ್ಮ ಉಸಿರಾಗಿಸಿಕೊಳ್ಳುವ ಮೂಲಕ ವಿಶ್ವಮಟ್ಟದಲ್ಲಿ ಪ್ರಖ್ಯಾತಿ ಪಡೆದರು. 'ಭಾಗ್ಯದ ಲಕ್ಷ್ಮಿ ಬಾರಮ್ಮ...' ಸೇರಿದಂತೆ ಅವರ ಗಾಯನದ ಗೀತೆಗಳನ್ನು ಕೇಳಿದಾಗ ಈಗಲೂ ರೋಮಾಂಚನವಾಗುತ್ತದೆ' ಎಂದರು.

ಭೀಮಸೇನ ಜೋಶಿ ಅವರ ಸಾಧನೆ ಬಗ್ಗೆ ಮಾತನಾಡಿದ 'ಸಪ್ತಕ' ಸಂಸ್ಥೆ ಸ್ಥಾಪಕ ಜಿ.ಎಸ್. ಹೆಗಡೆ, 'ಸ್ವರ ಸಾಧನೆಗೆ ಜೋಶಿ ಅವರು ಹಗಲು–ರಾತ್ರಿ ಎನ್ನದೆ ತಪಸ್ಸು ಮಾಡಿದ್ದರು. ಅವರು ಪ್ರಶಸ್ತಿಗಳಿಗಾಗಿ ಹಾಡುತ್ತಿದ್ದವರಲ್ಲ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪಂ.ವಿನಾಯಕ ತೊರವಿ–ತಂಡದಿಂದ ಹಿಂದೂಸ್ತಾನಿ ಸಂಗೀತ ಗಾಯನ ನಡೆಯಿತು. ಪ್ರವೀಣ್ ಗೋಡ್ಖಿಂಡಿ, ಷಡಜ್ ಗೋಡ್ಖಿಂಡಿ, ಅವರು ಕೊಳಲು ವಾದನ ಪ್ರಸ್ತುತಪಡಿಸಿದರು. ಕಿರಣ್ ಗೋಡ್ಖಿಂಡಿ ಅವರು ತಬಲಾದಲ್ಲಿ ಸಾಥ್ ನೀಡಿದರು. ಸಂಗೀತಾ ಕಟ್ಟಿ ಗಾಯನ ನಡೆಯಿತು. ಪಂ. ರಾಜೇಂದ್ರ ನಾಕೋಡ್ ತಬಲಾ, ಪಂ. ವ್ಯಾಸಮೂರ್ತಿ ಕಟ್ಟಿ ಹಾರ್ಮೋನಿಯಂನಲ್ಲಿ ಸಾಥ್ ನೀಡಿದರು.





ನಗರದಲ್ಲಿ ಭಾನುವಾರ ನಡೆದ 'ಬಿಐಸಿ' ಹಬ್ಬದಲ್ಲಿ ಸಮಾಜಮುಖಿ ರಂಗಬಳಗ ಪ್ರಸ್ತುತಪಡಿಸಿದ, ಹುಲುಗಪ್ಪ ಕಟ್ಟಿಮನಿ ನಿರ್ದೇಶನದ 'ರಸಾಭಿಜ್ಞಾನ' ನಾಟ್ಯ ರೂಪಕ ಗಮನಸೆಳೆಯಿತು. (ಎಡ ಚಿತ್ರ), 'ಬಿಐಸಿ ಹಬ್ಬ'ದಲ್ಲಿ ಚಿಣ್ಣರು ಕಟ್ಟಿಗೆಯ ಬ್ಲಾಕ್‌ಗಳನ್ನು ಜೋಡಿಸುವ ಚಟುವಟಿಕೆಯಲ್ಲಿ ತೊಡಗಿದ್ದ ನೋಟ– ಪ್ರಜಾವಾಣಿ ಚಿತ್ರಗಳು

ಸರ್ಕಾರೇತರ ಸಂಸ್ಥೆಗಳ ಚಟುವಟಿಕೆಗಳ ಅನಾವರಣ

'ಬಿಐಸಿ ಹಬ್ಬ'ದಲ್ಲಿ ಸಂಗೀತ ಸ್ವರ ಸುಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲ್ಲಿ ಸಂಗೀತ ಸ್ವರ ಸುಧೆ ಹರಿದು ಬಂದಿತ್ತು. ಸಂಗೀತದ ನಿನಾದಕ್ಕೆ ಪ್ರೇಕ್ಷಕರು ತಲೆದೂಗಿದರು. ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ನಡೆದ 'ಬಿಐಸಿ ಹಬ್ಬ'ದ ಎರಡನೇ ದಿನವಾದ ಭಾನುವಾರ ಸಂಗೀತ ಲೋಕ ತೆರೆದುಕೊಂಡಿತು.

ಗಾಯಕಿ ಮಂಗಳಾ ಕಾರ್ತಿಕ್ ಅವರು ಒಂದು ಗಂಟೆಗೂ ಹೆಚ್ಚು ಕಾಲ ನೀಡಿದ ಸಂಗೀತ ಕಛೇರಿ ಸಂಗೀತ ಪ್ರೇಮಿಗಳ ಮನತಣಿಸಿತು. 'ಪ್ರಕೃತಿ ಸ್ವರ' ಹೆಸರಿನಲ್ಲಿ ಈ ಸಂಗೀತ ಕಾರ್ಯಕ್ರಮ ನಡೆಯಿತು.

ಕರ್ನಾಟಕ ಸಂಗೀತವನ್ನು ವಿವಿಧ ರಾಗಗಳಲ್ಲಿ ತಮ್ಮ ಶಿಷ್ಯಂದಿರ ಜತೆ ಮಂಗಳಾ ಪ್ರಸ್ತುತಪಡಿಸಿದರು. ಅರುಣಾಚಲ ಕಾರ್ತಿಕ ಅವರು ವಯೋಲಿನ್ ಮತ್ತು ಎಂ. ವಿನಯ್ ನಾಗರಾಜನ್ ಮೃದಂಗ ನುಡಿಸಿದರು.

ಸರ್ಕಾರೇತರ ಸಂಸ್ಥೆಗಳು ಪ್ರದರ್ಶಿಸಿದ ವಿವಿಧ ಚಟುವಟಿಕೆಗಳಿಗೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಯಿತು. ಸಮಾಜದಲ್ಲಿನ ಅಶಕ್ತರು, ಅಂಧರಿಗೆ ಮತ್ತು ಎಚ್‌ಐವಿ ಪೀಡಿತರಿಗೆ ನೆರವು ಮತ್ತು ತ್ಯಾಜ್ಯ ನಿರ್ವಹಣೆ ಸೇರಿದಂತೆ ವಿವಿಧ ಸೇವಾ ಕಾರ್ಯಗಳನ್ನು ಸಂಸ್ಥೆಗಳು ಸಾರ್ವಜನಿಕರಿಗೆ ವಿವರಿಸಿದವು.

ತಮಿಳುನಾಡಿನ ಕೃಷ್ಣಗಿರಿಯ ಕೊಥಾಕೃಷ್ಣಪಳ್ಳಿಯ 'ಸ್ನೇಹಗ್ರಾಮ'ದಲ್ಲಿ 13ರಿಂದ 20 ವರ್ಷದ ಒಳಗಿನ ಎಚ್‌ಐವಿ ಪೀಡಿತ ಮಕ್ಕಳಿಗೆ ಆಶ್ರಯ ಕಲ್ಪಿಸಲಾಗುತ್ತಿದೆ.

'ಬಹುತೇಕ ಅನಾಥ ಮಕ್ಕಳಿಗೆ ಆಶ್ರಯ ಕಲ್ಪಿಸಲಾಗಿದೆ. ಇಲ್ಲಿ ದಾಖಲಾಗುವ ಮಕ್ಕಳಿಗೆ ಶಿಕ್ಷಣ ನೀಡುವ ಜತೆಗೆ ವಿವಿಧ ವಿಷಯಗಳಿಗೆ ತರಬೇತಿಗಳನ್ನು ನೀಡಲಾಗುತ್ತಿದೆ. ಉದ್ಯೋಗ ಪಡೆಯಲು ಮಾರ್ಗದರ್ಶನ ನೀಡಲಾಗುತ್ತಿದೆ. ಹಲವರು ಉತ್ತಮ ಕ್ರೀಡಾಪಟುಗಳಾಗಿದ್ದಾರೆ. ಮುಖ್ಯವಾಗಿ ಸ್ವಾವಲಂಬನೆ ಜೀವನ ನಡೆಸಲು ಮಕ್ಕಳನ್ನು ಸಜ್ಜುಗೊಳಿಸಲಾಗುತ್ತಿದೆ' ಎಂದು 'ಸ್ನೇಹಗ್ರಾಮ'ದ ತೇಜಿ ಥಾಮಸ್ ವಿವರಿಸಿದರು.

ಚಿಂದಿ ಆಯುವವರ ಸಬಲೀಕರಣ ಕಾರ್ಯದಲ್ಲಿ ತೊಡಗಿರುವ 'ಹಸಿರು ದಳ', ತ್ಯಾಜ್ಯ ನಿರ್ವಹಣೆಯಲ್ಲಿ ಕೈಗೊಂಡಿರುವ ಚಟುವಟಿಕೆಗಳನ್ನು ಪ್ರದರ್ಶಿಸಿತ್ತು.

'ಹಸಿರು ದಳ ಇಂದು ಚಿಂದಿ ಆಯುವ ಸುಮಾರು 27 ಸಾವಿರ ಜನರ ಜತೆಗೂಡಿ ಕಾರ್ಯನಿರ್ವಹಿಸುತ್ತಿದೆ. ಅವರಿಗೆ ಮನೆ ನಿರ್ಮಿಸಿಕೊಳ್ಳಲು ನೆರವಾಗುತ್ತಿದೆ. ಕಟ್ಟಡ ತ್ಯಾಜ್ಯಗಳಲ್ಲಿ ಉತ್ತಮವಾದುದನ್ನು ಬಳಸಿ ಮನೆಗಳನ್ನು ನಿರ್ಮಿಸಲೂ ಚಾಲನೆ ನೀಡಲಾಗಿದೆ. ಜತೆಗೆ 'ಬುಗುರಿ' ಕಾರ್ಯಕ್ರಮದ ಮೂಲಕ ಚಿಂದಿ ಆಯುವವರ ಮಕ್ಕಳಿಗೆ ಶಿಕ್ಷಣ ಒದಗಿಸಲಾಗುತ್ತಿದೆ' ಎಂದು ಹಸಿರು ದಳದ ಸಿ.ವಿಶ್ವನಾಥ್ ವಿವರಿಸಿದರು.

ಅಂಗವಿಕಲರಿಗೆ ಶಿಕ್ಷಣ ಮತ್ತು ಉದ್ಯೋಗ ಕಲ್ಪಿಸಲು ಶ್ರಮಿಸುತ್ತಿರುವ 'ಯೂಥ್4ಜಾಬ್ಸ್' ಸಂಸ್ಥೆಯು 2012ರಿಂದ ಇದುವರೆಗೆ 28 ಸಾವಿರ ಮಂದಿಗೆ ತರಬೇತಿ ನೀಡಿದೆ.

'500ಕ್ಕೂ ಹೆಚ್ಚು ಕಂಪನಿಗಳಲ್ಲಿ ಅಂಗವಿಕಲರಿಗೆ ಉದ್ಯೋಗ ದೊರೆತಿದೆ. ಹಲವರು ಸಾಫ್ಟ್‌ವೇರ್ ಕಂಪನಿಗಳಲ್ಲಿ ಉದ್ಯೋಗ ಪಡೆದಿದ್ದಾರೆ' ಎಂದು ಸಂಸ್ಥೆಯ ಜೆರ್ರಿ ಅಂಟೋನಿ ವಿವರಿಸಿದರು.

ಮಕ್ಕಳಿಗೂ ವಿವಿಧ ವಿಷಯಗಳಲ್ಲಿ ಕಾರ್ಯಾಗಾರ ನಡೆಯಿತು. 5ರಿಂದ 12 ವರ್ಷದ ಮಕ್ಕಳು ಪಾಲ್ಗೊಂಡಿದ್ದರು. ಕಟ್ಟಿಗೆಯ ಬ್ಲಾಕ್‌ಗಳ ಜೋಡಣೆ ಸೇರಿ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು.



ಕಾರ್ಯಕ್ರಮವನ್ನು ಸಚಿವ ಬಿ.ಸಿ.ಪಾಟೀಲ ಉದ್ಘಾಟಿಸಿದರು. ಕೃಷಿ ಇಲಾಖೆ ನಿರ್ದೇಶಕಿ ನಂದಿನಿಕುಮಾರಿ, ಕುಲಪತಿ ಡಾ.ಎಸ್‌.ರಾಜೇಂದ್ರಪ್ರಸಾದ್ ಇದ್ದರು.

ಬೆಳೆ ವಿಮಾ ಪತ್ರ ವಿತರಣೆ

ಯಲಹಂಕ: ಪ್ರಧಾನಮಂತ್ರಿ ಫಸಲ್ ವಿಮಾ ಯೋಜನೆಯನ್ನು ರೈತರ ಮನೆ ಬಾಗಿಲಿಗೆ ತಲುಪಿಸುವ ನಿಟ್ಟಿನಲ್ಲಿ 'ನನ್ನ ಪಾಲಿಸಿ ನನ್ನ ಕೈಯಲ್ಲಿ' ಎನ್ನುವ ಬೆಳೆ ವಿಮೆ ಪಾಲಿಸಿ ವಿತರಣಾ ಅಭಿಯಾನ ಆರಂಭಿಸಲಾಗಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ತಿಳಿಸಿದರು.

ಕೃಷಿ ವಿಶ್ವವಿದ್ಯಾಲಯದ ಬಿಎಚ್‌ಎಸ್ ಕಾಲೇಜಿನಲ್ಲಿ ಅವರು ಬೆಳೆ ವಿಮೆ ಪಾಲಿಸಿ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. 'ಪ್ರಾಕೃತಿಕ ವಿಕೋಪಗಳಿಂದ ಬೆಳೆಗೆ ವಿಮಾ ಭದ್ರತೆ ಒದಗಿಸಲಾಗುವುದು. ಪ್ರಕೃತಿ ವಿಕೋಪ ಸಂಭವಿಸಿದಾಗ ರೈತರ ನೆರವಿಗೆ ಬರುವ ಯೋಜನೆ ಇದಾಗಿದೆ' ಎಂದು ವಿವರಿಸಿದರು.

'2021-22ರ ಹಿಂಗಾರು ಹಂಗಾಮಿನಲ್ಲಿ ನೋಂದಣಿ ಮಾಡಿದ ರೈತರಿಗೆ ಪಾಲಿಸಿ ವಿವರವನ್ನು 'ಇನ್‌ಲ್ಯಾಂಡ್' ಪತ್ರದ ನಮೂನೆಯಲ್ಲಿ ವಿತರಿಸುವ ಕಾರ್ಯಕ್ರಮ ಆಯೋಜಿಸಲಾಗಿದೆ' ಎಂದು ತಿಳಿಸಿದರು.

ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ರಾಜೇಂದ್ರಪ್ರಸಾದ್, ಕೃಷಿ ಇಲಾಖೆ ನಿರ್ದೇಶಕಿ ನಂದಿನಿ ಕುಮಾರಿ, ಕೃಷಿ ಆಯುಕ್ತ ಬ್ರಿಜೇಶ್ ಕುಮಾರ್ ದೀಕ್ಷಿತ್ ಇದ್ದರು.

ಸಂತ ಸೇವಾಲಾಲ್ ಅವರ 283ನೇ ಜಯಂತಿ ಕಾರ್ಯಕ್ರಮ

'ತಾಂಡಾಗಳಿಗೆ ಶೀಘ್ರ ಕಂದಾಯ ಗ್ರಾಮ ಭಾಗ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿರುವ ಒಂದು ಸಾವಿರಕ್ಕೂ ಹೆಚ್ಚು ತಾಂಡಾಗಳು ಶೀಘ್ರದಲ್ಲಿ ಕಂದಾಯ ಗ್ರಾಮಗಳಾಗಿ ಪರಿವರ್ತನೆ ಆಗಲಿವೆ' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಕರ್ನಾಟಕ ಪ್ರದೇಶ ಬಂಜಾರ (ಲಂಬಾಣಿ) ಸೇವಾ ಸಂಘ ವಸಂತ ನಗರದಲ್ಲಿರುವ ಬಂಜಾರ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಸಂತ ಸೇವಾಲಾಲ್ ಅವರ 283ನೇ ಜಯಂತಿ, ಬಂಜಾರ ದೀವಿಗೆ ಸ್ಮರಣ ಸಂಚಿಕೆ ಬಿಡುಗಡೆ, ಬಂಜಾರ ಕಲಾಮೇಳ ಉದ್ಘಾಟಿಸಿ ಅವರು ಮಾತನಾಡಿದರು.

'ತಾಂಡಾಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಿ, ಮೂಲಸೌಲಭ್ಯಗಳನ್ನು ನೀಡಲು ಕಾರ್ಯಾದೇಶ ನೀಡಿದ್ದೇನೆ. ತಾಂಡಾ ನಿವಾಸಿಗಳು ಶೈಕ್ಷಣಿಕವಾಗಿ ಮುಂದೆ ಬರಬೇಕು ಎನ್ನುವುದು ಸರ್ಕಾರದ ಆಶಯ. ಜಿಲ್ಲಾಧಿಕಾರಿ ನಡೆ ಹಳ್ಳಿಯ ಕಡೆ ಕಾರ್ಯಕ್ರಮದ ಸಂದರ್ಭದಲ್ಲಿ ಲಂಬಾಣಿ ತಾಂಡಾದಲ್ಲಿ ವಾಸ್ತವ್ಯ ಮಾಡಿ, ಅವರ ಸಮಸ್ಯೆಗಳನ್ನು ಪರಿಹರಿಸಲು ಆದ್ಯತೆ ನೀಡುತ್ತೇನೆ' ಎಂದು ಅವರು ಹೇಳಿದರು.

'ಸಂತ ಸೇವಾಲಾಲ್ ಮಹಾರಾಜ್ ಅವರು ಸೇವೆಗೆ ಎಲ್ಲರಿಗೂ ಮಾದರಿ' ಎಂದು ಬಣ್ಣಿಸಿದರು.



ಸಂತ ಸೇವಾಲಾಲ್ ಜಯಂತ್ಯುತ್ಸವವನ್ನು ಡೋಲು ಬಾರಿಸಿ ಕಂದಾಯ ಸಚಿವ ಆರ್‌. ಅಶೋಕ ಉದ್ಘಾಟಿಸಿದರು. ಸರ್ದಾರ್ ಸೇವಾಲಾಲ್ ಸ್ವಾಮೀಜಿ, ವಕೀಲ ಬಿ.ಪಿ.ರಾಜು, ಸಂಸದ ಉಮೇಶ್ ಜಿ. ಜಾಧವ, ಶಾಸಕ ರಾಜಕುಮಾರ ಪಾಟೀಲ ತೇಲ್ಕೂರ್, ಬಿ.ಟಿ. ಲಲಿತಾ ನಾಯಕ್, ಡಾ. ಸುಜಾತ ರಾಥೋಡ್, ಎಚ್‌.ಬಿ. ಸಿದ್ಯಾನಾಯಕ್ ಇದ್ದರು– ಪ್ರಜಾವಾಣಿ ಚಿತ್ರ

ಚಿತ್ರದುರ್ಗದ ಬಂಜಾರ ಗುರುಪೀಠದ ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಲೋಕಸಭೆ ಸದಸ್ಯ ಉಮೇಶ್ ಜಾಧವ, ಕರ್ನಾಟಕ ಪ್ರದೇಶ ಬಂಜಾರ (ಲಂಬಾಣಿ) ಸೇವಾ ಸಂಘದ ಅಧ್ಯಕ್ಷರಾದ ಬಿ.ಟಿ. ಲಲಿತಾ ನಾಯಕ್, ಮಿಂಟೋ ಆಸ್ಪತ್ರೆಯ ನಿರ್ದೇಶಕಿ ಡಾ.ಸುಜಾತ ರಾಥೋಡ್, ಸಂಘದ ಪ್ರಧಾನ ಕಾರ್ಯದರ್ಶಿ ಎಚ್.ಬಿ.ಸಿದ್ಯಾನಾಯಕ್ ಇದ್ದರು.

ಬಿಡದಿ ತಲುಪಿದ ಪಾದಯಾತ್ರೆ; ಇಂದು ಕೆಂಗೇರಿಯತ್ತ ಪಯಣ • ನಾಯಕರಿಗೆ ರೆಸಾರ್ಟ್‌ಗಳಲ್ಲಿ ವಾಸ್ತವ್ಯ ವ್ಯವಸ್ಥೆ

ಬಿರು ಬಿಸಿಲಲ್ಲಿ ನೀರಿಗಾಗಿ ನಡಿಗೆ

ಪ್ರಜಾವಾಣಿ ವಾರ್ತೆ

ರಾಮನಗರ: ಮೇಕೆದಾಟು ಎರಡನೇ ಹಂತದ ಪಾದಯಾತ್ರೆ ಭಾನುವಾರ ಆರಂಭಗೊಂಡಿದ್ದು, ಬಿರು ಬಿಸಿಲಲ್ಲಿ 'ನೀರಿಗಾಗಿ ನಡಿಗೆ' ಕೈಗೊಂಡವರ ಮೈಯಲ್ಲಿ ಬೆವರು ಜಿನುಗುತ್ತಿತ್ತು!

ಬೆಳಿಗ್ಗೆ 9ಕ್ಕೆ ಎಳೆ ಬಿಸಿಲಿನಲ್ಲಿ ಆರಂಭ ಆಗಬೇಕಿದ್ದ ನಡಿಗೆಗೆ ಚಾಲನೆ ದೊರೆತಾಗ ಮಧ್ಯಾಹ್ನ 12 ಗಂಟೆ ಸಮೀಪಿಸಿತ್ತು. ಬೆಂಗಳೂರು–ಮೈಸೂರು ಹೆದ್ದಾರಿಯ ಎಡ ಬದಿಯಲ್ಲಿ, ಕಾದ ಡಾಂಬರಿನ ಮೇಲೆ ಸಾಲಾಗಿ ನಡಿಗೆ ಸಾಗಿತು. ಬರಿಗಾಲಲ್ಲಿ ನಡೆಯುತ್ತಿದ್ದ ಹುಲಿವೇಷಧಾರಿಗಳ ಕಾಲು ಸುಟ್ಟು ಕಣ್ಣಲ್ಲಿ ನೀರು ಬಂದಿತ್ತು. ಸುತ್ತಮುತ್ತ ಮರಗಳು ಇರದ ಕಾರಣ, ನೆರಳಿಗೆ ಅಭಾವವಾಗಿ ಕಾಂಗ್ರೆಸ್ ನಾಯಕರು ಬೆವರು ಒರೆಸಿಕೊಂಡೇ ಹೆಜ್ಜೆ ಹಾಕಿದರು.

ಕೆಲವು ದೂರ ಕ್ರಮಿಸುತ್ತಲೇ ಹೆಚ್ಚಿನವರು ಕಾರುಗಳನ್ನೇರಿ ಹೊರಟರು. ಸುರ್ಜೇವಾಲಾ ಒಂದೆರಡು ಕಿ.ಮೀ. ನಡೆದರೆ, ಸಿದ್ದರಾಮಯ್ಯ ಆಗಾಗ್ಗೆ ಕಾಲು ಮಸಾಜ್ ಮಾಡಿಸಿಕೊಂಡು ಕಲ್ಲುಗೋಪಹಳ್ಳಿವರೆಗೂ ಪ್ರಯಾಸದಿಂದ ಹೆಜ್ಜೆ ಹಾಕಿ ನಂತರ ಬೆಂಗಳೂರಿಗೆ ವಾಪಸಾದರು. ಡಿ.ಕೆ. ಶಿವಕುಮಾರ್ ಮತ್ತಿತರ ಕೆಲ ಮುಖಂಡರು ಮಾತ್ರ ಕಾರ್ಯಕರ್ತರೊಂದಿಗೆ ರಾತ್ರಿ 8ಕ್ಕೆ ಮೊದಲ ದಿನದ 15 ಕಿ.ಮೀ. ನಡಿಗೆ ಪೂರ್ಣ ಮಾಡಿ, ಬಿಡದಿಯಲ್ಲಿ ವಿಶ್ರಾಂತಿಯ ಮೊರೆ ಹೋದರು.



ಭಾನುವಾರ ನಡೆದ ಮೇಕೆದಾಟು ಪಾದಯಾತ್ರೆಯಲ್ಲಿ ಪಾಲ್ಗೊಂಡ ಜನಸ್ತೋಮ – ಚಂದ್ರೇಗೌಡ/ ಪ್ರಜಾವಾಣಿ ಚಿತ್ರ

ಸಂಚಾರಕ್ಕೆ ಸಂಚಕಾರ

ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಪಾದಯಾತ್ರೆ ಸಾಗಿದ ಕಾರಣ ಈ ಮಾರ್ಗದಲ್ಲಿ ಸಂಚರಿಸುವ ಪ್ರಯಾಣಿಕರು ಪ್ರಯಾಸ ಪಟ್ಟರು. ಬೆಂಗಳೂರು ಕಡೆಯಿಂದ ಬರುವ ವಾಹನಗಳನ್ನು ಬಿಡದಿ ಬಳಿ ಹಾಗೂ ಮಂಡ್ಯ ಕಡೆಯಿಂದ ಬರುವ ವಾಹನಗಳಿಗೆ ಚನ್ನಪಟ್ಟಣದ ಬಳಿ ತಡೆದು ಮಾರ್ಗ ಬದಲಾವಣೆ ಮಾಡಲಾಗಿತ್ತು. ವಾರಾಂತ್ಯದ ಕಾರಣ ಹೆದ್ದಾರಿಯಲ್ಲಿ ಸಂಚಾರ ದಟ್ಟಣೆ ಸಾಮಾನ್ಯವಾಗಿದ್ದು, ಜನರಿಗೆ ತೊಂದರೆಯಾಯಿತು. ಇನ್ನೂ ಎರಡು ದಿನ ಇದೇ ಹೆದ್ದಾರಿಯಲ್ಲಿ ನಡಿಗೆ ಮುಂದುವರಿಯಲಿದ್ದು, ಮತ್ತಷ್ಟು ಕಡೆ ಮಾರ್ಗ ಬದಲಾವಣೆ ಆಗಲಿದೆ.

ಮೊದಲ ದಿನ 50 ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇತ್ತಾದರೂ ಅಷ್ಟು ಜನ ಬರಲಿಲ್ಲ. 10–15 ಸಾವಿರಕ್ಕೂ ಹೆಚ್ಚು ಮಂದಿ ಇದ್ದರೂ ಮಧ್ಯಾಹ್ನ ಭೋಜನದ ತರುವಾಯ ಈ ಸಂಖ್ಯೆ ಅರ್ಧಕ್ಕೆ ಕುಸಿಯಿತು. ಅದರಲ್ಲೂ ಮೊದಲ ದಿನ ಮಂಡ್ಯದ ಕಾಂಗ್ರೆಸ್ ಮುಖಂಡರು ಕಾರ್ಯಕರ್ತರೊಂದಿಗೆ ಧಾವಿಸಿ ನಾಯಕರ ಮುಂದೆ ಶಕ್ತಿ ಪ್ರದರ್ಶಿಸಿದರು. ಪಾದಯಾತ್ರಿಗರ ದಾಹ ತಣಿಸಲೆಂದು ಹಿಂದಿನಂತೆಯೇ ಹೆದ್ದಾರಿ ಬದಿ ಹತ್ತಾರು ಸ್ಟಾಲ್‌ಗಳಲ್ಲಿ ಎಳನೀರು, ಕಬ್ಬಿನ ರಸ, ಜ್ಯೂಸ್‌ಗಳ ವಿತರಣೆ ನಡೆಯಿತು. ಮಧ್ಯಾಹ್ನ ಮಾಯಗಾನಹಳ್ಳಿ ಬಳಿ ಸಸ್ಯಾಹಾರ– ಮಾಂಸಾಹಾರ ಊಟಬಡಿಸಲಾಯಿತು. ನಾಯಕರೆಲ್ಲ ಬಿಡದಿಯ ರೆಸಾರ್ಟ್‌ಗಳಲ್ಲಿ ರಾತ್ರಿ ಬಿಡಾರ ಹೂಡಿದರೆ, ಕಾರ್ಯಕರ್ತರಿಗೆ ಸಿ.ಎಂ. ಲಿಂಗಪ್ಪ ಒಡೆತನದ ಜ್ಞಾನವಿಕಾಸ ಕಾಲೇಜು ಹಾಗೂ ಕಲ್ಯಾಣ ಮಂಟಪಗಳಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಪಾದಯಾತ್ರೆಯ ಎರಡನೇ ದಿನವಾದ ಸೋಮವಾರ ಬಿಡದಿಯಿಂದ ಕೆಂಗೇರಿವರೆಗೆ ಬರೋಬ್ಬರಿ 20 ಕಿ.ಮೀ. ಉದ್ದದ ನಡಿಗೆ ನಿಗದಿಯಾಗಿದೆ. ಬೆಳಿಗ್ಗೆ ತುಸು ಬೇಗನೆ ನಡಿಗೆ ಆರಂಭವಾಗುವ ಸಾಧ್ಯತೆ ಇದೆ.

ದೇಗುಲ, ಮಸೀದಿಯಲ್ಲಿ ಪ್ರಾರ್ಥನೆ

ಪಾದಯಾತ್ರೆ ರೂವಾರಿ ಡಿ.ಕೆ. ಶಿವಕುಮಾರ್, ಅರ್ಚಕರಹಳ್ಳಿ ಶಾಖಾ ಮಠದಲ್ಲಿ ಗವಿ ಗಂಗಾಧರೇಶ್ವರನ ದರ್ಶನ ಪಡೆದು, ಅಲ್ಲಿಂದ ರಾಮನಗರದ ಚಾಮುಂಡೇಶ್ವರಿ ದೇಗುಲಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಬಳಿಕ ಪೀರನ್ ಷಾವಲಿ ದರ್ಗಾದಲ್ಲೂ ಪ್ರಾರ್ಥನೆ ನಡೆಯಿತು. ಅಲ್ಲಿಂದ ಪೂರ್ಣ ಕುಂಭದ ಮೂಲಕ, 300ಕ್ಕೂ ಹೆಚ್ಚು ಕಲಾವಿದರೊಂದಿಗೆ ನಡೆದುಕೊಂಡು ವೇದಿಕೆಯತ್ತ ಬಂದರು. ರಾಜ್ಯದ ಕಲಾಸಿರಿಯನ್ನು ಬಿಂಬಿಸುವ ವಿವಿಧ ಕಲಾ ಪ್ರಕಾರಗಳ ತಂಡಗಳು ಪಾದಯಾತ್ರೆಗೆ ಮೆರುಗು ತುಂಬಿದವು. ಶನಿವಾರ ರಾತ್ರಿ ಆದಿಚುಂಚನಗಿರಿ ಅರ್ಚಕರಹಳ್ಳಿ ಶಾಖಾ ಮಠದಲ್ಲಿ ತಂಗಿದ್ದ ಡಿಕೆಶಿ, ಭಾನುವಾರ ರಾತ್ರಿ ಬಾಲಗಂಗಾಧರನಾಥ ಶ್ರೀಗಳ ಹುಟ್ಟೂರು ಬಾನಂದೂರಿನ ಮಠದಲ್ಲಿ ವಿರಮಿಸಿದರು.

ಪ್ರಕರಣ ದಾಖಲು ಸಾಧ್ಯತೆ

ರಾಜ್ಯದಲ್ಲಿ ಇದೇ 28ರವರೆಗೂ ಕೋವಿಡ್ ಮಾರ್ಗಸೂಚಿ ಜಾರಿಯಲ್ಲಿದ್ದು, ಇದೇ ಕಾರಣಕ್ಕೆ ಪಾದಯಾತ್ರೆಗೆ ಜಿಲ್ಲಾಡಳಿತ ಅನುಮತಿ ನೀಡಿಲ್ಲ. ಮಾರ್ಗಸೂಚಿ ಉಲ್ಲಂಘಿಸಿದ ಆರೋಪದಡಿ ಕಾಂಗ್ರೆಸ್ ನಾಯಕರ ವಿರುದ್ಧ ಪ್ರಕರಣ ದಾಖಲಾಗುವ ಸಾಧ್ಯತೆ ಇದೆ. ಮೊದಲ ಹಂತದ ಪಾದಯಾತ್ರೆ ವೇಳೆ ನಾಲ್ಕು ದಿನವೂ ಪೊಲೀಸರು ಪ್ರತ್ಯೇಕ ಪ್ರಕರಣ ದಾಖಲಿಸಿದ್ದರು.

ಈ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಡಿ.ಕೆ. ಶಿವಕುಮಾರ್, 'ನಮ್ಮ ವಿರುದ್ಧ ಯಾವ ಪ್ರಕರಣ ದಾಖಲಿಸಿದರೂ ಹೆದರುವುದಿಲ್ಲ. ಸಿದ್ದರಾಮಯ್ಯ, ನಾವೆಲ್ಲರೂ ಜೈಲಿಗೆ ಹೋಗಲು ಸಿದ್ಧ. ಆದರೆ ನಮ್ಮಂತೆ ನಿಯಮ ಉಲ್ಲಂಘಿಸಿರುವ ಬಿಜೆಪಿ ನಾಯಕರೂ ಬರಬೇಕು' ಎಂದರು.

ಸುದ್ದಿ 2 ನಿಮಿಷ

ಪದವಿಗಾಗಿ ಪಾದಯಾತ್ರೆ: ಜೋಶಿ

ಹುಬ್ಬಳ್ಳಿ: ಪಾದಯಾತ್ರೆ ಮಾಡಿದರೆ ಮುಖ್ಯಮಂತ್ರಿ ಪದವಿ ಸಿಗಬಹುದು ಎನ್ನುವ ಆಸೆಯಿಂದಾಗಿ ಕಾಂಗ್ರೆಸ್ ಮುಖಂಡರು ಮೇಕೆದಾಟು ಪಾದಯಾತ್ರೆ ಮಾಡುತ್ತಿದ್ದಾರೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಟೀಕಿಸಿದರು.



ನಗರದಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು 'ಈ ಹಿಂದೆ ಸಿದ್ದರಾಮಯ್ಯ ಬಳ್ಳಾರಿ ಪಾದಯಾತ್ರೆ ಮಾಡಿ ಮುಖ್ಯಮಂತ್ರಿಯಾದರು. ಅದರಂತೆ ಈಗ ಮೇಕೆದಾಟು ಪಾದಯಾತ್ರೆ ಮೂಲಕ ಡಿ.ಕೆ. ಶಿವಕುಮಾರ್ ಸಿ.ಎಂ. ಆಗುವ ಕನಸು ಕಾಣುತ್ತಿದ್ದಾರೆ. ಈ ಯಾತ್ರೆ ಪೂರ್ಣಗೊಳ್ಳುವುದು ಸಿದ್ದರಾಮಯ್ಯ ಅವರಿಗೇ ಇಷ್ಟವಿಲ್ಲ. ರಾಹುಲ್ ಗಾಂಧಿ ತಾಕೀತು ಮಾಡಿದ್ದರಿಂದ ಅವರು ಯಾತ್ರೆಯಲ್ಲಿ ಪಾಲ್ಗೊಂಡಿದ್ದಾರೆ' ಎಂದರು.

'ಬಾಂಬೆ ಡೇಸ್' ಬಿಡುಗಡೆಯಾದರೆ ಕೆಲವರು ಬೆತ್ತಲಾಗುವರು: ವಿಶ್ವನಾಥ್

ಮೈಸೂರು: 'ನಾನು ಬರೆದಿರುವ ಬಾಂಬೆ ಡೇಸ್ ಪುಸ್ತಕ ಹೊರಬಂದರೆ, ಕೆಲವು ಮಾಜಿ ಮುಖ್ಯಮಂತ್ರಿಗಳು ಬೆತ್ತಲಾಗುತ್ತಾರೆ' ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಹೇಳಿದರು.

ಮೈಸೂರಿನಲ್ಲಿ ಭಾನುವಾರ ಪ್ರೊ.ಎಂ.ರಂಗಸ್ವಾಮಿ ಅವರ ಐದು ಪುಸ್ತಕಗಳ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿ, 'ಬಾಂಬೆ ಡೇಸ್‌ನಲ್ಲಿ ಏನೇನೋ ಕಥೆ ಬರೆದಿಲ್ಲ. ರಾಜ್ಯ ರಾಜಕಾರಣದ ವಾಸ್ತವ ವಿಚಾರ ತೆರೆದಿಟ್ಟಿದ್ದೇನೆ. ಮುಂಬರುವ ವಿಧಾನಸಭಾ ಚುನಾವಣೆವರೆಗೂ ಪುಸ್ತಕ ಬಿಡುಗಡೆ ಮಾಡಬೇಡಿ ಎಂಬುದಾಗಿ ಮೂರೂ ರಾಜಕೀಯ ಪಕ್ಷಗಳ ಮುಖಂಡರು ನನ್ನಲ್ಲಿ ಕೋರಿದ್ದಾರೆ' ಎಂದರು.

'ವಿಶ್ವನಾಥ್ ಒಬ್ಬ ತಲೆಹರಟೆ ಎಂದು ಕೆಲವರು ತೆಗಳುತ್ತಾರೆ. ಆದರೆ, ವಾಸ್ತವದ ಪ್ರತಿಪಾದಕ ನಾನು. ಈ ಪುಸ್ತಕ ರಾಜ್ಯ ರಾಜಕಾರಣದ ಹಲವು ತಿರುವುಗಳ ಮೇಲೆ ಬೆಳಕು ಚೆಲ್ಲುತ್ತದೆ. ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯಲು ಕಾರಣವಾದ ಅಂಶಗಳನ್ನೂ ಪುಸ್ತಕದಲ್ಲಿ ಸೇರಿಸುತ್ತಿದ್ದೇನೆ' ಎಂದರು.



ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಕೊಟ್ಟಿಗೆಹಾರದ ಬಳಿ ಕೆ.ಎಂ. ರಸ್ತೆಯಲ್ಲಿ ಭಕ್ತರು ಧರ್ಮಸ್ಥಳಕ್ಕೆ ಸಾಗಿದರು –ಎ.ಎನ್. ಮೂರ್ತಿ/ಪ್ರಜಾವಾಣಿ ಚಿತ್ರ

ಶಿವರಾತ್ರಿ: ಧರ್ಮಸ್ಥಳಕ್ಕೆ ಭಕ್ತರ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಶಿವರಾತ್ರಿ ಆಚರಣೆಗೆ ಧರ್ಮಸ್ಥಳಕ್ಕೆ ನಾಡಿನ ವಿವಿಧೆಡೆಯಿಂದ ಸಹಸ್ರಾರು ಭಕ್ತರು ಚಾರ್ಮಾಡಿ ಘಾಟ್ ಮಾರ್ಗವಾಗಿ ಪಾದಯಾತ್ರೆಯಲ್ಲಿ ಸಾಗುತ್ತಿದ್ದಾರೆ.

ಮಂಜುನಾಥಸ್ವಾಮಿ ದರ್ಶನ ಹಾಗೂ ಹರಕೆ ತೀರಿಸುವ ಉದ್ದೇಶದಿಂದ ಭಕ್ತರ ದಂಡು ಧರ್ಮಸ್ಥಳದ ಕಡೆಗೆ ಹರಿದಿದೆ. ಪುಟಾಣಿಗಳು, ವೃದ್ಧರೂ ಯಾತ್ರೆಯಲ್ಲಿ ಪಾಲ್ಗೊಂಡಿದ್ದು, ಐದಾರು ದಿನಗಳಿಂದ ಹಗಲಿರುಳೆನ್ನದೇ ನಿರಂತರವಾಗಿ ಪಯಣ ಮುಂದುವರಿದಿದೆ.

ಮಂಡ್ಯ, ಬೆಂಗಳೂರು, ಶಿವಮೊಗ್ಗ, ತುಮಕೂರು, ಹಾಸನ, ಮೈಸೂರು, ಕೋಲಾರ ಸಹಿತ ವಿವಿಧ ಜಿಲ್ಲೆಗಳ ಭಕ್ತರು ಇದ್ದಾರೆ. ಮಾರ್ಗದಲ್ಲಿ ಅಲ್ಲಲ್ಲಿ ವಿವಿಧ ಸಂಘ-ಸಂಸ್ಥೆಗಳು ಪಾದಯಾತ್ರಿಗಳಿಗೆ ಪಾನಕ, ನೀರು, ಮಜ್ಜಿಗೆ, ಆಹಾರ, ತಂಗಲು ವ್ಯವಸ್ಥೆ ಕಲ್ಪಿಸಿವೆ.

ಶೌಚಾಲಯ, ಸ್ನಾನಗೃಹ, ಕಸದ ತೊಟ್ಟಿ, ಕುಡಿಯುವ ನೀರಿನ ವ್ಯವಸ್ಥೆ ಮುಂತಾದ ಮೂಲಸೌಕರ್ಯಗಳ ಕೊರತೆಯಿಂದಾಗಿ ಪಾದಯಾತ್ರಿಗಳು ಸಮಸ್ಯೆ ಅನುಭವಿಸುವಂತಾಗಿದೆ.

'ಆರನೇ ಬಾರಿಗೆ ಧರ್ಮಸ್ಥಳಕ್ಕೆ ಪಾದಯಾತ್ರೆ ಕೈಗೊಂಡಿದ್ದೇವೆ. ಮಂಜುನಾಥಸ್ವಾಮಿ ದರ್ಶನದಿಂದ ನಮಗೆ ಒಳ್ಳೆಯದಾಗಿದೆ. ಕುಟುಂಬ ಸಮೇತ ಎಲ್ಲರೂ ದರ್ಶನಕ್ಕಾಗಿ ಬರುತ್ತೇವೆ. ಪಾದಯಾತ್ರಿಗಳಿಗೆ ಅನುಕೂಲವಾಗುವಂತೆ ಮೂಲಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಗಮನಹರಿಸಬೇಕು' ಎಂದು ಮಂಡ್ಯ ಜಿಲ್ಲೆಯ ಚಿಕ್ಕಅರಸೀಕೆರೆಯ ರಾಧಾ 'ಪ್ರಜಾವಾಣಿ'ಗೆ ತಿಳಿಸಿದರು.

ತಂಗಲು ವ್ಯವಸ್ಥೆ ಇಲ್ಲದಿರುವುದರಿಂದ ಕೆಲವೆಡೆ ರಸ್ತೆ ಬದಿಯ ಜಮೀನುಗಳಲ್ಲಿ, ಹುಲ್ಲುಹಾಸುಗಳಲ್ಲಿ, ಶಾಲಾ ಪಡಸಾಲೆಗಳಲ್ಲಿ ಜನರು ಮಲಗಿದ್ದು ಕಂಡು ಬಂತು. ಬೆಟ್ಟಸಾಲಿನ ನದಿ, ಹಳ್ಳ, ಝರಿಗಳೇ ಸ್ನಾನಕ್ಕೆ ಆಸರೆಯಾಗಿವೆ. ಅರಣ್ಯ ಪ್ರದೇಶದ ಘಾಟಿಯ ಕತ್ತಲಿನಲ್ಲಿ ಸಾಗುವುದು ಸವಾಲಾಗಿದ್ದು, ಮೊಬೈಲ್ ಫೋನ್ ಟಾರ್ಚ್ ಬಳಸಿಕೊಂಡು ಭಕ್ತರು ಸಾಗುತ್ತಾರೆ.

'ಹತ್ತನೇ ಬಾರಿಗೆ ಸ್ನೇಹಿತರೊಂದಿಗೆ ಧರ್ಮಸ್ಥಳಕ್ಕೆ ಹೋಗುತ್ತಿದ್ದೇವೆ. ಮಳೆ, ಬೆಳೆ ಚೆನ್ನಾಗಿ ಆಗಲೆಂದು ಮಂಜುನಾಥ ಸ್ವಾಮಿಯಲ್ಲಿ ಪ್ರಾರ್ಥಿಸುತ್ತೇವೆ. ಈವರೆಗೆ ನಮಗೆ ಒಳ್ಳೆಯದಾಗಿದೆ. ಭಕ್ತರಿಗೆ ಮಾರ್ಗದಲ್ಲಿ ಕುಡಿಯುವ ನೀರಿನ ಸೌಕರ್ಯ ಕಲ್ಪಿಸಬೇಕು. ಅಲ್ಲದೇ ತಂಗಲು ವ್ಯವಸ್ಥೆ ಕಲ್ಪಿಸಿದರೆ ಅನುಕೂಲವಾಗುತ್ತದೆ' ಎಂದು ಕಡೂರು ತಾಲ್ಲೂಕಿನ ಜಿಗಣೆಹಳ್ಳಿಯ ಲೋಕೇಶ್ ಕೋರಿದರು.

ಮಾರ್ಗದಲ್ಲಿ ಸಾಗುತ್ತಿರುವ ಬಹುತೇಕ ಭಕ್ತರು ನೀರಿನ ಪ್ಲಾಸ್ಟಿಕ್ ಬಾಟಲಿಗಳನ್ನು ಕೈಯಲ್ಲಿ ಹಿಡಿದಿರುತ್ತಾರೆ. ಮೂಡಿಗೆರೆಯಿಂದ ಚಾರ್ಮಾಡಿ ಮಾರ್ಗದುದ್ದಕ್ಕೂ ಇಕ್ಕೆಲಗಳಲ್ಲಿ ಪ್ಲಾಸ್ಟಿಕ್ ಬಾಟಲಿಗಳು, ಪ್ಲೇಟ್‌ಗಳು, ಪೊಟ್ಟಣಗಳು ಬಿದ್ದಿವೆ.

'ಕೆ.ಸಿ. ರೆಡ್ಡಿ ಕಂಚಿನ ಪ್ರತಿಮೆ ಪ್ರತಿಷ್ಠಾಪಿಸಲು ಶೀಘ್ರ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಜಿ ಮುಖ್ಯಮಂತ್ರಿ ದಿವಂಗತ ಕೆ.ಸಿ. ರೆಡ್ಡಿಯವರ ಕಂಚಿನ ಪ್ರತಿಮೆ ಪ್ರತಿಷ್ಠಾಪಿಸಲು ಶೀಘ್ರ ಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕೆ.ಸಿ. ರೆಡ್ಡಿ ಪುಣ್ಯತಿಥಿ ಅಂಗವಾಗಿ ಅವರ ಭಾವಚಿತ್ರಕ್ಕೆ ಭಾನುವಾರ ಪುಷ್ಪ ನಮನ ಸಲ್ಲಿಸಿದ ಅವರು, 'ಪ್ರಥಮ ಮುಖ್ಯಮಂತ್ರಿಯಾಗಿದ್ದ ಕೆ.ಸಿ.ರೆಡ್ಡಿ ದೂರದೃಷ್ಟಿಯ, ವೈಜ್ಞಾನಿಕ ಚಿಂತನೆಯ ನಾಯಕರಾಗಿದ್ದರು' ಎಂದು ಬಣ್ಣಿಸಿದರು.

'ರೆಡ್ಡಿಯವರು ಹಾಕಿರುವ ಆಡಳಿತದ ಅಡಿಪಾಯದಿಂದ ಮೈಸೂರು ಸಂಸ್ಥಾನ ಹಾಗೂ ಕರ್ನಾಟಕ ರಾಜ್ಯವನ್ನು ಕಟ್ಟಲು ಸಾಧ್ಯವಾಯಿತು' ಎಂದರು.

'ಪಾದಯಾತ್ರೆ ಮುಗಿದರೂ ಹೋರಾಟ ನಿಲ್ಲದು'

ಒಂದನೇ ಪುಟದಿಂದ

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ನಿಮ್ಮ ಡಬಲ್ ಎಂಜಿನ್ ಸರ್ಕಾರ ಚಾಲೂ ಮಾಡಿ ಎರಡು ದಿನಗಳಲ್ಲಿ ಅನುಮತಿ ಕೊಡಿಸಿ. ಆಗ ನಾವೇ ನಿಮಗೆ ಹಾರ ಹಾಕಿ, ಗುದ್ದಲಿ ಹಿಡಿದು ಯೋಜನೆಗೆ ಚಾಲನೆ ನೀಡಲು ಸಹಕರಿಸುತ್ತೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸವಾಲು ಹಾಕಿದರು.

'2050ರ ಹೊತ್ತಿಗೆ ಬೆಂಗಳೂರಿನ ಜನರಿಗೆ ಬೋರ್‌ವೆಲ್ ನೀರು ಸಹ ಸಿಗುವುದಿಲ್ಲ. ಹೀಗಾಗಿ ಜನರಿಗಾಗಿ ಈ ಯೋಜನೆ ಬೇಕೇ ಬೇಕು' ಎಂದು ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಧ್ವನಿಗೂಡಿಸಿದರು.

ಮೇಕೆದಾಟು ಯೋಜನೆ ಕುರಿತು ಸಿದ್ದರಾಮಯ್ಯ ಬರೆದ ಕಿರುಹೊತ್ತಿಗೆಯನ್ನು ಸುರ್ಜೇವಾಲಾ ಬಿಡುಗಡೆ ಮಾಡಿದರು. ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಆರ್. ಧ್ರುವನಾರಾಯಣ, ಸತೀಶ ಜಾರಕಿಹೊಳಿ, ಈಶ್ವರ ಖಂಡ್ರೆ, ಸಲೀಂ ಅಹಮ್ಮದ್, ರಾಮಲಿಂಗಾರೆಡ್ಡಿ, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ಸಂಸದ ಡಿ.ಕೆ. ಸುರೇಶ್, ಕಾಂಗ್ರೆಸ್ ಮುಖಂಡರಾದ ಕೆ.ಎಚ್. ಮುನಿಯಪ್ಪ, ಎಚ್.ಕೆ. ಪಾಟೀಲ, ಅಲ್ಲಂ ವೀರಭದ್ರಪ್ಪ, ಎಚ್.ಎಂ.ರೇವಣ್ಣ, ಪ್ರಿಯಾಂಕ್ ಖರ್ಗೆ, ಚೆಲುವರಾಯಸ್ವಾಮಿ, ನರೇಂದ್ರಸ್ವಾಮಿ, ಬಿ.ವಿ. ಶ್ರೀನಿವಾಸ್, ಆದಿಚುಂಚನಗಿರಿ ಪೀಠದ ಅರ್ಚಕರಹಳ್ಳಿ ಶಾಖಾಮಠದ ಅನ್ನದಾನೇಶ್ವರ ಸ್ವಾಮೀಜಿ, ಚಿತ್ರನಟ 'ನೆನಪಿರಲಿ' ಪ್ರೇಮ್ ಮತ್ತಿತರರು ವೇದಿಕೆಯಲ್ಲಿದ್ದರು.

ಉರಿಬಿಸಿಲಲ್ಲಿ ದಣಿದ ಜನರು: ಭಾಷಣ ಮೊಟಕುಗೊಳಿಸಿದ ನಾಯಕರು

ಬೆಳಿಗ್ಗೆ 9ಕ್ಕೆ ವೇದಿಕೆ ಕಾರ್ಯಕ್ರಮ ಆರಂಭ ಆಗಬೇಕಿತ್ತು. ಡಿ.ಕೆ. ಶಿವಕುಮಾರ್ ಚಾಮುಂಡೇಶ್ವರಿ ದೇಗುಲದಲ್ಲಿ ಪೂಜೆ ಸಲ್ಲಿಸಿ, ಪೀರನ್ ಷಾವಲಿ ದರ್ಗಾದಲ್ಲಿ ಪ್ರಾರ್ಥನೆ ಸಲ್ಲಿಸಿದರು.

ಕಲಾಮೇಳಗಳೊಂದಿಗೆ ಮೆರವಣಿಗೆ ಮೂಲಕ ವೇದಿಕೆಗೆ ಬಂದರು. ಆದರೆ ಸುರ್ಜೇವಾಲಾ ಮತ್ತು ಸಿದ್ದರಾಮಯ್ಯ ವೇದಿಕೆಗೆ ಬರುವುದು ತಡವಾಯಿತು. ಹೀಗಾಗಿ ಬೆಳಿಗ್ಗೆ 11ಕ್ಕೆ ಕಾರ್ಯಕ್ರಮ ಆರಂಭಗೊಂಡಿತು. ಅಷ್ಟರಲ್ಲಿ ಸೂರ್ಯ ನೆತ್ತಿ ಮೇಲೆ ಬಂದಿದ್ದು, ಜನರು ಬೆವರು ಒರೆಸಿಕೊಳ್ಳುತ್ತಲೇ ಭಾಷಣ ಆಲಿಸಿದರು. ಇದನ್ನು ಅರಿತ ನಾಯಕರು ಚುಟುಕಾಗಿ ಭಾಷಣ ಮುಗಿಸಿ ನಡಿಗೆಗೆ ಅವಕಾಶ ಮಾಡಿಕೊಟ್ಟರು.



ಮೈನವಿರೇಳಿಸಿದ ಹೋರಿ ಓಟ...

ಹಾವೇರಿ ಜಿಲ್ಲೆ ಹಾನಗಲ್ ಪಟ್ಟಣದ ಹಳೆಕೋಟೆ ಮೈದಾನದಲ್ಲಿ ಭಾನುವಾರ ನಡೆದ ರಾಷ್ಟ್ರ ಮಟ್ಟದ ಹೋರಿ ಬೆದರಿಸುವ ಸ್ಪರ್ಧೆಯಲ್ಲಿ ಹೋರಿ ಓಡಿದ ಪರಿ ಮೈನವಿರೇಳಿಸಿತು

ಪ್ರಜಾವಾಣಿ ಚಿತ್ರ: ಸತೀಶ ಬಡಿಗೇರ್

'ಕೆಳದಿ ಚೆನ್ನಮ್ಮನ ಪಟ್ಟಾಭಿಷೇಕ ಸರ್ಕಾರದಿಂದ ದಿನಾಚರಣೆ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 'ಚೆನ್ನಮ್ಮ ಬಗ್ಗೆ ಪಠ್ಯ ಮೂಲಕ ತಿಳಿಸುವ ಅವಶ್ಯಕತೆ ಇದೆ'
- ಕೆಳದಿ, ಅದರ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ತೀರ್ಮಾನ

ಬೆಂಗಳೂರು: 'ಕೆಳದಿ ಚೆನ್ನಮ್ಮನ ಪಟ್ಟಾಭಿಷೇಕದ ದಿನವನ್ನು ಮುಂದಿನ ವರ್ಷ ಸರ್ಕಾರದ ವತಿಯಿಂದ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕೆಳದಿಯಲ್ಲಿಯೇ ದೊಡ್ಡ ಪ್ರಮಾಣದಲ್ಲಿ ಆಚರಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕೆಳದಿ ರಾಣಿ ಚೆನ್ನಮ್ಮನ ಪಟ್ಟಾಭಿಷೇಕದ 350ನೇ ವರ್ಷಾಚರಣೆ ಅಂಗವಾಗಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, 'ಕೆಳದಿ ಮತ್ತು ಅದರ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಪಡಿಸಲು ತೀರ್ಮಾನಿಸಲಾಗಿದೆ' ಎಂದರು.

'ಕೆಳದಿ ಚೆನ್ನಮ್ಮ ಧೀರ ಮಹಿಳೆ. ಅಂಥ ವೀರ ಮಹಿಳೆಯರನ್ನು ಗುರುತಿಸುವ ಮೂಲಕ ಕರ್ನಾಟಕದ ಭವ್ಯ ಪರಂಪರೆಯ ಜೊತೆಗೆ ಭವಿಷ್ಯವನ್ನು ನಿರ್ಮಿಸಬಹುದು. ಮಕ್ಕಳಿಗೆ ಚೆನ್ನಮ್ಮ ಬಗ್ಗೆ ಪಠ್ಯ ಮೂಲಕ ತಿಳಿಸುವ ಅವಶ್ಯಕತೆ ಇದ್ದು, ಈ ಬಗ್ಗೆ ಅಧಿಕಾರಿಗಳಿಗೆ ಸೂಚನೆ ನೀಡುತ್ತೇನೆ' ಎಂದರು.

'ಕರ್ನಾಟಕ ರಾಜ್ಯ ತನ್ನದೇ ಸಂಸ್ಕೃತಿ, ಹೋರಾಟ, ಭಾಷೆ, ಜೀವನ ಶೈಲಿ, ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಚಟುವಟಿಕೆ ಹೊಂದಿದೆ. ಅವೆಲ್ಲವೂ ಸಮಗ್ರವಾಗಿ ಸೇರಿದಾಗ ಮಾತ್ರ ಅದು ಕರ್ನಾಟಕವಾಗುತ್ತದೆ. ಅದರಲ್ಲಿ ಕೆಳದಿ ಚೆನ್ನಮ್ಮನ ಪಾತ್ರ ದೊಡ್ಡದಿದೆ. ಮಹಿಳೆಯೊಬ್ಬಳು ಕಂದಾಚಾರವನ್ನು ಬಿಟ್ಟು ಪ್ರಗತಿಪರ ಚಿಂತನೆಯಿಂದ ಆ ಕಾಲದಲ್ಲಿ ತನ್ನ ನಿಲುವು ಹಾಗೂ ಗಟ್ಟಿತನಗಳನ್ನು ತೋರಿದಳು. ದೂರದೃಷ್ಟಿ, ಕ್ಷಮಿಸುವ ದೊಡ್ಡ ಗುಣ ಆಕೆಯಲ್ಲಿತ್ತು. ಕೆಳದಿ ಚೆನ್ನಮ್ಮನ ಹೋರಾಟ ರೋಮಾಂಚಕವಾಗಿದೆ' ಎಂದರು.

ನದಿ ತಟಗಳಲ್ಲಿ ಆರತಿಗೆ ಬೇಡಿಕೆ: 'ದೂರದೃಷ್ಟಿ ಇರುವ ವಚನಾನಂದ ಸ್ವಾಮೀಜಿ ತುಂಗಾ ತಟದಲ್ಲಿ ತುಂಗಭದ್ರಾರತಿ ಕಾರ್ಯಕ್ರಮ ರೂಪಿಸಿ, ಸೃಷ್ಟಿಕರ್ತನಿಗೆ ನಮ್ಮ ನಮನಗಳನ್ನು ಸಲ್ಲಿಸುವ ಕೆಲಸ ಮಾಡುತ್ತಿದ್ದಾರೆ. ಅದು ನಮ್ಮ ಸಂಸ್ಕೃತಿ. ಎಲ್ಲ ನದಿ ತಟಗಳಲ್ಲಿ ಆರತಿ ಕಾರ್ಯಕ್ರಮ ರೂಪಿಸಲು ಬೇಡಿಕೆ ಬರುತ್ತಿದೆ. ಇದೊಂದು ಉತ್ತಮ ಬೆಳವಣಿಗೆ' ಎಂದರು.

ವಚನಾನಂದ ಸ್ವಾಮೀಜಿ, ಆರೋಗ್ಯ ಸಚಿವ ಡಾ ಕೆ. ಸುಧಾಕರ್, ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಇದ್ದರು.

ಕಂಠೀರವ ಸ್ಟುಡಿಯೊದಲ್ಲಿ ಅಂಬರೀಷ್ ಸ್ಮಾರಕಕ್ಕೆ ಶಂಕುಸ್ಥಾಪನೆ

₹12 ಕೋಟಿ ವೆಚ್ಚದಲ್ಲಿ ಸ್ಮಾರಕ ನಿರ್ಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಕಂಠೀರವ ಸ್ಟುಡಿಯೊ ಆವರಣದಲ್ಲಿರುವ ನಟ ದಿವಂಗತ ಅಂಬರೀಷ್ ಅವರ ಸಮಾಧಿ ಸ್ಥಳದಲ್ಲೇ ಅಂಬರೀಷ್ ಅವರ ಕಂಚಿನ ಪ್ರತಿಮೆಯನ್ನೊಳಗೊಂಡ ಆಕರ್ಷಕವಾದ, ಅದ್ದೂರಿ ಸ್ಮಾರಕವು ₹12 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಲಿದೆ.

ನಟಿ, ಸಂಸದೆ ಸುಮಲತಾ ಅಂಬರೀಷ್, ನಟರಾದ ದೊಡ್ಡಣ್ಣ, ದರ್ಶನ್, ಅಭಿಷೇಕ್ ಅಂಬರೀಷ್ ಸಮ್ಮುಖದಲ್ಲಿ ಸ್ಮಾರಕ ನಿರ್ಮಾಣಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭಾನುವಾರ ಶಂಕುಸ್ಥಾಪನೆ ಮಾಡಿದರು. ಸಮಾಧಿಯನ್ನು ಒಳಗೊಂಡಂತೆ ಸುತ್ತಮುತ್ತಲಿನ ಸುಮಾರು ಒಂದೂವರೆ ಎಕರೆ ಜಾಗದಲ್ಲಿ ಸ್ಮಾರಕ ನಿರ್ಮಾಣವಾಗಲಿದೆ.

ಸಮಾಧಿಯು ಹೊಸ ರೂಪ ಪಡೆಯಲಿದ್ದು, ಅದರ ಮುಂಭಾಗದಲ್ಲಿ ಸುಮಾರು 12 ಅಡಿ ಎತ್ತರದ ವೇದಿಕೆಯ ಮೇಲೆ ಅಂಬರೀಷ್ ಅವರ ಸುಮಾರು 14 ಅಡಿ ಎತ್ತರದ ಕಂಚಿನ ಪ್ರತಿಮೆ, ಅದಕ್ಕೆ ಹೊಂದಿಕೊಂಡಂತೆ ಕಾರಂಜಿ ನಿರ್ಮಾಣವಾಗಲಿದೆ. ಇಳಿಜಾರಿನ ಮಾದರಿಯಲ್ಲಿ ಬಯಲು ರಂಗಮಂದಿರ, ಅದರ ಕೆಳಭಾಗದಲ್ಲಿ ವಸ್ತುಸಂಗ್ರಹಾಲಯ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ. ಅಂಬರೀಷ್ ಅವರ ಸಿನಿಮಾ ಪಯಣದ ಪೋಸ್ಟರ್, ಧ್ವನಿ ತುಣುಕು, ವಿಡಿಯೊಗಳು ಇಲ್ಲಿ ಪ್ರದರ್ಶನಗೊಳ್ಳಲಿವೆ.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭಾನುವಾರ ಅಂಬರೀಷ್ ಸ್ಮಾರಕದ ನೀಲನಕ್ಷೆ ವೀಕ್ಷಿಸಿದರು

ಅಂಬರೀಷ್ ಅವರ ಜೊತೆಗಿನ ಒಡನಾಟದ ದಿನಗಳನ್ನು ಮೆಲುಕು ಹಾಕಿದ ಬಸವರಾಜ ಬೊಮ್ಮಾಯಿ, 'ನನ್ನ ಅಂಬರೀಷ್ ಸ್ನೇಹ 40 ವರ್ಷಕ್ಕಿಂತ ಅಧಿಕ. ಎಂದೂ ಆತ್ಮಸಾಕ್ಷಿ ಬಿಟ್ಟು ಅವರು ಬದುಕಲಿಲ್ಲ' ಎಂದರು.

ಸುಮಲತಾ ಮಾತನಾಡಿ, 'ಅಂಬರೀಷ್ ರಾಜಕೀಯಕ್ಕೆ ಬಂದಿದ್ದು ಜನಕ್ಕೆ ಇನ್ನಷ್ಟು ಹತ್ತಿರವಾಗಲು. ಹಲವು ಚುನಾವಣೆಗಳಲ್ಲಿ ಸ್ಪರ್ಧಿಸಿದರೂ ಯಾರ ಬಗ್ಗೆಯೂ ಅವರು ಕೆಟ್ಟ ಮಾತುಗಳನ್ನು ಆಡಿರಲಿಲ್ಲ' ಎಂದರು.

ಡಾ. ಅಂಬರೀಷ್ ಪ್ರತಿಷ್ಠಾನ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸಂಸದ ಸದಾನಂದ ಗೌಡ, ಸಚಿವರಾದ ಆರ್. ಅಶೋಕ್, ಗೋಪಾಲಯ್ಯ, ಸಿ. ಎನ್. ಅಶ್ವತ್ಥ ನಾರಾಯಣ್, ಎಸ್. ಟಿ. ಸೋಮಶೇಖರ್ ಮತ್ತಿತರರು ಉಪಸ್ಥಿತರಿದ್ದರು.

> ಪುನೀತ್ ರಾಜ್‌ಕುಮಾರ್ ಸ್ಮಾರಕವನ್ನೂ ಅತಿ ಶೀಘ್ರದಲ್ಲೇ ಮಾಡುತ್ತೇವೆ. ಜೊತೆಗೆ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಮಾಡುವ ದಿನಾಂಕವನ್ನೂ ಶೀಘ್ರದಲ್ಲೇ ಘೋಷಣೆ ಮಾಡುತ್ತೇನೆ
>
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಒಳನೋಟ

ಹೋಟೆಲ್‌ಗೆ ಕೋವಿಡ್ ಹೊಡೆತ

ಬೆಂಗಳೂರು: 'ತತ್ತರಿಸಿದೆ ಹೋಟೆಲ್ ಉದ್ಯಮ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಫೆ.27) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಕಾರ್ಮಿಕರಿಗೆ ನೆರವು ನೀಡಿ



ಸುಗಮವಾಗಿ ನಡೆಯುತ್ತಿದ್ದ ಹೋಟೆಲ್ ಉದ್ಯಮ ಕೋವಿಡ್‌ನಿಂದಾಗಿ ದಿಢೀರ್ ಪಾತಾಳಕ್ಕೆ ಕುಸಿಯಿತು. ಇದರಿಂದ ಹೋಟೆಲ್ ಮಾಲೀಕರು ಮತ್ತು ಕಾರ್ಮಿಕರು ಜೀವನ ನಿರ್ವಹಣೆಗೆ ಪರದಾಡಿದರು. ಅವರಿಗೆಲ್ಲ ಈಗಲಾದರೂ ಸರ್ಕಾರ ಆರ್ಥಿಕ ನೆರವು ನೀಡಬೇಕು. ಹೋಟೆಲ್‌ಗಳು ಹಸಿವು ನೀಗಿಸುವ ಜಾಗ ಎಂಬುದನ್ನು ಮರೆಯಬಾರದು. ಇನ್ನು ಮುಂದಾದರೂ ಜನ ಆಹಾರಕ್ಕಾಗಿ ಪರದಾಡುವ ಸ್ಥಿತಿ ನಿರ್ಮಾಣವಾಗದಿರಲಿ.

ಪ್ರೀತಿ ಹಿರೇಮಠ್, ವಿಜಯನಗರ

ತೆರಿಗೆ ವಿನಾಯಿತಿ ಕೊಡಿ



ಕೋವಿಡ್ ಬಳಿಕ ಸಾಕಷ್ಟು ಹೋಟೆಲ್‌ಗಳಿಗೆ ಬೀಗ ಹಾಕಲಾಗಿದೆ. ಹೋಟೆಲ್ ಉದ್ಯಮವೇ ಸಂಪೂರ್ಣವಾಗಿ ನಷ್ಟದಲ್ಲಿ ನಲುಗಿದೆ. ಹಲವರಿಗೆ ಉದ್ಯೋಗ ಕಲ್ಪಿಸುತ್ತಿದ್ದ ಹೋಟೆಲ್ ಮಾಲೀಕರಿಗೇ ಇಂದು ಕೆಲಸವಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಇವರಿಗೆಲ್ಲ ಆರ್ಥಿಕ ಸಹಾಯ ನೀಡಿ ಸರ್ಕಾರ ಮಾನವೀಯತೆ ಮೆರೆಯಬೇಕು. ಹೋಟೆಲ್‌ಗಳಿಗೆ ತೆರಿಗೆ ವಿನಾಯಿತಿ ನೀಡಬೇಕು.

ಮುರುಗೇಶ, ದಾವಣಗೆರೆ

ಸರ್ಕಾರದ ಬೆಂಬಲ ಅಗತ್ಯ



ಹೋಟೆಲ್ ಉದ್ಯಮಗಳ ಪುನಶ್ಚೇತನಕ್ಕೆ ಕೇಂದ್ರದ ತುರ್ತು ಸಾಲ ಖಾತರಿ ಯೋಜನೆಯ ವಿಸ್ತರಣೆ ಶೀಘ್ರವಾಗಿ ನಡೆಯಲಿ. ಹೋಟೆಲ್‌ಗಳು ಎರಡು ವರ್ಷಗಳಿಂದ ತೀವ್ರ ಸಂಕಷ್ಟದಲ್ಲಿವೆ. ಈ ಪರಿಸ್ಥಿತಿಯಲ್ಲಿ ನೆರವು ನೀಡಬೇಕಾಗಿರುವುದು ಸರ್ಕಾರದ ಕರ್ತವ್ಯ.

ಇಂದಿರಾ ಶ್ರೀಧರ್, ದಾವಣಗೆರೆ

ಆತಿಥ್ಯ ವಲಯ ಉಳಿಸಿ



ಕೋವಿಡ್‌ನಿಂದ ತತ್ತರಿಸಿದ ಶ್ರಮಿಕ ವರ್ಗಕ್ಕೆ ಸರ್ಕಾರ ವಿಶೇಷ ಸಹಾಯಧನ ನೀಡಿದಂತೆ ಆತಿಥ್ಯ ವಲಯಕ್ಕೂ ಸಹಾಯಧನ ನೀಡಬೇಕು. ಹೋಟೆಲ್‌ಗಳು, ರೆಸ್ಟೋರೆಂಟ್‌ಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಪರಿಹಾರ ನೀಡಿ ನೆರವಾಗಬೇಕು. ಅವರಿಗೆ ಸಾಲ ಸೌಲಭ್ಯ ಒಗದಿಸಿ, ಬದುಕಲು ದಾರಿ ಮಾಡಿಕೊಡಬೇಕು.

ಕಿಶೋರ್, ಶಿವಮೊಗ್ಗ

ಉದ್ಯೋಗ ಕಲ್ಪಿಸಿ



ಕೋವಿಡ್‌ನಿಂದಾಗಿ ಎರಡು ವರ್ಷಗಳವರೆಗೆ ಹೋಟೆಲ್‌ಗಳಲ್ಲಿ ವ್ಯಾಪಾರ ನಡೆಯಲಿಲ್ಲ. ಇದರಿಂದ ಇಡೀ ಉದ್ಯಮವೇ ಒದ್ದಾಡಿತು. ಈ ಬಿಕ್ಕಟ್ಟಿನಿಂದ ಹಲವರು ಕೆಲಸ ಕಳೆದುಕೊಂಡರು. ಅವರಿಗೆಲ್ಲ ಉದ್ಯೋಗ ಕಲ್ಪಿಸುವ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತನೆ ನಡೆಸಬೇಕು.

ರವಿಕುಮಾರ ಜಾಧವ, ವಿಜಯಪುರ

ದೇಶದ ಆಹಾರ ಪದ್ಧತಿ, ವಸ್ತ್ರವೈವಿಧ್ಯ: 'ಮನ್ ಕಿ ಬಾತ್'ನಲ್ಲಿ ಪ್ರಧಾನಿ ಸಲಹೆ

'ಹೆಮ್ಮೆಯಿಂದ ಮಾತೃಭಾಷೆ ಮಾತನಾಡಿ'

ನವದೆಹಲಿ (ಪಿಟಿಐ): 'ಜನರು ಬಹಳ ಹೆಮ್ಮೆಯಿಂದ ತಮ್ಮ ಮಾತೃಭಾಷೆಯನ್ನು ಮಾತನಾಡಬೇಕು. ಭಾಷಾ ಶ್ರೀಮಂತಿಕೆ ವಿಷಯದಲ್ಲಿ ಭಾರತವನ್ನು ಸರಿಗಟ್ಟುವ ದೇಶ ಮತ್ತೊಂದಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.

ಮಾಸಿಕ 'ಮನ್ ಕಿ ಬಾತ್'ನಲ್ಲಿ ಅವರು ದೇಶದಲ್ಲಿನ ಭಾಷೆಗಳ ಸೊಗಡು, ಆಹಾರ ಪದ್ಧತಿ, ವಸ್ತ್ರವೈವಿಧ್ಯ ಕುರಿತು ಮಾತನಾಡಿದರು.

ಗಣರಾಜ್ಯೋತ್ಸವದಂದು ದೇಶದ ರಾಷ್ಟ್ರಗೀತೆ ಸೇರಿದಂತೆ ಹಲವಾರು ಭಾರತೀಯ ಹಾಡುಗಳನ್ನು ಲಿಪ್ ಸಿಂಕ್ (ಹಾಡಿನ ಧ್ವನಿಗೆ ಅನುಗುಣವಾಗಿ ತುಟಿ ಚಲನೆ) ಮಾಡುವ ಮೂಲಕ ಸಾಮಾಜಿಕ ಮಾಧ್ಯಮದಲ್ಲಿ ಜನಪ್ರಿಯತೆ ಪಡೆದ ತಾಂಜೇನಿಯಾದ ಅಣ್ಣ–ತಂಗಿ ಕಿಲ್ಲಿ ಪೌಲ್ ಮತ್ತು ನೀಮಾ ಅವರನ್ನು ಇದೇ ವೇಳೆ ಪ್ರಧಾನಿ ಮೋದಿ ಅವರು ಶ್ಲಾಘಿಸಿದ್ದಾರೆ.

ವಿವಿಧ ಭಾಷೆಗಳಲ್ಲಿನ ಜನಪ್ರಿಯ ಗೀತೆಗಳನ್ನು ಹಾಡುವ ವಿಡಿಯೊಗಳನ್ನು ಸಿದ್ಧಪಡಿಸುವಂತೆ ಯುವ ಜನತೆಗೆ ಕರೆ ನೀಡಿದ ಮೋದಿ, ಈ ರೀತಿ ಮಾಡುವುದರಿಂದ ನೀವು ಜನಪ್ರಿಯ-ರಾಗುವ ಜೊತೆಗೆ, ಹೊಸ ಪೀಳಿಗೆಗೆ ದೇಶದ ವೈವಿಧ್ಯವನ್ನು ತೋರಿಸಿಕೊಟ್ಟಂತಾಗುವುದು ಎಂದರು.



2013 ರವರೆಗೆ ವಿವಿಧ ದೇಶಗಳಿಂದ 13 ವಿಗ್ರಹಗಳನ್ನು ಮರಳಿ ತರಲಾಗಿದ್ದರೆ, ಕಳೆದ ಏಳು ವರ್ಷಗಳಲ್ಲಿ 200ಕ್ಕೂ ಅಧಿಕ ಅಮೂಲ್ಯ ವಿಗ್ರಹಗಳನ್ನು ಭಾರತಕ್ಕೆ ತರಲಾಗಿದೆ

ನರೇಂದ್ರ ಮೋದಿ, ಪ್ರಧಾನಿ

ಮುಖ್ಯಾಂಶಗಳು

- ತಾಂಜೇನಿಯಾದ ಅಣ್ಣ–ತಂಗಿಗೆ ಶ್ಲಾಘನೆ
- ವಿವಿಧ ಭಾಷೆಗಳ ಜನಪ್ರಿಯ ಹಾಡುಗಳ ವಿಡಿಯೊ ಮಾಡಲು ಕರೆ

ತಾಂಜೇನಿಯಾದ ಅಣ್ಣ–ತಂಗಿ 'ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಒಂದು ರಾಜ್ಯದ ಜನರು ಮತ್ತೊಂದು ರಾಜ್ಯದ ಭಾಷೆಯ ಹಾಡುಗಳ ವಿಡಿಯೊ ಮಾಡಬೇಕು. ಇದರಿಂದ 'ಏಕ್ ಭಾರತ್, ಶ್ರೇಷ್ಠ ಭಾರತ್'ನ ಅನುಭೂತಿ ಸಾಕಾರವಾಗಲು ಸಾಧ್ಯವಾಗುತ್ತದೆ' ಎಂದು ಹೇಳಿದರು.

'ದೇಶಕ್ಕೆ ಸ್ವಾತಂತ್ರ್ಯ ಲಭಿಸಿ 75 ವರ್ಷಗಳು ಗತಿಸಿದ್ದರೂ, ಭಾಷೆ, ದಿರಿಸು, ಆಹಾರ–ಪಾನೀಯಗಳಂತಹ ವಿಷಯದಲ್ಲಿ ಕೆಲವರಿಗೆ ಈಗಲೂ ದ್ವಂದ್ವ ಹಾಗೂ ಸಂಕೋಚ ಇದೆ. ಇಂಥ ವೈರುದ್ಧ್ಯ ಜಗತ್ತಿನ ಬೇರೆ ದೇಶಗಳಲ್ಲಿ ಇಲ್ಲ' ಎಂದೂ ಹೇಳಿದರು.

'ಬಿಹಾರದಿಂದ ಕೆಲ ವರ್ಷಗಳ ಹಿಂದೆ ಕಳವು ಮಾಡಲಾಗಿದ್ದ ಪ್ರಾಚೀನ ವಿಗ್ರಹವೊಂದನ್ನು ಇಟಲಿಯಿಂದ ಮರಳಿ ತರಲಾಗಿದೆ. ದೇಶದ ನೂರಾರು ಅಮೂಲ್ಯ ವಿಗ್ರಹಗಳು ಕಳುವಾಗಿದ್ದವು. 2014ರಲ್ಲಿ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ, ಇಂಥ ನೂರಾರು ವಿಗ್ರಹಗಳನ್ನು ಬೇರೆ ಬೇರೆ ದೇಶಗಳಿಂದ ಮರಳಿ ತರಲಾಗಿದೆ' ಎಂದು ಮೋದಿ ಹೇಳಿದರು.

ಫೆ.28ರಂದು ಆಚರಿಸಲಾಗುವ 'ರಾಷ್ಟ್ರೀಯ ವಿಜ್ಞಾನ ದಿನ' ಪ್ರಸ್ತಾಪಿಸಿದ ಅವರು, ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು ಪಾಲಕರು ಮುಂದಾಗಬೇಕು ಎಂದರು.

'ಶಿವರಾತ್ರಿ ಹಾಗೂ ಹೋಳಿ ಹಬ್ಬಗಳಿಗೆ ದೇಶೀಯವಾಗಿ ತಯಾರಿಸಿದ ಉತ್ಪನ್ನಗಳನ್ನೇ ಬಳಸುವಂತೆ ಪ್ರಧಾನಿ ಮೋದಿ ಅವರು ಕೋರಿದರು.



ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಅಸ್ಸಾಂನ ಕಾಜಿರಂಗ ರಾಷ್ಟ್ರೀಯ ಉದ್ಯಾನವನದಲ್ಲಿ ಭಾನುವಾರ ಆನೆ ಸಫಾರಿಯಲ್ಲಿ ಪಾಲ್ಗೊಂಡಿದ್ದರು ಪಿಟಿಐ ಚಿತ್ರ

ವೀಸಾ: ಸಂದರ್ಶನಕ್ಕೆ ಖುದ್ದು ಹಾಜರಾತಿ ಅಗತ್ಯ ಇಲ್ಲ

ವಾಷಿಂಗ್ಟನ್ (ಪಿಟಿಐ): ಅಮೆರಿಕಕ್ಕೆ ತೆರಳಲು ಬಯಸಿ ವೀಸಾಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು, ಉದ್ಯೋಗಿಗಳು ಹಾಗೂ ಇತರರು ಈ ವರ್ಷದ ಡಿಸೆಂಬರ್ 31ರವರೆಗೆ ರಾಯಭಾರ ಕಚೇರಿಗಳಲ್ಲಿ ಖುದ್ದಾಗಿ ಸಂದರ್ಶನಕ್ಕೆ ಹಾಜರಾಗುವ ಅಗತ್ಯ ಇಲ್ಲ ಎಂದು ಅಮೆರಿಕದ ಹಿರಿಯ ರಾಜತಾಂತ್ರಿಕರೊಬ್ಬರು ಭಾರತೀಯ ಸಮುದಾಯದವರಿಗೆ ತಿಳಿಸಿದ್ದಾರೆ.

ಈ ವಿನಾಯಿತಿಗಳು ವಿದ್ಯಾರ್ಥಿಗಳು (ಎಫ್, ಎಂ, ಶೈಕ್ಷಣಿಕ ಜೆ ವೀಸಾ), ನೌಕರರು (ಎಚ್–1, ಎಚ್–2, ಎಚ್–3 ಮತ್ತು ವೈಯಕ್ತಿಕ ಎಲ್ ವೀಸಾ) ಸಾಂಸ್ಕೃತಿಕ ಮತ್ತು ವಿಶೇಷ ಸಾಮರ್ಥ್ಯ (ಒ, ಪಿ ಮತ್ತು ಕ್ಯೂ ವೀಸಾ) ಅರ್ಜಿದಾರರಿಗೆ ಅನ್ವಯವಾಗುತ್ತದೆ.

ಮುಂಬೈನ ಹಲವೆಡೆ ವಿದ್ಯುತ್ ವ್ಯತ್ಯಯ: ತನಿಖೆಗೆ ಆದೇಶ

ಮುಂಬೈ: ವಿದ್ಯುತ್ ಗ್ರಿಡ್‌ನಲ್ಲಿ ಕಂಡುಬಂದ ತಾಂತ್ರಿಕ ದೋಷದ ಪರಿಣಾಮ ಮುಂಬೈನ ಕೆಲ ಪ್ರದೇಶಗಳಲ್ಲಿ ಭಾನುವಾರ ಒಂದು ಗಂಟೆ ಕಾಲ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿತ್ತು.

ಬೆಳಿಗ್ಗೆ 9.50ಕ್ಕೆ ವಿದ್ಯುತ್ ಕೈಕೊಟ್ಟಿತ್ತು. ನಂತರ, 10.53ಕ್ಕೆ ಪೂರೈಕೆಯನ್ನು ಮರುಸ್ಥಾಪಿಸಲಾಯಿತು ಎಂದು ಮೂಲಗಳು ಹೇಳಿವೆ.

'ಮುಲುಂಡ್–ಟ್ರಾಂಬೆ 220 ಕೆವಿ ಮಾರ್ಗದಲ್ಲಿ ದೋಷ ಕಂಡುಬಂದ ಕಾರಣ, ನಗರದ ಕೆಲ ಭಾಗಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಯಿತು' ಎಂದು ಬೃಹನ್ ಮುಂಬೈ ವಿದ್ಯುತ್ ಸರಬರಾಜು (ಬಿಇಎಸ್‌ಟಿ) ಸಂಸ್ಥೆ ತಿಳಿಸಿದೆ.

'ವಿದ್ಯುತ್ ಪೂರೈಕೆಯಲ್ಲಿನ ವ್ಯತ್ಯಯಕ್ಕೆ ಕಾರಣಗಳನ್ನು ಪತ್ತೆ ಹಚ್ಚಲು ತನಿಖೆ ನಡೆಸಲಾಗುತ್ತಿದೆ' ಎಂದು ಟಾಟಾ ಪವರ್ ಕಂಪನಿಯ ಅಧ್ಯಕ್ಷ ಸಂಜಯ್ ಬಂಗಾ ತಿಳಿಸಿದ್ದಾರೆ.

ಉನ್ನತ ಮಟ್ಟದ ತನಿಖೆ: ವಿದ್ಯುತ್ ಪೂರೈಕೆ ವ್ಯತ್ಯಯ ಬಗ್ಗೆ ಉನ್ನತ ತನಿಖೆಗೆ ಆದೇಶಿಸಲಾಗಿದೆ ಎಂದು ಇಂಧನ ಸಚಿವ ನಿತಿನ್ ರಾವತ್ ತಿಳಿಸಿದ್ದಾರೆ.

ಇಂಡೊನೇಷ್ಯಾ: 6.2 ತೀವ್ರತೆಯ ಭೂಕಂಪ, 10 ಸಾವು

ಜಕಾರ್ತ (ಎಪಿ): ಇಂಡೊನೇಷ್ಯಾದ ಸುಮಾತ್ರ ದ್ವೀಪದಲ್ಲಿ 6.2 ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದ್ದು, 10 ಜನ ಮೃತಪಟ್ಟು, ಕನಿಷ್ಠ 400 ಜನರು ಗಾಯಗೊಂಡಿದ್ದಾರೆ. ಮುನ್ನೆಚ್ಚರಿಕೆ ಕ್ರಮವಾಗಿ ಸಾವಿರಾರು ಜನರು ಸ್ಥಳಾಂತರಗೊಂಡಿದ್ದಾರೆ.

ಪಶ್ಚಿಮ ಸುಮಾತ್ರಾ ಪ್ರಾಂತ್ಯದಲ್ಲಿ ಶುಕ್ರವಾರ ಬೆಳಿಗ್ಗೆ ಸಂಭವಿಸಿದ ಈ ಭೂಕಂಪದಲ್ಲಿ ಕುಸಿದುಬಿದ್ದ ಮನೆಗಳ ಅವಶೇಷಗಳಿಂದ ಶನಿವಾರ ತಡರಾತ್ರಿ ಎರಡು ಮೃತದೇಹಗಳನ್ನು ರಕ್ಷಣಾ ಸಿಬ್ಬಂದಿ ಹೊರತೆಗೆದಿದ್ದಾರೆ ಎಂದು ರಾಷ್ಟ್ರೀಯ ವಿಪತ್ತು ಉಪಶಮನ ಸಂಸ್ಥೆಯ ವಕ್ತಾರ ಅಬ್ದುಲ್ ಮುಹಾರಿ ತಿಳಿಸಿದ್ದಾರೆ.

'ಮಾಂಗಲ್ಯ ಸರ ಧರಿಸಲು ನಿರ್ಬಂಧ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ 1,242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗುವ ಮಹಿಳಾ ಅಭ್ಯರ್ಥಿಗಳು ಮಾಂಗಲ್ಯ ಸರ ಧರಿಸಲು ನಿರ್ಬಂಧ ಇಲ್ಲ' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯನಿರ್ವಾಹಕ ನಿರ್ದೇಶಕಿ ರಮ್ಯಾ ಸ್ಪಷ್ಟಪಡಿಸಿದ್ದಾರೆ.

ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ವಸ್ತ್ರಸಂಹಿತೆ ಕಡ್ಡಾಯಗೊಳಿಸಲಾಗಿದ್ದು, ಮಹಿಳಾ ಅಭ್ಯರ್ಥಿಗಳು ಕಿವಿಯೋಲೆಗಳು, ಉಂಗುರಗಳು, ಪೆಂಡೆಂಟ್‌ಗಳು, ನೆಕ್ಲೇಸ್‌ಗಳು, ಬಳೆಗಳು ಇಂತಹ ಯಾವುದೇ ರೀತಿಯ ಲೋಹದ ಆಭರಣಗಳನ್ನು ಧರಿಸುವುದನ್ನು ನಿಷೇಧಿಸಲಾಗಿದೆ. ಆದರೆ, ಮಾಂಗಲ್ಯ ಸರ ಧರಿಸಲು ಅವಕಾಶ ಇದೆಯೇ ಎಂಬ ಬಗ್ಗೆ ಅಭ್ಯರ್ಥಿಗಳಲ್ಲಿ ಗೊಂದಲ ಉಂಟಾಗಿತ್ತು.

ಈ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ನೇಮಕಾತಿ ಪ್ರಕ್ರಿಯೆಯನ್ನು ಅತ್ಯಂತ ಪಾರದರ್ಶಕವಾಗಿ ನಡೆಬೇಕೆಂಬ ಕಾರಣಕ್ಕೆ ಪರೀಕ್ಷೆಗೆ ಹಾಜರಾಗುವ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ವಸ್ತ್ರ ಸಂಹಿತೆಯೂ ಸೇರಿದಂತೆ ಕೆಲವು ನಿರ್ಬಂಧಗಳನ್ನು ವಿಧಿಸಲಾಗಿದೆ' ಎಂದರು.

ವಸ್ತ್ರಸಂಹಿತೆಯ ನಿಯಮದ ಪ್ರಕಾರ, ಪುರುಷ ಅಭ್ಯರ್ಥಿಗಳು ಧರಿಸುವ ಬಟ್ಟೆಗಳು ಹಗುರವಾಗಿರಬೇಕು. ಅಂದರೆ, ಜಿಪ್ ಪಾಕೆಟ್‌ಗಳು, ಪಾಕೆಟ್‌ಗಳು, ದೊಡ್ಡ ಬಟನ್‌ಗಳು ಮತ್ತು ವಿಸ್ತಾರವಾದ ಕಸೂತಿ ಇರುವ ಬಟ್ಟೆಗಳು ಇರಬಾರದು. ಕುರ್ತಾ ಪೈಜಾಮ ಧರಿಸಿದರೆ ಅನುಮತಿ ಇಲ್ಲ. ಮಹಿಳಾ ಅಭ್ಯರ್ಥಿಗಳು ವಿಸ್ತಾರವಾದ ಕಸೂತಿ, ಹೂಗಳು, ಬ್ರೂಚ್‌ಗಳು ಅಥವಾ ಬಟನ್‌ಗಳನ್ನು ಹೊಂದಿರುವ ಉಡುಗೆ ಧರಿಸಬಾರದು.

'ಪುರುಷರಿಗೆ ಶೂ ನಿಷೇಧಿಸಲಾಗಿದ್ದು, ತೆಳುವಾದ ಅಡಿಭಾಗ ಇರುವ ಸ್ಯಾಂಡಲ್ ಮತ್ತು ಚಪ್ಪಲಿ ಧರಿಸಬಹುದು. ಮಹಿಳೆಯರು ಎತ್ತರದ ಹಿಮ್ಮಡಿಯ ಬೂಟುಗಳು ಮತ್ತು ದಪ್ಪವಾದ ಅಡಿಭಾಗ ಹೊಂದಿರುವ ಬೂಟುಗಳನ್ನು ಹಾಕಬಾರದು. ಕಡಿಮೆ ಹಿಮ್ಮಡಿಯ ಪಾದರಕ್ಷೆ ಧರಿಸಲು ಅವಕಾಶವಿದೆ. ಪುರುಷ ಅಭ್ಯರ್ಥಿಗಳು ಕೂಡಾ ಕುತ್ತಿಗೆಯ ಸುತ್ತ ಕಿವಿಯೋಲೆಗಳು, ಉಂಗುರಗಳು, ಕಡಗಗಳು ಸೇರಿದಂತೆ ಯಾವುದೇ ಲೋಹದ ಆಭರಣಗಳನ್ನು ಧರಿಸಬಾರದು. ಅಲ್ಲದೆ, ಪರೀಕ್ಷೆಯ ಕೊನೆಯ ಬೆಲ್ ಆಗುವವರೆಗೂ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಿಂದ ಹೊರಗೆ ಹೋಗಲು ಅನುಮತಿ ಇರುವುದಿಲ್ಲ' ಎಂದು ವಿವರಿಸಿದ್ದಾರೆ.

'ಮೊಬೈಲ್ ಬಳಕೆದಾರರು ಗ್ರಾಹಕರ ನ್ಯಾಯಾಲಯಕ್ಕೆ ದೂರು ಸಲ್ಲಿಸಬಹುದು'

ನವದೆಹಲಿ: 'ಮೊಬೈಲ್ ಸೇರಿದಂತೆ ಟೆಲಿಕಾಂನ ಯಾವುದೇ ಸೇವೆಗಳಲ್ಲಿ ಕೊರತೆ ಕಂಡುಬಂದರೆ ಗ್ರಾಹಕರು ನೇರವಾಗಿ ಗ್ರಾಹಕರ ನ್ಯಾಯಾಲಯಕ್ಕೆ ದೂರು ಸಲ್ಲಿಸಬಹುದು' ಎಂದು ಸುಪ್ರೀಂಕೋರ್ಟ್ ಹೇಳಿದೆ.

1885ರ ಕಾಯ್ದೆಯ ಎಸ್‌ಸಿಆರ್‌ಡಿಸಿಯ ಸೆಕ್ಷನ್‌ನ 7ಬಿ ಖಾಸಗಿ ಸೇವಾ ಪೂರೈಕೆದಾರ ಕಂಪನಿಗೆ ಅನ್ವಯವಾಗುವುದಿಲ್ಲ ಎಂಬ ಎನ್‌ಸಿಡಿಆರ್‌ಸಿ ತೀರ್ಪು ಪ್ರಶ್ನಿಸಿ 'ವೊಡಾಫೋನ್' ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

'ಮಂಗಳೂರು ಮುಸ್ಲಿಂ' ಫೇಸ್‌ಬುಕ್ ಪೇಜ್ ವಿರುದ್ಧ ಎಫ್‌ಐಆರ್

ಬೆಂಗಳೂರು: ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯವರ ಬಗ್ಗೆ ಅವಹೇಳನಕಾರಿ ಬರಹ ಪ್ರಕಟಿಸಿದ್ದ ಆರೋಪದಡಿ 'ಮಂಗಳೂರು ಮುಸ್ಲಿಂ' ಫೇಸ್‌ಬುಕ್ ಪುಟದ ವಿರುದ್ಧ ನಗರದಲ್ಲಿ ಎಫ್‌ಐಆರ್ ದಾಖಲಾಗಿದೆ.

ಶಿವಮೊಗ್ಗದಲ್ಲಿ ಹತ್ಯೆಗೀಡಾದ ಬಜರಂಗದಳ ಕಾರ್ಯಕರ್ತ ಹರ್ಷ ಬಗ್ಗೆ ಅವಹೇಳನಕಾರಿ ಬರಹ ಪ್ರಕಟಿಸಿದ್ದ ಆರೋಪದಡಿ 'ಮಂಗಳೂರು ಮುಸ್ಲಿಂ' ಪುಟದ ವಿರುದ್ಧ ಮಂಗಳೂರಿನಲ್ಲಿ ಇತ್ತೀಚೆಗಷ್ಟೇ ದೂರು ದಾಖಲಾಗಿತ್ತು. ಇದೀಗ ಬೆಂಗಳೂರಿನ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲೂ ಮತ್ತೊಂದು ಪ್ರಕರಣ ದಾಖಲಾಗಿದೆ.

'ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ, ಪ್ರಚೋದನಾತ್ಮಕ ಹಾಗೂ ಅವಹೇಳನಕಾರಿ ಬರಹ ಪ್ರಕಟಿಸುವವರ ಮೇಲೆ ನಿಗಾ ವಹಿಸಲು ಪೊಲೀಸ್ ತಂಡ ರಚಿಸಲಾಗಿದೆ. 'ಮಂಗಳೂರು ಮುಸ್ಲಿಂ' ಪುಟದಲ್ಲಿ ಪ್ರಕಟವಾದ ಬರಹ ಗಮನಿಸಿದ್ದ ಸಿಬ್ಬಂದಿ, ಪುರಾವೆ ಸಮೇತ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿದ್ದಾರೆ. ಪುಟದ ನಿರ್ವಹಣೆ ಮಾಡುತ್ತಿರುವವರು (ಅಡ್ಮಿನ್) ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಹಿಜಾಬ್ ಪ್ರಕರಣದ ವಿಚಾರವನ್ನು ಪ್ರಸ್ತಾಪಿಸಿ, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಹಾಗೂ ನ್ಯಾಯಮೂರ್ತಿಗಳ ಬಗ್ಗೆ ಫೇಸ್‌ಬುಕ್ ಪುಟದಲ್ಲಿ ಅವಹೇಳನಕಾರಿ ಬರಹ ಪ್ರಕಟಿಸಲಾಗಿದೆ. ಅತೀಕ್ ಷರೀಫ್ ಎಂಬಾತನೂ ಅವಹೇಳನಕಾರಿ ಪೋಸ್ಟ್ ಹಾಕಿದ್ದಾನೆ. ಆತನನ್ನೂ ಆರೋಪಿಯನ್ನಾಗಿ ಮಾಡಲಾಗಿದೆ' ಎಂದೂ ವಿವರಿಸಿದರು.

'ದೇಶದಲ್ಲಿ ಹಿಜಾಬ್ ಧರಿಸುವುದಕ್ಕೆ ನಿಷೇಧವಿಲ್ಲ'

ಹೈದರಾಬಾದ್: ದೇಶದಲ್ಲಿ ಹಿಜಾಬ್ ಅಥವಾ ಶಿರವಸ್ತ್ರ ಧರಿಸುವುದಕ್ಕೆ ಯಾವುದೇ ನಿಷೇಧ ಇಲ್ಲ. ಸಾಂವಿಧಾನಿಕ ಹಕ್ಕುಗಳು ಮತ್ತು ಕರ್ತವ್ಯಗಳು ಎಲ್ಲರಿಗೂ ಸಮಾನವಾಗಿವೆ ಎಂಬುದನ್ನು ಜನರು ಅರ್ಥೈಸಿಕೊಳ್ಳುವ ಅಗತ್ಯ ಇದೆ ಎಂದು ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಮುಕ್ತಾರ್ ಅಬ್ಬಾಸ್ ನಖ್ವಿ ಭಾನುವಾರ ಹೇಳಿದ್ದಾರೆ.

ಇಲ್ಲಿ ಹಮ್ಮಿಕೊಂಡಿದ್ದ 'ಹುನಾರ್ ಹಾತ್' ವಸ್ತುಪ್ರದರ್ಶನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಷ್ಯಾ-ಉಕ್ರೇನ್ ಸಮರಾಂಗಣ





ಉಕ್ರೇನ್‌ನಲ್ಲಿ ಶಾಂತಿ ನೆಲೆಸಬೇಕು ಎಂದು ಆಗ್ರಹಿಸಿ ಜರ್ಮನಿಯ ರಾಜಧಾನಿ ಬರ್ಲಿನ್‌ನ ಬ್ರಾಂಡನ್‌ಬರ್ಗ್ ಗೇಟ್‌ನಲ್ಲಿ ಭಾನುವಾರ ಒಂದು ಲಕ್ಷಕ್ಕೂ ಅಧಿಕ ಮಂದಿ ಜಾಥಾ ನಡೆಸಿದರು. ಪ್ರತಿಭಟನಕಾರರು ಉಕ್ರೇನ್‌ನ ಧ್ವಜದ ಬಣ್ಣವಾದ ನೀಲಿ ಮತ್ತು ಹಳದಿ ಬಣ್ಣದ ಉಡುಗೆ ತೊಟ್ಟಿದ್ದು ವಿಶೇಷವಾಗಿತ್ತು (ಮೊದಲ ಚಿತ್ರ) ಉಕ್ರೇನ್‌ನ ಹಾರ್ಕಿವ್ ನಗರದಲ್ಲಿ ರಷ್ಯಾ ಮತ್ತು ಉಕ್ರೇನ್ ಪಡೆಗಳ ನಡುವೆ ಬೀದಿ ಕಾಳಗ ನಡೆದಿದ್ದು, ರಷ್ಯಾದ ಸಶಸ್ತ್ರ ಸೇನಾ ವಾಹನವೊಂದು ಹೊತ್ತಿ ಉರಿಯಿತು. –ಎಎಫ್‌ಪಿ ಚಿತ್ರಗಳು

ದಿನದ ಬೆಳವಣಿಗೆಗಳು

- ಉಕ್ರೇನ್ ಪರ ಯುದ್ಧದಲ್ಲಿ ಹೋರಾಡಲು ಪೋಲೆಂಡ್ ಗಡಿಯಲ್ಲಿ ಕಾಯುತ್ತಿರುವ ದೇಶವಾಸಿಗಳು
- ಅಮೆರಿಕ ಮಾಜಿ ಅಧ್ಯಕ್ಷ ಟ್ರಂಪ್ ಮೊದಲಿನ ನಿಲುವು ಬದಲಿಸಿ, ಉಕ್ರೇನ್ ಮೇಲಿನ ರಷ್ಯಾ ಆಕ್ರಮಣಕ್ಕೆ ಖಂಡನೆ
- ಜೀವ ಉಳಿಸಿಕೊಳ್ಳಲು ಉಕ್ರೇನ್‌ನಿಂದ ಪಲಾಯನ ಮಾಡುತ್ತಿರುವ ನಿರಾಶ್ರಿತರ ಸಂಖ್ಯೆಯಲ್ಲಿ ಹೆಚ್ಚಳ
- ರಷ್ಯಾ ಸೇನೆ ಹಿಮ್ಮೆಟ್ಟಿಸಲು ಬಂದೂಕುಗಳನ್ನು ಕೈಗೆತ್ತಿಕೊಂಡು ರಸ್ತೆಗಿಳಿದ ಉಕ್ರೇನ್ ನಾಗರಿಕರು
- ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಿಂದ ಕಾಯಂ ಸದಸ್ಯ ರಾಷ್ಟ್ರವಾದ ರಷ್ಯಾ ಹೊರಗಿಡಲು ಉಕ್ರೇನ್ ಒತ್ತಾಯ
- ಅಂತರರಾಷ್ಟ್ರೀಯ ನ್ಯಾಯಾಲಯಕ್ಕೆ ರಷ್ಯಾ ವಿರುದ್ಧ ಉಕ್ರೇನ್ ಅಧ್ಯಕ್ಷ ಝೆಲೆನ್ಸ್ಕಿ ದೂರು
- ರಷ್ಯಾ ಆಕ್ರಮಣದ ವಿರುದ್ಧ ವಿಶ್ವದ ಪ್ರಮುಖ ರಾಷ್ಟ್ರಗಳಲ್ಲಿ ವ್ಯಾಪಕ ಪ್ರತಿಭಟನೆ ಮುಂದುವರಿಕೆ
- 2022ರ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ರಷ್ಯಾ ವಿರುದ್ಧ ಆಡದಿರಲು ಜೆಕ್ ಗಣರಾಜ್ಯ ಘೋಷಣೆ
- ರಷ್ಯಾದ 44 ನಗರಗಳಲ್ಲಿ ಯುದ್ಧ ವಿರೋಧಿಸಿ ಪ್ರತಿಭಟಿಸಿದ 900ಕ್ಕೂ ಹೆಚ್ಚು ಮಂದಿ ಬಂಧನ. ಬಂಧನದ ಸಂಖ್ಯೆ 4,000ಕ್ಕೆ ಏರಿಕೆ.
- ಉಕ್ರೇನ್‌ನಲ್ಲಿ ಮಿಲಿಟರಿ ಕಾರ್ಯಾಚರಣೆ ನಡೆಸುತ್ತಿರುವ ತಮ್ಮ ಸೇನಾಪಡೆಗೆ ರಷ್ಯಾ ಅಧ್ಯಕ್ಷ ಪ್ರಶಂಸೆ
- ಯುರೋಪ್ ರಾಷ್ಟ್ರಗಳ ಜತೆಗೆ ಫಿನ್ಲೆಂಡ್ , ಪೋರ್ಚುಗಲ್ ಮತ್ತು ಬೆಲ್ಜಿಯಂ ಕೂಡ ರಷ್ಯಾ ವಿಮಾನಗಳಿಗೆ ನಿರ್ಬಂಧ
- ಪುಟಿನ್ ಜೊತೆ ಇಸ್ರೇಲ್ ಪ್ರಧಾನಿ ನಫ್ತಾಲಿ ಬೆನೆಟ್ ಮಾತುಕತೆ ನಡೆಸಿ ಮಧ್ಯಸ್ಥಿಕೆ ವಹಿಸುವ ಪ್ರಸ್ತಾವ
- ಉಕ್ರೇನ್‌ಗೆ 8.7 ದಶಲಕ್ಷ ಡಾಲರ್ ದೇಣಿಗೆ ನೀಡಿದ ಜಪಾನ್‌ನ ಕೋಟ್ಯಧಿಪತಿ ಉದ್ಯಮಿ ಹಿರೋಶಿ ಮಿಕಿತಾನಿ
- ಆಪರೇಷನ್ ಗಂಗಾ ಕಾರ್ಯಚರಣೆಯಲ್ಲಿ ಏರ್ ಇಂಡಿಯಾ ಒಂದು ವಿಮಾನಕ್ಕೆ ಗಂಟೆಗೆ 7ರಿಂದ 8 ಲಕ್ಷ ರೂಪಾಯಿ ವೆಚ್ಚ ತಗುಲುತ್ತಿದೆ
- ಉಕ್ರೇನ್ ಮೇಲೆ ಅಣ್ವಸ್ತ್ರ ಬಲ ಪ್ರಯೋಗಿಸುವ ಪುಟಿನ್ ಬೆದರಿಕೆಯ ಹೇಳಿಕೆಗೆ ಅಮೆರಿಕ, ನ್ಯಾಟೊ ತೀವ್ರ ಖಂಡನೆ
- ಉಕ್ರೇನ್ ಮೇಲೆ ಬೆಲರೂಸ್‌ನಿಂದ ಇಸ್ಕಾಂಡರ್ ಕ್ಷಿಪಣಿಯನ್ನು ರಷ್ಯಾ ಹಾರಿಸಿದೆ
- ಉಕ್ರೇನ್‌ನಲ್ಲಿ ಅಂತರ್ಜಾಲ ಸೇವೆ ಸಕ್ರಿಯಗೊಳಿಸಿದ ಸ್ಟಾರ್‌ಲಿಂಕ್ ಜಾಲ

ಪೋಲೆಂಡ್ ಗಡಿಯಲ್ಲಿ ಮೈನಸ್ 4 ಡಿಗ್ರಿ ತಾಪಮಾನದ ನಡುವೆ ಜೀವ ಉಳಿಸಿಕೊಳ್ಳಲು ಹರಸಾಹಸ

ಗಡಿ ದಾಟಿದವರ ಗೋಳು: ಕೇಳುವವರು ಯಾರು?

ನವದೆಹಲಿ (ಪಿಟಿಐ): ಗಗನಚುಂಬಿ ಜನವಸತಿ ಕಟ್ಟಡಗಳನ್ನು ಧ್ವಂಸಗೊಳಿಸುತ್ತಿರುವ ಕ್ಷಿಪಣಿಗಳು, ಎಲ್ಲೆಂದರಲ್ಲಿ ಬಾಂಬ್ ಸ್ಫೋಟ, ಟ್ಯಾಂಕ್‌ಗಳಿಂದ ಮದ್ದುಗುಂಡುಗಳ ಭೋರ್ಗರೆತ, ಸೈನಿಕರ ಬಂದೂಕಿನಿಂದ ತೂರಿಬರುವ ಗುಂಡುಗಳು....

ಸ್ಥಳದಿಂದ ಪಾರಾಗಲೂ ವಾಹನ ಸೌಕರ್ಯ ಇಲ್ಲ. ಯಾವಾಗ ಬೇಕಾದರೂ ಜೀವ ಹಾರಿಹೋಗಬಹುದಾದ ಸನ್ನಿವೇಶ, ಇದರ ಜತೆಗೆ ಕೊರೆಯುವ ಚಳಿ. ಹಸಿವು ನೀಗಿಸಿಕೊಳ್ಳಲು ಗುಟುಕು ನೀರು, ಸೇವಿಸಲು ಒಂದಿಷ್ಟು ಆಹಾರವೂ ಸಿಗದೆ ಪರಿತಾಪ.. ಇದು ಉಕ್ರೇನ್ ಯುದ್ಧ ಭೂಮಿಯಿಂದ ಪಾರಾಗಿ ಜೀವ ಉಳಿಸಿಕೊಳ್ಳಲು ಪೋಲೆಂಡ್, ಹಂಗೆರಿ, ರೊಮೇನಿಯಾ, ಬಲ್ಗೇರಿಯಾದ ಗಡಿಗಳತ್ತ ಧಾವಿಸಿ ಬರುತ್ತಿರುವ ಭಾರತೀಯರು ಅನುಭವಿಸುತ್ತಿರುವ ಸ್ಥಿತಿ.

ಉಕ್ರೇನ್‌ನಲ್ಲಿರುವ ಹಲವಾರು ಭಾರತೀಯ ವಿದ್ಯಾರ್ಥಿಗಳು ಸುಮಾರು 35 ಕಿ.ಮೀ ದೂರದಲ್ಲಿರುವ ಪೋಲೆಂಡ್ ಗಡಿ ತಲುಪಲು ಕಾಲ್ನಡಿಗೆಯಲ್ಲಿ ಸಾಗುತ್ತಿದ್ದಾರೆ. ಮೈನಸ್ 4 ಡಿಗ್ರಿಗಿಂತ ಕಡಿಮೆ ಇರುವ ತಾಪಮಾನವನ್ನು ಮೂರು ದಿನಗಳಿಂದ ಸಹಿಸಿಕೊಂಡು ಉದ್ಯಾನವನಗಳಲ್ಲಿ, ರಸ್ತೆಗಳ ಬದಿ ಕುಳಿತು, ಮಲಗಿ ಸಾವರಿಸಿಕೊಂಡು ಗಡಿ ತಲುಪಿದರೆ ಅಲ್ಲಿ ನೀರು, ಆಹಾರವೂ ಸಿಗದೆ ಸಹಾಯಕ್ಕಾಗಿ ಅಂಗಲಾಚುತ್ತಿದ್ದಾರೆ. ಮೊಬೈಲ್ ಬ್ಯಾಟರಿಗಳ ಚಾರ್ಜ್ ಖಾಲಿಯಾಗಿ ಕುಟುಂಬದವರನ್ನು ಸಂಪರ್ಕಿಸಲು ಸಾಧ್ಯವಾಗದೆ ಪರಿತಪಿಸುತ್ತಿದ್ದಾರೆ.

ಶನಿವಾರ ಪೋಲೆಂಡ್ ಗಡಿಗೆ ಬಂದು ತಲುಪಿರುವ ಹಲವು ಮಂದಿ ವಿದ್ಯಾರ್ಥಿಗಳು ತಮಗೆ ಎದುರಾಗಿರುವ ಅಗ್ನಿಪರೀಕ್ಷೆ ಮತ್ತು ಸ್ಥಳಾಂತರ ಆಗುತ್ತೇವೋ ಇಲ್ಲವೋ ಎನ್ನುವ ಅತಂತ್ರ ಸ್ಥಿತಿಯಿಂದ ಪಾರು ಮಾಡುವಂತೆ ಮನವಿ ಮಾಡುತ್ತಿದ್ದಾರೆ.

‘ಇದು ಸುದೀರ್ಘ ನಡಿಗೆಯಾಗಿತ್ತು. ನಾವು ತುಂಬಾ ದಣಿದು ಹೋಗಿದ್ದೆವು. ಮುಂದೆ ಹೆಜ್ಜೆ ಇಡಲು ಕಾಲುಗಳಲ್ಲಿ ಶಕ್ತಿಯೂ ಉಳಿದಿರಲಿಲ್ಲ. ಪರಸ್ಪರ ಒಬ್ಬರನ್ನೊಬ್ಬರು ಕಾಳಜಿ ಮಾಡುತ್ತಾ ದಾರಿ ಸಾಗಿಸಿದೆವು. ಆದರೆ ನಾವು ಗಡಿ ತಲುಪಿಬಿಟ್ಟರೆ ಬಹುಶಃ ಕೆಟ್ಟ ಪರಿಸ್ಥಿತಿ ಕೊನೆಯಾಗಲಿದೆ. ತಾಯ್ನಾಡು ಸೇರುತ್ತೇವೆ, ಪೋಷಕರನ್ನು ಕೂಡಿಕೊಳ್ಳುತ್ತೇವೆ ಎನ್ನುವ ಒಂದೇ ಒಂದು ಭರವಸೆ ನಮ್ಮನ್ನು ಗಡಿ ಮುಟ್ಟಿಸಿತು. ಆದರೆ, ಇದು ಕೊನೆಯಾಗಲಿಲ್ಲ. ಸ್ಥಳಾಂತರಕ್ಕೆ ಇನ್ನೂ ಹಲವಾರು ಗಂಟೆಗಳಿಂದ ಕಾಯುತ್ತಿದ್ದೇವೆ. ನಾವು ಎಲ್ಲ ಸಹಾಯವಾಣಿ ಸಂಖ್ಯೆಗಳನ್ನು ಸಂಪರ್ಕಿಸಲು ಪ್ರಯತ್ನಿಸಿದ್ದೇವೆ. ಆದರೆ, ಯಾವುದೇ ಪ್ರತಿಕ್ರಿಯೆ ಬಂದಿಲ್ಲ’ ಎಂದು ಹೋರ್ಬಚೆವ್ಸ್ಕಿ ಟೆರ್ನೋಪಿಲ್ ರಾಷ್ಟ್ರೀಯ ವೈದ್ಯಕೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿನಿ ನೃಪಾಕ್ಷಿ ‘ಪಿಟಿಐ’ ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

‘ನಮ್ಮ ಮೊಬೈಲ್ ಫೋನ್‌ಗಳ ಬ್ಯಾಟರಿಗಳು ಬರಿದಾಗುವ ಹಂತದಲ್ಲಿರುವುದರಿಂದ ನಾವು ಎಷ್ಟು ಸಾಧ್ಯವೋ ಅಷ್ಟು ಎಸ್‌ಎಂಎಸ್ ಮೂಲಕವೇ ಸಂದೇಶಗಳನ್ನು ಕಳುಹಿಸುತ್ತಿದ್ದೇವೆ’ ಎಂದು ತಿಳಿಸಿದ್ದಾರೆ ಗುಜರಾತ್ ನೃಪಾಕ್ಷಿ.

‘ರಾಯಭಾರ ಕಚೇರಿಯಿಂದ ನೀಡಿರುವ ಸಹಾಯವಾಣಿ ಸಂಖ್ಯೆಗಳು ಕಾರ್ಯನಿರ್ವಹಿಸುತ್ತಿಲ್ಲ. ನಾವು ಪ್ರತಿಯೊಬ್ಬರಿಗೂ ಕರೆ ಮಾಡಲು ಸಾಕಷ್ಟು ಪ್ರಯತ್ನಿಸಿದ್ದೇವೆ. ನಾವು ಉದ್ಯಾನ ಮತ್ತು ಬಯಲು ಪ್ರದೇಶದಲ್ಲಿ ಮಲಗಿದ್ದೇವೆ, ನಮ್ಮಲ್ಲಿ ಕೆಲವರು ಅನಾರೋಗ್ಯಕ್ಕೆ ಒಳಗಾಗಿದ್ದೇವೆ. ನಮ್ಮ ಬಳಿ ಇದ್ದ ಆಹಾರ ಪದಾರ್ಥಗಳು ಮುಗಿದು ಹೋಗಿವೆ. ಇದು ಯಾವಾಗ ಕೊನೆಗೊಳ್ಳುತ್ತದೆ?’ ಎಂದು ಅದೇ ವಿಶ್ವವಿದ್ಯಾಲಯದ ಮತ್ತೊಬ್ಬ ವಿದ್ಯಾರ್ಥಿ ನಿಖಿಲ್ ಕುಮಾರ್ ಪರಿಸ್ಥಿತಿಯನ್ನು ವಿವರಿಸಿದ್ದಾರೆ.

ಪೋಲೆಂಡ್ ಗಡಿಯಲ್ಲಿ ಸಿಲುಕಿರುವ 400 ವಿದ್ಯಾರ್ಥಿಗಳು ತಾಯ್ನಾಡು ಸೇರಲು ಭಾರತದ ವಿಮಾನಗಳಿಗೆ ಕಾಯುತ್ತಿದ್ದಾರೆ ಎಂದು ಕುಮಾರ್ ಹೇಳಿದರು.

‘ನಮ್ಮನ್ನು ಬಸ್ಸಿನಲ್ಲಿ ಕರೆದುಕೊಂಡು, ಅರ್ಧ ದಾರಿಯಲ್ಲಿ ಇಳಿಸಿ ಹೋದರು. ಕ್ಷಣ ಕ್ಷಣಕ್ಕೂ ಮೊಳಗುತ್ತಿದ್ದ ವಾಯು ದಾಳಿಯ ಸೈರನ್‌ಗಳು ಪ್ರತಿ ಬಾರಿ ನಮ್ಮ ಹೃದಯವನ್ನು ಸೀಳುತ್ತಿದ್ದವು. ಇದರ ನಡುವೆಯೇ ನಾವು 30 ಕಿ.ಮೀ. ದೂರವನ್ನು ಅಲ್ಲಲ್ಲಿ ಸಾವರಿಸಿಕೊಂಡು ನಡೆದು ಬಂದಿದ್ದೇವೆ. ಇದು ಅಂತ್ಯ ಎಂದು ಭಾವಿಸಿದ್ದೇವೆ’ ಎಂದು ಡ್ಯಾನಿಲೊ ಹೆಲೆಸ್ಕಿ ಎಲ್ವಿವ್ ನ್ಯಾಷನಲ್ ಮೆಡಿಕಲ್ ಯುನಿವರ್ಸಿಟಿಯ ವಿದ್ಯಾರ್ಥಿ ಅಶುತೋಷ್ ಪರಿಸ್ಥಿತಿಯ ಕರಾಳತೆ ತೆರೆದಿಟ್ಟರು.

‘ನಾವು ಈ ಮಾರ್ಗದಲ್ಲಿ ಬರಲು ಯೋಜಿಸಿರುವ ವಿದ್ಯಾರ್ಥಿಗಳಿಗೆ ಬರದಂತೆ ಸಂದೇಶಗಳನ್ನು ಕಳುಹಿಸುತ್ತಿದ್ದೇವೆ. ನಾವೇ ಕಾಲ್ನಡಿಗೆಯಲ್ಲಿ ಸಾಗುವ ಯೋಚನೆಯಲ್ಲಿದ್ದೇವೆ. ಈ ಗಡಿಗೆ ಬರದಂತೆ ಮತ್ತು ಬೇರೆ ಪರ್ಯಾಯ ದಾರಿಗಳನ್ನು ಹುಡುಕಿಕೊಳ್ಳುವಂತೆ ತಿಳಿಸುತ್ತಿದ್ದೇವೆ’ ಎಂದು ಅವರು ಹೇಳಿದರು.

‘ನಾವು ಸುಮಾರು 300 ವಿದ್ಯಾರ್ಥಿಗಳು ಶೆಹೈನಿ-ಮೆಡಿಕಾ ಗಡಿಯಲ್ಲಿ ಮೈನಸ್ 4 ಡಿಗ್ರಿ ತಾಪಮಾನದಲ್ಲಿ ಯಾವುದೇ ಆಸರೆ ಇಲ್ಲದೆ ಸಿಲುಕಿಕೊಂಡಿದ್ದೇವೆ. ಯಾರೂ ನಮಗೆ ಸ್ಪಂದಿಸುತ್ತಿಲ್ಲ. ನಾವು 35 ಕಿ.ಮೀ ಹಾದಿಯನ್ನು ನಡೆದು ಇಲ್ಲಿಗೆ ಬಂದಿದ್ದೇವೆ. ಹಿಂತಿರುಗಲು ಅವಕಾಶವಿಲ್ಲದಾಗಿದೆ’ ಎಂದು ಮತ್ತೊಬ್ಬ ವಿದ್ಯಾರ್ಥಿ ಅಳಲು ತೋಡಿಕೊಂಡರು.

ಭಾರತೀಯ ನಾಗರಿಕರು ಸಹಾಯವಾಣಿ ಸಂಖ್ಯೆಗಳನ್ನು ಬಳಸಿಕೊಂಡು ಅಲ್ಲಿನ ಭಾರತೀಯ ಅಧಿಕಾರಿಗಳೊಂದಿಗೆ ಪೂರ್ವ ಸಮನ್ವಯ ಸಾಧಿಸದೆ ಯಾವುದೇ ಗಡಿ ಪೋಸ್ಟ್‌ಗಳಿಗೆ ತೆರಳಬಾರದು ಎಂದು ಉಕ್ರೇನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಶನಿವಾರ ಟ್ವಿಟರ್‌ನಲ್ಲಿ ಸೂಚಿಸಿತ್ತು.

ಉಕ್ರೇನ್‌ನಲ್ಲಿ ಪರಿಸ್ಥಿತಿ ಹದಗೆಡುತ್ತಿರುವ ಕಾರಣ ಅನೇಕ ವಿದ್ಯಾರ್ಥಿಗಳು ತಾಯ್ನಾಡು ಸೇರುವ ಹಂಬಲದಲ್ಲಿ ನೆರೆ ರಾಷ್ಟ್ರಗಳ ಗಡಿಗಳಿಗೆ ತಲಪಲು ಪ್ರಯತ್ನಿಸುತ್ತಿದ್ದಾರೆ.

ಕೇರಳದ ವಿದ್ಯಾರ್ಥಿಗಳ ಮೇಲೆ ಉಕ್ರೇನ್ ಪಡೆ ಹಲ್ಲೆ

ತಿರುವನಂತಪುರ: ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯ ವಿದ್ಯಾರ್ಥಿಗಳು ಭಾನುವಾರ ಪೋಲೆಂಡ್ ಗಡಿಯತ್ತ ತೆರಳುತ್ತಿದ್ದಾಗ ಉಕ್ರೇನ್ ಭದ್ರತಾ ಪಡೆಗಳು ದೇಶ ತೊರೆಯದಂತೆ ತಡೆದು, ಥಳಿಸಿರುವ ಘಟನೆಗಳು ವರದಿಯಾಗಿವೆ.

ಉಕ್ರೇನ್-ಪೋಲೆಂಡ್ ಗಡಿಯಲ್ಲಿರುವ ಶೆಹಿನಿಯಲ್ಲಿ ಹಲವಾರು ಭಾರತೀಯ ವಿದ್ಯಾರ್ಥಿಗಳು ಅದರಲ್ಲೂ ಹೆಚ್ಚಿನ ಸಂಖ್ಯೆಯಲ್ಲಿದ್ದ ಮಲಯಾಳಿ ವಿದ್ಯಾರ್ಥಿಗಳನ್ನು ಅಲ್ಲಿನ ಭದ್ರತಾ ಪಡೆ ಸಿಬ್ಬಂದಿ ಮತ್ತು ಪೊಲೀಸರು ತಡೆದು, ಥಳಿಸಿದ್ದಾರೆ.

ಪೋಲೆಂಡ್‌ಗೆ ಹೋಗಲು ಪ್ರಯತ್ನಿಸುತ್ತಿರುವ ವಿದ್ಯಾರ್ಥಿಗಳ ಕಡೆಗೆ ಉಕ್ರೇನ್ ಸೈನಿಕರು ಮತ್ತು ಪೊಲೀಸರು ತಮ್ಮ ವಾಹನಗಳನ್ನು ನುಗ್ಗಿಸಿ, ವಿದ್ಯಾರ್ಥಿಗಳನ್ನು ಅಡ್ಡಗಟ್ಟಿ ಹಿಡಿದು ಥಳಿಸಿದ್ದಾರೆ. ಅಲ್ಲದೇ ಗಾಳಿಯಲ್ಲಿ ಗುಂಡು ಹಾರಿಸಿ ಬೆದರಿಸಿರುವ ವಿಡಿಯೊ ತುಣುಕನ್ನು ವಿದ್ಯಾರ್ಥಿಗಳು ಹಂಚಿಕೊಂಡಿದ್ದಾರೆ.

‘ನನ್ನನ್ನು ಸಹ ಮಿಲಿಟರಿ ಸಿಬ್ಬಂದಿ ಥಳಿಸಿ, ರಸ್ತೆಗೆ ತಳ್ಳಿದರು. ನನ್ನ ಸ್ನೇಹಿತನೊಬ್ಬ ಪ್ರಶ್ನಿಸಿದ್ದಕ್ಕೆ ಅವನಿಗೂ ಹೊಡೆದು ರಸ್ತೆಗೆ ತಳ್ಳಿದರು’ ಎಂದು ವಿದ್ಯಾರ್ಥಿನಿ ಏಂಜಲ್ ಹೇಳಿದರು.



ಯುದ್ಧದಿಂದ ತತ್ತರಿಸಿರುವ ಉಕ್ರೇನ್‌ನ ಲಕ್ಷಾಂತರ ಜನರು ವಲಸಿಗರಾಗಿ ಸಮೀಪದ ದೇಶಗಳಿಗೆ ಬರುತ್ತಿದ್ದು, ಅವರಿಗೆ ನೆರವಾಗುವ ಸಲುವಾಗಿ ಲಂಡನ್‌ನಲ್ಲಿ ಭಾನುವಾರ ಸ್ವಯಂಸೇವಕರು ದಾನಿಗಳಿಂದ ದೇಣಿಗೆ ಸಂಗ್ರಹಿಸಿದರು ಎಪಿ/ಪಿಟಿಐ ಚಿತ್ರ

ಉಕ್ರೇನ್‌ನಲ್ಲಿ 406 ಕನ್ನಡಿಗರು

ಬೆಂಗಳೂರು: ಉಕ್ರೇನ್ ದೇಶದಲ್ಲಿ ಇದುವರೆಗೆ 406 ಮಂದಿ ಕನ್ನಡಿಗರು ಸಿಲುಕಿದ್ದಾರೆ. ಇವರಲ್ಲಿ 135 ಮಂದಿ ಬೆಂಗಳೂರಿನವರು.

ಮೈಸೂರು ಜಿಲ್ಲೆಯ 28, ಬಾಗಲಕೋಟೆಯ 24, ವಿಜಯಪುರ, ದಕ್ಷಿಣ ಕನ್ನಡ, ಬೆಂಗಳೂರು ಗ್ರಾಮಾಂತರದ ತಲಾ 18, ತುಮಕೂರಿನ 17, ರಾಯಚೂರು 15, ಹಾಸನ 13, ಕೊಡಗು ಮತ್ತು ಬೆಳಗಾವಿ ತಲಾ 12, ಹಾವೇರಿ 10, ಕೋಲಾರ ಮತ್ತು ದಾವಣಗೆರೆ ತಲಾ ಒಂಬತ್ತು, ಚಿಕ್ಕಬಳ್ಳಾಪುರ ಮತ್ತು ಚಿಕ್ಕಮಗಳೂರಿನ ತಲಾ ಎಂಟು, ಉಡುಪಿ ಏಳು, ಬೀದರ್ ಮತ್ತು ಬಳ್ಳಾರಿಯ ತಲಾ ಆರು, ಚಿತ್ರದುರ್ಗದ ಐವರು, ಶಿವಮೊಗ್ಗ, ಕಲಬುರಗಿ, ಧಾರವಾಡ, ಚಾಮರಾಜನಗರದ ತಲಾ ನಾಲ್ವರು, ಮಂಡ್ಯ ಮತ್ತು ಕೊಪ್ಪಳದ ಮೂವರು, ರಾಮನಗರ, ಉತ್ತರ ಕನ್ನಡ, ಗದಗದ ತಲಾ ಇಬ್ಬರು ಉಕ್ರೇನ್‌ನಲ್ಲಿ ಸಿಲುಕಿದ್ದಾರೆ ಎಂದು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತ ಮನೋಜ್ ರಾಜನ್ ತಿಳಿಸಿದ್ದಾರೆ.

ಇದುವರೆಗೆ ಕರ್ನಾಟಕದ 30 ಮಂದಿಯನ್ನು ಸುರಕ್ಷಿತವಾಗಿ ಉಕ್ರೇನ್‌ನಿಂದ ನಾಡಿಗೆ ಕರೆತರಲಾಗಿದೆ ಎಂದು ಅವರು ಹೇಳಿದ್ದಾರೆ.

‘ಊಟ–ನೀರಿಗೂ ತೊಂದರೆಯಾಗಿದೆ’

ಮೈಸೂರು: ‘ಮೂರು ದಿನಗಳಿಂದ ಸಂಕಷ್ಟಕ್ಕೆಸಿಲುಕಿಕೊಂಡಿದ್ದು, ಊಟ–ನೀರಿಗೂ ತೊಂದರೆಯಾಗುತ್ತಿದೆ’ ಎಂದು ಉಕ್ರೇನ್‌ನಲ್ಲಿರುವ ಮೈಸೂರಿನ ವಿದ್ಯಾರ್ಥಿನಿ ಜ್ಞಾನಶ್ರೀ ಸಿಂಗ್ ವಿಡಿಯೊ ಮೂಲಕ ಅಲವತ್ತುಕೊಂಡಿದ್ದಾರೆ.

ಉಕ್ರೇನ್‌ನ ಕಾರ್ಕಿವ್ ನಗರದ ವಿ.ಎನ್.ಕರಜಿನ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಮೂರನೇ ವರ್ಷದ ಎಂಬಿಬಿಎಸ್ ಓದುತ್ತಿರುವ ಅವರು ನೆರವಿಗಾಗಿ ಮೊರೆಯಿಟ್ಟಿದ್ದಾರೆ.

ಉಕ್ರೇನ್‌ಗೆ ವಿಶ್ವ ಸಮುದಾಯದಿಂದ ಹರಿದು ಬಂದ ನೆರವಿನ ಮಹಾಪೂರ

ಬರ್ಲಿನ್ (ಎಪಿ): ರಷ್ಯಾ ಆಕ್ರಮಣದ ವಿರುದ್ಧ ಏಕಾಂಗಿಯಾಗಿ ವೀರೋಚಿತ ಪ್ರತಿರೋಧ ತೋರುತ್ತಿರುವ ಉಕ್ರೇನ್‌ಗೆ ಯುರೋಪ್ ರಾಷ್ಟ್ರಗಳಿಂದ ಹಣಕಾಸು ಮತ್ತು ರಕ್ಷಣಾ ಸಲಕರಣೆಗಳ ನೆರವಿನ ಮಹಾಪೂರವೇ ಹರಿದು ಬರುತ್ತಿದೆ.

ಉಕ್ರೇನ್‌ಗೆ ರಕ್ಷಣಾ ಉಪಕರಣಗಳ ಖರೀದಿ, ಮಿಲಿಟರಿ ತರಬೇತಿ ಮತ್ತು ಶಿಕ್ಷಣ ಸೌಲಭ್ಯಕ್ಕಾಗಿ ತಕ್ಷಣಕ್ಕೆ 350 ಮಿಲಿಯನ್ ಅಮೆರಿಕ ಡಾಲರ್ (ಅಂದಾಜು ₹2,626 ಕೋಟಿ) ನೆರವನ್ನು ಅಮೆರಿಕ ಅಧ್ಯಕ್ಷ ಜೋ ಬೈಡನ್ ಘೋಷಿಸಿದ ಬೆನ್ನಲ್ಲೇ ಯುರೋಪಿನ ರಾಷ್ಟ್ರಗಳು ತಮ್ಮ ನೆರವು ಪ್ರಕಟಿಸಿವೆ.

ಯುದ್ಧ ಟ್ಯಾಂಕ್‌ಗಳನ್ನು ಹೊಡೆದುರುಳಿಸಬಲ್ಲ 400 ಶಸ್ತ್ರಾಸ್ತ್ರಗಳು, 14 ಸೇನಾ ವಾಹನಗಳು ಹಾಗೂ 10 ಸಾವಿರ ಟನ್ ಇಂಧವನ್ನು ಜರ್ಮನಿಯು ಶನಿವಾರ ಉಕ್ರೇನ್‌ಗೆ ಕಳುಹಿಸಿದೆ. ಅಲ್ಲದೇ, ಜಾಗತಿಕ ಬ್ಯಾಂಕಿಂಗ್ ವ್ಯವಸ್ಥೆ ‘ಸ್ವಿಫ್ಟ್’ನಿಂದ ರಷ್ಯಾ ನಿರ್ಬಂಧಿಸುವ ನಿರ್ಧಾರ ಬೆಂಬಲಿಸಿದೆ.

188 ಮಿಲಿಯನ್ ಕ್ರೌನ್ ಮೌಲ್ಯದ ರಕ್ಷಣಾ ಸಲಕರಣೆ ಕಳುಹಿಸಿದ್ದ ಜೆಕ್ ಗಣರಾಜ್ಯ ಮತ್ತೆ 400 ಮಿಲಿಯನ್ ಕ್ರೌನ್ ($18.23 ಮಿಲಿಯನ್) ಮೌಲ್ಯದ ಮಿಲಿಟರಿ ಉಪಕರಣಗಳ ನೆರವು ಘೋಷಿಸಿದೆ.

ಡ್ರೋನ್ ನೆರವು: ರಷ್ಯಾದ ಪಡೆಗಳ ವಿರುದ್ಧ ಹೋರಾಡಲು ಟರ್ಕಿ ನಿರ್ಮಿತ ಬೈರಕ್ತರ್ ಡ್ರೋನ್‌ಗಳು ಅತ್ಯಂತ ಸಮರ್ಥವಾಗಿವೆ. ಉಕ್ರೇನ್‌ಗೆ ನೀಡಿರುವ ಬೈರಕ್ತ್ ಟಿಬಿ2 ಡ್ರೋನ್‌ಗಳು ಕೀವ್ ನಗರದಲ್ಲಿ ಕಾರ್ಯಾಚರಿಸುತ್ತಿವೆ ಎಂದು ಟರ್ಕಿ ಹೇಳಿದೆ.

ರಷ್ಯಾ ಪಡೆಗಳು 10 ಮಂದಿ ಗ್ರೀಕ್ ಪ್ರಜೆಗಳನ್ನು ಕೊಂದಿರುವುದಾಗಿ ಆರೋಪಿಸಿರುವ ಗ್ರೀಕ್, ಉಕ್ರೇನ್‌ಗೆ ಅಗತ್ಯ ರಕ್ಷಣಾ ಉಪಕರಣಗಳು ಮತ್ತು ಮಾನವೀಯ ನೆರವು ನೀಡುವುದಾಗಿ ಘೋಷಿಸಿದೆ.

ಇಟಲಿಯು 110 ದಶಲಕ್ಷ ಯುರೋಗಳ ($ 120 ಮಿಲಿಯನ್) ಹಣಕಾಸನ್ನು ಉಕ್ರೇನ್‌ಗೆ ಭಾನುವಾರ ಪಾವತಿಸಿದೆ ಎಂದು ವಿದೇಶಾಂಗ ಸಚಿವ ಲುಯಿಗಿ ಡಿ ಮಾಯೊ ತಿಳಿಸಿದೆ.

ಇಂಧನ, ಮದ್ದುಗುಂಡು ರವಾನೆ: ರೊಮೇನಿಯಾವು ಉಕ್ರೇನ್‌ಗೆ 3 ಮಿಲಿಯನ್ ಯುರೋ ($3.38 ಮಿಲಿಯನ್) ಮೌಲ್ಯದ ರಕ್ಷಣಾ ಉಪಕರಣ ಮತ್ತು ಇಂಧನ ಕಳುಹಿಸುತ್ತಿದೆ. ಇದರಲ್ಲಿ ಮದ್ದುಗುಂಡುಗಳು, ಬುಲೆಟ್ ಪ್ರೂಫ್ ಜಾಕೆಟ್, ಹೆಲ್ಮೆಟ್‌ಗಳು, ಮಿಲಿಟರಿ ಉಪಕರಣಗಳು, ಆಹಾರ ಮತ್ತು ನೀರು ಸೇರಿದೆ. ಮಿಲಿಟರಿ ಮತ್ತು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಗಾಯಾಳುಗಳಿಗೆ ಶುಶ್ರೂಷೆ ಮಾಡಲು ಸಿಬ್ಬಂದಿಯನ್ನು ಕಳುಹಿಸುತ್ತಿದೆ.

> **ದೇವರು ಶಾಂತಿ ಬಯಸುವವರೊಂದಿಗೆ ಮಾತ್ರ ಇರುತ್ತಾನೆ. ಹಿಂಸೆ ಆಶ್ರಯಿಸುವವರ ಜತೆಗಲ್ಲ. ನಿಮ್ಮ ಬಂದೂಕುಗಳ ಸದ್ದಡಗಿಸಿ. ಉಕ್ರೇನ್‌ನಲ್ಲಿ ನಡೆಯುತ್ತಿರುವ ಯುದ್ಧ ನಿಲ್ಲಿಸಿ.**
> **ಪೋಪ್ ಫ್ರಾನ್ಸಿಸ್,** ವ್ಯಾಟಿಕನ್ ಸಿಟಿ

ವಾಪಸಾದ ಕರ್ನಾಟಕದ ವಿದ್ಯಾರ್ಥಿಗಳು ನಿರಾಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಉನ್ನತ ವ್ಯಾಸಂಗ ಕ್ಕಾಗಿ ಉಕ್ರೇನ್‌ಗೆ ತೆರಳಿದ್ದ ಕರ್ನಾಟಕದ 20 ವಿದ್ಯಾರ್ಥಿಗಳು ಭಾನುವಾರ ಬೆಳಗಿನ ಜಾವ ಇಲ್ಲಿನ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದು ನಂತರ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು.

ಯುದ್ಧಪೀಡಿತ ಉಕ್ರೇನ್‌ನಲ್ಲಿ ಆತಂಕದ ವಾತಾವರಣ ನಿರ್ಮಾಣ ಆಗಿದ್ದರಿಂದ ನೆರೆಯ ರೊಮೇನಿಯಾ ತಲುಪಿದ್ದ ಈ ವಿದ್ಯಾರ್ಥಿಗಳು, ಕೇಂದ್ರ ಸರ್ಕಾರ ವ್ಯವಸ್ಥೆ ಮಾಡಿದ್ದ ಏರ್ ಇಂಡಿಯಾ ವಿಮಾನದಲ್ಲಿ ಇಲ್ಲಿಗೆ ಬಂದಾಗ ಕರ್ನಾಟಕ ಭವನದ ಕಿರಿಯ ಸಿಬ್ಬಂದಿ ಅವರನ್ನು ಬರಮಾಡಿಕೊಂಡರು.

ಸಾಕ್ಷಿ ದಾಮನಕರ್, ಮಹಾಗಣಪತಿ ಬಿಳಿಮಗ್ಗದ, ಐಶ್ವರ್ಯಾ ಪಾಟೀಲ್, ಚಂದ್ರಶೇಖರ್, ಮಿಜ್ಬಾ ನೂರ್, ಮುನಿಸ್ವಾಮಿ ಗೌಡ, ಜೈನಾ ಏರಂ, ಧನರಾಜ್, ರಾವತನಹಳ್ಳಿ ಸ್ವಾತಿ, ಬಿ.ಜ್ಞಾನಶ್ರೀ, ಎಂ.ಯಶವಂತ, ಗಣೇಶ್ವರ ಪ್ರಿಯಾ, ಕೆ.ಜೆ. ದೀಪಿಕಾ ಅವರು ಮೊದಲ ವಿಮಾನದಲ್ಲಿ ಬಂದಿಳಿದರು.

ಹಂಗೆರಿಯ ಬುಡಾಪೆಸ್ಟ್‌ನಿಂದ ಬಂದ 2ನೇ ವಿಮಾನದಲ್ಲಿ ಕಾರವಾರದ ಪ್ರತೀಕ್ ನಾಗರಾಜ್ ಸೇಟ್, ಬೆಂಗಳೂರಿನ ಮಹಮ್ಮದ್ ಮಝರ್, ಹಾಸನದ ಕೀರ್ತನಾ, ಚನ್ನಪಟ್ಟಣದ ಮೊಹಮ್ಮದ್ ಮನ್ನಾನ್, ಬಾಳೆಹೊನ್ನೂರಿನ ಮಹಮ್ಮದ್ ಶೋಯಬ್ ಹಾಗೂ ಇನ್ನಿಬ್ಬರು ಸಂಜೆ ಬಂದ ವಿಮಾನದಲ್ಲಿ ಬಂದರು.



ಉಕ್ರೇನ್‌ನಿಂದ ವಾಪಸಾದ ರಾಜ್ಯದ ವಿದ್ಯಾರ್ಥಿಗಳ ತಂಡವನ್ನು ನವದೆಹಲಿಯ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕರ್ನಾಟಕ ಭವನದ ಸಿಬ್ಬಂದಿ ಬರಮಾಡಿಕೊಂಡರು



ಶೋಯಬ್



ಕೀರ್ತನಾ

ಇಲ್ಲಿನ ಸರ್ದಾರ್ ಪಟೇಲ್ ಮಾರ್ಗದಲ್ಲಿರುವ ಕರ್ನಾಟಕ ಭವನದಲ್ಲಿ ಸಂಜೆಯವರೆಗೆ ವಿಶ್ರಾಂತಿ ಪಡೆದು, ರಾಜ್ಯ ಸರ್ಕಾರ ಏರ್ಪಾಡು ಮಾಡಿದ್ದ ವಿಮಾನದ ಮೂಲಕ ಬೆಂಗಳೂರಿಗೆ ತೆರಳಿದರು.

ಹೋಗಿದ್ದು 10 ದಿನಗಳ ಹಿಂದೆ: ಪಶ್ಚಿಮ ಉಕ್ರೇನ್‌ನ ಉಜ್ಘೊರಾಡ್ ನಗರದಿಂದ ವಾಪಸಾದವರ ಪೈಕಿ ಕೆಲವರು ಮೊದಲ ವರ್ಷದ ವೈದ್ಯಕೀಯ ವ್ಯಾಸಂಗಕ್ಕೆಂದು ಫೆಬ್ರುವರಿ 15ರಂದಷ್ಟೇ ಭಾರತದಿಂದ ತೆರಳಿದ್ದರು.

‘ಫೆಬ್ರುವರಿ 15ಕ್ಕೆ ಮೊದಲೇ ಯುದ್ಧದ ಭೀತಿ ಇತ್ತು. ಆದರೂ ಪ್ರವಾಸಿ ಏಜೆಂಟರು ನಮ್ಮನ್ನು ಅಲ್ಲಿಗೆ ಕಳುಹಿಸಿದರು. ನಮ್ಮೊಂದಿಗೆ ಅಧ್ಯಯನ ಮಾಡುವ ಕೆಲವು ಹಿರಿಯ ವಿದ್ಯಾರ್ಥಿಗಳೇ ಏಜೆಂಟರಾಗಿದ್ದಾರೆ. ಅವರನ್ನು ನಂಬಿ ತೆರಳಿದ್ದೆವು’ ಎಂದು ಬಾಳೆಹೊನ್ನೂರಿನ ಮಹಮ್ಮದ್ ಶೋಯಬ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಯಾವುದೇ ರೀತಿಯ ಸಮಸ್ಯೆ ಆಗಲಿಕ್ಕಿಲ್ಲ ಎಂದೇ ನಾವು ಹೋದೆವು. ಕೂಡಲೇ ವಾಪಸ್ ಬರಬೇಕೆಂದುಕೊಂಡರೂ ವಿಮಾನ ಪ್ರಯಾಣ ದರ ₹ 1 ಲಕ್ಷಕ್ಕಿಂತ ಹೆಚ್ಚು ಇದ್ದುದರಿಂದ, ನಮಗೆ ವಾಪಸ್ ಬರಲು ಆಗಿರಲಿಲ್ಲ’ ಎಂದು ಅವರು ಹೇಳಿದರು.

‘ಉಕ್ರೇನ್‌ನ ಕೆಲವೆಡೆ ಮಾತ್ರ ಆತಂಕ ಇದೆ. ಎಲ್ಲರೂ ಸಮಸ್ಯೆಗೊಳಗಾಗಿಲ್ಲ. ಭಾರತೀಯ ಮಾಧ್ಯಮಗಳು ಭೀತಿ ಹುಟ್ಟಿಸುವಂತೆ ಸುದ್ದಿ ಪ್ರಸಾರ ಮಾಡುತ್ತಿವೆ. ಕನ್ನಡದ ಕೆಲವು ಪತ್ರಿಕೆಗಳು ನನ್ನ ಫೇಸ್‌ಬುಕ್ ಖಾತೆಯಿಂದ ಭಾವಚಿತ್ರ ತೆಗೆದುಕೊಂಡು, ಪಾಲಕರನ್ನೂ ಕೇಳದೆ ಬಂಕರ್‌ನಲ್ಲಿ ನರಳುತ್ತಿದ್ದೇನೆ ಎಂಬಂತೆ ಸುದ್ದಿ ಮಾಡಿವೆ. ಅನಗತ್ಯ ಭೀತಿ ಉಂಟಾಗುವ ಇಂಥ ಸುದ್ದಿ ಪ್ರಕಟಿಸಬಾರದು’ ಎಂದು ಮೂರು ವರ್ಷಗಳಿಂದ ವೈದ್ಯಕೀಯ ವ್ಯಾಸಂಗ ಮಾಡುತ್ತಿರುವ ಹಾಸನದ ಕೀರ್ತನಾ ಹೇಳಿದರು.

‘ವಿದೇಶಾಂಗ ಸಚಿವರ ಜೊತೆ ನಿರಂತರ ಸಂಪರ್ಕ’

ಬೆಂಗಳೂರು: ‘ಉಕ್ರೇನ್‌ನಲ್ಲಿರುವ ಎಲ್ಲ ವಿದ್ಯಾರ್ಥಿಗಳನ್ನು ರಾಜ್ಯಕ್ಕೆ ಸುರಕ್ಷಿತವಾಗಿ ಕರೆತರಲು ಕೇಂದ್ರ ವಿದೇಶಾಂಗ ಸಚಿವರ ಜೊತೆ ಸರ್ಕಾರ ನಿರಂತರ ಸಂಪರ್ಕದಲ್ಲಿದೆ. ಕೇಂದ್ರ ಮತ್ತು ರಾಜ್ಯದ ಸಹಾಯವಾಣಿಗಳೂ ಕಾರ್ಯನಿರ್ವಹಿಸುತ್ತಿವೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ಉಕ್ರೇನ್‌ನಲ್ಲಿ ಸಿಲುಕಿರುವ ವಿದ್ಯಾರ್ಥಿಗಳ ಸುರಕ್ಷತೆಯ ಜೊತೆಗೆ ಊಟ ಮತ್ತು ನೀರು ಪೂರೈಸುವಂತೆ ಕೇಂದ್ರ ವಿದೇಶಾಂಗ ಸಚಿವರಿಗೆ ಮನವಿ ಮಾಡಲಾಗಿದೆ’ ಎಂದರು.

‘ಯುದ್ಧದ ಪರಿಸ್ಥಿತಿ ತಿಳಿಗೊಳ್ಳುವವರೆಗೆ ವಿದ್ಯಾರ್ಥಿಗಳ ಸುರಕ್ಷತೆಗೆ ಆದ್ಯತೆ ನೀಡಲಾಗುವುದು. ಅಲ್ಲದೆ, ಅವರನ್ನು ಭಾರತಕ್ಕೆ ಕರೆತರಲು ಎಲ್ಲ ರೀತಿಯ ಕ್ರಮ ಕೈಗೊಳ್ಳುವುದಾಗಿ ಕೇಂದ್ರ ಸಚಿವರು ಭರವಸೆ ನೀಡಿದ್ದಾರೆ. ರಾಜ್ಯದ ಅಧಿಕಾರಿಗಳು ವಿದೇಶಾಂಗ ಸಚಿವಾಲಯದೊಂದಿಗೆ ಸಂಪರ್ಕದಲ್ಲಿದ್ದಾರೆ’ ಎಂದೂ ತಿಳಿಸಿದರು.

ರೊಮೇನಿಯಾ ಗಡಿಯಲ್ಲಿ ಸಿಲುಕಿದ ಯುವಕ

ಶಿರಸಿ: ಯುದ್ಧಪೀಡಿತ ಉಕ್ರೇನ್ ದೇಶದಲ್ಲಿ ಸಿಲುಕಿದ್ದ ತಾಲ್ಲೂಕಿನ ಬನವಾಸಿಯ ಇಮ್ರಾನ್ ನಜೀರ್ ಚೌದರಿ ಶನಿವಾರ ಸಂಜೆ ರೊಮೇನಿಯಾ ಗಡಿ ತಲುಪಿದ್ದು, ಅಲ್ಲಿ ಸಿಲುಕಿಕೊಂಡಿದ್ದಾರೆ.

ರಾಜಧಾನಿ ಕೀವ್ ನಗರದಿಂದ 300 ಕಿ.ಮೀ. ದೂರದ ವಿನಿಶಿಯಾ ನಗರದಲ್ಲಿದ್ದರು. ಅಲ್ಲಿಂದ ಇಮ್ರಾನ್ ಹಾಗೂ ಇತರ 30 ಸ್ನೇಹಿತರನ್ನು ಬಸ್ ಮೂಲಕ ರೊಮೇನಿಯಾಕ್ಕೆ ಕಳುಹಿಸುವ ಪ್ರಯತ್ನ ನಡೆದಿದೆ.

‘ಗಡಿಭಾಗದಲ್ಲಿ ಚಳಿ, ಸಂಚಾರ ದಟ್ಟಣೆಯಿಂದ ವಾಹನಗಳು ಸಿಲುಕಿಕೊಂಡಿವೆ ಎಂಬುದಾಗಿ ಇಮ್ರಾನ್ ಮಾಹಿತಿ ನೀಡಿದ್ದಾನೆ’ ಎಂದು ಇಮ್ರಾನ್ ತಂದೆ ಅಲ್ತಾಫ್ ಚೌದರಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮೊಬೈಲ್ ಚಾರ್ಜ್ ಮಾಡಿಕೊಳ್ಳಲು ಕಷ್ಟವಾಗುತ್ತಿದೆ. ಚಳಿ ಸಹಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ’ ಎಂದು ಮಗ ತಿಳಿಸಿದ್ದಾಗಿ ಅವರು ಹೇಳಿದ್ದಾರೆ. ಮಾಹಿತಿ ಪಡೆಯಲು ಇಮ್ರಾನ್ ಸಂಪರ್ಕಕ್ಕೆ ಸಿಕ್ಕಿಲ್ಲ.

ಬೆಂಗಳೂರಿಗೆ ಬಂದಿಳಿದ 12 ವಿದ್ಯಾರ್ಥಿಗಳು



ಉಕ್ರೇನ್‌ನಿಂದ ವಿಶೇಷ ವಿಮಾನದಲ್ಲಿ ತಾಯ್ನಾಡಿಗೆ ಮರಳಿದ ವಿದ್ಯಾರ್ಥಿಗಳನ್ನು ಬೆಂಗಳೂರು ಕೆಂಪೇಗೌಡ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ವಿದ್ಯಾರ್ಥಿಗಳನ್ನು ಸಚಿವ ಆರ್.ಅಶೋಕ್ ಬರಮಾಡಿಕೊಂಡ ಕ್ಷಣ –ಪ್ರಜಾವಾಣಿ ಚಿತ್ರ

ಒಂದನೇ ಪುಟದಿಂದ

ತ್ರಿವರ್ಣ ಧ್ವಜ ಹಿಡಿದು ‘ಭಾರತ್ ಮಾತಾ ಕೀ ಜೈ’ ಎಂದು ಘೋಷಣೆ ಕೂಗುತ್ತಾ ಬಂದ ವಿದ್ಯಾರ್ಥಿಗಳು ತವರಿಗೆ ಕಾಲಿಡುತ್ತಲೇ ಭಾವುಕರಾದರು. ಪೋಷಕರನ್ನು ಕಂಡ ಅವರ ಕಣ್ಣಾಲಿಗಳು ತೇವಗೊಂಡವು.

ಪೋಷಕರು ಓಡೋಡಿ ಹೋಗಿ ಮಕ್ಕಳನ್ನು ಬಿಗಿದಪ್ಪಿ, ಮುದ್ದಾಡಿದರು. ವಿಮಾನ ನಿಲ್ದಾಣದಲ್ಲಿದ್ದ ಪ್ರಯಾಣಿಕರು, ಅಧಿಕಾರಿಗಳು ಈ ಸಂಭ್ರಮಕ್ಕೆ ಸಾಕ್ಷಿಯಾದರು. ಸರ್ಕಾರದ ಪರವಾಗಿ ಸಚಿವ ಆರ್. ಅಶೋಕ, ಐಎಎಸ್ ಅಧಿಕಾರಿ ಡಾ. ಆರ್. ಮನೋಜ್ ಅವರು ವಿದ್ಯಾರ್ಥಿಗಳನ್ನು ಬರಮಾಡಿಕೊಂಡರು.

> **ಉಕ್ರೇನ್‌ನ ಹಾರ್ಕಿವ್ ಎಂಬಲ್ಲಿ ನನ್ನ ಮಗ ಯಶವಂತ್ ರೆಡ್ಡಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ಇಂದು ಆತನ ಸ್ನೇಹಿತರು ಬೆಂಗಳೂರಿಗೆ ಬಂದಿದ್ದಾರೆ. ಮಗನ ಬಗ್ಗೆ ವಿಚಾರಿಸಲು ಇಲ್ಲಿಗೆ ಬಂದಿದ್ದೇನೆ**
> **ಚೌಡಪ್ಪ ,** ಉಕ್ರೇನ್‌ನಲ್ಲಿ ಸಿಲುಕಿರುವ ವಿದ್ಯಾರ್ಥಿ ಪೋಷಕ

ಸ್ನೇಹಿತರೆಲ್ಲ ಸುರಕ್ಷಿತವಾಗಿ ಹಿಂತಿರುಗಲಿ...

ಪ್ರಜಾವಾಣಿ ವಾರ್ತೆ

ಮುಂಡರಗಿ: ‘ಫೆ.23ರವರೆಗೂ ಉಕ್ರೇನ್ ಹಾಗೂ ರಷ್ಯಾ ನಡುವೆ ಯುದ್ಧ ಸಂಭವಿಸುವುದಿಲ್ಲ ಎನ್ನುವ ಭರವಸೆಯಲ್ಲಿಯೇ ಇದ್ದೆವು. 24ರಂದು ಬೆಳಿಗ್ಗೆ ರಷ್ಯಾ, ಉಕ್ರೇನ್ ದೇಶದ ಮೇಲೆ ಮುಗಿಬಿದ್ದಾಗ ಯಾವುದು ನಡೆಯಬಾರದು ಎಂದುಕೊಂಡಿದ್ದೆವೋ ಅದು ನಮ್ಮ ಕಣ್ಮುಂದೆ ನಡೆಯತೊಡಗಿತು...’

ಉಕ್ರೇನ್ ದೇಶದಿಂದ ಭಾನುವಾರ ಬೆಳಿಗ್ಗೆ ದೆಹಲಿಗೆ ಬಂದ ಗದಗ ಜಿಲ್ಲೆಯ ಮುಂಡರಗಿ ಪಟ್ಟಣದ ಮಹಾಗಣಪತಿ ಬಿಳಿಮಗ್ಗದ ಅವರ ಭಾರವಾದ ಧ್ವನಿಯಿಂದ ಹೊರಬಿದ್ದ ಮಾತುಗಳಿವು.

ಪರದಾಟ (ದಾವಣಗೆರೆ ವರದಿ): ರಷ್ಯಾದ ಗಡಿಯಿಂದ ಕೇವಲ 40 ಕಿಲೋಮೀಟರ್ ದೂರದಲ್ಲಿರುವ ಹಾರ್ಕಿವ್‌ನಲ್ಲಿ ಕರ್ನಾಟಕದ 40ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸಿಲುಕಿಕೊಂಡಿದ್ದಾರೆ. ದೇಶಕ್ಕೆ ವಾಪಸ್ ಬರಲಾಗದೇ ಪರದಾಡುತ್ತಿದ್ದಾರೆ.

ವೈದ್ಯಕೀಯ ಶಿಕ್ಷಣಕ್ಕಾಗಿ ಖಾರ್‌ಕೀವ್‌ಗೆ ಹೋಗಿರುವ ಹರಿಹರ ಭಾನುವಳ್ಳಿಯ ಬಾದಾಮಿ ವೀರೇಶ್–ಮಂಜುಳಾ ಅವರ ಮಗ ಪ್ರವೀಣ್ ಬಾದಾಮಿ, ದಾವಣಗೆರೆ ಡಿಸಿಎಂ ಟೌನ್‌ಶಿಪ್ ನಿವಾಸಿ, ಶಿಕ್ಷಕ ನಾಗರಾಜ್–ಸುನಂದಾ ದಂಪತಿಯ ಮಗ ಗಗನ್ ದೀಪ್ ಅವರು ‘ಪ್ರಜಾವಾಣಿ’ ಜತೆಗೆ ಅಲ್ಲಿನ ಪರಿಸ್ಥಿತಿಯನ್ನು ವಿವರಿಸಿದರು.

ಅಣು ಸಮರದ ಭೀತಿ

ಒಂದನೇ ಪುಟದಿಂದ

ಯುರೋಪ್‌ನ ಬಹುತೇಕ ಎಲ್ಲ ದೇಶಗಳ ವಾಯು ಪ್ರದೇಶವನ್ನು ರಷ್ಯಾಕ್ಕೆ ನಿಷೇಧಿಸಲಾಗಿದೆ.

ರಷ್ಯಾದ ತೈಲ, ಲೋಹ ಮತ್ತು ಧಾನ್ಯ ರಫ್ತಿಗೆ ಭಾರಿ ಏಟು ಬೀಳಬಹುದು ಎನ್ನಲಾಗಿದೆ. ಅಮೆರಿಕ ಮತ್ತು ಯುರೋಪ್‌ನ ಹಲವು ದೇಶಗಳು ರಷ್ಯಾದ ಬ್ಯಾಂಕುಗಳನ್ನು ಅಂತರರಾಷ್ಟ್ರೀಯ ಹಣ ವರ್ಗಾವಣೆ ವ್ಯವಸ್ಥೆ ‘ಸ್ವಿಫ್ಟ್’ನಿಂದ ಹೊರಗೆ ಇಟ್ಟಿವೆ. ಹಾಗಾಗಿ, ಪಾವತಿ ಸಮಸ್ಯೆಯಿಂದ ರಫ್ತು ಕುಂಠಿತವಾಗಲಿದೆ. ರಷ್ಯಾದಲ್ಲಿ ಹಣದುಬ್ಬರ ತೀವ್ರ ಏರಿಕೆಯಾಗಿದೆ ಎಂದು ವರ್ತಕರು ಹೇಳಿದ್ದಾರೆ.

ಹಾರ್ಕಿವ್ ಕದನ: ಹಾರ್ಕಿವ್ ನಗರದಿಂದ ರಷ್ಯಾ ಸೈನಿಕರನ್ನು ಹೊರಗಟ್ಟಲಾಗಿದೆ. ರಷ್ಯಾ ಸೈನಿಕರ ಜತೆಗೆ ಬೀದಿಯಲ್ಲಿ ಕಾಳಗ ನಡೆದಿದೆ. ಹಾರ್ಕಿವ್ ಸಂಪೂರ್ಣವಾಗಿ ಉಕ್ರೇನ್ ನಿಯಂತ್ರಣಕ್ಕೆ ಬಂದಿದೆ ಎಂದು ನಗರದ ಗವರ್ನರ್ ಒಲೆಗ್ ಸಿನೆಗುಬೊವ್ ಭಾನುವಾರ ಹೇಳಿದ್ದಾರೆ.

ರಷ್ಯಾ ಸೇನೆಯ ಲಘು ವಾಹನಗಳು ಭಾನುವಾರ ಬೆಳಿಗ್ಗೆ ನಗರದೊಳಕ್ಕೆ ಬಂದಿದ್ದವು. ರಷ್ಯಾ ಸೈನಿಕರನ್ನು ಹೊರಗಟ್ಟಲು ಕಾರ್ಯಾಚರಣೆ ನಡೆಸಲಾಯಿತು.

ರಷ್ಯಾ ಸೈನಿಕರ ಆತ್ಮಸ್ಥೈರ್ಯವೇ ಕುಗ್ಗಿದೆ. ಅವರು ತಮ್ಮ ವಾಹನಗಳನ್ನು ರಸ್ತೆಯಲ್ಲಿಯೇ ಬಿಟ್ಟು ಪರಾರಿಯಾಗಿದ್ದಾರೆ. ಐವರು ಸೈನಿಕರು ಉಕ್ರೇನ್‌ಗೆ ಶರಣಾಗಿದ್ದಾರೆ. ಯುದ್ಧ ಆರಂಭವಾದ ನಂತರ ಅವರಿಗೆ ನೀರು ಮತ್ತು ಆಹಾರದ ಪೂರೈಕೆಯೇ ಆಗಿಲ್ಲ. ಅವರೆಲ್ಲ ದಣಿದಿದ್ದಾರೆ ಎಂದು ಒಲೆಗ್ ಹೇಳಿದ್ದಾರೆ.

4 ಅಣು ವಿದ್ಯುತ್ ಸ್ಥಾವರ–ಎಚ್ಚರಿಕೆ

ವಿಯೆನ್ನಾ (ಪಿಟಿಐ): ಉಕ್ರೇನ್‌ನಲ್ಲಿರುವ ನಾಲ್ಕು ಅಣು ವಿದ್ಯುತ್ ಸ್ಥಾವರಗಳ ಸುರಕ್ಷತೆಗಾಗಿ ಎಲ್ಲಾ ದೇಶಗಳೂ ಎಚ್ಚರಿಕೆ ವಹಿಸಬೇಕು ಎಂದು ಅಂತರರಾಷ್ಟ್ರೀಯ ಅಣು ಶಕ್ತಿ ಏಜೆನ್ಸಿ (ಐಎಇಎ) ಸಲಹೆ ನೀಡಿದೆ. ಈ ಅಣು ವಿದ್ಯುತ್ ಸ್ಥಾವರಗಳಲ್ಲಿ 15 ರಿಯಾಕ್ಟರ್‌ಗಳಿದ್ದು, ದೇಶದ ಬಹುತೇಕ ಅರ್ಧದಷ್ಟು ವಿದ್ಯುತ್ ಬೇಡಿಕೆಯನ್ನು ಇವು ಪೂರೈಸುತ್ತಿವೆ. ಯುದ್ಧದ ಸಂದರ್ಭದಲ್ಲೂ ಈ ಎಲ್ಲಾ ರಿಯಾಕ್ಟರ್‌ಗಳು ಕಾರ್ಯಾಚರಣೆಯಲ್ಲಿದ್ದು, ದೇಶದ ಸುರಕ್ಷತೆ ಮತ್ತು ಪರಿಸರದ ಮೇಲೆ ಹಾನಿ ಆಗುವಂತೆ ಯಾವ ದೇಶವೂ ನಡೆದುಕೊಳ್ಳಬಾರದು ಎಂದು ಐಎಇಎ ಮಹಾನಿರ್ದೇಶಕ ರಫೇಲ್ ಮರಿಯಾನೊ ಗ್ರೊಸ್ಸಿ ಹೇಳಿದ್ದಾರೆ.

ಪ್ರಜಾವಾಣಿ ಸೋಮವಾರ, 28 ಫೆಬ್ರುವರಿ 2022

ಶಿಕ್ಷಣ



ಕುತೂಹಲವೇ ವಿಜ್ಞಾನದ ಹುಟ್ಟು

ಮನೆಯೂ ಆಗಲಿ ವಿಜ್ಞಾನ ಪ್ರಯೋಗಶಾಲೆ

ಉಕ್ಕುವ ಹಾಲು, ಕುದಿಯುವ ನೀರು, ಅಂಗಳದಲ್ಲಿ ಬೆಳೆದ ಗಿಡ, ಅಡುಗೆ ಮನೆಯ ಪದಾರ್ಥಗಳು.. ಹೀಗೆ ಮನೆಯಲ್ಲಿನ ಹಲವು ವಸ್ತುಗಳು ಹಾಗೂ ಚಟುವಟಿಕೆಗಳ ಮೂಲಕ ಮಕ್ಕಳಿಗೆ ವಿಜ್ಞಾನವನ್ನು ಕಲಿಸಬಹುದು.



ಆರ್.ಬಿ. ಗುರುಬಸವರಾಜ

ಆರ್ಕಿಮಿಡಿಸ್, ಮನೆಯ ನೀರಿನ ತೊಟ್ಟಿಯಲ್ಲಿಳಿದು ಅಲ್ಲಿಂದ ನೀರು ಹೊರ ಚೆಲ್ಲಿದ ಮೇಲೆ 'ತೇಲು ತತ್ವ' ಪ್ರತಿಪಾದನೆ ಮಾಡಿದ್ದು, ಅಡುಗೆ ಮನೆಯಲ್ಲಿ ಬಿಸಿ ಪಾತ್ರೆಯ ಮೇಲಿನ ಮುಚ್ಚಳ ಕುಣಿಯುತ್ತಿದ್ದನ್ನು ನೋಡಿದ ಜೇಮ್ಸ್ ವ್ಯಾಟ್ 'ಹಬೆ ಯಂತ್ರ' ಕಂಡು ಹಿಡಿಯಲು ಸಾಧ್ಯವಾಯಿತು. ಇಂಥ ಹಲವು ಖ್ಯಾತ ವಿಜ್ಞಾನಿಗಳು, ಮನೆಯಲ್ಲಿನ ವಿದ್ಯಮಾನಗಳಿಂದಲೇ 'ವಿಜ್ಞಾನ' ಕಲಿತು ವಿಶ್ವಪ್ರಸಿದ್ಧರಾದರು.

ವಿಜ್ಞಾನ ಎನ್ನುವುದು ಪ್ರಯೋಗಾಲಯಗಳಿಂದಷ್ಟೇ ಕಲಿಯುವುದಲ್ಲ. ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ, ಅಷ್ಟೇ ಏಕೆ, ಮನೆಯಲ್ಲಿ ನಡೆಯುವ ಚಟುವಟಿಕೆಗಳಲ್ಲೂ 'ವಿಜ್ಞಾನ'ವಿದೆ. ಪೋಷಕರು ಅದನ್ನು ಗುರುತಿಸಿ, ತಾವೂ ಕಲಿತು ಮಕ್ಕಳಿಗೆ ಕಲಿಸುವ ಮೂಲಕ ಮನೆಯಿಂದಲೇ ವಿಜ್ಞಾನ ಕಲಿಯಲು ಪ್ರೋತ್ಸಾಹಿಸಬೇಕಿದೆ.

ಇಂದು ರಾಷ್ಟ್ರೀಯ ವಿಜ್ಞಾನ ದಿನ

ವಿಜ್ಞಾನ ಕಲಿಕೆ ಏಕೆ ಮುಖ್ಯ?

ವಿಜ್ಞಾನ ಕಲಿಯುವುದರಿಂದ, ಮಗುವಿಗೆ ಉತ್ತಮ ಸಂವಹನ ಕೌಶಲದ ಜೊತೆಗೆ, ವೈಚಾರಿಕ ಪ್ರಜ್ಞೆ ಬೆಳೆಯುತ್ತದೆ. ಇದರಿಂದ ಚಿಂತನೆಗಳು ವಿಸ್ತಾರಗೊಳ್ಳುತ್ತವೆ. ಮಗುವಿನಲ್ಲಿರುವ ಸೃಜನಶಕ್ತಿಯನ್ನು ಉತ್ತೇಜಿಸುತ್ತದೆ. ಮಕ್ಕಳು ವಿಶ್ಲೇಷಣಾತ್ಮಕ ಚಿಂತನೆಯ ಮೂಲಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಕೌಶಲವನ್ನು ಕಲಿಯುತ್ತಾರೆ. ಇದಕ್ಕಾಗಿ ವಿಜ್ಞಾನ ಕಲಿಯುವುದು ಅವಶ್ಯವಾಗಿದೆ. ಇಂಥ ವಿಜ್ಞಾನವನ್ನು ಮಕ್ಕಳಿಗೆ ಮನೆಯಿಂದಲೇ ವಿವಿಧ ಚಟುವಟಿಕೆಗಳ ಮೂಲಕ ಕಲಿಸಬಹುದು. ಆ ಪೂರಕ ಚಟುವಟಿಕೆಗಳ ಕುರಿತ ಮಾಹಿತಿ ಇಲ್ಲಿದೆ;

ಮನೆಯಲ್ಲೇ ತಾರಾ ಮಂಡಲ

ಮನೆಯ ತಾರಸಿ, ಮನೆಯ ಅಂಗಳ ತಾರಾಮಂಡಲ ವೀಕ್ಷಣೆಗೆ ಸೂಕ್ತ ತಾಣ. ಮೋಡಗಳಿಲ್ಲದ ರಾತ್ರಿಯಲ್ಲಿ ಮಕ್ಕಳಿಗೆ ಆಕಾಶ ತೋರಿಸಿ. ಅಲ್ಲಿರುವ ಗ್ರಹ, ತಾರೆಗಳನ್ನು ಪರಿಚಯಿಸಿ. ಆದರೆ, ಇದಕ್ಕೆ ಒಂದಿಷ್ಟು ಪೂರ್ವ ತಯಾರಿ ಬೇಕು. ಕೆಲವು ವೇಳೆ ಶುಕ್ರ, ಗುರು, ಶನಿ ಗ್ರಹಗಳನ್ನು ಬರಿಗಣ್ಣಿನಿಂದ ನೋಡಬಹುದು. ಆಗಾಗ್ಗೆ ಸಂಭವಿಸುವ ಉಲ್ಕಾಪಾತ, ಧೂಮಕೇತುವಿನಂತಹ ಖಗೋಳ ಕೌತುಕವನ್ನು ಮಕ್ಕಳಿಗೆ ಪರಿಚಯಿಸಬಹುದು. ಸಾಧ್ಯವಾದರೆ ಒಂದು ಟೆಲಿಸ್ಕೋಪ್ ಖರೀದಿಸಿ, ತಾರೆಗಳ ವೀಕ್ಷಣೆಗೆ ಪ್ರೋತ್ಸಾಹಿಸಬಹುದು.

ಕೈತೋಟದಲ್ಲಿ ಕಲಿಕೆ

ಮನೆಯ ಅಂಗಳದಲ್ಲೋ, ತಾರಸಿಯಲ್ಲೋ ಕೈತೋಟ ಮಾಡಿ. ಜಾಗವಿಲ್ಲದಿದ್ದರೆ, ಕುಂಡಗಳಲ್ಲಾದರೂ ಗಿಡಗಳನ್ನು ಬೆಳೆಸಿ. ಆ ಗಿಡಗಳಲ್ಲಿರುವ ಎಲೆಗಳ ರಚನೆ, ಬೇರಿನ ಕಾರ್ಯಗಳು, ಮೊಗ್ಗು ಹೂವಾಗುವಿಕೆ, ಕಾಯಿ ಹಣ್ಣಾಗುವಿಕೆಯ ಹಂತಗಳನ್ನು ಮಕ್ಕಳಿಗೆ ವಿವರಿಸಿ. ಜತೆಗೆ, ಮನೆಯ ತ್ಯಾಜ್ಯದಿಂದ ಗೊಬ್ಬರ ತಯಾರಿಸುವುದು, ಸಸ್ಯಗಳ ವೈಜ್ಞಾನಿಕ ಹೆಸರಿನ ಪರಿಚಯ, ಅವುಗಳಿಗೆ ತಗಲುವ ರೋಗ, ಕೀಟಗಳ ಬಗ್ಗೆ ತಿಳಿಸಿ. 'ಸಸ್ಯ ವಿಜ್ಞಾನ'ವನ್ನು ಮಕ್ಕಳಿಗೆ ಸುಲಭವಾಗಿ ಅರ್ಥ ಮಾಡಿಸಲು ಕೈತೋಟ ಒಂದು ಸೂಕ್ತ ತಾಣ.

ಪ್ರಯೋಗ ಮಾಡಿ ನೋಡಿ

ನೀರಿನಲ್ಲಿ ತೇಲುವ-ಮುಳುಗುವ, ಕರಗುವ-ಕರಗದ ವಸ್ತುಗಳ ಬಗ್ಗೆ ಬಾಯಿ ಮಾತಿನಲ್ಲಿ ಹೇಳುವ ಬದಲು ಪ್ರಯೋಗದ ಮೂಲಕ ಕಲಿಸಬಹುದು. ನೀರು ಮಂಜುಗಡ್ಡೆಯಾಗುವ, ಐಸ್‌ಕ್ರೀಮ್ ಕರಗುವ ಹಾಗೂ ನೀರು ಬಿಸಿಯಾದಾಗ ಆವಿಯಾಗುವ ಪ್ರಯೋಗಗಳನ್ನು ಮಕ್ಕಳು ಮನೆಯಲ್ಲಿ ಮಾಡಿ ಕಲಿಯಬಹುದು. ವಸ್ತುಗಳ ಸ್ಥಿತಿ ಬದಲಾವಣೆ ಕುರಿತ ಕಲಿಕೆಗೆ ಬಲ ನೀಡಬಹುದು.

ಅಡುಗೆ ಮನೆಯಲ್ಲಿ ವಿಜ್ಞಾನ

ಅಡುಗೆ ಮನೆ ರಸಾಯನಶಾಸ್ತ್ರ, ಜೀವಶಾಸ್ತ್ರಗಳ ಸಂಗಮ ತಾಣ. ಇಲ್ಲಿ ಅಡುಗೆಗೆ ಬಳಸುವ ಅರಿಸಿನ, ಉಪ್ಪು, ಸಕ್ಕರೆ, ಸೋಡಾ, ನೀರಿನಲ್ಲಿರುವ ರಾಸಾಯನಿಕ ಅಂಶಗಳನ್ನು ಪರಿಯಚಯಿಸಬಹುದು. 'ಹಾಲು ಕಾಯಿಸಿದಾಗ ಉಕ್ಕುತ್ತದೆ ಮತ್ತು ನೀರು ಕಾಯಿಸಿದಾಗ ಉಕ್ಕುವುದಿಲ್ಲ' ಏಕೆ- ಇಂಥ ಪ್ರಶ್ನೆಗಳನ್ನು ಪ್ರಯೋಗದ ಮೂಲಕ ತಿಳಿಸಲು ಉತ್ತಮ ವೇದಿಕೆ. ತರಕಾರಿ, ಹಣ್ಣುಗಳು, ಧಾನ್ಯಗಳ ಸಾಮಾನ್ಯ ಹೆಸರು ಮತ್ತು ವೈಜ್ಞಾನಿಕ ಹೆಸರಿನ ಪರಿಚಯವೂ ಮಕ್ಕಳ ಕಲಿಕೆಗೆ ಪೂರಕವಾದದ್ದು.

ಸಂವಾದ, ಚರ್ಚೆ

ಮನೆಯ ನೆರೆ-ಹೊರೆಯಲ್ಲಿರುವ ಸಮಾನ ಮನಸ್ಕ ಮಕ್ಕಳನ್ನು ಒಂದೆಡೆ ಸೇರಿಸಿ, ವಿಜ್ಞಾನದ ವಿಷಯಗಳ ಮೇಲೆ ಚರ್ಚೆ ಸಂವಾದ ಏರ್ಪಡಿಸಿ. ಇದರಿಂದ ಮಕ್ಕಳಲ್ಲಿ ಸಂವಹನ ಕೌಶಲ ಬೆಳೆಯುತ್ತದೆ. ಮಕ್ಕಳು ಮೊದ ಮೊದಲು ಕೈಗೊಳ್ಳುವ ವಿಜ್ಞಾನದ ಚಟುವಟಿಕೆಗಳನ್ನು ಪ್ರೋತ್ಸಾಹಿಸಿ, ಬೆನ್ನುತಟ್ಟಿ. ತಪ್ಪಾಗಿದ್ದರೆ, ತಿದ್ದಿ ವಿವರಿಸಿ. ಇದರಿಂದ ಅವರು ಇನ್ನಷ್ಟು ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ಉತ್ಸುಕರಾಗುತ್ತಾರೆ.

ಸಿನಿಮಾ ವೀಕ್ಷಣೆ

ವಾರಾಂತ್ಯದಲ್ಲಿ ಮಕ್ಕಳಿಗೆ ವಿಜ್ಞಾನ ಆಧಾರಿತ ಸಿನಿಮಾ ತೋರಿಸಿ. ಬಾಹ್ಯಾಕಾಶ, ಕೃಷಿ, ತಂತ್ರಜ್ಞಾನ ಸೇರಿದಂತೆ ವೈವಿಧ್ಯಮಯ ವಿಷಯಗಳ ಆಧಾರಿತ ಸಿನಿಮಾಗಳು ಮಕ್ಕಳಲ್ಲಿ ವಿಜ್ಞಾನದ ಬಗೆಗಿನ ಕುತೂಹಲ ಮತ್ತು ಆಸಕ್ತಿಯನ್ನು ವಿಸ್ತರಿಸುತ್ತವೆ.

ಇಷ್ಟೇ ಅಲ್ಲ; ಮನೆಯಿಂದಲೇ ವಿಜ್ಞಾನ ಕಲಿಯುವುದಕ್ಕೆ ಇನ್ನೂ ಭಿನ್ನವಾದ ಚಟುವಟಿಕೆಗಳು ನಿಮ್ಮ ಮನೆ ಹಾಗೂ ಆಸುಪಾಸಿನಲ್ಲಿರಬಹುದು. ಇಂದಿನಿಂದಲೇ ಅಂಥ ಚಟುವಟಿಕೆಗಳನ್ನು ಪತ್ತೆ ಮಾಡಿ, ಕಲಿಕೆ ಆರಂಭಿಸಿ . ಆ ಮೂಲಕ 'ರಾಷ್ಟ್ರೀಯ ವಿಜ್ಞಾನ ದಿನ' (ಫೆಬ್ರುವರಿ 28)ವನ್ನು ಅರ್ಥಪೂರ್ಣವಾಗಿ ಆಚರಿಸಿ.

ಗ್ರಾಮೀಣಾಭಿವೃದ್ಧಿ ಕೋರ್ಸ್‌ಗಳು

ಗುರುರಾಜ್ ಎಸ್. ದಾವಣಗೆರೆ

ಗಾಮೀಣಾಭಿವೃದ್ಧಿಗೆ ಸಂಬಂಧಿಸಿದಂತೆ ದೇಶದ ವಿವಿಧ ವಿಶ್ವವಿದ್ಯಾಲಯಗಳು ನಾಲ್ಕು ಹಂತದ ಕೋರ್ಸ್‌ಗಳನ್ನು ಬೋಧಿಸುತ್ತವೆ. ಎರಡು ವರ್ಷದ ಡಿಪ್ಲೊಮಾ, ಮೂರು ವರ್ಷದ ಪದವಿ ಅಧ್ಯಯನ, ಎರಡು ವರ್ಷದ ಸ್ನಾತಕೋತ್ತರ ಪದವಿ ಹಾಗೂ 3ರಿಂದ - 4 ವರ್ಷಗಳ ಪಿಎಚ್‌ಡಿವರೆಗೆ ಅಧ್ಯಯನ ನಡೆಸಬಹುದು.

ಪಠ್ಯಕ್ರಮ: ಈ ಕೋರ್ಸ್‌ನಲ್ಲಿ ಗ್ರಾಮೀಣ ಯೋಜನೆ ಮತ್ತು ಅಭಿವೃದ್ಧಿ, ಪ್ರಾಕೃತಿಕ ಸಂಪನ್ಮೂಲಗಳ ನಿರ್ವಹಣೆ ಮತ್ತು ಅಭಿವೃದ್ಧಿ, ಗ್ರಾಮೀಣ ಮಾರುಕಟ್ಟೆ ನಿರ್ವಹಣೆ, ಸಮುದಾಯ ಸವಲತ್ತು ಮತ್ತು ಸೇವೆ, ಸಾಮಾಜಿಕ ಭದ್ರತೆ, ಯೋಜನೆ ಮತ್ತು ಅನುಷ್ಠಾನ, ಗ್ರಾಮೀಣ ಶಿಕ್ಷಣ, ವಿದ್ಯುದೀಕರಣ, ಸಾಕ್ಷರತೆ, ನೈರ್ಮಲ್ಯದ ಕುರಿತು ವಿಷಯಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಲಾಗಿರುತ್ತದೆ

ಎಲ್ಲೆಲ್ಲಿ ಕೋರ್ಸ್?: ಭಾರತದ ಪ್ರತಿಷ್ಠಿತ ಮ್ಯಾನೇಜ್‌ಮೆಂಟ್ ಕಾಲೇಜುಗಳಿಂದ ಹಿಡಿದು ರಾಜ್ಯ ಸರ್ಕಾರಗಳ ವಿವಿಗಳು ನಡೆಸುವ ಕಾಲೇಜುಗಳಲ್ಲಿ ಗ್ರಾಮೀಣಾಭಿವೃದ್ಧಿ ಕೋರ್ಸ್‌ಗಳಿವೆ. ಅವುಗಳಲ್ಲಿ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ(ಕೆಎಸ್‌ಒಯು), ಬೆಂಗಳೂರು, ಆಂಧ್ರ, ಅಣ್ಣಾಮಲೈನಲ್ಲಿರುವ ಇಗ್ನೊ(ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ), ಐಐಎಂ ಲಖನೌ ಮತ್ತು ಅಹಮದಾಬಾದ್, ಇನ್‌ಸ್ಟಿಟ್ಯೂಟ್ ಆಫ್ ರೂರಲ್ ಮ್ಯಾನೇಜ್‌ಮೆಂಟ್, ಗುಜರಾತ್, ಕಳಿಂಗ ಸ್ಕೂಲ್ ಆಫ್ ರೂರಲ್ ಮ್ಯಾನೇಜ್‌ಮೆಂಟ್, ಪಟ್ನಾ, ಕ್ಸೇವಿಯರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಒಡಿಶಾ ಹಾಗೂ ಜಾರ್ಖಂಡ್, ಕಾನ್ಪುರದ ಚಂದ್ರಶೇಖರ್ ಆಜಾದ್ ಯುನಿವರ್ಸಿಟಿ ಆಫ್ ಅಗ್ರಿಕಲ್ಚರ್ ಅಂಡ್ ಟೆಕ್ನಾಲಜಿ, ಪುಣೆಯಲ್ಲಿ ಸಿಂಬಯೋಸಿಸ್ ಇನ್‌ಸ್ಟಿಟ್ಯೂಟ್ ಆಫ್ ಇಂಟರ್‌ನ್ಯಾಷನಲ್ ಬ್ಯುಸಿನೆಸ್, ಕೇರಳದ ಕೃಷಿ ವಿವಿ, ಜೈಪುರದ ಎನ್‌ಐಎಎಂ ಮುಖ್ಯವಾದವು.

ಕೋರ್ಸ್ ಪ್ರವೇಶ ಹೇಗೆ?: 2ನೇ ಪಿಯುಸಿಯಲ್ಲಿ ಶೇ 50 ರಷ್ಟು ಅಂಕಗಳಿಸಿದವರು ಡಿಪ್ಲೊಮಾ ಅಥವಾ ಪದವಿ ಅಧ್ಯಯನಕ್ಕೆ ಸೇರಬಹುದು. ಪದವಿಯಲ್ಲಿ ಶೇ 50ರಷ್ಟು ಅಂಕಗಳಿಸಿದವರು ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆಯ ಬಹುದು. ಆದರೆ ಯಾವುದೇ ಕೋರ್ಸ್ ಸೇರಲು ಪ್ರವೇಶ ಪರೀಕ್ಷೆಗಳನ್ನು ಎದುರಿಸಬೇಕು. ಪ್ರವೇಶ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳಿಸಿದವರ ವಿವಿಗಳಲ್ಲಿ ಅಧ್ಯಯನ ಮುಂದುವರೆಸಬಹುದು. ಕೆಲವು ಪರೀಕ್ಷೆಗಳು ಆನಲೈನ್‌ನಲ್ಲೂ ನಡೆಯುತ್ತವೆ. ಸ್ನಾತಕೋತ್ತರ ಪದವಿ ಅಧ್ಯಯನ ಸೇರ ಬಯಸುವವರಿಗೆ , CAT MAT, XAT, IRMA, NMIMS, SNAP, ICFAI, CMAT, MH-CET ಹಾಗೂ KMAT ನಂತಹ ಪ್ರವೇಶ ಪರೀಕ್ಷೆಗಳಿರುತ್ತವೆ.

ಕೋರ್ಸ್ ಕಾರ್ನರ್

ಯಾವ ಯಾವ ಕೆಲಸ?: ಅಧ್ಯಯನ ಮುಗಿಸಿದ ನಂತರ ರೂರಲ್ ಡೆವಲಪ್‌ಮೆಂಟ್ ಆಫೀಸರ್, ವೆಂಡರ್ ಡೆವಲಪ್‌ಮೆಂಟ್ ಮ್ಯಾನೇಜರ್, ಸೇಲ್ಸ್ ಆಫೀಸರ್, ನ್ಯಾಷನಲ್ ಸೇಲ್ಸ್ ಡೆವಲಪ್‌ಮೆಂಟ್ ಮ್ಯಾನೇಜರ್, ಬ್ಯುಸಿನೆಸ್ ಡೆವಲಪ್‌ಮೆಂಟ್ ಎಕ್ಸಿಕ್ಯೂಟಿವ್, ರಿಸರ್ಚ್ ಹೆಡ್, ರೂರಲ್ ಮ್ಯಾನೇಜರ್, ಸೀನಿಯರ್ ಪ್ರೋಗ್ರಾಂ ಆಫೀಸರ್, ಏರಿಯಾ ಎಕ್ಸಿಕ್ಯೂಟಿವ್ ಎಂಬ ಹುದ್ದೆಗಳು ಸಿಗುತ್ತವೆ. ಯುನಿಸೆಫ್, ಎನ್‌ಐಆರ್‌ಡಿ, ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸರ್ವ ಶಿಕ್ಷಣ ಅಭಿಯಾನ, ಗ್ರಾಮೀಣ ಬ್ಯಾಂಕ್‌ಗಳು ಮತ್ತು ಸರ್ಕಾರ ಹಮ್ಮಿಕೊಳ್ಳುವ ಸಮಾಜ ಕಲ್ಯಾಣ ಯೋಜನೆಗಳಲ್ಲೂ ಸಾಕಷ್ಟು ಕೆಲಸಗಳಿವೆ.

ಕೋರ್ಸ್ ಕುರಿತ ಹೆಚ್ಚಿನ ಮಾಹಿತಿಗೆ https://cdsaindia.org/certificate-rural-development, https://gramswaraj.nirdpr.in/course/index. ಈ ಲಿಂಕ್‌ಗಳ ಜೊತೆಗೆ, ಆಯಾ ಕಾಲೇಜುಗಳ ಜಾಲತಾಣ ನೋಡಬಹುದು.

ಗಣಿತದಲ್ಲಿ 'ಎಂಟೆಕ್' ಕಠಿಣವೇ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

1. ನಾನು ಗಣಿತದಲ್ಲಿ ಎಂಎಸ್‌ಸಿ ಮಾಡುತ್ತಿದ್ದೇನೆ. ನಂತರ ಗೇಟ್ ಎಕ್ಸಾಂ ತೆಗೆದುಕೊಳ್ಳಬೇಕು ಅಂದುಕೊಂಡಿದ್ದೇನೆ. ಪಿಎಚ್‌ಡಿ ಬದಲು ಎಂಟೆಕ್ ಮಾಡುವುದಾದರೆ, ಯಾವ ಯಾವ ವಿಷಯದಲ್ಲಿ ಮಾಡಬಹುದು ಎಂಬ ಗೊಂದಲವಿದೆ ಹಾಗೂ ಗಣಿತದಲ್ಲಿ ವ್ಯಾಸಂಗ ಮಾಡುತ್ತಿರುವ ಕಾರಣ ಎಂಟೆಕ್ ಕೋರ್ಸ್ ಕಠಿಣವಾಗುತ್ತದೆಯೇ? ಸಲಹೆ ನೀಡಿ.

ಹೆಸರು, ಊರು ತಿಳಿಸಿಲ್ಲ.

ಎಂಟೆಕ್ ಮಾಡುವುದಾದರೆ ಅಪ್ಲೈಡ್ ಮ್ಯಾಥಮ್ಯಾಟಿಕ್ಸ್ ಅಥವಾ ಕಂಪ್ಯೂಟರ್ ಸೈನ್ಸ್‌ನಲ್ಲಿ ಮಾಡಬಹುದು. ಪ್ರಮುಖವಾಗಿ, ನಿಮ್ಮ ಸಾಮರ್ಥ್ಯ, ಆಸಕ್ತಿಗೆ ಅನುಗುಣವಾಗಿ ವೃತ್ತಿ ಯೋಜನೆಯನ್ನು ಮಾಡಿ ಅದರಂತೆ ನಿರ್ಧಾರ ತೆಗೆದುಕೊಳ್ಳುವುದು ಸೂಕ್ತ. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v = oyUMPrEKPPU

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಅಶೋಕಾ ಯುನಿವರ್ಸಿಟಿ ಯಂಗ್ ಇಂಡಿಯಾ ಫೆಲೋಶಿಪ್ 2022-23

ವಿವರ: ಅಶೋಕಾ ಯುನಿವರ್ಸಿಟಿ ಯಂಗ್ ಇಂಡಿಯಾ ಫೆಲೋಶಿಪ್ 2022-23, ಸ್ನಾತಕ ಮತು ಸ್ನಾತಕೋತ್ತರ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಆಹ್ವಾನಿಸಿದೆ.

ಅರ್ಹತೆ: ಯಾವುದೇ ವಿಭಾಗದಲ್ಲಿ ಪದವಿಪೂರ್ವ ಅಥವಾ ಸ್ನಾತಕೋತ್ತರ ಪದವಿ ಓದುತ್ತಿರುವ 28 ವರ್ಷಕ್ಕಿಂತ ಕಡಿಮೆ ಇರುವವರು ಈ ವಿದ್ಯಾರ್ಥಿವೇತನಕ್ಕೆ ಅರ್ಹರು.

ಆರ್ಥಿಕ ನೆರವು: ಶೇ 100ರಷ್ಟು ಟ್ಯೂಶನ್ ಶುಲ್ಕ ಭರಿಸಲಾಗುವುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮಾರ್ಚ್ 15, 2022

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ

ಹೆಚ್ಚಿನ ಮಾಹಿತಿಗೆ: www.b4s.in/praja/YIF9

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

10 English Grammar

Parts of Speech

A sentence contains a number of words which are arranged in a proper order. Each word has certain syntactic function. The words which we use can be divided under eight categories called Parts of Speech.

1	Swami 's father sat gloomily gazing at the newspaper on his lap	Noun	Adverb	Preposition	Pronoun
2	Courage is everything, strength and age are not important	Noun	Pronoun	Conjunction	Verb
3	"Why don't you join the police when you are grown up?"	Pronoun	Verb	Conjunction	Adverb
4	They arrived at a small hospital where nurses helped take her.	Pronoun	Noun	Conjunction	Verb
5	" I am new to Mumbai, but I've noticed that people are afraid."	Pronoun	Preposition	Verb	Pronoun
6	"I did not sell the trees because I could not. They are not mine."	Verb	Conjunction	Adverb	Pronoun
7	Ambedkar had a great thirst for books when he was a student.	Article	Noun	Conjunction	Pronoun
8	He bought 32 boxes of books by curtailing his daily needs.	Verb	Pronoun	Adjective	Noun
9	Then he began to gasp for breath and had to be given oxygen.	Adverb	Verb	Conjunction	Noun
10	They had come with high hopes in the miracles of modern science.	Verb	Preposition	Adjective	Noun
11	**Shan't we** even sing to keep our spirits? Sh!	Adverb	Verb	Pronoun	Interjection
12	In the beginning, there may be some discipline but soon it bursts.	Noun	Adjective	Conjunction	Verb
13	A curb for my tongue-oh! A curb for my unbridled tongue.	Noun	Pronoun	Interjection	Adjective
14	Another bout of fever struck and Sathish was confined to bed.	Pronoun	Preposition	Noun	Verb
15	Sathish jumped down from his bed and took out his note book.	Verb	Preposition	Adverb	Adjective
16	Science is meant for the survival of mankind not for ruin.	Verb	Preposition	Article	Noun
17	Scientific research is an exciting venture into the great survival.	Adjective	Determiner	Noun	Preposition
18	Grandma liked whispered summer and frequently used sherry.	Verb	Adjective	Adjective	Adjective
19	The quality of mercy drops as the gentle rain from heaven.	Verb	Adverb	Adjective	Noun
20	The land is always patient and bears all that is done by people.	Adverb	Verb	Pronoun	Preposition

Exercise No - 1 Identify the Part of Speech for the underlined word.

ಎಸ್ಸೆಸ್ಸೆಲ್ಸಿ

1	Millions of people are toiling as the slaves without self reliance.				
2	The burglar cried, "Aiyo! Something has bitten me."				
3	**"Isn't God** upon the ocean, Just the same as on the land?"				
4	What are the blessings of the sight O tell your poor blind boy!				
5	"Tea cups circling round me like the planets round the sun."				
6	A man riding a bike got off and stopped right outside their gate.				
7	Anselmo sold only the land to Americans, but not the trees.				
8	Fate had ensured that Haneef would battle with hardships.				
9	The people who lived there suffered from hunger and cold.				
10	Systematic practice always makes you perfect in learning.				

Key to Exercise No -1 Identify the Part of Speech for the underlined word.

1	Noun	Verb	Preposition	Adjective	6	Verb	Adverb	Preposition	Pronoun
2	Article	Verb	Interjection	Pronoun	7	Verb	Adverb	Preposition	Conjunction
3	Preposition	Noun	Adverb	Conjunction	8	Noun	Conjunction	Verb	Noun
4	Pronoun	Noun	pronoun	Adjective	9	Noun	Pronoun	Preposition	Conjunction
5	Adjective	Verb	Pronoun	Preposition	10	Adjective	Pronoun	Preposition	Noun

Annappa Shetty MA,M.Ed, SRP in English,Hassan

ವಿದ್ಯುತ್ ಮಂಡಲ

ಮಾದರಿ ಪ್ರಶ್ನೋತ್ತರ

ಭೌತಶಾಸ್ತ್ರ

ಪಿಯುಸಿ

24) ಯಾವುದನ್ನು 'ವ್ಯಾಟ್‌ಲೆಸ್ ವಿದ್ಯುತ್' ಎಂದು ಕರೆಯುತ್ತಾರೆ?

ಉತ್ತರ: ಒಂದು ವಿದ್ಯುತ್ ಮಂಡಲವು ಪ್ರೇರಕ ಅಥವಾ ಧಾರಕವನ್ನು ಮಾತ್ರ ಒಳಗೊಂಡಾಗ ವೋಲ್ಟೇಜ್ ಮತ್ತು ವಿದ್ಯುತ್‌ನ ನಡುವಿನ ಪ್ರಾವಸ್ಥಾಂತರವು $\pi/2$. ಆಗಿರುತ್ತದೆ. ಆದುದರಿಂದ $\cos\varphi = 0$, ಇಲ್ಲಿ ವಿದ್ಯುತ್ ಸಾಮರ್ಥ್ಯ ವ್ಯಯವಾಗುವುದಿಲ್ಲ. ಆದರೆ ವಿದ್ಯುತ್ ಹರಿಯುತ್ತಿರುತ್ತದೆ. ಈ ವಿದ್ಯುತ್ತನ್ನು 'ವ್ಯಾಟ್‌ಲೆಸ್ ವಿದ್ಯುತ್' ಎಂದು ಕರೆಯುತ್ತಾರೆ.

25) ವಿಮಾನ ನಿಲ್ದಾಣದಲ್ಲಿ ಭದ್ರತಾ ತಪಾಸಣೆಗೆಂದು ಒಬ್ಬ ವ್ಯಕ್ತಿಯು ಲೋಹ ಶೋಧಕ ಬಾಗಿಲಿನ ಮೂಲಕ ಹಾದು ಹೋಗಬೇಕಾಗುತ್ತದೆ. ಅವಳು / ಅವನು ಏನಾದರೂ ಲೋಹದ ವಸ್ತುವನ್ನು ಇಟ್ಟುಕೊಂಡಿದ್ದರೆ ಲೋಹ ಶೋಧಕ ಶಬ್ದವನ್ನು ಹೊರಸೂಸುತ್ತದೆ. ಈ ಶೋಧಕ ಯಾವ ತತ್ವದ ಆಧಾರದ ಮೇಲೆ ಕೆಲಸ ಮಾಡುತ್ತದೆ?

ಉತ್ತರ: ಲೋಹಶೋಧಕಗಳು ಎ.ಸಿ. ಮಂಡಲದ ಅನುರಣನೆ ತತ್ವದ ಮೇಲೆ ಕೆಲಸ ಮಾಡುತ್ತದೆ. ನಾವು ಲೋಹ ಶೋಧಕದ ಮೂಲಕ ಹಾದು ಹೋದಾಗ ವಾಸ್ತವವಾಗಿ ಅನೇಕ ಸುರುಳಿಗಳಿರುವ ಕಾಯಿಲ್ ಮೂಲಕ ನಡೆದು ಹೋಗುತ್ತೇವೆ. ಈ ಕಾಯಿಲ್‌ನ್ನು ಧಾರಕಕ್ಕೆ ಜೋಡಿಸಿ ಶೃತಿ ಮಾಡಲಾಗಿರುವ ಮಂಡಲಕ್ಕೆ ಸೇರಿಸಿ ಅನುರಣನಾ ಸ್ಥಿತಿಯಲ್ಲಿ ಇಟ್ಟಿರುತ್ತಾರೆ. ಯಾವುದಾದರೂ ಲೋಹದೊಂದಿಗೆ ಆ ಸುರುಳಿಯಲ್ಲಿ ನಡೆದು ಹೋದಾಗ ಮಂಡಲದ ಪ್ರತಿಭಾದೆ ಬದಲಾಗುತ್ತದೆ. ಹಾಗಾಗಿ ವಿದ್ಯುತ್‌ನಲ್ಲೂ ಗಮನಾರ್ಹ ಬದಲಾವಣೆ ಆಗುತ್ತದೆ. ಈ ವಿದ್ಯುತ್‌ನಲ್ಲಾದ ಬದಲಾವಣೆಯನ್ನು ಕಂಡುಹಿಡಿದು ವಿದ್ಯುತ್ ಮಂಡಲ ಎಚ್ಚರಿಕೆಯ ಶಬ್ದವನ್ನು ಹೊರಸೂಸುತ್ತದೆ.

26) LC ಮಂಡಲ ನಿರ್ಬಂಧರಹಿತ ಆಂದೋಲನಗಳಲ್ಲಿ ಧಾರಕ ಮತ್ತು ಪ್ರೇರಕಗಳಲ್ಲಿ ಶೇಖರವಾದ ಶಕ್ತಿ ಕಾಲದೊಂದಿಗೆ ಸ್ಥಿರವಾಗಿರುತ್ತದೆ ಎಂದು ತೋರಿಸಿ.

ಉತ್ತರ : ಧಾರಕದ ಪ್ರಾರಂಭಿಕ ಆವೇಶ q0 ಆಗಿರಲಿ, ಆವೇಶಭರಿತ ಧಾರಕವನ್ನು L ಪ್ರೇರಕತೆ ಹೊಂದಿರುವ ಪ್ರೇರಕಕ್ಕೆ ಜೋಡಿಸಿದೆ ಎಂದಿಟ್ಟುಕೊಳ್ಳೋಣ.

$$\omega\left(=2\pi\nu=\frac{1}{\sqrt{LC}}\right)$$

ಆವೃತ್ತಿ ಹೊಂದಿದ ನಿರಂತರ ಆಂದೋಲನ ಹೊಂದುತ್ತದೆ.

ಯಾವುದೇ ಕ್ಷಣದಲ್ಲಿ q (t) = q0 cos t t ಆವೇಶ ಮತ್ತು ವಿದ್ಯುತ್ ಧಾರಕದಲ್ಲಿರುತ್ತದೆ. ಸಮಯ t, ನಲ್ಲಿ ಸಂಚಯಿತ ಧಾರಕದ ಶಕ್ತಿ

$$U_E=\frac{1}{2}CV^2=\frac{1}{2}\frac{q^2}{C}=\frac{q_0^2}{2C}\cos^2(\omega t)$$

$$U_M=\frac{1}{2}Li^2=\frac{1}{2}Lq_0^2\omega^2\sin^2(\omega t)$$

$$=\frac{q_0^2}{2C}\sin^2(\omega t)\quad\left(\because\omega=1/\sqrt{LC}\right)$$

ಇದರ ಒಟ್ಟು ಮೊತ್ತ

$$U_E+U_M=\frac{q_0^2}{2C}\left(\cos^2\omega t+\sin^2\omega t\right)$$

$$=\frac{q_0^2}{2C}$$

ಈ ಮೊತ್ತವು ಕಾಲದೊಂದಿಗೆ ಸ್ಥಿರವಾಗಿದೆ ಏಕೆಂದರೆ qo ಮತ್ತು C, ಕಾಲಾತೀತವಾಗಿದೆ. ಗಮನಿಸಬಹುದಾದುದು ಏನೆಂದರೆ ಈ ಶಕ್ತಿಯು ಧಾರಕದ ಪ್ರಾರಂಭಿಕ ಶಕ್ತಿಗೆ ಸಮವಾಗಿದೆ.

27) ಯಾವುದಕ್ಕೆ 'ಪರಿವರ್ತಕ' ಎನ್ನುತ್ತಾರೆ?

ಉತ್ತರ:- ಹಲವಾರು ಉದ್ದೇಶಗಳಿಗಾಗಿ ಪರ್ಯಾಯ ವಿದ್ಯುತ್ ವಿಭವವನ್ನು (ಪರಿವರ್ತನೆ) ಹೆಚ್ಚು ಅಥವಾ ಕಡಿಮೆ ಮಾಡಬೇಕಾಗುತ್ತದೆ. ಇದನ್ನು ಮಾಡುವ ಸಾಧನಕ್ಕೆ 'ಪರಿವರ್ತಕ' ಎನ್ನುತ್ತಾರೆ. ಈ ಸಾಧನ ವಿದ್ಯುತ್ಕಾಂತೀಯ ಪ್ರೇರಣೆಯ ತತ್ವದ ಮೇಲೆ ಕಾರ್ಯ ನಿರ್ವಹಿಸುತ್ತದೆ.

28) ಪ್ರತಿ ಬಿಂಬ (Image), ನೈಜಬಿಂಬ (Real Image), ಮಿಥ್ಯ ಬಿಂಬ (Virtual Image) ಬಗ್ಗೆ ಬರೆಯಿರಿ

ಉತ್ತರ:- ಒಂದು ಬಿಂದುವಿನಿಂದ ಹೊರಸೂಸುವ ಕಿರಣಗಳು ಪ್ರತಿಫಲನಗೊಂಡು ಮತ್ತು / ಅಥವಾ ವಕ್ರೀಭವನಗೊಂಡ ನಂತರ ಒಂದು ಬಿಂದುವಿನಲ್ಲಿ ಸಂಧಿಸಿದರೆ, ಆ ಬಿಂದುವನ್ನು ಮೊದಲನೇ ಬಿಂದುವಿನ ಪ್ರತಿ ಬಿಂಬ (Image) ಎನ್ನುತ್ತಾರೆ. ಕಿರಣಗಳು ಒಂದೇ ಬಿಂದುವಿನಲ್ಲಿ, ಸಂಧಿಸಿದರೆ ಅದನ್ನು ನೈಜಬಿಂಬ (Real Image) ಎನ್ನುತ್ತಾರೆ. ಕಿರಣಗಳು ಒಂದು ಬಿಂದುವಿನಲ್ಲಿ ಸಂಧಿಸದೆ ಕಿರಣಗಳನ್ನು ಹಿಂದಕ್ಕೆ ವೃದ್ಧಿಸಿದಾಗ ಒಂದು ಬಿಂದುವಿನಿಂದ ಹೊರಬಂದಂತೆ ಕಂಡರೆ ಆ ಬಿಂಬವನ್ನು ಮಿಥ್ಯ ಬಿಂಬ (Virtual Image) ಎನ್ನುತ್ತಾರೆ.

29) ವಕ್ರೀಭವನದ ಕುರಿತಾದ ಸ್ನೆಲ್ ಅವರಿಂದ ರೂಪಿತ ನಿಯಮಗಳನ್ನು ತಿಳಿಸಿ

ಉತ್ತರ:- ಸ್ನೆಲ್ ಎಂಬ ವಿಜ್ಞಾನಿಯು ಪ್ರಯೋಗಗಳ ಮೂಲಕ ವಕ್ರೀಭವನದ ಈ ಕೆಳಗಿನ ನಿಯಮಗಳನ್ನು ಪ್ರತಿಪಾದಿಸಿದನು.

(i) ಆಪಾತ ಕಿರಣ, ಆಪಾತ ಬಿಂದುವಿನಿಂದ ಸೀಮಾತಲಕ್ಕೆ ಎಳೆದ ಲಂಬರೇಖೆ ಮತ್ತು ವಕ್ರೀಭವಿತ ಕಿರಣ ಇವೆಲ್ಲ ಒಂದೇ ಸಮತಲದಲ್ಲಿರುತ್ತವೆ.

(ii) ಬೆಳಕಿನ ಆಪಾತ ಕೋನದ ಸೈನ್ (Sine) ಹಾಗೂ ವಕ್ರೀಭವನ ಕೋನದ ಸೈನ್‌ಗಳ ಅನುಪಾತವು ಸ್ಥಿರಾಂಕವಾಗಿರುತ್ತದೆ.

30) ಪ್ರಭಾಮಾಪನದ (Photometry) ಮುಖ್ಯ ಭೌತ ಪರಿಮಾಣಗಳನ್ನು ತಿಳಿಸಿ


ಉತ್ತರ:- ಮಾನವನ ಕಣ್ಣು ಗ್ರಹಿಸುವ ಬೆಳಕನ್ನು ಅಳೆಯುವ ವಿಭಾಗವನ್ನು ಪ್ರಭಾಮಾಪನ (Photometry) ಎನ್ನುತ್ತೇವೆ. ಪ್ರಭಾಮಾಪನವು ಶರೀರಿಕ ಪರಿಣಾಮದ ಅಳತೆಯಾಗಿರುತ್ತದೆ. ಪ್ರಭಾಮಾಪನದ ಮುಖ್ಯ ಭೌತ ಪರಿಮಾಣಗಳೆಂದರೆ (1) ಆಕರದ ದೀಪ್ತಿ ತೀವ್ರತೆ (Luminous Intensity) (2) ದೀಪ್ತಿ ಹೊನಲು (Luminus Flux) ಅಥವಾ ಆಕರದಿಂದ ಹರಿವ ಬೆಳಕಿನ ವೇಗ (3) ಮೇಲ್ಮೈಯ ದೀಪನ (Iluminance).

{ದೀಪ್ತಿ ತೀವ್ರತೆಯ ಮೂಲಮಾನ ಕ್ಯಾಂಡೆಲಾ ಆಗಿದೆ.}

31) ಆಕಾಶವು ನಮಗೆ ನೀಲಿಯಾಗಿ ಗೋಚರಿಸುತ್ತದೆ. ಏಕೆ?

ಉತ್ತರ:- ಭೂಮಿಯ ವಾತಾವರಣದಲ್ಲಿ ಸೂರ್ಯನ ಬೆಳಕು ಚಲಿಸುವಾಗ ಅದು ವಾತಾವರಣದಲ್ಲಿರುವ ಕಣಗಳಿಂದ ಚದುರಲ್ಪಡುತ್ತದೆ. ಕಡಿಮೆ ತರಂಗಾಂತರವಿರುವ ಬೆಳಕು ಹೆಚ್ಚು ತರಂಗ ಉದ್ದವಿರುವ ಬೆಳಕಿಗಿಂತ ಹೆಚ್ಚು ಚದುರುತ್ತದೆ. (ಚದುರುವಿಕೆಯ ಪ್ರಮಾಣವು ತರಂಗಾಂತರದ ನಾಲ್ಕನೇ ಘಾತಕ್ಕೆ ವಿಲೋಮ ಅನುಪಾತದಲ್ಲಿ ಇರುತ್ತದೆ. ಇದನ್ನು ರ್‍ಯಾಲಿಯ ಚದುರುವಿಕೆ ಎನ್ನುತ್ತಾರೆ.) ಆದ್ದರಿಂದ, ಆಕಾಶದಲ್ಲಿ ನೀಲಿ ಬಣ್ಣವು ಅಧಿಕವಾಗಿದೆ. ನೀಲಿ ಬಣ್ಣದ ತರಂಗಾಂತರವು ಕೆಂಪು ಬಣ್ಣದ ತರಂಗಾಂತರಕ್ಕಿಂತ ಕಡಿಮೆಯಾಗಿರುವುದರಿಂದ ನೀಲಿ ಬಣ್ಣವು ಹೆಚ್ಚು ಚದುರುತ್ತದೆ. ವಾಸ್ತವವಾಗಿ ನೇರಳೆ ಬಣ್ಣವು ನೀಲಿ ಬಣ್ಣಕ್ಕಿಂತ ಅಧಿಕ ಚದುರುತ್ತದೆ. ನೇರಳೆ ಬಣ್ಣದ ತರಂಗಾಂತರವು ನೀಲಿ ಬಣ್ಣಕ್ಕಿಂತ ಕಡಿಮೆ. ಆದರೆ ನಮ್ಮ ಕಣ್ಣಿನ ಗ್ರಹಿಕೆ ನೀಲಿ ಬಣ್ಣಕ್ಕೆ ನೇರಳೆ ಬಣ್ಣಕ್ಕಿಂತ ಅಧಿಕವಾಗಿರುವುದರಿಂದ ಆಕಾಶವು ನಮಗೆ ನೀಲಿಯಾಗಿ ಗೋಚರಿಸುತ್ತದೆ.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು



❦ ಸುಭಾಷಿತ ❦
ನಿಜವಾದ ವಿದ್ಯೆಯು ಮನುಷ್ಯನಿಗೆ ಆಲೋಚಿಸುವುದನ್ನು ಕಲಿಸುತ್ತದೆ.
–ಹಾ.ಮಾ.ನಾಯಕ

ಶಾಸಕ– ಸಚಿವರ ವೇತನ ಹೆಚ್ಚಳ ಅನುಚಿತ, ಅಸೂಕ್ಷ್ಮ ನಡೆ

ಇಡೀ ವಿಶ್ವವನ್ನು ಹೈರಾಣ ಮಾಡಿದ ಕೋವಿಡ್ ಸಾಂಕ್ರಾಮಿಕವು ನಾಡಿನ ಇಂಚಿಂಚೂ ವ್ಯಾಪಿಸಿತು. ಕೃಷಿಕರು, ಉದ್ಯೋಗಸ್ಥರು, ಬೀದಿಬದಿ ವ್ಯಾಪಾರಿಗಳು, ಹೋಟೆಲ್ ಉದ್ಯಮಿಗಳು-ಕಾರ್ಮಿಕರು, ಸಾರಿಗೆ ವ್ಯವಸ್ಥೆ ಕಲ್ಪಿಸುವವರು ಹೀಗೆ ಸಕಲರನ್ನೂ ಸದೆಬಡಿಯಿತು. ಸಿಡಿಲಿನಂತೆ ಎರಗಿದ ಕೋವಿಡ್ ಸಾಂಕ್ರಾಮಿಕ ಹಾಗೂ ಅದರ ನಿರ್ವಹಣೆಯಲ್ಲಿ ಆದ ವೈಫಲ್ಯದ ಕಾರಣಕ್ಕೆ ಒಂದು ತಲೆಮಾರು ಸಂಕಷ್ಟಕ್ಕೆ ಸಿಲುಕಿತು. ಇಂತಹ ಕಷ್ಟಕಾಲದಲ್ಲಿ ಜನಸಮುದಾಯದ ಸಮಸ್ಯೆಗಳ ನಿವಾರಣೆಗೆ ಮಿಡಿಯಬೇಕಾದುದು ಜನಪ್ರತಿನಿಧಿಗಳ ಕರ್ತವ್ಯ. ಅದನ್ನು ಮರೆತು ಸಚಿವರು, ಶಾಸಕರು ತಮ್ಮ ವೇತನ-ಭತ್ಯೆಗಳನ್ನು ಶೇ 50ರಿಂದ 60ರವರೆಗೆ ಹೆಚ್ಚಿಸಿಕೊಂಡಿರುವುದು ಜನಮೆಚ್ಚುವ ಕ್ರಮವಲ್ಲ. ಸರ್ಕಾರಕ್ಕೆ ಆರ್ಥಿಕ ಸಂಕಷ್ಟ ಇಲ್ಲದೇ ಇದ್ದಾಗ, ಮಳೆ-ಬೆಳೆ ಚೆನ್ನಾಗಿ ಆಗಿ ಜನರು ನೆಮ್ಮದಿಯಿಂದ ಜೀವನ ಸಾಗಿಸುತ್ತಿದ್ದಾಗ ವೇತನ ಹೆಚ್ಚಿಸಿಕೊಂಡಿದ್ದರೆ ಯಾರ ಆಕ್ಷೇಪವೂ ಇರುತ್ತಿರಲಿಲ್ಲ. ಕೋವಿಡ್ ತಂದಿತ್ತ ಸಂಕಷ್ಟದಿಂದಾಗಿ ಲಕ್ಷಾಂತರ ಮಂದಿ ಉದ್ಯೋಗ ಕಳೆದುಕೊಂಡಿದ್ದಾರೆ. ವೇತನಗಳಲ್ಲಿ ಭಾರಿ ಪ್ರಮಾಣದಲ್ಲಿ ಕಡಿತವಾಗಿದೆ. ಬಂಡವಾಳ ಹಾಕಿ ಹೋಟೆಲ್ ಆರಂಭಿಸಿದವರು ಸಾಲದ ಹೊರೆಹೊತ್ತು ನಲುಗುತ್ತಿದ್ದಾರೆ. ಸಿನಿಮಾ, ಹೋಟೆಲ್ ಕಾರ್ಮಿಕರು, ಕಲಾಪ್ರದರ್ಶನವನ್ನೇ ಹೊಟ್ಟೆಪಾಡಿಗೆ ನೆಚ್ಚಿಕೊಂಡಿದ್ದ ಕಲಾವಿದರು, ಬಾಡಿಗೆ ವಾಹನಗಳನ್ನು ನಡೆಸಿ ಜೀವನ ಸಾಗಿಸುತ್ತಿದ್ದವರು ಆಘಾತದಿಂದ ಇನ್ನೂ ಹೊರಬಂದಿಲ್ಲ. ಅವರೆಲ್ಲರಿಗೆ ಊರುಗೋಲಾಗಿ ನಿಂತು, ಬದುಕನ್ನು ಹಳಿಗೆ ತರಲು ಅವರಿಗೆ ದಾರಿ ತೋರಿಸಬೇಕಾದ ಹೊಣೆ ಜನಪ್ರತಿನಿಧಿಗಳು ಹಾಗೂ ಸರ್ಕಾರದ್ದಾಗಿದೆ. ಇಂತಹ ಪರಿಸ್ಥಿತಿಯಲ್ಲಿ, ಅವನ್ನು ಕಡೆಗಣಿಸಿ ತಮ್ಮ ವೇತನವನ್ನು ಹೆಚ್ಚಿಸಿಕೊಳ್ಳಲು ಉತ್ಸುಕತೆ ತೋರಿದ ಜನಪ್ರತಿನಿಧಿಗಳ ನಡೆ ಪ್ರಜಾತಂತ್ರ ವ್ಯವಸ್ಥೆಯೊಳಗೆ ಉತ್ತಮ ಮಾದರಿಯಲ್ಲ.



ಜನ ಕಷ್ಟದಲ್ಲಿರುವಾಗ ಶಾಸಕ–ಸಚಿವರ ಸಂಬಳ, ಭತ್ಯೆ ಹೆಚ್ಚಳಕ್ಕೆ ಉತ್ಸುಕತೆ ತೋರಿರುವುದು ಸರಿಯಲ್ಲ

ಅಲ್ಪಪ್ರಮಾಣದ ಗೌರವಧನಕ್ಕಾಗಿ ದಿನವಿಡೀ ದುಡಿಯುವ, ಸರ್ಕಾರದ ಎಲ್ಲ ಕಾರ್ಯಕ್ರಮಗಳನ್ನೂ ಜನರಿಗೆ ತಲುಪಿಸುವ ಅಂಗನವಾಡಿ, ಆಶಾ ಕಾರ್ಯಕರ್ತೆಯರು ತಮ್ಮ ವೇತನ ಹೆಚ್ಚಳಕ್ಕೆ ಒತ್ತಾಯಿಸುತ್ತಲೇ ಇದ್ದಾರೆ. ಅತಿಥಿ ಉಪನ್ಯಾಸಕರು, ಪೊಲೀಸರು ತಮ್ಮ ವೇತನ ಹೆಚ್ಚಳದ ಬೇಡಿಕೆ ಮುಂದಿಡುತ್ತಲೇ ಇದ್ದಾರೆ. ಆರೋಗ್ಯ ಕ್ಷೇತ್ರದ ಸಿಬ್ಬಂದಿ, ಪೌರಕಾರ್ಮಿಕರು, ಗುತ್ತಿಗೆ ನೌಕರರು ಕಡಿಮೆ ಪಗಾರದಲ್ಲೇ ಜೀವನವನ್ನು ಸಾಗಿಸುವ ಇಕ್ಕಟ್ಟಿಗೆ ಸಿಲುಕಿದ್ದಾರೆ. ರೈತ ಸಂಕುಲವಂತೂ ವೈಜ್ಞಾನಿಕ ಬೆಲೆ ಸಿಗದೇ ಪತರಗುಟ್ಟಿ ಹೋಗಿದೆ. ಇವರೆಲ್ಲರೂ ಪರಿತಾಪದಲ್ಲೇ ಬೇಯುತ್ತಿರುವಾಗ ತರಾತುರಿಯಿಂದ ವೇತನ-ಸೌಲಭ್ಯವನ್ನು ಹೆಚ್ಚಿಸಿಕೊಂಡಿರುವ ಕ್ರಮ ಸರಿಯಲ್ಲ. ಅದರಲ್ಲೂ ವಿಧಾನಮಂಡಲದಲ್ಲಿ ಕಾಂಗ್ರೆಸ್ ಶಾಸಕರು ಧರಣಿ ನಿರತರಾಗಿದ್ದಾಗ, ಯಾವುದೇ ಚರ್ಚೆಯೂ ನಡೆಯದಿರುವಾಗ ತರಾತುರಿಯಲ್ಲಿ ವೇತನ ಹೆಚ್ಚಳದ ಮಸೂದೆಗೆ ಅನುಮೋದನೆ ಪಡೆಯಲಾಗಿದೆ. ಮುಖ್ಯಮಂತ್ರಿ ವೇತನವನ್ನು ₹75 ಸಾವಿರಕ್ಕೆ, ಸಂಪುಟ ದರ್ಜೆ ಸಚಿವರ ವೇತನವನ್ನು ₹60 ಸಾವಿರಕ್ಕೆ, ರಾಜ್ಯ ಸಚಿವರ ವೇತನವನ್ನು ₹50 ಸಾವಿರಕ್ಕೆ ಏರಿಸಲಾಗಿದೆ. ಮನೆಬಾಡಿಗೆ ಭತ್ಯೆಯನ್ನು ₹1.2 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಶಾಸಕರ ವೇತನವನ್ನು ₹40 ಸಾವಿರಕ್ಕೆ ಹೆಚ್ಚಿಸಲಾಗಿದೆ. ಆತಿಥ್ಯ ಭತ್ಯೆಯನ್ನು ವರ್ಷಕ್ಕೆ ₹3 ಲಕ್ಷದಿಂದ ₹4.5 ಲಕ್ಷಕ್ಕೆ ಏರಿಸಲಾಗಿದೆ. ಒಟ್ಟಾರೆ ಈ ಹೆಚ್ಚಳದಿಂದಾಗಿ ಬೊಕ್ಕಸಕ್ಕೆ ವಾರ್ಷಿಕ ₹92.40 ಕೋಟಿ ಹೆಚ್ಚುವರಿ ಹೊರೆ ಬೀಳಲಿದೆ. ಆರ್ಥಿಕ ಪರಿಸ್ಥಿತಿ ಸುಧಾರಿಸಿದ ಮೇಲೆ ಪರಿಷ್ಕರಣೆಗೆ ಒತ್ತು ಕೊಟ್ಟಿದ್ದರೆ ಅದಕ್ಕೊಂದು ಸಮರ್ಥನೆಯಾದರೂ ಇರುತ್ತಿತ್ತು. 2015ರಿಂದ ವೇತನ ಹೆಚ್ಚಳವಾಗಿರಲಿಲ್ಲ; ಶಾಸಕರಿಗೂ ಕಷ್ಟಗಳಿವೆ ಎಂದು ವೇತನ ಹೆಚ್ಚಳದ ಕ್ರಮವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮರ್ಥಿಸಿಕೊಂಡಿದ್ದಾರೆ. ಸಚಿವರು, ಶಾಸಕರ ದಿನಚರಿ, ಕಾರ್ಯವೈಖರಿ ಕಂಡವರು ಹೇಳುವಂತೆ ಶೇ 70ಕ್ಕಿಂತ ಹೆಚ್ಚಿನ ಜನಪ್ರತಿನಿಧಿಗಳಿಗೆ ವೇತನ-ಭತ್ಯೆ ಎಂಬುದು ಪುಡಿಗಾಸಿಗೆ ಸಮಾನ. ಸರ್ಕಾರ ನೀಡುವ ವೇತನವೆಂಬುದು ವಾರದ ಖರ್ಚಿಗೂ ಸಾಲುವುದಿಲ್ಲ ಎಂದು ಶಾಸಕರೇ ಹೇಳುವುದುಂಟು. ವಾಸ್ತವ ಇದಾಗಿರುವಾಗ ವೇತನ ಹೆಚ್ಚಿಸಿಕೊಳ್ಳುವ ತುರ್ತಾದರೂ ಏನಿತ್ತು? ನೌಕರರು, ಉಪನ್ಯಾಸಕರು, ಪೊಲೀಸರು ಹೀಗೆ ಯಾವುದೇ ಸಮುದಾಯ ವೇತನ ಹೆಚ್ಚಳದ ಬೇಡಿಕೆ ಇಟ್ಟಾಗ ಬೆಲೆ ಏರಿಕೆ, ದೈನಂದಿನ ಖರ್ಚಿನಲ್ಲಿ ಹೆಚ್ಚಳ, ನೆರೆರಾಜ್ಯಗಳ ವೇತನ ವ್ಯವಸ್ಥೆಯನ್ನು ಅಧ್ಯಯನ ಮಾಡಲು ವೇತನ ಸಮಿತಿಯನ್ನೋ ಆಯೋಗವನ್ನೋ ರಚಿಸಿ ವರದಿ ಪಡೆಯಲಾಗುತ್ತದೆ. ಅದರ ಶಿಫಾರಸಿನಲ್ಲಿ ಅರ್ಧದಷ್ಟನ್ನು ಮಾತ್ರ ಅನುಷ್ಠಾನಕ್ಕೆ ತರುವ ಔದಾರ್ಯವನ್ನು ಸರ್ಕಾರ ತೋರುತ್ತದೆ. ಜನಸೇವೆಯೇ ತಮ್ಮ ಕಾಯಕ ಎಂದು ಬಿಂಬಿಸಿಕೊಳ್ಳುವ ಜನಪ್ರತಿನಿಧಿಗಳು ತಮ್ಮ ವೇತನ ಹೆಚ್ಚಿಸಿಕೊಳ್ಳುವಾಗ, ಅದರ ಸಮರ್ಥನೆಗೆ ವೈಜ್ಞಾನಿಕ ಅಧ್ಯಯನದ ಮಾನದಂಡಗಳನ್ನಾದರೂ ಅನುಸರಿಸಬೇಕಿತ್ತು. ಅದನ್ನೂ ಮಾಡದೆ ಅಧಿಕಾರ ಇದೆ ಎಂಬ ಕಾರಣಕ್ಕೆ ವೇತನ ಹೆಚ್ಚಿಸಿಕೊಂಡಿರುವುದು ಯೋಗ್ಯ ನಡೆಯಂತೂ ಅಲ್ಲವೇ ಅಲ್ಲ.

ದಿನದ ಟ್ವೀಟ್


ಯುದ್ಧ ಕಲಿಸುವ ಪಾಠ



ಭೌಗೋಳಿಕತೆ ಎಷ್ಟು ಮುಖ್ಯ ಎಂಬುದನ್ನು ಉಕ್ರೇನ್ ಮತ್ತು ರಷ್ಯಾ ಸಂಘರ್ಷ ಎತ್ತಿ ತೋರಿಸುತ್ತದೆ. ಭಾರತವು ಪರಮಾಣುಶಕ್ತ ರಾಷ್ಟ್ರಗಳಾದ ಚೀನಾವನ್ನು ಒಂದು ಕಡೆ, ಪಾಕಿಸ್ತಾನವನ್ನು ಮತ್ತೊಂದು ಕಡೆ ಹೊಂದಿದೆ, ರಷ್ಯಾದ ಮಿಲಿಟರಿ ಉಪಕರಣಗಳ ಮೇಲೆ ನಾವು ಅವಲಂಬಿತರಾಗಿದ್ದೇವೆ, ಅಮೆರಿಕ ಅತ್ಯಂತ ದೂರದಲ್ಲಿದೆ. ಹೀಗಾಗಿ, ನಮಗೆ ಸವಾಲುಗಳಿವೆ. ಖಚಿತವಾಗಿಯೂ ಈ ಯುದ್ಧವು ಒಂದು ವಿಷಯವನ್ನು ಕಲಿಸುತ್ತದೆ: ಅದೆಂದರೆ, ಆತ್ಮನಿರ್ಭರ ಆಗಿರಿ!

ಉದಯ್ ಕೋಟಕ್, ಸಿಇಒ, ಕೋಟಕ್ ಮಹೀಂದ್ರಾ ಬ್ಯಾಂಕ್

ಕಿಡಿನುಡಿ



ಜಗತ್ತಿನೊಂದಿಗೆ 'ಸಂಧಾನ' ನಡೆಸುವ ಪಾಕಿಸ್ತಾನಿ ಮಾದರಿಯನ್ನು ಇಮ್ರಾನ್ ಅವರಿಂದ ಪುಟಿನ್ ಕಲಿತಂತೆ ತೋರುತ್ತದೆ. ಇದು ತನ್ನ ತಲೆಗೆ ತಾನೇ ಬಂದೂಕು ಗುರಿ ಇಟ್ಟುಕೊಳ್ಳುವ ಮಾದರಿ. ನನಗೆ ಏನು ಬೇಕೋ ಅದನ್ನು ನೀವು ಕೊಡಿ, ಇಲ್ಲವಾದರೆ ನಾನು ಬಂದೂಕಿನ ನಳಿಕೆಯನ್ನು ಎಳೆದುಕೊಳ್ಳುತ್ತೇನೆ ಎಂಬಂತೆ.

(ರಷ್ಯಾದ ಪರಮಾಣು ಘಟಕಗಳಿಗೆ ಸನ್ನದ್ಧವಾಗಿರಲು ಸೂಚಿಸಿರುವ ಅಲ್ಲಿನ ಅಧ್ಯಕ್ಷರ ನಡೆಗೆ ಪ್ರತಿಕ್ರಿಯೆ)

ಶೇಖರ್ ಗುಪ್ತಾ, ಪತ್ರಕರ್ತ

25 ವರ್ಷಗಳ ಹಿಂದೆ

ಶುಕ್ರವಾರ, 28-2-1997

• ಪ್ರಧಾನಿ ಕುರಿತ ಪುಸ್ತಕ ತಂದ ಕೋಲಾಹಲ

ನವದೆಹಲಿ, ಫೆ. 27– ಪ್ರಧಾನಿ ಎಚ್.ಡಿ. ದೇವೇಗೌಡ ಅವರ ಬಗೆಗೆ ಡಾ. ವೆಂಕಟಗಿರಿಗೌಡ ಅವರು ಬರೆದಿರುವ ಕೃತಿಯ ಪ್ರಸ್ತಾಪ ಇಂದು ಮತ್ತೆ ಲೋಕಸಭೆಯಲ್ಲಿ ಪ್ರತಿಧ್ವನಿಸಿದ್ದರಿಂದ ಕರ್ನಾಟಕದ ಬಿಜೆಪಿ ಮತ್ತು ಜನತಾದಳದ ಸದಸ್ಯರ ನಡುವೆ ನಡೆದ ಮಾತಿನ ಚಕಮಕಿ ಸುಮಾರು ಇಪ್ಪತ್ತು ನಿಮಿಷ ಕಾಲ ಗದ್ದಲಕ್ಕೆ ಎಡೆಕೊಟ್ಟಿತು.

ರಾಷ್ಟ್ರಪತಿ ಅವರ ಭಾಷಣಕ್ಕೆ ವಂದನೆ ಸೂಚಿಸುವ ನಿರ್ಣಯದ ಮೇಲೆ ಮಾತು ಆರಂಭಿಸಿದ ಬಿಜೆಪಿ ಸದಸ್ಯ ಅನಂತ ಕುಮಾರ್ ಅವರ ಪೂರ್ಣ ಭಾಷಣವೆಲ್ಲ ಪ್ರಧಾನಿ ಗೌಡರ ರಾಜಕೀಯ ಮತ್ತು ಜನತಾದಳವನ್ನು ಲೇವಡಿ ಮಾಡುವತ್ತ ತಿರುಗಿದ್ದರಿಂದ, ಅವರ ಭಾಷಣಕ್ಕೆ ಜನತಾದಳದ ಸದಸ್ಯರಿಂದ ಹೆಜ್ಜೆ ಹೆಜ್ಜೆಗೂ ಅಡಚಣೆ ಮತ್ತು ಕ್ರಿಯಾಲೋಪ ಪ್ರಸ್ತಾಪವಾಯಿತು.

• ಎಲ್‌ಪಿಜಿ, ದೂರವಾಣಿ ಎಂಪಿ ಕೋಟಾ ರದ್ದು: ರಾಜ್ಯಸಭೆ ಆಕ್ಷೇಪ

ನವದೆಹಲಿ, ಫೆ. 27 (ಯುಎನ್ಐ, ಪಿಟಿಐ)– ಅಡುಗೆ ಅನಿಲ (ಎಲ್‌ಪಿಜಿ) ಹಾಗೂ ದೂರವಾಣಿ ಸಂಪರ್ಕ ನೀಡುವ ಸಂಸತ್ ಸದಸ್ಯರ ವಿವೇಚನಾ ಕೋಟಾವನ್ನು ರದ್ದು ಪಡಿಸುವ ಲೋಕಸಭೆಯ ಸ್ಪೀಕರ್ ಅವರ 'ಏಕಪಕ್ಷೀಯ ನಿರ್ಧಾರ'ಕ್ಕೆ ರಾಜ್ಯಸಭೆಯಲ್ಲಿ ಇಂದು ತೀವ್ರ ಆಕ್ಷೇಪ ವ್ಯಕ್ತವಾಯಿತು.

50 ವರ್ಷಗಳ ಹಿಂದೆ

ಸೋಮವಾರ, 28-2-1972

• ನೆಹರೂ ಮನೆ ಬದಲಿಸದೇ ಇದ್ದಿದ್ದರೆ?

ನವದೆಹಲಿ, ಫೆ. 27– ಜವಾಹರಲಾಲ ನೆಹರೂ ಅವರು ಯಾರ್ಕ್ ರಸ್ತೆಯ ತಮ್ಮ ನಿವಾಸದಿಂದ ತೀನ್‌ಮೂರ್ತಿ ಮಾರ್ಗ ನಿವಾಸಕ್ಕೆ ಮನೆ ಬದಲಾಯಿಸದೇ ಇದ್ದಿದ್ದರೆ 1943–50ರ ಅವಧಿಯಲ್ಲಿ ನೆಹರೂ ಮತ್ತು ವಲ್ಲಭಭಾಯಿ ಪಟೇಲರ ನಡುವೆ ಭಿನ್ನಾಭಿಪ್ರಾಯ ತಲೆದೋರುತ್ತಲೇ ಇರಲಿಲ್ಲ (ನೆಹರೂ ಅವರ ಯಾರ್ಕ್ ರಸ್ತೆ ನಿವಾಸ ಔರಂಗಜೇಬ್ ರಸ್ತೆಯಲ್ಲಿದ್ದ ಸರ್ದಾರ್ ಪಟೇಲರ ಮನೆಗೆ ಎದುರಾಗಿತ್ತು).

ಸರ್ದಾರ್ ವಲ್ಲಭಭಾಯಿ ಪಟೇಲರ ಪುತ್ರಿ ಮಣಿಬೆನ್ ಪಟೇಲ್ ಈ ವಿಷಯವನ್ನು ತಿಳಿಸಿದ್ದಾರೆ. ಅಹ್ಮದಾಬಾದಿನ ನವಜೀವನ ಟ್ರಸ್ಟ್ ಪ್ರಕಟಿಸುತ್ತಿರುವ, ಸರ್ದಾರ್ ಪಟೇಲ್ ಪತ್ರ ವ್ಯವಹಾರದ ಮೊದಲ ಹತ್ತು ಸಂಪುಟಗಳಲ್ಲಿ ಮಣಿಬೆನ್ ತಮ್ಮ ತಂದೆಯ ಬಗ್ಗೆ ಟಿಪ್ಪಣಿಯೊಂದರಲ್ಲಿ ಹೀಗೆ ಹೇಳಿದ್ದಾರೆ.

ನೆಹರೂ ಮತ್ತು ಪಟೇಲ್ ಪರಸ್ಪರ ಎದುರು ಮನೆಗಳಲ್ಲಿ ವಾಸಿಸುತ್ತಿದ್ದಾಗ ದಿನವೂ ಭೇಟಿ ಮಾಡುತ್ತಿದ್ದರು, ಕೆಲವೊಮ್ಮೆ ಊಟದ ಹೊತ್ತಿನಲ್ಲಿ ಭೇಟಿಯಾಗುತ್ತಿದ್ದರು. ಸಂಜೆ ಅಥವಾ ರಾತ್ರಿ ಒಬ್ಬರ ಮನೆಗೆ ಮತ್ತೊಬ್ಬರು ಹೋಗಿ ಬರುತ್ತಿದ್ದರು. ಈ ಭೇಟಿಗಳು ಪರಸ್ಪರ ಭಿನ್ನಾಭಿಪ್ರಾಯಗಳನ್ನು ನಿವಾರಿಸುತ್ತಿದ್ದವು. ಆದರೆ ನೆಹರೂ ಅವರು ಮೌಂಟ್ ಬೇಟನ್ ಅವರ ಸಲಹೆ ಮೇರೆಗೆ ಮನೆ ಬದಲಾಯಿಸಿದರು.

ಕನ್ನಡದ ಹಿತ್ತಲಲ್ಲಿ ಅರಳಿರುವ ವಿಶ್ವದರ್ಜೆಯ ಸಿನಿಮಾ ಸೌಗಂಧಿಕಾ

ಪೆದ್ರೊ! 'ತಿಥಿ' ನಂತರದ ಹೊಸ 'ಹುಟ್ಟು'



ಪಡಸಾಲೆ

ರಘುನಾಥ ಚ.ಹ.


ಬೂಸಾನ್ ಸಿನಿಮೋತ್ಸವ, ಬಿಎಫ್‌ಐ ಲಂಡನ್ ಫೆಸ್ಟಿವಲ್ ಸೇರಿದಂತೆ ಹಲವು ಪ್ರತಿಷ್ಠಿತ ವೇದಿಕೆಗಳಲ್ಲಿ ಪ್ರದರ್ಶನ ಕಂಡಿರುವ 'ಪೆದ್ರೊ' ನಿಸ್ಸಂದೇಹವಾಗಿ 'ತಿಥಿ' ಚಿತ್ರದ ನಂತರ ಕನ್ನಡದಲ್ಲಿ ರೂಪುಗೊಂಡಿರುವ ವಿಶ್ವದರ್ಜೆಯ ಸಿನಿಮಾ.

'ಪೆದ್ರೊ' ವಿಶೇಷ ಅಚ್ಚರಿ ಹುಟ್ಟಿಸುವುದು ಮೂರು ಕಾರಣಗಳಿಗಾಗಿ. ಮೊದಲ ಅಚ್ಚರಿ, ಸಿನಿಮಾದ ವ್ಯಾಕರಣ; ಬಿಂಬ, ಸಂಗೀತ, ಶಬ್ದಗಳೆಲ್ಲ ಅಭಿನ್ನವಾಗಿ ಮೈದಳೆದಿರುವುದು. ಎರಡನೆಯದು, ನಿರೂಪಣೆಯ ಸೊಬಗು. ಪದ್ಯದ ಧ್ವನಿಶಕ್ತಿಯಲ್ಲಿ ನಿರೂಪಣೆಗೊಂಡಿರುವ ಕಥೆಯಲ್ಲಿ ಪ್ರಜ್ಞಾಪೂರ್ವಕವಾಗಿ ಉಳಿಸಿರುವ ಖಾಲಿ ಜಾಗಗಳು ಸಿನಿಮಾದ ಸಾಧ್ಯತೆಯನ್ನು ಹೆಚ್ಚಿಸಿರುವುದರಿಂದಾಗಿ, ನೋಡುಗನಲ್ಲಿ ಸಿನಿಮಾ ಬೆಳೆಯುತ್ತಲೇ ಹೋಗುತ್ತದೆ. ನೋಡುವ ಕ್ಷಣಕ್ಕೆ ಒಗಟಿನಂತೆ ಕಾಣಿಸುವ ಕೆಲವು ದೃಶ್ಯಗಳು, ಸಿನಿಮಾದ ಒಟ್ಟಂದದಲ್ಲಿ ಹೊಸ ಅರ್ಥಗಳನ್ನು ಬಿಟ್ಟುಕೊಡುತ್ತವೆ. ಯಾವುದೋ ಒಂದು ಸಂಗತಿ ನೋಡುಗನಿಗೆ ಮುಖ್ಯವೆಂದು ತೋರುವ ಸಂದರ್ಭದಲ್ಲೇ, ಆ ವಿಷಯವನ್ನು ಲಂಬಿಸದೆ ಹೊಸ ಆವರಣವೊಂದಕ್ಕೆ ನಡೆದುಬಿಡಲು ನಿರ್ದೇಶಕನಿಗೆ ಅಪಾರ ಆತ್ಮವಿಶ್ವಾಸ ಬೇಕು. ಆ ಆತ್ಮವಿಶ್ವಾಸವೇ ಸಿನಿಮಾದ ಮೂರನೇ ಅಚ್ಚರಿ. ಟೈಟಲ್ ಕಾರ್ಡ್‌ನ ಬೆನ್ನಿಗೇ ಆರಂಭವಾಗುವ ಮಳೆಯ ಚಿತ್ರಿಕೆಗಳು ಹಾಗೂ ಶಬ್ದವಷ್ಟೇ ಸಾಕು– ನಟೇಶ್ ಹೆಗಡೆ ಅವರ ಸಿನಿಮಾ ವ್ಯಾಕರಣದ ಪರಿಣತಿಯನ್ನು ದೃಢೀಕರಿಸಲು. ಕಣ್ಣುಗಳ ತುಂಬ ಹೊಳಪು ಹಾಗೂ ಆರ್ದ್ರತೆ ತುಂಬಿಕೊಂಡಿರುವ, ಚೊಚ್ಚಿಲ ಸಿನಿಮಾ ಸಂಭ್ರಮದಲ್ಲಿರುವ ಈ ನಿರ್ದೇಶಕನ ಪ್ರಾಯ ಇಪ್ಪತ್ತಾರು ವರ್ಷಗಳಷ್ಟೇ ಎನ್ನುವುದೂ ಅಚ್ಚರಿಯ ಸಂಗತಿಯೇ.

ಪೆದ್ರೊ ಕಥಾನಾಯಕನ ಹೆಸರು. ಕ್ರಿಶ್ಚಿಯನ್ ಕುಟುಂಬದ ಪೆದ್ರೊನ ಹೆಸರನ್ನು ಪೆದ್ದ ಎಂದು ಓದಿಕೊಂಡರೂ ವ್ಯತ್ಯಾಸವೇನೂ ಆಗುವುದಿಲ್ಲ. ಊರಿನ ಪಾಲಿಗವನು ಅನಪೇಕ್ಷಿತ ಭಾನಗಡಿಗಳನ್ನು ಸೃಷ್ಟಿಸುವ ಹುಂಬ. ಕಂಬಗಳನ್ನೇರಿ ವಿದ್ಯುತ್ ಸರಬರಾಜಿಗಿರುವ ಅಡೆತಡೆಗಳನ್ನು ಸರಿಪಡಿಸುವುದು ಅವನ ಕಸುಬು. ಇಂಥ ಪೆದ್ರೊನನ್ನು ಕೇಂದ್ರವಾಗುಳ್ಳ ಸಿನಿಮಾದಲ್ಲಿ ಮುಖ್ಯವಾಗಿ ನಾಲ್ಕು ಎಳೆಗಳನ್ನು ಗುರ್ತಿಸಬಹುದು. ಒಂದು, ಪೆದ್ರೊನ ಕುಟುಂಬಕ್ಕೆ ಸಂಬಂಧಿಸಿದ್ದು. ಪೆದ್ರೊನ ತಮ್ಮ ಬಸ್ತ್ಯಾಂವನ ಷಂಡತನವನ್ನು ಮುಚ್ಚಿಟ್ಟು ಅವನಿಗೆ ಮದುವೆ ಮಾಡಲಾಗಿದೆ. ಗಂಡನಿಂದ ಉಂಟಾದ ಕೊರತೆಯನ್ನು ಅವನ ಅಣ್ಣನಿಂದ ಜೂಲಿ ತುಂಬಿಕೊಂಡಿದ್ದಾಳೆ. ಅವಳಿಗೊಬ್ಬ ಮಗನೂ ಇದ್ದಾನೆ. ಆ ಮಗು ತನ್ನದೆನ್ನುವುದು ಪೆದ್ರೊವಿನ ನಂಬಿಕೆ. ಅಣ್ಣ ಮತ್ತು ಹೆಂಡತಿಯ ಚಕ್ಕಂದದಿಂದ ಉಂಟಾದ ತನ್ನ ಸಂಕಟವನ್ನು ಕಂಠಪೂರ್ತಿ ಕುಡಿದಾಗ ಅವನು ಕಾರಿಕೊಳ್ಳುತ್ತಾನೆ. ಮತ್ತೊಂದು ಎಳೆಯಲ್ಲಿ, ಎಲೆಕ್ಟ್ರಿಷಿಯನ್ ಪೆದ್ರೊ, ಹೆಗಡೆಯವರ ಒತ್ತಾಯದ ಮೇರೆಗೆ ಕೋವಿ ಹಿಡಿದು ಅವರ ತೋಟದ ಕಾವಲಿಗೆ ನಿಂತಿದ್ದಾನೆ. ಹೀಗೆ, ತೋಟ ಕಾಯುವ ಸಂದರ್ಭದಲ್ಲಿ ತನ್ನ ನಾಯಿಯನ್ನು ಕೊಂದ ಹಂದಿಯ ಮೇಲೆ ಸೇಡು ತೀರಿಸಿಕೊಳ್ಳಲು ಪ್ರಯತ್ನಿಸಿ, ಅವನು ಹಾರಿಸಿದ ಗುಂಡು ಆಕಳೊಂದರ ಸಾವಿಗೆ ಕಾರಣವಾಗುತ್ತದೆ. ಮೂರನೆಯ ಕೇಂದ್ರ, ಪೆದ್ರೊನೊಂದಿಗೆ ಸಂಬಂಧ ಹೊಂದಿರುವ ಹೆಣ್ಣಿಗೆ ಹೆಗಡೆ ಅವರೊಂದಿಗೂ ಸಲಿಗೆಯಿದೆ. ಬಸ್ತ್ಯಾಂವನ ಷಂಡತನವನ್ನು ತಿಳಿದೂ ಹೆಗಡೆಯವರು ಅವನಿಗೆ ಮದುವೆ ಮಾಡಿಸಿದ್ದಾರೆ, ಅವರೇ ಫಲಾನುಭವಿಯಾಗಿದ್ದಾರೆ. ಈ ಮೂರೂ ಸಂಗತಿಗಳು ತಳಕು ಹಾಕಿಕೊಂಡು ಪೆದ್ರೊ ವಿರುದ್ಧ ಒಟ್ಟಾಗುವ ಊರು ಅವನನ್ನು ಏಕಾಂಗಿಯಾಗಿಸುವುದು ನಾಲ್ಕನೇ ಎಳೆ.

ಗ್ರಾಮಭಾರತದ ವಿದ್ಯಮಾನಗಳಿಗೆ ಹಿಡಿದಿರುವ ಕನ್ನಡಿಯ ರೂಪದಲ್ಲಿ 'ಪೆದ್ರೊ' ಸಿನಿಮಾವನ್ನು ನೋಡಬಹುದು. ಊರಿನ ಎಲ್ಲರ ಕೆಲಸಗಳಿಗೆ ಒದಗಿಬಂದರೂ, ಕ್ರಿಶ್ಚಿಯನ್ ಎನ್ನುವ ಕಾರಣಕ್ಕಾಗಿ ಪೆದ್ರೊ ಊರಿನವರ ಕಣ್ಣಿಗೆ 'ನಮ್ಮವನಲ್ಲ.' ಆಕಳಿನ ಸಾವಿಗೆ ಆಕಸ್ಮಿಕವಾಗಿ ಕಾರಣವಾಗುವ ಮೂಲಕ ಈ ಅನ್ಯತೆ ಮತ್ತಷ್ಟು ಗಾಢವಾಗಿ, ಧರ್ಮಪ್ರಜ್ಞೆ ಜಾಗೃತಗೊಳ್ಳುತ್ತದೆ. ತನ್ನ ವಿರುದ್ಧ ಊರನ್ನು ಎತ್ತಿಕಟ್ಟುವ ಹೋಟೆಲ್ ಮಾಲೀಕನ ಉಂಗುರ ಲಪಟಾಯಿಸುವ ಪೆದ್ರೊನಿಗೆ ಕಳ್ಳನ ಪಟ್ಟವೂ ದೊರೆಯುತ್ತದೆ. ನಗರಕ್ಕೆ ಹೋಗಿ ಉದ್ಧಾರವಾಗಬೇಕೆಂದು ಬಯಸುವ ಅವನು, ನೆಚ್ಚಿದ ಹೆಣ್ಣು ತನ್ನೊಂದಿಗೆ ಬರಲು ನಿರಾಕರಿಸಿದಾಗ ಹತಾಶನಾಗುತ್ತಾನೆ. ಆ ಹತಾಶೆಯಲ್ಲೇ ಅವಳಿಗೂ ಹೆಗಡೆಯವರಿಗೂ ಸಂಬಂಧವಿದೆ ಎನ್ನುವ ಮಾತು ಆಡುವ ಮೂಲಕ ತನ್ನ ಗೋರಿಯನ್ನು ತಾನೇ ತೋಡಿಕೊಳ್ಳುತ್ತಾನೆ. ಪೆದ್ರೊ ಊರಿನ ಪಾಲಿಗಷ್ಟೇ ಅನ್ಯನಾಗುವುದಿಲ್ಲ, ಮನೆಯವರಿಂದಲೂ ತಿರಸ್ಕಾರಕ್ಕೆ ಗುರಿಯಾಗುತ್ತಾನೆ. ಊರು ಹೇರಿದ ಅಘೋಷಿತ ಬಹಿಷ್ಕಾರವನ್ನು ಸೂಚಿಸುವಂತೆ ಕೂದಲು ಕತ್ತರಿಸಲು ಕ್ಷೌರಿಕ ನಿರಾಕರಿಸಿದಾಗ ಕ್ರುದ್ಧನಾಗುವ ಪೆದ್ರೊ ಅವನ ಮೇಲೆ ಹಲ್ಲೆ ನಡೆಸುತ್ತಾನೆ. ಆ ಘಟನೆ ಪೆದ್ರೊನ ಶವಪೆಟ್ಟಿಗೆಗೆ ಹೊಡೆದ ಇನ್ನೊಂದು ಮೊಳೆ.

ಪೆದ್ರೊನ ಕಥನದ ಮೂಲಕ ನಿರ್ದೇಶಕರು ಗ್ರಾಮಭಾರತದಲ್ಲಿ ಕೋಮುವಿಷ ಜ್ವರದಂತೆ ಏರುತ್ತಿರುವುದನ್ನು ಸೂಚಿಸುತ್ತಿದ್ದಾರೆ. ಇಡೀ ಊರು ವಿರೋಧಿಸಿದರೂ ಪೆದ್ರೊನ ಬಗ್ಗೆ ಸುಭಗನಂತೆ ಕಾಣಿಸುವ ಹೆಗಡೆ ಸಹಾನುಭೂತಿ ತೋರಿಸುವುದಕ್ಕೆ ಅವರು ಹೊಂದಿರುವ ಕಳ್ಳಸಂಬಂಧವೇ ಕಾರಣವಿದ್ದಂತಿದೆ. ಕೊನೆಗೆ ಪೆದ್ರೊನ ಅಂತ್ಯಕ್ಕೆ ರೂಪುಗೊಳ್ಳುವ ಪಿತೂರಿಯಲ್ಲಿ ಕೂಡ ಅವರ ನೆರಳಿದೆ. ಧರ್ಮಪ್ರಜ್ಞೆಯೊಂದಿಗೆ ಕಾಮ ಲೋಭಗಳ ಜಗತ್ತೂ ತಳಕು ಹಾಕಿಕೊಂಡಿರುವುದನ್ನು ಹೆಗಡೆಯವರ ಪಾತ್ರದ ಹಿನ್ನೆಲೆಯಲ್ಲಿ ಗುರ್ತಿಸಬಹುದು. ಹೀಗೆ ಕೂಡಿಸಿಕೊಳ್ಳಬಹುದಾದ ಕಥೆಯ ಹಲವು ಸಾಧ್ಯತೆಗಳನ್ನು ನಟೇಶ್ ನೇರವಾಗಿ ಹೇಳುವುದಿಲ್ಲ. ಅವರು ಎಳೆಗಳನ್ನು ಕಾಣಿಸುವ ಕೆಲಸವನ್ನಷ್ಟೇ ಮಾಡಿ, ಕೂಡಿಸಿಕೊಳ್ಳುವ ಕೆಲಸವನ್ನು ಪ್ರೇಕ್ಷಕರಿಗೇ ಬಿಟ್ಟಿದ್ದಾರೆ. ಗೋಹತ್ಯೆಯ ಸುತ್ತ ಕಥೆ ಬೆಳೆಸುವ ಹಾಗೂ ಅಲ್ಪಸಂಖ್ಯಾತರು ಅನುಭವಿಸುತ್ತಿರುವ ಅಸುರಕ್ಷತೆಯ ತಳಮಳಗಳನ್ನು ಚಿತ್ರಿಸುವ ಸಾಧ್ಯತೆಯಿದ್ದರೂ, ಅದನ್ನು ಸೂಚ್ಯವಾಗಿಯಷ್ಟೇ ತೋರಿಸಿ ಮುಂದುವರೆಯುವ ಸಂಯಮ ಈ ಕಾಲಕ್ಕೆ ಅಪರೂಪದ್ದು ಹಾಗೂ ಅಗತ್ಯವಾದುದು. ನಾಯಿಯ ಸಾವಿರಬಹುದು, ಹಸುವಿನ ಅಂತ್ಯ ಇರಬಹುದು– ಘಟನೆ ಸೂಚ್ಯವಾಗಿಯಷ್ಟೇ ಕಾಣಿಸುತ್ತದೆ. ಹಸುವನ್ನೇ ತೋರಿಸದೆ, ಅದರ ಕಾಲುಗಳನ್ನು ಹಗ್ಗದಿಂದ ಕಟ್ಟುವ ದೃಶ್ಯವಷ್ಟೇ ಸಿನಿಮಾದಲ್ಲಿದೆ. ಕ್ಷೌರಿಕನ ಅಂಗಡಿಯಲ್ಲಿ ತಲೆಗೂದಲು ಕತ್ತರಿಸುವ ದೃಶ್ಯವಿದ್ದರೂ ಕ್ಷೌರಿಕನ ಮುಖವೇ ಕಾಣಿಸುವುದಿಲ್ಲ. ಅವನ ಮೇಲೆ ನಡೆಯುವ ಹಲ್ಲೆ ಕಾಣಿಸುವುದೂ ಕನ್ನಡಿಯ ಮೂಲಕವಷ್ಟೇ. ಸಿನಿಮಾದಲ್ಲಿನ ಕೆಲವು ಪಾತ್ರಗಳ ಮುಖಗಳು ಅಸ್ಪಷ್ಟವಾಗಿಯೇ ಉಳಿಯುತ್ತವೆ. ಕ್ಲೋಸಪ್ ದೃಶ್ಯಗಳೂ ತೀರಾ ಕಡಿಮೆ ಎನ್ನುವಷ್ಟಿವೆ. ಯಾವುದನ್ನೂ ರೂಕ್ಷವಾಗಿ ಹೇಳದೆ ರೂಪಕಗಳ ಮೂಲಕ ಹೇಳಲು ಪ್ರಯತ್ನಿಸಿರುವುದು ಹಾಗೂ ಪರಿಚಿತ ಬಿಂಬಗಳಿಗೆ ಪ್ರತಿಯಾಗಿ ಭಿನ್ನ ದೃಶ್ಯಗಳನ್ನು ಕಟ್ಟುವ ಚಿತ್ರತಂಡದ ಪ್ರಯತ್ನ ಕನ್ನಡದ ಮಟ್ಟಿಗೆ ಹೊಸತಾಗಿದೆ, ಯಶಸ್ವಿಯೂ ಆಗಿದೆ. ರಾಜ್ ಶೆಟ್ಟಿ ಪೋಷಿಸಿರುವ ಹೋಟೆಲ್ ಮಾಲೀಕ ದತ್ತುವಿನ ಪಾತ್ರ ಹೊರತುಪಡಿಸಿದರೆ, ಉಳಿದೆಲ್ಲ ಪಾತ್ರಗಳೂ ಕನ್ನಡ ಚಿತ್ರಜಗತ್ತಿಗೆ ಜನಪ್ರಿಯ ಸೂತ್ರಗಳಿಂದ ಹೊರತಾದವುಗಳೇ ಆಗಿವೆ. ಸಿನಿಮಾದ ಈ ಭಿನ್ನ ವ್ಯಾಕರಣಕ್ಕೆ ಪೂನಾ ಫಿಲ್ಮ್ ಇನ್‌ಸ್ಟಿಟ್ಯೂಟ್ ಗರಡಿಯಿಂದ ಹೊರಬಂದಿರುವ ವಿಕಾಸ್ ಅರಸ್ ಅವರ ಛಾಯಾಗ್ರಹಣ, ಶ್ರೇಯಾಂಕ್ ನಂಜಪ್ಪ ಅವರ ಧ್ವನಿ ವಿನ್ಯಾಸದ ಕೊಡುಗೆಯೂ ಇದೆ; ಪರೇಶ್ ಕಮ್ದಾರ್ ಹಾಗೂ ನಟೇಶ ಅವರ ಸಂಕಲನದ ಕಸುಬುದಾರಿಕೆಯೂ ಪೆದ್ರೊ ಪಾತ್ರದ ಅಸಹಾಯಕತೆಯನ್ನು ಕಣ್ಣುಗಳಲ್ಲೇ ತೇಲಿಸುವ ಗೋಪಾಲ್ ಹೆಗಡೆ ಅವರ ನಟನೆಯೂ ಮುಖ್ಯವಾದುದು.



ಯಾವ ಕನ್ನಡ ಚಿತ್ರದೊಂದಿಗೂ ಸುಲಭಕ್ಕೆ ಹೋಲಿಕೆಗೆ ಸಿಗುವುದಿಲ್ಲ ಎನ್ನುವುದು 'ಪೆದ್ರೊ'ದ ಅಗ್ಗಳಿಕೆ. ಕನ್ನಡ ಸಿನಿಮಾಗಳಲ್ಲಿನ ಕನ್ನಡತನ ಶಾಬ್ದಿಕವಾಗಿಯಷ್ಟೇ ಉಳಿದಿರುವ ಸಂದರ್ಭದಲ್ಲಿ, ಮಾತು ಮತ್ತು ನೋಟ ಎರಡರಲ್ಲೂ ಕನ್ನಡತನ ಸಾಧ್ಯವಾಗಿರುವುದು ಸಿನಿಮಾದ ಮತ್ತೊಂದು ವಿಶೇಷ. ಕನ್ನಡದ ಹಿತ್ತಲಿನ ಈ ಪ್ರಯೋಗ, ಸಿನಿಮಾಭಾಷೆಯ ಪರಿಣಾಮಕಾರಿ ಬಳಕೆಯಿಂದಾಗಿ 'ಜಾಗತಿಕ ಸಿನಿಮಾ'ದ ಗುಣಮಟ್ಟ ಪಡೆದುಕೊಂಡಿದೆ.

ನಮಗೆ ಅಭ್ಯಾಸವಾಗಿರುವ ಸಿನಿಮಾ ವೀಕ್ಷಣೆಯ ಮನಃಸ್ಥಿತಿಗಿಂತಲೂ ಭಿನ್ನವಾದ ಸಿದ್ಧತೆಯನ್ನು 'ಪೆದ್ರೊ' ಅಪೇಕ್ಷಿಸುತ್ತದೆ. ಅಂದಹಾಗೆ, ಮಾರ್ಚ್ 3ರಿಂದ 10ರವರೆಗೆ ನಡೆಯಲಿರುವ 'ಬೆಂಗಳೂರು ಅಂತರ ರಾಷ್ಟ್ರೀಯ ಸಿನಿಮೋತ್ಸವ'ಕ್ಕೆ 'ಪೆದ್ರೊ' ಆಯ್ಕೆಯಾಗಿಲ್ಲ.

ಚುರುಮುರಿ



ನಾವು ಅಲಿಪ್ತರು

• ಸುಮಂಗಲಾ

'ಈಗಾದ್ರೂ ಒಪ್ಪತೀಯಿಲ್ಲೋ ನಮ್ ಮೋದಿಮಾಮಾನೆ ವಿಶ್ವನಾಯಕ, ವಿಶ್ವಗುರು ಅಂತ' ಬೆಕ್ಕಣ್ಣ ಕುಣಿಯುತ್ತ ಕೇಳಿತು.

'ವಿಶ್ವನಾಯಕ ಆಗೂಹಂಗೆ ಅವ್ರೇನ್ ಮಾಡಿದ್ರಲೇ ಈಗ' ನನಗೆ ತಲೆಬುಡ ತಿಳಿಯಲಿಲ್ಲ.

'ಉಕ್ರೇನ್ ಮ್ಯಾಲ ಯುದ್ಧ ನಿಲ್ಲಿಸಂತ ರಷ್ಯಾಕೆ ಹೇಳ್ರೀ ಅಂತ ಎಲ್ಲಾ ದೇಶದವರು ಮೋದಿಜಿಯವರಿಗೆ ಬೇಡಿಕೊಳ್ಳಾಕ ಹತ್ಯಾರೆ, ಎದಕ್ಕಂದ್ರ ಅವ್ರು ವರ್ಲ್ಡ್ ಲೀಡರ್ ಅದಾರ ಅಂತ ಸಂಸದೆ ಹೇಮಕ್ಕ ಹೇಳ್ಯಾಳ' ಬೆಕ್ಕಣ್ಣ ಎದೆಯುಬ್ಬಿಸಿತು.

'ಅಲ್ಲಲೇ... ನೆಹರೂ ಕಾಲದಿಂದ ನಮ್ಮದು ಅಲಿಪ್ತ ರಾಷ್ಟ್ರ, ನಾವು ಯಾರ ವಿರುದ್ಧನೂ ಇಲ್ಲ, ಪರನೂ ಇಲ್ಲ. ಮತ್ತ ನಿಮ್ಮ ಮೋದಿಮಾಮಾ ಹೇಳಿದ ತಕ್ಷಣ ಪುಟಿನ್ ಯುದ್ಧ ನಿಲ್ಲಿಸಿ ಬಿಡತಾನೇನು? ಯುದ್ಧ ನಿಲ್ಲಿಸೂದು ಅಂದ್ರ ಟ್ರಾಫಿಕ್ ಸಿಗ್ನಲ್ಲಿನಾಗೆ ನಿಂತು ಕೈಮಾಡಿ, ವಾಹನ ನಿಲ್ಲಿಸಿದಂಗೆ ಅಂತ ಮಾಡೀಯೇನ್' ಎಂದು ನಕ್ಕೆ.

'ಹಿಂದೆಲ್ಲ ರಾಜರು ಸ್ವತಃ ರಣರಂಗಕ್ಕೆ ಹೋಗಿ ಯುದ್ಧ ಮಾಡತಿದ್ರಂತ, ಈಗಿನ ಪ್ರಧಾನಿಗಳು, ಅಧ್ಯಕ್ಷರುಗಳು ಬಟನ್ ಒತ್ತಿದಂಗೆ ಯುದ್ಧ ಶುರು ಮಾಡಿ, ಸೈನಿಕರನ್ನು ಸಾಯೋದಕ್ಕೆ ಕಳಿಸೋ ಬದಲಿಗೆ ಅವರೇ ನೇರಾನೇರ ಯುದ್ಧ ಮಾಡಬೇಕಿತ್ತು ನೋಡು' ಎಂದಿತು.

'ಅವರೆದಕ್ಕ ರಣರಂಗಕ್ಕೆ ನೇರ ಇಳಿತಾರಲೇ...ಸಾಯೋರು ಮಾತ್ರ ಎರಡೂ ಕಡೆ ಸೈನಿಕರು, ಅಮಾಯಕ ಜನರು...' ವ್ಯಥೆಯಿಂದ ಹೇಳಿದೆ.

'ಹಿಂಗ ಯುದ್ಧಗಿದ್ದ ಆದ್ರ ಎಣ್ಣೆ, ಪೆಟ್ರೋಲು ಎಲ್ಲ ದುಬಾರಿ ಆಗತೈತಿ. ಅದಕ್ಕ ನಮ್ಮ ಕರ್ನಾಟಕದ ಶಾಸಕರ ಸಂಬಳ ಹೆಚ್ಚಿಗಿ ಮಾಡಿದ್ದು ವಳ್ಳೇದಾತು ನೋಡು, ಪಾಪ... ಎಷ್ಟ್ ಖರ್ಚು ಇರತೈತಿ ಅವರಿಗಿ' ಎಂದು ಲೊಚಗುಟ್ಟಿತು.

'ಅಲ್ಲಲೇ ನಮ್ಮ 224 ಶಾಸಕರಲ್ಲಿ 215 ಮಂದಿ ಕೋಟ್ಯಧಿಪತಿಗಳಂತೆ, ಅವರಿಗ್ಯಾವ ಬೆಲೆಯೇರಿಕೆ ಬಿಸಿ ತಟ್ಟತೈತಿ?' ರೇಗಿದೆ.

'ಇದೊಂದೇ ನಿರ್ಣಯಕ್ಕೆ ಪಕ್ಷಭೇದವಿಲ್ಲದೆ ಎಲ್ಲ ಶಾಸಕರೂ ಒಕ್ಕೊರಲಿನಿಂದ ಒಪ್ಪಿದಾರೆ ನೋಡು' ಎಂದು ಬೆಕ್ಕಣ್ಣ ಕೊಂಕುನಗೆ ಬೀರಿತು.

ಸಂಗತ

ವಿಜ್ಞಾನ ಸಾಕ್ಷರತೆ: ಸರ್ವರ ಅಗತ್ಯ

ವೈಜ್ಞಾನಿಕ ಪ್ರಜ್ಞೆ ಮೂಡಿಸದ ಶಿಕ್ಷಣ ಅಪೂರ್ಣವೇ ಸರಿ

• ಯೋಗಾನಂದ

ಎಲ್ಲಿಯವರೆಗೆ ವಿದ್ಯಾಲಯಗಳ ತರಗತಿಗಳು ಸಂವಾದದ ವೇದಿಕೆಗಳಾಗದೆ 'ಪ್ರತಿಧ್ವನಿಗಳ ಕೊಠಡಿಗಳು' ಆಗಿರುತ್ತವೋ ಅಲ್ಲಿತನಕ ಶಿಕ್ಷಣ ಕ್ರಮ ನಿಂತ ನೀರು. ವಿಜ್ಞಾನಕ್ಕಷ್ಟೇ ಅಲ್ಲ, ಎಲ್ಲ ವಿಷಯಗಳ ತರಗತಿಗಳಿಗೂ ಈ ಮಾತು ಅನ್ವಯಿಸುತ್ತದೆ. ಏಕೆಂದರೆ ಸಮರ್ಥ ಕಲಿಕೆಗೆ ಚರ್ಚೆ, ಪ್ರಶ್ನೋತ್ತರಗಳದ್ದೇ ದರ್ಬಾರು. ಗಣಿತವೆಂಬ ಅಂಬಾರಿಯಲ್ಲಿ ವಿಶಿಷ್ಟ ಜ್ಞಾನವಾದ ವಿಜ್ಞಾನದ ಪಯಣ. ವಿಜ್ಞಾನವು ವಾಸ್ತವಿಕತೆಯ ಕಾವ್ಯ.

ಅದು ಪ್ರೌಢಶಾಲೆಯ ಭೌತವಿಜ್ಞಾನ ತರಗತಿ. 'ಬೆಳಕು ಸೆಕೆಂಡಿಗೆ ಸುಮಾರು 3 ಲಕ್ಷ ಕಿ.ಮೀ. ವೇಗದಲ್ಲಿ ಧಾವಿಸುತ್ತದೆ' ಎಂದು ಮಾಸ್ತರರು ವಿವರಿಸುತ್ತಿದ್ದರು. ಒಬ್ಬ ಬಾಲಕ ಥಟ್ಟನೆ 'ಸಾರ್, ಹಾಗಾದರೆ ಕತ್ತಲೆಯ ವೇಗವೆಷ್ಟು?' ಎಂದು ಕೇಳಿದ! ಕ್ಷಣ ಯೋಚಿಸಿದ ಗುರುಗಳಿಗೆ ಪ್ರಶ್ನೆ ಭರ್ಜರಿಯೇ ಅನ್ನಿಸಿರಬೇಕು. 'ಬೆಳಕು ಹರಿದಂತೆ ಕತ್ತಲೆಯೂ ಅಷ್ಟೇ ವೇಗದಲ್ಲಿ ಕಂಬಿ ಕೀಳುತ್ತದೆ ಮಾರಾಯ' ಎಂದು ಉತ್ತರಿಸಿದ್ದರು. ಬೋಧಕರು ಮಕ್ಕಳ ಕುತೂಹಲವನ್ನು ತಡೆಯದೆ ಉತ್ತೇಜಿಸಬೇಕು. ನಿಸರ್ಗದ ಅಚ್ಚರಿಗಳನ್ನು ಅವರೊಂದಿಗೆ ಹಂಚಿಕೊಂಡು 'ಪುಟ್ಟ ವಿಜ್ಞಾನಿ'ಗಳ ಉಗಮಕ್ಕೆ ಅಡಿಪಾಯ ಹಾಕಬೇಕು.

ಎಡಿಸನ್ ಮೊದಲ ಬಾರಿಗೆ 'ಮೇರಿ ಹ್ಯಾಡ್ ಎ ಲಿಟಲ್ ಲ್ಯಾಂಬ್' ಧ್ವನಿಮುದ್ರಿತ ಹಾಡನ್ನು ತನ್ನ ಆಪ್ತರಿಗೆ ಕೇಳಿಸಿದಾಗ, ಅವರೆಲ್ಲ 'ಪ್ರೇತ' ಎಂದು ಓಡಿದ್ದರಂತೆ! ವೈಜ್ಞಾನಿಕ ವಿದ್ಯಮಾನಗಳನ್ನು ಕಿಂಚಿತ್ತಾದರೂ ಪರಿಚಯಿಸಿಕೊಳ್ಳದಿದ್ದರೆ ಅವು ಪವಾಡ, ಅಮಾನುಷ ಎನ್ನಿಸುವುದು ಸಹಜ. ವಿಜ್ಞಾನದ ಮೂಲಭೂತ ಅಂಶಗಳನ್ನು ತಿಳಿಯದ ಹೊರತು ಸಾಕ್ಷರತೆ ಅಪೂರ್ಣ.

ಸರ್ವರೂ ವಿಜ್ಞಾನ ಸಾಕ್ಷರರಾಗಬೇಕು, ವಿಜ್ಞಾನಕ್ಕೆ ತೆರೆದುಕೊಳ್ಳಬೇಕು. ಮೊಬೈಲ್, ಬೈಕ್, ಜೆರಾಕ್ಸ್ ವಗೈರೆ ಕಾರ್ಯನಿರ್ವಹಿಸುವ ಹಿಂದಿನ ತತ್ವಗಳ ಸ್ಥೂಲ ಅರಿವಿರಬಹುದಲ್ಲ? ಅಡುಗೆ ಕೋಣೆಯು ಮನೆಯ ಅದ್ಭುತ ಪ್ರಯೋಗಾಲಯ. ಹಾಲು ಹೆಪ್ಪಾಗುವ, ಕುಕ್ಕರಿನಲ್ಲಿ ಕಾಳು ಬೇಯುವ ಅಥವಾ ಬಾಣಲೆಯಲ್ಲಿ ಪೂರಿ ಊದಿಕೊಳ್ಳುವ ಬಗೆ ಹೇಗೆಂದು ತಿಳಿಯುವುದೇ ರೋಚಕತೆ.

ವಿಜ್ಞಾನಿ ಸರ್ ಸಿ.ವಿ.ರಾಮನ್ ತಮ್ಮ 'ರಾಮನ್ ಎಫೆಕ್ಟ್' ಪ್ರಕಟಿಸಿದ್ದು 1928ರಲ್ಲಿ. ಅದಕ್ಕಾಗಿಯೇ ಪ್ರತಿವರ್ಷ ಫೆ. 28ರಂದು ನಾವು 'ರಾಷ್ಟ್ರೀಯ ವಿಜ್ಞಾನ ದಿನ' ಆಚರಿಸುತ್ತೇವೆ. ಏನಿದು ರಾಮನ್ ಪರಿಣಾಮ? ಪಾರಕ ಮಾಧ್ಯಮದ ಮೂಲಕ ಏಕವರ್ಣೀ ಬೆಳಕು ಹಾಯುವಾಗ ಅದರ ತರಂಗ ದೂರಕ್ಕೂ ಚದುರಿದ ಬೆಳಕಿನ ತರಂಗ ದೂರಕ್ಕೂ ವ್ಯತ್ಯಯ ಕಂಡುಬರುತ್ತದೆ. ಮಾಧ್ಯಮದ ಅಣುಗಳ ಭ್ರಮಣ ಮತ್ತು ಕಂಪನಶಕ್ತಿ ಬೆಳಕಿನ ಕಣಗಳ ಮೇಲೆ ವರ್ತಿಸುವುದರಿಂದ ಈ ವ್ಯತ್ಯಯವಾಗುವುದು. ಸೂರ್ಯನ ಬೆಳಕನ್ನು ಗಾಳಿಯ ಅಣುಗಳು ಚದುರಿಸುವುದೇ ಆಕಾಶವು ನೀಲಿಯಾಗಿ ಕಾಣಿಸಲು ಕಾರಣವೆಂದು ಸಾಬೀತುಪಡಿಸಿದ ಧೀಮಂತ ರಾಮನ್.

ಬೆಳಕು ಒಂದು ಅಣುವಿನೊಡನೆ ಪ್ರತಿಕ್ರಿಯಿಸುವಾಗ ತನ್ನ ಶಕ್ತಿಯ ಒಂದಂಶವನ್ನು ಅದಕ್ಕೆ ಹಸ್ತಾಂತರಿಸುತ್ತದೆ. ಹಾಗಾಗಿ ಬೆಳಕಿನ ಬಣ್ಣ ಬದಲಾಗುತ್ತದೆ. ಅಣು ನರ್ತನಗೈಯ್ಯುವುದು. ಬೆಳಕಿನ ವರ್ಣ ಬದಲಾವಣೆಯೇ ಅಣುವಿನ ಹೆಗ್ಗುರುತಾಗುತ್ತದೆ. ರಾಮನ್ 'ರೋಹಿತ ವಿಜ್ಞಾನ'ಕ್ಕೆ ಈ ಹೆಗ್ಗುರುತುಗಳೇ ಆಧಾರಗಳು. ಜಗತ್ತಿನಾದ್ಯಂತ ಪ್ರಯೋಗಾಲಯಗಳಲ್ಲಿ ವಿವಿಧ ರೋಗಗಳ ಪತ್ತೆಗೆ ವೈದ್ಯವಿಜ್ಞಾನಿಗಳು ರಾಮನ್‌ರ ಮಹತ್ವದ ಶೋಧವನ್ನೇ ಅವಲಂಬಿಸಿದ್ದಾರೆಂದರೆ ವಿಜ್ಞಾನಕ್ಕೆ ಭಾರತದ ಕೊಡುಗೆ ಕುರಿತು ಹೆಮ್ಮೆ ಮೂಡುತ್ತದೆ.

ತಮ್ಮ ಶೋಧಕ್ಕೆ ರಾಮನ್ 1930ರಲ್ಲಿ ನೊಬೆಲ್ ಪ್ರಶಸ್ತಿ ಪಡೆದರು. ಇದಕ್ಕೆ ಹಿಂದೆಯೇ ಅವರಿಗೆ ಬ್ರಿಟಿಷ್ ಸರ್ಕಾರ 'ಸರ್' ಪದವಿಯಿತ್ತು ಗೌರವಿಸಿತ್ತು. ಪ್ರತಿಷ್ಠಿತ ನೊಬೆಲ್ ಪ್ರಶಸ್ತಿಗೆ ಅರ್ಹರಾದ ಮೊದಲ ಏಷ್ಯನ್ ಎಂಬ ಹಿರಿಮೆ ಕೂಡ ಅವರದು. ರಾಮನ್ ಅವರ ಈ ಶೋಧ ಬಹು ಉಪಯುಕ್ತವೆಂದು ಬೇರೆ ಹೇಳಬೇಕಿಲ್ಲ. 'ನಾಸಾ'ದ ಮಂಗಳ ಗ್ರಹ ಅಭಿಯಾನದಲ್ಲೂ ಇದನ್ನು ಬಳಸಿಕೊಳ್ಳಲಾಗಿದೆ. ವಜ್ರ, ಹವಳ, ಮುತ್ತುಗಳ ಗುಣಮಟ್ಟ ನಿಷ್ಕರ್ಷೆಗೆ, ಕ್ಯಾನ್ಸರ್ ಗಡ್ಡೆಯ ತೀವ್ರತೆ ತಿಳಿಯಲು ಮಾತ್ರವಲ್ಲ ಪ್ರಾಗೈತಿಹಾಸಿಕ ವಿಜ್ಞಾನ ಅಧ್ಯಯನ, ಸಂಶೋಧನೆಗಳಿಗೂ ರಾಮನ್ ಪರಿಣಾಮ ಕೈಮರವಾಗಿದೆ.



'ರಾಮನ್ ಪರಿಣಾಮ' ಸಂಶೋಧನೆಗೆ ವೆಚ್ಚವಾದ ಹಣ ಕೇವಲ ₹ 200! ರಾಮನ್ ಮಿತಭಾಷಿ. ಹಾಸ್ಯಪ್ರವೃತ್ತಿಯು ಇವರು ನಿಜಕ್ಕೂ ವಿಜ್ಞಾನಿಯೇ ಎಂದು ಅಚ್ಚರಿಪಡುವಷ್ಟು ಗಾಢವಾಗಿತ್ತು. ಸ್ವೀಡನ್‌ನಲ್ಲಿ ನೊಬೆಲ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲೂ ಅವರು ಮೊನಚಿನಿಂದ ದೂರವಾಗೇನೂ ಇರಲಿಲ್ಲ. ಅಧಿಕೃತ ಸಭೆಗೆ ಮುನ್ನ ಏರ್ಪಾಡಾಗಿದ್ದ ಉಪಾಹಾರ ಕೂಟದಲ್ಲಿ ಗುಟುಕು ವೈನ್ ಎಲ್ಲರ ಮುಂದಿತ್ತು. ಮದ್ಯವೊಲ್ಲದ ರಾಮನ್ 'ಯು ಹ್ಯಾವ್ ಸೀನ್ ದಿ ರಾಮನ್ ಎಫೆಕ್ಟ್ ಆನ್ ಆಲ್ಕೊಹಾಲ್. ಟುಡೇ ಪ್ಲೀಸ್ ಡೋಂಟ್ ಟ್ರೈ ಟು ಸೀ ದಿ ಆಲ್ಕೊಹಾಲಿಕ್ ಎಫೆಕ್ಟ್ ಆನ್ ರಾಮನ್!' ಎಂದು ಎಲ್ಲರನ್ನೂ ನಗೆಗಡಲಿನಲ್ಲಿ ತೇಲಿಸಿದ್ದರು. ಭಾರತ ಸರ್ಕಾರವು ಸಿ.ವಿ.ರಾಮನ್ ಅವರಿಗೆ ದೇಶದ ಅತ್ಯುನ್ನತ ಗೌರವ 'ಭಾರತ ರತ್ನ' ಪ್ರಶಸ್ತಿ ನೀಡಿತು.

ವಿಜ್ಞಾನ ದಿನದ ಅರ್ಥಪೂರ್ಣತೆ ಇರುವುದು ಆಚರಣೆಗಿಂತಲೂ ಮಿಗಿಲಾಗಿ ವೈಜ್ಞಾನಿಕ ಮನೋಭಾವ ರೂಢಿಸಿಕೊಳ್ಳುವ ಪುನರ್‌ಸಂಕಲ್ಪದಿಂದ. ವಿಜ್ಞಾನದ ಫಲ ಸಾಕು, ವಿಜ್ಞಾನ ಒಲ್ಲೆ ಎಂದರಾದೀತೆ?

ವಾಚಕರ ವಾಣಿ

ವೈದ್ಯಕೀಯ ಶಿಕ್ಷಣ: ಕೈಗೆಟುಕುವಂತಿರಲಿ

ಭಾರತ ಬಿಟ್ಟು ವಿದೇಶಕ್ಕೆ ವೈದ್ಯಕೀಯ ಶಿಕ್ಷಣ ಪಡೆಯಲು ಹೋಗುವ ವಿದ್ಯಾರ್ಥಿಗಳನ್ನು ಒಮ್ಮೆ ಗಮನಿಸಿ. ಬಹುತೇಕರು ಮಧ್ಯಮ ವರ್ಗದ, ಅದರಲ್ಲೂ ಹಳ್ಳಿಯ ಮೂಲದವರು. ಲಕ್ಷಾಂತರ ರೂಪಾಯಿ ಕೊಟ್ಟು ಇವರಿಗೆ ನಮ್ಮ ದೇಶದಲ್ಲಿ ಓದಲು ಆಗದಿದ್ದಕ್ಕೆ ವಿದೇಶ ಅರಸಿ ಹೋಗುವುದು. ಇದರಿಂದ, ನಮ್ಮ ದೇಶದಲ್ಲಿ ವೈದ್ಯಕೀಯ ಶಿಕ್ಷಣ ಎಷ್ಟು ದುಬಾರಿ ಎಂಬುದು ತಿಳಿಯುತ್ತದೆ.

ಸರ್ಕಾರವು ವೈದ್ಯಕೀಯ ಶಿಕ್ಷಣಕ್ಕೆ ಹೆಚ್ಚು ಹಣ ಮೀಸಲಿರಿಸಬೇಕಾದ ಅಗತ್ಯವನ್ನು ಈ ಬೆಳವಣಿಗೆ ಒತ್ತಿ ಹೇಳುತ್ತದೆ. ಆಗ ದೇಶ ಬಿಟ್ಟು ಅನ್ಯ ದೇಶಕ್ಕೆ ಓದಲು ಹೋಗುವವರ ಸಂಖ್ಯೆಯೂ ಕಡಿಮೆಯಾಗುತ್ತದೆ. ಕೋವಿಡ್ ಸಮಸ್ಯೆ ಕಾಡಿದಾಗ ನಮ್ಮಲ್ಲಿ ವೈದ್ಯರ ಕೊರತೆ ಎಷ್ಟಿತ್ತು ಎಂಬುದನ್ನು ಬಿಡಿಸಿ ಹೇಳುವ ಅವಶ್ಯಕತೆ ಇಲ್ಲ.

ಬಸನಗೌಡ ಪಾಟೀಲ, ಧಾರವಾಡ

ಕಸಾಪ: ಮಹಿಳೆಯರಿಗೆ ಸಿಗಲಿ ಆದ್ಯತೆ

ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಮಹಿಳಾ ಜಯಂತಿ ಆಚರಣೆ ಏಕಿಲ್ಲ ಎಂದು ಸುಮಾ ಅವರು ಪ್ರಶ್ನಿಸಿರುವುದು (ವಾ.ವಾ., ಫೆ. 26) ಸರಿಯಾಗಿಯೇ ಇದೆ. ಈವರೆಗೆ ಆಗಿರುವ ಎಂಬತ್ತಕ್ಕೂ ಅಧಿಕ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಸಮ್ಮೇಳನದ ಅಧ್ಯಕ್ಷ ಗಾದಿಗೆ ಏರಿದವರು ಬೆರಳೆಣಿಕೆಯಷ್ಟು ಮಹಿಳೆಯರು ಮಾತ್ರ. ಹಾಗೆಯೇ ಕಸಾಪ ಈಗ ಐವರ ಜಯಂತಿ ಆಚರಣೆಯನ್ನು ಮಾಡಹೊರಟಿರುವುದು ಸ್ವಾಗತಾರ್ಹ. ಜೊತೆಗೆ ಕನ್ನಡದ ಮೊದಲ ಲೇಖಕಿ ಅಕ್ಕಮಹಾದೇವಿ ಅವರಂತಹ ಕವಯತ್ರಿಯರ ದಿನಾಚರಣೆಯನ್ನೂ ಮಾಡಲಿ.

ಸಿರಿಗೇರಿ ಯರಿಸ್ವಾಮಿ, ಬಳ್ಳಾರಿ

ಯುದ್ಧ ನಿಲ್ಲಲಿ, ಶಾಂತಿ ಪಸರಿಸಲಿ

ಕೊರೊನಾ ಕಾರಣದಿಂದ ವಿಶ್ವದ ಜನರು ಇತ್ತೀಚೆಗಷ್ಟೇ ಆರ್ಥಿಕವಾಗಿ, ಶೈಕ್ಷಣಿಕವಾಗಿ ಚೇತರಿಸಿಕೊಳ್ಳ ತೊಡಗಿದ್ದಾರೆ. ಇಂತಹ ದುಃಸ್ಥಿತಿಯಲ್ಲಿ ರಷ್ಯಾ ಮತ್ತು ಉಕ್ರೇನ್ ನಡುವೆ ಘೋರ ಕಾಳಗ ನಡೆಯುತ್ತಿದೆ. ಇದರಲ್ಲಿ ಅಮೂಲ್ಯ ಜೀವಗಳು, ಬೆಲೆಕಟ್ಟಲಾಗದ ಸಸ್ಯ ಸಂಪತ್ತು, ಸಂಪದ್ಭರಿತ ಭೂಮಿ, ಮೂಕ ಪಶು ಪಕ್ಷಿಗಳು ಬಲಿಯಾಗುವುದರ ಜೊತೆಗೆ ಆ ರಾಷ್ಟ್ರಗಳ ಆರ್ಥಿಕತೆ ಪಾತಾಳಕ್ಕೆ ಕುಸಿಯುತ್ತದೆ. ಯುದ್ಧಭೀತಿಯಿಂದ ದೇಶದ ಜನರಲ್ಲಿ ತೀವ್ರ ಆತಂಕ ಮೂಡಿದೆ. ಎರಡೂ ರಾಷ್ಟ್ರಗಳು ತಮ್ಮ ಪ್ರತಿಷ್ಠೆ ಬದಿಗಿರಿಸಿ, ಮಾತುಕತೆಯ ಮೂಲಕ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಂಡು, ಶಾಂತಿ ನೆಲೆಸಲು ಸಹಕರಿಸಬೇಕು.

ವಿಶ್ವಸಂಸ್ಥೆ ಕೂಡಲೇ ಮಧ್ಯಪ್ರವೇಶಿಸಿ, ಯುದ್ಧ ನಿಲ್ಲಿಸುವ ಗಂಭೀರ ಪ್ರಯತ್ನ ಮಾಡಲಿ. ವಿಶ್ವದಲ್ಲಿ ಶಾಂತಿ, ಸೌಹಾರ್ದ, ನೆಮ್ಮದಿಯಿಂದ ಎಲ್ಲ ಜೀವಿಗಳೂ ಬದುಕುವ ವಾತಾವರಣ ನಿರ್ಮಾಣವಾಗಲಿ. ಇತ್ತೀಚಿನ ತಂತ್ರಜ್ಞಾನದ ಯುದ್ಧ ಸಂಬಂಧಿ ಆವಿಷ್ಕಾರಗಳು ಇಡೀ ಜಗತ್ತನ್ನು ಕ್ಷಣಾರ್ಧದಲ್ಲಿ ನುಂಗುವ ಶಕ್ತಿ, ಸಾಮರ್ಥ್ಯ ಹೊಂದಿವೆ. ಅದಕ್ಕೆ ಅವಕಾಶ ನೀಡದೆ, ಮೊಗ್ಗು ಇದ್ದಾಗಲೇ ಚಿವುಟಿ ಹಾಕುವುದು ಒಳ್ಳೆಯ ನಿರ್ಧಾರ. ಆದಷ್ಟು ಬೇಗ ಶಾಂತಿ ಪಸರಿಸಲಿ. ಬೇಗ ಯುದ್ಧ ನಿಲ್ಲಲಿ.

ಸುರೇಶ ಅರಳಿಮರ, ಬಾದಾಮಿ

ಪ್ರವಾಸಿ ತಾಣ ಜನಪ್ರಿಯವಾಗಲು...

ಇಡೀ ಜಗತ್ತಿಗೆ ಸಾಮರಸ್ಯದ ಮಹತ್ವವನ್ನು ಸಾರಿ ಹೇಳಿದ ಬಸವಣ್ಣನವರ ಕಾರ್ಯಕ್ಷೇತ್ರ ಬಸವಕಲ್ಯಾಣದಲ್ಲಿ ಬೃಹತ್ ಅನುಭವ ಮಂಟಪ ನಿರ್ಮಾಣವಾಗುತ್ತಿದೆ. ಬಸವಕಲ್ಯಾಣವನ್ನು ಒಂದು ಜನಪ್ರಿಯ ಪ್ರವಾಸಿ ತಾಣವನ್ನಾಗಿಸಲು ಸರ್ಕಾರ ಮುಂದಡಿ ಇಟ್ಟಿದೆ. ಪ್ರವಾಸಿ ತಾಣ ಜನಪ್ರಿಯವಾಗಲು ರೈಲು ಮತ್ತು ವಿಮಾನ ಸಂಪರ್ಕ ಬಹಳ ಮುಖ್ಯ. ಹೇಗೂ, ಕಲಬುರಗಿಯಲ್ಲಿ ವಿಮಾನ ನಿಲ್ದಾಣವಿದೆ. ಬಸವಕಲ್ಯಾಣದ ಪ್ರಾಮುಖ್ಯ ತಿಳಿಸುವ ಒಂದು ದೊಡ್ಡ ಫಲಕವನ್ನು ಅಲ್ಲಿ ಅಳವಡಿಸಬೇಕು. ದೇಶದ ಪ್ರಮುಖ ನಗರಗಳಿಂದ ವಿಮಾನಗಳು ಕಲಬುರಗಿಗೆ ಬರುವಂತೆ ಆಗಬೇಕು. ಅದೇ ರೀತಿಯ ಫಲಕವನ್ನು ಹುಮನಾಬಾದ್ ರೈಲು ನಿಲ್ದಾಣದಲ್ಲಿರಿಸಿ ಬೆಂಗಳೂರಿನಿಂದ ಕಲಬುರಗಿ, ಹುಮನಾಬಾದ್ ಮೂಲಕ ಬೀದರ್‌ಗೆ ರೈಲು ಆರಂಭಿಸಲು ಒತ್ತಾಯಿಸಬೇಕು. ಹುಮನಾಬಾದ್‌ನಿಂದ ಕೇವಲ 35 ಕಿ.ಮೀ. ದೂರದಲ್ಲಿದೆ ಬಸವಕಲ್ಯಾಣ. ಈ ಎಲ್ಲ ಸೌಲಭ್ಯಗಳೂ ದೊರೆತರೆ, ಪ್ರವಾಸಿಗರ ಸಂಖ್ಯೆ ಹೆಚ್ಚುವುದರಲ್ಲಿ ಯಾವುದೇ ಅನುಮಾನವಿಲ್ಲ.

ವೆಂಕಟೇಶ್ ಮುದಗಲ್, ಕಲಬುರಗಿ

ವಸ್ತ್ರಸಂಹಿತೆ: ಪುನರ್ ಅವಲೋಕಿಸಿ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ 1,242 ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ಮುಂದಿನ ತಿಂಗಳು ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ವಸ್ತ್ರಸಂಹಿತೆ ನಿಗದಿಪಡಿಸಿದೆ. ಆದರೆ ಅಭ್ಯರ್ಥಿಗಳು ಇಂತಹುದೇ ಉಡುಪು, ವಸ್ತ್ರಾಭರಣಗಳನ್ನು ಧರಿಸಿ ಬರಬೇಕು ಎನ್ನುವುದು ನಿಜಕ್ಕೂ ಹಾಸ್ಯಾಸ್ಪದ ಎನಿಸುತ್ತದೆ. ಮಹಿಳಾ ಅಭ್ಯರ್ಥಿಗಳಿಗೆ ಮೂಗುತಿ, ಕಿವಿಯೋಲೆ, ಜೊತೆಗೆ ಆಲಂಕಾರಿಕ ಉಡುಪುಗಳನ್ನೂ ನಿಷೇಧಿಸಲಾಗಿದೆ. ಮೊಬೈಲ್ ಬ್ಲೂಟೂತ್‌ನಂತಹ ಎಲೆಕ್ಟ್ರಾನಿಕ್ ಉಪಕರಣಗಳಾದರೇನೋ ಸರಿ. ಆದರೆ ಆಲಂಕಾರಿಕ ವಸ್ತುಗಳು, ಆಭರಣಗಳಿಂದಲೂ ನಕಲು ಮಾಡಲು ಹೇಗೆ ಸಾಧ್ಯ?

ಪರೀಕ್ಷಾ ಕೇಂದ್ರಗಳಿಗೆ ಹಾಜರಾಗುವ ಮುನ್ನ ಬಂಗಾರದ ಆಭರಣಗಳನ್ನು ಬಿಚ್ಚಿಟ್ಟು ಒಳಬರುವುದರಿಂದ ಅಕಸ್ಮಾತ್ ಆಭರಣಗಳು ಕಳೆದರೆ ಯಾರು ಹೊಣೆ? ಪರೀಕ್ಷೆ ನಡೆಸುವ ಸಂಸ್ಥೆಗಳು ಯಾವುದೇ ನಿಯಮವನ್ನು ಜಾರಿಗೆ ತರುವ ಮುನ್ನ ನೂರಾರು ಬಾರಿ ಯೋಚಿಸಬೇಕು ಮತ್ತು ಅದು ಜನಸ್ನೇಹಿಯಾಗಿರಬೇಕು. ಆದಾಗ್ಯೂ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಗಡಿಬಿಡಿಯಲ್ಲಿ ಮರೆತು ಆಲಂಕಾರಿಕ ಉಡುಪುಗಳನ್ನು, ಆಭರಣಗಳನ್ನು ಧರಿಸಿ ಬಂದರೆ ಅವರಿಗೆ ಪರ್ಯಾಯ ವ್ಯವಸ್ಥೆ ಏನು? ಗೈರುಹಾಜರಿಯಾಗುವುದೊಂದೇ ಪರಿಹಾರವೇ? ಕರ್ನಾಟಕದಲ್ಲಿ ನೀಟ್, ಜೆಇಇಯಂತಹ ಕೆಲವನ್ನು ಬಿಟ್ಟರೆ ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗೂ ಇಂತಹ ಕಠಿಣ ನಿಯಮವಿಲ್ಲದಿದ್ದರೂ ಈ ಪರೀಕ್ಷೆಗೆ ಮಾತ್ರ ಯಾಕೆ?

ಇಂತಹ ಅಸಂಬದ್ಧ ನಿಯಮಗಳಿಂದ ಪರೀಕ್ಷಾ ಕೇಂದ್ರಗಳು ಗೊಂದಲದ ಗೂಡಾಗುವುದರಲ್ಲಿ ಅನುಮಾನವೇ ಇಲ್ಲ. ಪರೀಕ್ಷೆಗೆ ಇನ್ನೂ ಬಹಳಷ್ಟು ಸಮಯವಿದೆ. ಪ್ರಾಧಿಕಾರವು ವಸ್ತ್ರಸಂಹಿತೆ ಬಗ್ಗೆ ಇನ್ನೊಮ್ಮೆ ಪುನರ್ ಅವಲೋಕಿಸಬೇಕಾಗಿದೆ.

ಮುರುಗೇಶ ಡಿ., ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

₹33,783 ಕೋಟಿ ಬಿಟ್‌ಕಾಯಿನ್‌ಗೆ ಡಿಜಿಟಲ್ ಕನ್ನ!



ಕ್ರಿಪ್ಟೊಕರೆನ್ಸಿಯ ಬಹುದೊಡ್ಡ ವಂಚನೆ ಬಯಲು

• ದಿ ನ್ಯೂಯಾರ್ಕ್ ಟೈಮ್ಸ್ ವರದಿ

ಕ್ರಿಪ್ಟೊಕರೆನ್ಸಿಯ ಸಾಧಕ ಬಾಧಕಗಳ ಬಗ್ಗೆ ಬಿಸಿಬಿಸಿ ಚರ್ಚೆ ನಡೆಯುತ್ತಿರುವ ಸಮಯದಲ್ಲೇ ಅತಿದೊಡ್ಡ ಕ್ರಿಪ್ಟೊಕರೆನ್ಸಿ ವಂಚನೆಯನ್ನು ಅಮೆರಿಕದ ಎಫ್‌ಬಿಐ ಇತ್ತೀಚೆಗೆ ಬಯಲಿಗೆಳೆದಿದೆ. ಅಮೆರಿಕದ ಹೀಥರ್ ಮೋರ್ಗನ್ ಹಾಗೂ ಇಲ್ಯಾ ಲೀಟೆನ್‌ಸ್ಟೈನ್ ಎಂಬ ಜೋಡಿಯನ್ನು ಬಂಧಿಸುವ ಮೂಲಕ ಪ್ರಕರಣ ಬಯಲಿಗೆ ಬಂದಿದೆ. 360 ಕೋಟಿ ಡಾಲರ್ (ಸುಮಾರು ₹27,000 ಕೋಟಿ) ಮೊತ್ತದ ಬಿಟ್‌ಕಾಯಿನ್ ಅನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಪ್ರಮುಖ ಕ್ರಿಪ್ಟೊಕರೆನ್ಸಿ ಎನಿಸಿರುವ 'ಬಿಟ್‌ಕಾಯಿನ್'ಗೆ 2016ರ ಆಗಸ್ಟ್‌ನಲ್ಲಿ ಹೀಥರ್ ಹಾಗೂ ಲೀಟೆನ್‌ಸ್ಟೈನ್ ದಂಪತಿ ಕನ್ನ ಹಾಕಿದ್ದರು. 7.1 ಕೋಟಿ ಡಾಲರ್ (ಸುಮಾರು ₹475 ಕೋಟಿ) ಮೌಲ್ಯದ ಬಿಟ್‌ಕಾಯಿನ್ ಅನ್ನು ಇವರು ಕಳ್ಳ ಮಾರ್ಗದ ಮೂಲಕ ವರ್ಗಾಯಿಸಿದ್ದರು. (ಈಗಿನ ಮೌಲ್ಯ 450 ಕೋಟಿ ಡಾಲರ್-ಅಂದಾಜು ₹33,783 ಕೋಟಿ) ವಿವಿಧ ರೀತಿಯ ಕ್ರಿಪ್ಟೊಕರೆನ್ಸಿಗಳ ಖರೀದಿ, ಮಾರಾಟ ಹಾಗೂ ನಿರ್ವಹಣೆ ಮಾಡುವ 'ಬಿಟ್‌ಫಿನೆಕ್ಸ್' ವೇದಿಕೆಯ ಮೂಲಕ ಬಿಟ್‌ಕಾಯಿನ್ ಕದ್ದಿದ್ದರು ಎಂದು ಎಫ್‌ಬಿಐ ಆರೋಪಿಸಿದೆ.



ತನಿಖಾ ಸಂಸ್ಥೆಯ ಮಾಹಿತಿ ಪ್ರಕಾರ, ಒಟ್ಟು 1,19,754 ಬಿಟ್‌ಕಾಯಿನ್‌ಗಳನ್ನು ಕಳ್ಳತನ ಮಾಡಲಾಗಿದೆ. ಈ ಎಲ್ಲವನ್ನೂ ಒಂದೇ ಬಾರಿಗೆ ಕದ್ದಿಲ್ಲ. ಸುಮಾರು 2,000 ವಹಿವಾಟುಗಳಲ್ಲಿ ಇವುಗಳನ್ನು ಬೇರೆ ಬೇರೆ ವ್ಯಾಲೆಟ್‌ಗಳಿಗೆ ವರ್ಗಾಯಿಸಲಾಗಿದೆ. ಈ ಆರು ವರ್ಷಗಳಲ್ಲಿ ಬಿಟ್‌ಕಾಯಿನ್ ಹೆಚ್ಚು ಜನಪ್ರಿಯತೆ ಪಡೆದಿದ್ದು, ಮೌಲ್ಯವು ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಹೀಗಾಗಿ ಕದ್ದಿರುವ ಬಿಟ್‌ಕಾಯಿನ್‌ಗಳ ಮೌಲ್ಯ 7.1 ಕೋಟಿ ಡಾಲರ್‌ನಿಂದ 450 ಕೋಟಿ ಡಾಲರ್‌ಗೆ ತಲುಪಿದೆ.

ಕದ್ದಿರುವ ಬಿಟ್‌ಕಾಯಿನ್‌ಗಳನ್ನು ಲೀಟೆನ್‌ಸ್ಟೈನ್ ಅವರ ನಿಯಂತ್ರಣದಲ್ಲಿರುವ ವ್ಯಾಲೆಟ್‌ಗೆ ಮೊದಲು ವರ್ಗಾಯಿಸಲಾಗಿತ್ತು. ಈ ಪೈಕಿ 25 ಸಾವಿರ ಬಿಟ್‌ಕಾಯಿನ್‌ಗಳನ್ನು ಸರಣಿ ವಹಿವಾಟುಗಳ ಮೂಲಕ ದಂಪತಿಯ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗಿತ್ತು. ಉಳಿದ 94 ಸಾವಿರ ಬಿಟ್‌ಕಾಯಿನ್‌ಗಳನ್ನು ಕೋರ್ಟ್ ಆದೇಶದ ಪ್ರಕಾರ ತನಿಖಾ ಸಂಸ್ಥೆ ಜಪ್ತಿ ಮಾಡಿದೆ. ಇವುಗಳ ಮೌಲ್ಯ ಈಗ ಸುಮಾರು ₹27,000 ಕೋಟಿ.

ಹಣ ವರ್ಗಾವಣೆಯ ಹಲವು ಅಕ್ರಮ ತಂತ್ರಗಳನ್ನು ಬಳಸಿಕೊಂಡು ಈ ದಂಪತಿ ಕ್ರಿಪ್ಟೊಕರೆನ್ಸಿಯನ್ನು ನಗದಾಗಿ ಪರಿವರ್ತಿಸಿಕೊಂಡಿದ್ದಾರೆ. ಅಕ್ರಮದ ವಾಸನೆ ಬಾರದಂತೆ ನೋಡಿಕೊಳ್ಳಲು ಯತ್ನಿಸಿದ್ದ ಅವರು, ದೊಡ್ಡ ಮೊತ್ತದ ವಹಿವಾಟುಗಳ ಬದಲಾಗಿ, ಸಣ್ಣ ಸಣ್ಣ ವಹಿವಾಟುಗಳನ್ನು ಮಾಡಿದ್ದರು. ಒಟ್ಟು ಎರಡು ಸಾವಿರ ವಹಿವಾಟುಗಳು ಆಗಿದ್ದು ಇದೇ ಕಾರಣಕ್ಕೆ.

ಸ್ವಯಂಚಾಲಿತ ಹಣ ವರ್ಗಾವಣೆಗೆ ಅನುವು ನೀಡುವ ಕಂಪ್ಯೂಟರ್ ಪ್ರೋಗ್ರಾಮ್‌ಗಳನ್ನು ಇವರು ಬಳಸಿಕೊಂಡಿದ್ದರು. ತನಿಖೆಯ ದಾರಿ ತಪ್ಪಿಸಲು, ಕದ್ದ ಹಣವನ್ನು ವಿವಿಧ ರೀತಿಯ ಡಿಜಿಟಲ್ ಕರೆನ್ಸಿ ಖಾತೆಗಳು ಹಾಗೂ ಡಾರ್ಕ್‌ನೆಟ್‌ನಲ್ಲಿ ಠೇವಣಿ ಇರಿಸಿದ್ದರು. ವಿವಿಧ ರೀತಿಯ ಡಿಜಿಟಲ್ ಕರೆನ್ಸಿಗಳಲ್ಲಿ ಠೇವಣಿ ಇಡುವುದು ಹಾಗೂ ಅವುಗಳನ್ನು ಒಂದರಿಂದ ಮತ್ತೊಂದಕ್ಕೆ ವರ್ಗಾಯಿಸುವ 'ಚೈನ್ ಹೋಪಿಂಗ್' ತಂತ್ರವನ್ನು ಅವರು ಸಮರ್ಥವಾಗಿ ಬಳಸಿಕೊಂಡಿದ್ದರು. ಕಾನೂನುಬದ್ಧ ಚಟುವಟಿಕೆಗಳಿಗೆ ಅಮೆರಿಕದ ಬ್ಯುಸಿನೆಸ್ ಖಾತೆಗಳನ್ನು ಬಳಸಿಕೊಂಡು ಯಾರಿಗೂ ಅನುಮಾನ ಬಾರದಂತೆ ಎಚ್ಚರಿಕೆ ವಹಿಸಿದ್ದರು. ಬಿಟ್‌ಕಾಯಿನ್ ಸ್ವರೂಪದ ಆಲ್ಟ್‌ಕಾಯಿನ್, ಎನ್‌ಎಫ್‌ಟಿ, ಗಿಫ್ಟ್ ಕಾರ್ಡ್, ಚಿನ್ನ ಖರೀದಿಗೆ ಈ ಹಣವನ್ನು ಬಳಸಿಕೊಂಡಿದ್ದಾರೆ ಎಂದು ಫೆ.7ರಂದು ಹೊರಡಿಸಿದ ಬಂಧನ ವಾರಂಟ್‌ನಲ್ಲಿ ಅಮೆರಿಕದ ನ್ಯಾಯಾಂಗ ಇಲಾಖೆ ತಿಳಿಸಿದೆ.

ಕದ್ದವರನ್ನು ಪತ್ತೆ ಮಾಡಿದ್ದು ಹೀಗೆ...

2016ರಲ್ಲೇ ಮೋರ್ಗನ್ ದಂಪತಿ ಬಿಟ್‌ಕಾಯಿನ್‌ಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿದ್ದರೂ, ಅದನ್ನು ಕದ್ದವರು ಯಾರು ಎಂಬುದನ್ನು ಪತ್ತೆ ಮಾಡಲು ಐದು ವರ್ಷವೇ ಬೇಕಾಯಿತು. 'ಬಿಟ್‌ಕಾಯಿನ್‌ನಂತಹ ಕ್ರಿಪ್ಟೊಕರೆನ್ಸಿಗಳಲ್ಲಿ ಕಾನೂನುಬಾಹಿರ ಚಟುವಟಿಕೆಗಳನ್ನು ನಡೆಸಬಹುದು ಎಂದು ಬಹಳಷ್ಟು ಮಂದಿ ನಂಬಿದ್ದಾರೆ. ಆದರೆ, ಇದು ಸುಳ್ಳು. ಕ್ರಿಪ್ಟೋಕರೆನ್ಸಿಯಲ್ಲಿ ನಡೆಯುವ ವ್ಯವಹಾರಗಳನ್ನೂ ಪತ್ತೆ ಮಾಡಬಹುದು ಎಂಬುದನ್ನು ನಾವು ಈಗ ಸಾಬೀತು ಮಾಡಿದ್ದೇವೆ' ಎಂದು ಎಫ್‌ಬಿಐನ ಅಧಿಕಾರಿಗಳು ಹೇಳಿದ್ದಾರೆ.

ಬಿಟ್‌ಫಿನೆಕ್ಸ್‌ನ ಗ್ರಾಹಕರ ಖಾತೆಗಳಿಗೆ 2016ರಲ್ಲಿ ಹ್ಯಾಕರ್ ಒಬ್ಬ ಕನ್ನ ಹಾಕಿದ್ದ. ಒಟ್ಟು 2,000 ವಹಿವಾಟುಗಳ ಮೂಲಕ 1.19 ಲಕ್ಷ ಬಿಟ್‌ಕಾಯಿನ್‌ಗಳನ್ನು ಆತ ಒಂದು ಖಾತೆಗೆ ವರ್ಗಾವಣೆ ಮಾಡಿದ್ದ. ಆ ಹ್ಯಾಕರ್ ಯಾರು ಎಂಬುದು ಪತ್ತೆಯಾಗಿರಲಿಲ್ಲ. ಜತೆಗೆ ಆ ಎಲ್ಲಾ ಬಿಟ್‌ಕಾಯಿನ್‌ಗಳು ವರ್ಗಾವಣೆಯಾಗಿದ್ದ ಖಾತೆಯ ವಿವರ ಪತ್ತೆಯಾಗಿರಲಿಲ್ಲ. ಹೀಗಾಗಿ ಮುಗಿದ ಪ್ರಕರಣ ಎಂದೇ ಭಾವಿಸಲಾಗಿತ್ತು. ಆದರೆ ಆ ಬಿಟ್‌ಕಾಯಿನ್‌ಗಳ ಬೆನ್ನು ಹತ್ತಿದ್ದ ಪೊಲೀಸರು, ಅವನ್ನು ಹಿಂಬಾಲಿಸುತ್ತಲೇ ಇದ್ದರು.

ಒಂದು ಬಿಟ್‌ಕಾಯಿನ್ ಸೃಷ್ಟಿಯಾದ ನಂತರ ಅದಕ್ಕೆ ನೀಡಲಾಗುವ ಎಲೆಕ್ಟ್ರಾನಿಕ್ ಕೋಡ್ ಎಂದಿಗೂ ಬದಲಾಗುವುದಿಲ್ಲ. ಅದರಿಂದ ನಡೆಸುವ ಪ್ರತಿ ವಹಿವಾಟೂ ಇದೇ ರೂಪದಲ್ಲಿ ಬ್ಲಾಕ್‌ಚೈನ್ ಲೆಡ್ಜರ್‌ನಲ್ಲಿ ದಾಖಲಾಗುತ್ತಾ ಹೋಗುತ್ತದೆ. ಕಳವಾಗಿದ್ದ ಬಿಟ್‌ಕಾಯಿನ್‌ಗಳ ಇ-ಕೋಡ್‌ಗಳನ್ನು ಹಿಡಿದು ಹಿಂಬಾಲಿಸಿದ ಪೊಲೀಸರಿಗೆ, ಅವೆಲ್ಲವೂ 12 ಬೇರೆ ಬೇರೆ ಖಾತೆಗಳ ಮಧ್ಯೆ ವರ್ಗಾವಣೆಯಾಗುತ್ತಿರುವುದು ಪತ್ತೆಯಾಗಿತ್ತು. ಕಳವಾಗಿದ್ದ 1.19 ಲಕ್ಷ ಬಿಟ್‌ಕಾಯಿನ್‌ಗಳಲ್ಲಿ, 25,000 ಬಿಟ್‌ಕಾಯಿನ್‌ಗಳನ್ನು ಮಾತ್ರ ಹೀಗೆ ವರ್ಗಾವಣೆ ಮಾಡಲಾಗಿತ್ತು. ಆದರೆ ಅತ್ಯಂತ ಪ್ರಬಲ ಮತ್ತು ವೇಗದ ಕಂಪ್ಯೂಟರ್‌ಗಳ ಮೂಲಕ ಈ ವರ್ಗಾವಣೆ ನಡೆದಿದ್ದ ಕಾರಣ ಕಂಪ್ಯೂಟರ್‌ನ ಐಪಿ ವಿಳಾಸವನ್ನು ಪತ್ತೆ ಮಾಡುವುದೂ ಸಾಧ್ಯವಾಗಿರಲಿಲ್ಲ. ಇದರ ಮಧ್ಯೆಯೇ ಡಾರ್ಕ್‌ವೆಬ್‌ನಲ್ಲಿನ ಆನ್‌ಲೈನ್ ವಹಿವಾಟು ಪೋರ್ಟಲ್ 'ಆಲ್ಫಾಬೈ'ನಲ್ಲಿ ಹಲವು ಸರಕು ಮತ್ತು ಸೇವೆಗಳನ್ನು ಖರೀದಿಸಲು ಈ ಬಿಟ್‌ಕಾಯಿನ್‌ಗಳನ್ನು ಬಳಸಲಾಗಿತ್ತು. ವಾಲ್‌ಮಾರ್ಟ್ ಗಿಫ್ಟ್‌ಕಾರ್ಡ್‌ಗಳನ್ನು ಖರೀದಿಸಲೂ ಈ ಬಿಟ್‌ಕಾಯಿನ್‌ಗಳನ್ನು ಬಳಸಲಾಗಿತ್ತು.

ಐದು ವರ್ಷಗಳಲ್ಲಿ 25,000 ಬಿಟ್‌ಕಾಯಿನ್‌ಗಳ ವರ್ಗಾವಣೆ ನಡೆದಿದೆ. ವರ್ಗಾವಣೆಯನ್ನು ಅತ್ಯಂತ ವೇಗದಲ್ಲಿ ನಡೆಸಲಾಗಿದೆ. ಆದರೆ ಈಚೆಗೆ ಒಮ್ಮೆ ಗ್ರಾಹಕರ ಖಾತೆ ಮೇಲ್ದರ್ಜೆಗೆ ಏರಿಸಿದ ನಂತರ, ಒಮ್ಮೆಗೇ ಹಲವು ವರ್ಗಾವಣೆಗಳು ನಡೆದವು. ಅಷ್ಟೆಲ್ಲಾ ವರ್ಗಾವಣೆಗಳನ್ನು ಏಕಕಾಲದಲ್ಲಿ ನಿರ್ವಹಿಸುವಲ್ಲಿ ಆ ಕಂಪ್ಯೂಟರ್ ವಿಳಂಬ ಮಾಡಿತ್ತು. ಆಗ ಅದರ ಐಪಿ ವಿಳಾಸವನ್ನು ಪತ್ತೆ ಮಾಡುವಲ್ಲಿ ಪೊಲೀಸರು ಯಶಸ್ವಿಯಾದರು. ಐಪಿ ವಿಳಾಸವನ್ನು ಬಳಸಿಕೊಂಡು ಆ ಕಂಪ್ಯೂಟರ್ ಅನ್ನು ಒಳಹೊಕ್ಕಾಗ, ಈ ಎಲ್ಲಾ ಬಿಟ್‌ಕಾಯಿನ್‌ಗಳು ವರ್ಗಾವಣೆಯಾಗಿದ್ದ 12 ಖಾತೆಗಳನ್ನೂ ಇದೊಂದೇ ಕಂಪ್ಯೂಟರ್ ಮೂಲಕ ನಿರ್ವಹಿಸಿರುವುದು ಪತ್ತೆಯಾಯಿತು.

ಆನಂತರ ನ್ಯಾಯಾಲಯದಿಂದ ವಾರಂಟ್ ಪಡೆದುಕೊಂಡು, ಐಪಿ ವಿಳಾಸವಿದ್ದ ಕಂಪ್ಯೂಟರ್ ಇದ್ದ ಮನೆ ವಿಳಾಸವನ್ನು ಪತ್ತೆ ಮಾಡಿದರು. ಅದು ಪೊಲೀಸರನ್ನು ಮೋರ್ಗನ್ ದಂಪತಿಯ ಮನೆಗೆ ಕರೆದುಕೊಂಡು ಬಂತು. ಅವರಲ್ಲಿ ಇದ್ದ ಗೂಢಲಿಪಿಯ ಕಡತಗಳ ಹಾರ್ಡ್‌ಡಿಸ್ಕ್ ಅನ್ನು ಪರಿಶೀಲಿಸಿ, ಅವರನ್ನು ಬಂಧಿಸಲಾಯಿತು. ದಂಪತಿ ಬಳಿ ಇದ್ದ 94,636 ಬಿಟ್‌ಕಾಯಿನ್‌ಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು.



ಮೊಬೈಲ್‌ನಲ್ಲಿ ಹೀಥರ್ ಮೋರ್ಗನ್ ಅವರ ಚಿತ್ರ —ಎಎಫ್‌ಪಿ ಚಿತ್ರ

ಸುರಕ್ಷಿತವಲ್ಲ ಎಂಬುದು ಸಾಬೀತು

ಕ್ರಿಪ್ಟೊಕರೆನ್ಸಿಗಳಲ್ಲಿ ಹೂಡಿಕೆ ಮತ್ತು ವಹಿವಾಟು ನಡೆಸುವುದು ಅತ್ಯಂತ ಸುರಕ್ಷಿತ ವಿಧಾನ ಎಂಬ ಭಾವನೆ ಜನರಲ್ಲಿದೆ. ಆದರೆ, ಹ್ಯಾಕಿಂಗ್ ತಂತ್ರಜ್ಞಾನ ಬಳಸಿ ಬೇರೆಯವರ ಕ್ರಿಪ್ಟೊಕರೆನ್ಸಿ ಖಾತೆಗಳಿಗೆ ಕನ್ನ ಹಾಕಬಹುದು ಎಂಬುದನ್ನು ಈ ಪ್ರಕರಣ ತೋರಿಸಿಕೊಟ್ಟಿದೆ. ಹೀಗಾಗಿ ಬಿಟ್‌ಕಾಯಿನ್ ಜನರು ಭಾವಿಸಿದಷ್ಟು ಸುರಕ್ಷಿತವಲ್ಲ. ಜತೆಗೆ ಬಿಟ್‌ಕಾಯಿನ್‌ನಂತಹ ಕ್ರಿಪ್ಟೊಕರೆನ್ಸಿಗಳಿಗೆ ಸರ್ಕಾರದ ಖಾತರಿ ಇರುವುದಿಲ್ಲವಾದ ಕಾರಣ, ಇಂತಹ ವಂಚನೆಗಳು ನಡೆದಾಗ ಹಣವನ್ನು ಸಂಪೂರ್ಣವಾಗಿ ಕಳೆದುಕೊಳ್ಳುವ ಅಪಾಯಗಳೇ ಹೆಚ್ಚು. ಹೀಗಾಗಿ ಬಿಟ್‌ಕಾಯಿನ್‌ನಲ್ಲಿ ಹೂಡಿಕೆ ಮಾಡುವ ಮುನ್ನ ಈ ಎಲ್ಲಾ ಅಪಾಯಗಳನ್ನು ಪರಿಗಣಿಸಬೇಕು ಎಂದು ಎಫ್‌ಬಿಐ ಅಧಿಕಾರಿಗಳು ಹೇಳಿದ್ದಾರೆ.

ಕ್ರಿಪ್ಟೊಕರೆನ್ಸಿಗಳಲ್ಲಿನ ವ್ಯವಹಾರ, ವರ್ಗಾವಣೆ ಮತ್ತು ವಂಚನೆಗಳನ್ನೂ ಪತ್ತೆ ಮಾಡಲು ಸಾಧ್ಯವಿಲ್ಲ ಎಂಬ ನಂಬಿಕೆ ಪ್ರಚಲಿತದಲ್ಲಿದೆ. ಇವುಗಳನ್ನು ಪತ್ತೆಮಾಡಲು ದೀರ್ಘಾವಧಿ ಬೇಕಾಗುತ್ತದೆ ಎಂಬುದು ನಿಜವಾದರೂ, ಪತ್ತೆ ಮಾಡಲು ಸಾಧ್ಯವೇ ಇಲ್ಲ ಎಂಬುದು ಸುಳ್ಳು. ಇದನ್ನು ಈ ಪ್ರಕರಣ ಸಾಬೀತು ಮಾಡಿದೆ. ಕ್ರಿಪ್ಟೊಕರೆನ್ಸಿಗಳಲ್ಲಿ ಹೂಡಿಕೆ ಮತ್ತು ಅವುಗಳ ಬಳಕೆ ಹೆಚ್ಚಾದ ನಂತರ ಎಫ್‌ಬಿಐ, ಇಂತಹ ಕರೆನ್ಸಿ ವಿನಿಮಯ ಕೇಂದ್ರಗಳು, ಕ್ರಿಪ್ಟೊ ವರ್ಗಾವಣೆಗಳ ಮೇಲೆ ಕಣ್ಣಿರಿಸಿದೆ. ಇವುಗಳ ಮೇಲೆ ಸದಾ ನಿಗಾ ಇಡುವಂತಹ ಒಂದು ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಎಫ್‌ಬಿಐ ಅಧಿಕಾರಿಗಳು ಹೇಳಿದ್ದಾರೆ.

ವಂಚಕ ದಂಪತಿ

ಹೀಥರ್ (34) ಹಾಗೂ ಲೀಟೆನ್‌ಸ್ಟೈನ್ (31) ಇಬ್ಬರೂ ಅಮೆರಿಕದ ಪ್ರಜೆಗಳು. ಲೀಟೆನ್‌ಸ್ಟೈನ್ ರಷ್ಯಾದ ಪೌರತ್ವವನ್ನೂ ಪಡೆದಿದ್ದಾನೆ. ಹೀಥರ್ ಪತ್ರಕರ್ತೆಯಾಗಿ ಕೆಲಸ ಮಾಡಿದ್ದಾರೆ. ಫೋರ್ಬ್ಸ್ ಹಾಗೂ ಇಂಕ್ ನಿಯತಕಾಲಿಕಗಳಿಗೆ ಕೆಲವು ವರ್ಷ ಅಂಕಣಗಳನ್ನು ಬರೆದಿದ್ದರು. ಹೀಥರ್ ಬಂಧನದ ಬಳಿಕ ಸ್ಪಷ್ಟನೆ ನೀಡಿರುವ ಫೋರ್ಬ್ಸ್, ವೆಬ್‌ಸೈಟ್‌ನ 'ಫೋರ್ಬ್ಸ್‌ವಿಮೆನ್' ವಿಭಾಗದಲ್ಲಿ 2017ರಿಂದ ಕೆಲಸ ಆರಂಭಿಸಿದ ಅವರನ್ನು 2021ರ ಸೆಪ್ಟೆಂಬರ್‌ನಲ್ಲಿ ಕೆಲಸದಿಂದ ತೆಗೆದುಹಾಕಲಾಗಿತ್ತು ಎಂದು ತಿಳಿಸಿದೆ. ತಾವೊಬ್ಬ ರ‍್ಯಾಪರ್ ಎಂದು ತಮ್ಮ ಲಿಂಕ್ಡ್‌ಇನ್ ಪ್ರೊಫೈಲ್‌ನಲ್ಲಿ ಮೋರ್ಗನ್ ಬರೆದುಕೊಂಡಿದ್ದಾರೆ.

ಲೀಟೆನ್‌ಸ್ಟೈನ್ ತಮ್ಮನ್ನು ಬ್ಲಾಕ್‌ಚೈನ್ ನವೋದ್ಯಮದ ಸ್ಥಾಪಕ ಎಂದು ಹೇಳಿಕೊಂಡಿದ್ದಾರೆ. ತಾವೊಬ್ಬ ತಂತ್ರಜ್ಞಾನ ಉದ್ಯಮಿ, ಕೋಡರ್ ಮತ್ತು ಹೂಡಿಕೆದಾರ ಎಂದೂ ಲಿಂಕ್ಡ್‌ಇನ್ ಪ್ರೊಫೈಲ್‌ನಲ್ಲಿ ಉಲ್ಲೇಖಿಸಿದ್ದಾರೆ. ಈ ಇಬ್ಬರ ಮೇಲೆ ಗಂಭೀರ ಆರೋಪಗಳನ್ನು ಹೊರಿಸಲಾಗಿದೆ. ಹಣ ಅಕ್ರಮ ವರ್ಗಾವಣೆಯಲ್ಲಿ ಭಾಗಿಯಾದ ಹಾಗೂ ಅಮೆರಿಕಕ್ಕೆ ವಂಚನೆ ಎಸಗಿದ ಆರೋಪ ಮಾಡಲಾಗಿದೆ. ಹೀಗಾಗಿ 20ರಿಂದ 25 ವರ್ಷ ಜೈಲು ಶಿಕ್ಷೆ ಆಗುವ ಸಾಧ್ಯತೆಯಿದೆ.



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 56

ಶಾಂತಿಕರ್ಮ ಮಾಡುವ ವಿಧಾನ

ಕರ್ಮಪೂರ್ತಿಯಾಗಲು ಮೊದಲು ವಿಘ್ನಶಾಂತಿಯನ್ನು ಮಾಡಬೇಕು. ಆದುದರಿಂದ ಎಲ್ಲಾ ಕರ್ಮಗಳ ಆದಿಯಲ್ಲಿ ವಿಘ್ನೇಶನಾದ ಗಣಪತಿಯನ್ನು ಪೂಜಿಸಬೇಕು. ಎಲ್ಲಾ ಬಾಧೆಗಳೂ ನಾಶವಾಗಲು ಎಲ್ಲಾ ದೇವತೆಗಳನ್ನೂ ಪೂಜಿಸಬೇಕು. ಒಳಮನೆಯಲ್ಲಿ ಶವ, ಪಾಪಿಗಳ ಸ್ಪರ್ಶವಾಗುವುದು ಮುಂಬರುವ ದುಃಖದ ಸೂಚಕಗಳು. ಇವುಗಳ ದೋಷಶಾಂತಿಗಾಗಿ ಶಾಂತಿಕರ್ಮವನ್ನು ಮಾಡಬೇಕು.

ಶಾಂತಿಕರ್ಮದ ವಿಧಾನವನ್ನು ದೇವಾಲಯ, ಗೋಶಾಲೆ, ಯಜ್ಞಶಾಲಾ, ಅಥವಾ ಮನೆಯ ಅಂಗಣಗಳಲ್ಲಿ ಎರಡು ಹಸ್ತ ಎತ್ತರವಾದಂತಹ ವೇದಿಕೆಯನ್ನು ರಚಿಸಿ, ಅದರಲ್ಲಿ ಒಂದು ಭಾರ (ಕೊಳಗ) ಭತ್ತವನ್ನು ಸಮವಾಗಿ ಹರವಿ, ಭತ್ತದ ಮಧ್ಯದ ಎಂಟು ದಿಕ್ಕುಗಳಲ್ಲೂ ಕಮಲವನ್ನು ಬರೆಯಬೇಕು. ಪ್ರತಿ ದಿಕ್ಕಿನಲ್ಲೂ ಧೂಪದಿಂದ ಸುವಾಸಿತವಾದ ಕಲಶಗಳನ್ನು ಇರಿಸಬೇಕು. ಮಧ್ಯದಲ್ಲಿ ದೊಡ್ಡದೊಂದು ಕಲಶವಿರಬೇಕು. ಎಲ್ಲ ಕಲಶಗಳನ್ನೂ ಹಸಿಯ ನೂಲಿನಿಂದ ಸುತ್ತಬೇಕು. ಕಲಶಗಳಲ್ಲಿ ಮಾವಿನೆಲೆ, ದರ್ಭೆಯ ಕೂರ್ಚಗಳನ್ನು ಇರಿಸಬೇಕು. ಮಂತ್ರಪೂತವಾಗಿರುವಂತಹ ಪಂಚಗ್ಯವಗಳನ್ನು ಕಲಶದೊಳಗೆ ಹಾಕಬೇಕು.

ಎಲ್ಲಾ ಒಂಬತ್ತು ಕಲಶಗಳಲ್ಲಿ ನೀಲಮಣಿಗಳನ್ನು ಹಾಕಬೇಕು. ಗುರುವೂ ಆಚಾರ್ಯನೂ ಆಗಿರುವವನು ವಿಧುರನಾಗಿರಬಾರದು. ಆದುದರಿಂದ ಸಪತ್ನೀಕರನೂ ಯೋಗ್ಯನೂ ಆದ ಗುರುವನ್ನು ಪುರೋಹಿತನನ್ನಾಗಿ ಆ ಕರ್ಮಕ್ಕೆ ನಿಯಮಿಸಿಕೊಳ್ಳಬೇಕು. ವಿಷ್ಣು ಮತ್ತು ಇಂದ್ರಾದಿಗಳ ಪ್ರತಿಮೆಯನ್ನು ಆಯಾಯ ಕುಂಭಗಳಲ್ಲಿರಿಸಬೇಕು. ಆ ಕಲಶಗಳ ಮೇಲೆ ಶಿರಸ್ಸುಳ್ಳ (ಜುಟ್ಟುಳ್ಳ) ತೆಂಗಿನಕಾಯಿಗಳನ್ನಿರಿಸಬೇಕು. ಮಧ್ಯದ ಕಲಶದಲ್ಲಿ ವಿಷ್ಣುವನ್ನು ಆವಾಹನೆಮಾಡಿ ಪೂಜಿಸಬೇಕು.

ಪೂರ್ವಾದಿ ದಿಕ್ಕುಗಳಲ್ಲಿ ಇಂದ್ರಾದಿದೇವತೆಗಳ ಕಲಶಗಳನ್ನಿರಿಸಬೇಕು. ಆಯಾ ದೇವತೆಗಳ ಮಂತ್ರಗಳನ್ನುಚ್ಚರಿಸಬೇಕು. ಮಂತ್ರ ಉಚ್ಚರಿಸುವಾಗ 'ನಮಃ' ಪದಯುಕ್ತವನ್ನು ಬಳಸಬೇಕು. ಉದಾಹರಣೆಗೆ, ಇಂದ್ರದೇವನಿಗೆ 'ಇಂದ್ರಾಯ ನಮಃ' ಎಂದು ಮಂತ್ರ ಉಚ್ಚರಿಸಿ ಪೂಜಿಸಬೇಕು. ಆವಾಹನೆ ಮುಂತಾದುವುಗಳನ್ನು ಆಚಾರ್ಯನಿಂದಲೇ ಮಾಡಿಸಬೇಕು. ಆಚಾರ್ಯನು ಆಯಾಯ ದೇವತೆಗಳ ಮಂತ್ರಗಳನ್ನು ಜಪಿಸಬೇಕು. ಜಪವಾದ ಮೇಲೆ ಕಲಶಗಳ ಪಶ್ಚಿಮದಿಕ್ಕಿನಲ್ಲಿ ಅಗ್ನಿಪ್ರತಿಷ್ಠಾಪನೆಯನ್ನು ಮಾಡಿ, ನೂರೆಂಟು ಹೋಮಗಳನ್ನು ಮಾಡಬೇಕು. ಹೀಗೆ ಶಾಂತಿಕರ್ಮವನ್ನು ಒಂದು ದಿನವಾಗಲಿ, ಇಲ್ಲವೇ ಒಂಬತ್ತು ದಿನಗಳಾಗಲಿ, ಅಥವಾ 48 ದಿನಗಳ ಒಂದು ಮಂಡಲವಾಗಲಿ, ದೇಶಕಾಲಕ್ಕನುಗುಣವಾಗಿ ಮಾಡಬೇಕು. ಶಾಂತಿಗಾಗಿ ಶಮೀವೃಕ್ಷದ ಸಮಿತ್ತಿನ ಹೋಮವನ್ನೂ, ಜೀವನವೃತ್ತಿಗಾಗಿ ಪಲಾಶಸಮಿತ್ತಿನ ಹೋಮವನ್ನೂ ಮಾಡಬೇಕು. ಕರ್ಮಪ್ರಾರಂಭದಲ್ಲಿ ಯಾವ ರೀತಿ ದ್ರವ್ಯವಿನಿಯೋಗವನ್ನು ಮಾಡಿರುವುದೋ, ಅದರಂತೆ ಕೊನೆಯವರೆಗೂ ವಿನಿಯೋಗಮಾಡಬೇಕು. ಋತ್ವಿಕ್ಕುಗಳು ಪುಣ್ಯಾಹವಾಚನೆಯನ್ನು ಮಾಡಿ ಜಲದಿಂದ ಮನೆಯನ್ನೆಲ್ಲಾ ಸಂಪ್ರೋಕ್ಷಿಸಬೇಕು.

ಎಲ್ಲಾ ಹೋಮಗಳ ಕೊನೆಯಲ್ಲಿ ನವಗ್ರಹಗಳನ್ನು ಅರ್ಚಿಸಿ, ಋತ್ವಿಕ್ಕುಗಳಿಗೆ ದಾನ ಕೊಡಬೇಕು. ಕರ್ಮಕ್ಕಾಗಿ ಸಂಗ್ರಹಿಸಿದ ಸಾಮಗ್ರಿಗಳನ್ನೆಲ್ಲಾ ಆಚಾರ್ಯನಿಗೆ ಕೊಡಬೇಕು. ಉತ್ಪಾತಗಳಿಗೂ ಮಾರಿಗಳಿಗೂ ದುಃಖಕ್ಕೂ ಯಮನೇ ಸ್ವಾಮಿ. ಆದುದರಿಂದ ಪಾಶ ಮತ್ತು ಅಂಕುಶಗಳನ್ನು ಧರಿಸಿರುವಂತಹ ಕಾಲಪ್ರತಿಮೆಯನ್ನು ಮಾಡಿಸಿ, ಅದನ್ನ ದಕ್ಷಿಣೆಯೊಡನೆ ದಾನಮಾಡಬೇಕು. ಬಳಿಕ ಪೂರ್ಣವಾದ ಆಯಸ್ಸು ಲಭಿಸಲು ಎಳ್ಳನ್ನು ದಾನಮಾಡಬೇಕು. ರೋಗನಿವೃತ್ತಿಗಾಗಿ ತುಪ್ಪದಲ್ಲಿ ತನ್ನ ಪ್ರತಿಬಿಂಬವನ್ನು ನೋಡಿಕೊಂಡು, ಆ ತುಪ್ಪವನ್ನು ದಾನಮಾಡಬೇಕು.

ಭೂತಾದಿಗಳ ಭಯನಿವೃತ್ತಿಗಾಗಿ ಭೈರವನ ಪೂಜೆ ಮಾಡಬೇಕು. ಕೊನೆಯಲ್ಲಿ ಶಿವನಿಗೆ ಮಹಾಭಿಷೇಕ ಮತ್ತು ನೈವೇದ್ಯಗಳನ್ನು ಮಾಡಬೇಕು. ಬಳಿಕ ಜನರಿಗೆ ಭೋಜನವನ್ನು ಮಾಡಿಸಬೇಕು. ಈ ರೀತಿ ಶಾಂತಿಕರ್ಮ ಮಾಡಿದರೆ, ದೋಷ ಶಾಂತಿಯಾಗುವುದು. ಮಹಾಪಾಪಗಳು ಪ್ರಾಪ್ತವಾಗಿದ್ದರೆ ಭೈರವನನ್ನು ಪೂಜಿಸಿ, 'ಓ ಪ್ರಭುವೇ! ನಿನ್ನ ಸ್ವರೂಪದಲ್ಲಿ ನನ್ನ ಬುದ್ಧಿ ನೆಲೆಸಿರುವುದು. ನಿನ್ನ ಹೊರತು ಇನ್ನಾವ ಅಶೂನ್ಯ ಅಂದರೆ, ಸ್ಥಿರವಾದ ವಸ್ತುವನ್ನೂ ನನ್ನ ಬುದ್ಧಿ ಅಪೇಕ್ಷಿಸುವುದಿಲ್ಲ. ನನ್ನಲ್ಲಿರುವ ಅಹಂಕಾರವು ನಿನ್ನ ದರ್ಶನವಾದೊಡನೆಯೇ ನಷ್ಟವಾಯಿತು. ನಾನು ದೇಹದೊಡನೆ ನಿನಗೆ ನಮ್ರನಾಗಿರುವೆ. ನೀನು ಮಹಾಪುರುಷ, ನನ್ನ ಸ್ವರೂಪ ಶೂನ್ಯವಾದುದಲ್ಲ. ನಿನಗೆ ನಾನು ದಾಸನಾಗಿರುವೆ' ಎಂದು ಪ್ರಾರ್ಥಿಸಬೇಕು. ಈ ರೀತಿಯಾಗಿ 'ನಾನು ನಿನ್ನ ದಾಸನು' ಎಂಬ ಆತ್ಮಯಜ್ಞರೂಪವಾದ ನಮಸ್ಕಾರವನ್ನು ಮಾಡಬೇಕು ಎಂದು ಸೂತಮುನಿ ಶಾಂತಿಕರ್ಮ ವಿಧಾನವನ್ನು ಪ್ರಯಾಗದ ಸೂತಮುನಿಗಳಿಗೆ ತಿಳಿಸುತ್ತಾನೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಉಕ್ರೇನ್ ಮೇಲೆ ರಷ್ಯಾ ದಾಳಿ ನಡೆಸಿದೆ. ಈ ವಿಚಾರದಲ್ಲಿ ಮಧ್ಯಪ್ರವೇಶಿಸಿದರೆ ಭಾರತ ಬೆಲೆ ತೆರಬೇಕಾಗುತ್ತದೆ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಎಚ್ಚರಿಸಿದ್ದಾರೆ ಎಂದು ಹೇಳಲಾಗುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಸಿಎನ್‌ಎನ್ ಸುದ್ದಿವಾಹಿನಿಯಿಂದ ಸ್ಕ್ರೀನ್‌ಶಾಟ್ ಮಾಡಿದ್ದೆಂದು ಹೇಳಲಾದ ಚಿತ್ರದ ಅಡಿಯಲ್ಲಿ ಭಾರತಕ್ಕೆ ಪುಟಿನ್ ಎಚ್ಚರಿಕೆ ನೀಡಿರುವ ಉಲ್ಲೇಖವಿದೆ. ಹಲವರು ಈ ಚಿತ್ರವನ್ನು ಹಂಚಿಕೊಂಡಿದ್ದಾರೆ.



ಈವರೆಗೆ ಭಾರತಕ್ಕೆ ಪುಟಿನ್ ಇಂತಹ ಎಚ್ಚರಿಕೆ ನೀಡಿಲ್ಲ ಎಂದು 'ಇಂಡಿಯಾ ಟುಡೆ' ವರದಿ ಮಾಡಿದೆ. ಉಕ್ರೇನ್ ಮೇಲೆ ದಾಳಿ ಘೋಷಿಸುವಾಗ ಪುಟಿನ್ ಅವರು ಭಾರತದ ಹೆಸರನ್ನು ಎಲ್ಲಿಯೂ ಉಲ್ಲೇಖಿಸಿಲ್ಲ. ಆದರೆ ಭಾರತವು ಈ ವಿಚಾರದಲ್ಲಿ ತಟಸ್ಥ ನಿಲುವು ತೆಗೆದುಕೊಂಡಿದೆ. ಪುಟಿನ್ ಜೊತೆ ದೂರವಾಣಿಯಲ್ಲಿ ಮಾತನಾಡಿರುವ ಪ್ರಧಾನಿ ನರೇಂದ್ರ ಮೋದಿ ಅವರು ಹಿಂಸಾಚಾರ ನಿಲ್ಲಿಸುವಂತೆ ಮಾತುಕತೆ ನಡೆಸಿದ್ದರು.

ಗುಂಡಣ್ಣ



ಬೆರಗಿನ ಬೆಳಕು



ಗುರುರಾಜ ಕರಜಗಿ

ಧೀರರ ಹೋರಾಟ

ಹೋರಾಡು ಬೀಳ್ವನ್ನಮೊಬ್ಬಂಟಿಯಾದೊಡಂ |
ಧೀರಪಥವನೆ ಬೆದಕು ಸಕಲಸಮಯದೊಳಂ ||
ದೂರದಲಿ ಗೊಣಗುತ್ತ ಬಾಳ್ವ ಬಾಳ್ಗೇನು ಬೆಲೆ? |
ಹೋರಿ ಸತ್ವವ ಮೆರಸು – ಮಂಕುತಿಮ್ಮ || 573 ||

ಪದ-ಅರ್ಥ: ಬೀಳ್ವನ್ನವೊಬ್ಬಂಟಿಯಾದೊಡಂ= ಬೀಳ್ವನ್ನ(ಬೀಳುವಾಗ) + ಒಬ್ಬಂಟಿಯಾದೊಡಂ(ಒಬ್ಬಂಟಿಯಾದರೂ), ಧೀರಪಥವನೆ =-ಧೀರತನದ ದಾರಿಯನ್ನೇ, ಬೆದಕು = ಹುಡುಕು, ಹೋರಿ = ಹೋರಾಡಿ.

ವಾಚ್ಯಾರ್ಥ: ಹೋರಾಡುತ್ತ ಬೀಳುವಾಗ ಒಬ್ಬಂಟಿಯಾದರೂ ಎಲ್ಲ ಸಮಯದಲ್ಲೂ, ಧೀರತನದ ದಾರಿಯನ್ನೇ ಹಿಡಿ. ದೂರದಲ್ಲಿ ಕುಳಿತು ಗೊಣಗುತ್ತ ಬದುಕುವ ಬಾಳಿಗೇನು ಬೆಲೆ? ಹೋರಾಡಿ ನಿನ್ನ ಸತ್ವವನ್ನು ಮೆರೆಸು.

ವಿವರಣೆ: ತಿಲಕ ಮಾಂಜಿ ಬಿಹಾರದ ಸುಲ್ತಾನಗಂಜ್‌ನ ತಿಲಕಪುರ ಆದಿವಾಸಿ ಸಮುದಾಯದಲ್ಲಿ ಹುಟ್ಟಿದ ಹುಡುಗ. ಮಹಾ ದೇಶಪ್ರೇಮಿಯಾಗಿ ಬೆಳೆದ. ಬ್ರಿಟಿಶರು ಆದಿವಾಸಿಗಳ ಮೇಲೆ ಮಾಡುವ ಅತ್ಯಾಚಾರಗಳನ್ನು ಕಂಡು ಕುದಿದು ಹೋದವ. ಕೆಲವು ಜಮೀನ್ದಾರರು ಬ್ರಿಟಿಶರ ಎಂಜಲಿಗೆ ಕೈಚಾಚಿ ಆದಿವಾಸಿಗಳಿಗೆ ಅನ್ಯಾಯ ಮಾಡುವುದನ್ನು ಕಂಡಿದ್ದ. ಕೇವಲ ಕೈಯಲ್ಲಿ ಒಂದು ಬಿಲ್ಲು, ಬಾಣಗಳನ್ನು ಹಿಡಿದು ಬ್ರಿಟಿಶರ ಆಧುನಿಕ ಶಸ್ತ್ರಾಸ್ತ್ರಗಳನ್ನು ಎದುರಿಸುವ ಧೈರ್ಯ ಮಾಡಿದವ. ಒಂದು ದಿನ ಆದಿವಾಸಿ ಸಮುದಾಯದ ಸಾಂಪ್ರದಾಯಿಕ ಹಬ್ಬ ನಡೆದಿತ್ತು. ಅಲ್ಲಿ ತಿಲಕ ಮಾಂಜಿ ಬಂದಿರುತ್ತಾನೆಂದು ತಿಳಿದು ಬ್ರಿಟಿಶ್ ಅಧಿಕಾರಿ ಆಗಸ್ಟಸ್ ಕ್ಲೀವ್‌ಲ್ಯಾಂಡ್ ತನ್ನ ದೊಡ್ಡ ಸೈನ್ಯದೊಂದಿಗೆ ಬಂದು ಏಕಾಏಕಿ ದಾಳಿ ಮಾಡಿ ನೂರಾರು ಆದಿವಾಸಿಗಳನ್ನು, ಅದರಲ್ಲಿ ಮಹಿಳೆಯರನ್ನು ಮತ್ತು ಮಕ್ಕಳನ್ನು ಕೊಂದುಹಾಕುತ್ತಾನೆ. ಅದಕ್ಕೆ ಪ್ರತೀಕಾರ ತೀರಿಸಿಕೊಳ್ಳಲು ತಿಲಕ ಮಾಂಜಿ ಒಬ್ಬನೇ ಈಚಲು ಮರದ ಮೇಲೆ ತನ್ನ ಬಿಲ್ಲು ಬಾಣಗಳೊಂದಿಗೆ ಕುಳಿತು ಬ್ರಿಟಿಶ್ ಸೈನ್ಯದ ದಾರಿ ಕಾಯುತ್ತಾನೆ. ಒಂದೆಡೆಗೆ ನೂರಾರು ಸಶಸ್ತ್ರ ಬ್ರಿಟಿಶ್ ಸೈನಿಕರು, ಮತ್ತೊಂದೆಡೆಗೆ ಒಬ್ಬಂಟಿ ತಿಲಕ ಮಾಂಜಿ. ಆತ ಮರದ ಮೇಲೆ ಕುಳಿತು ಬಿಲ್ಲಿಗೆ ಬಾಣವನ್ನು ಏರಿಸಿ ಕ್ಲೀವ್‌ಲ್ಯಾಂಡ್ ಬರುವುದನ್ನೇ ಕಾಯುತ್ತ, ಆತ ಮರದ ಹತ್ತಿರ ಬಂದಾಗ ಎಷ್ಟು ಗುರಿಯಿಂದ, ವೇಗವಾಗಿ ಬಾಣ ಬಿಟ್ಟನೆಂದರೆ, ಬಾಣ ಯಾರ ಕಣ್ಣಿಗೂ ಕಾಣದೆ ಕ್ಲೀವ್‌ಲ್ಯಾಂಡ್‌ನ ಎದೆಯನ್ನು ಸೀಳಿತ್ತು. ತಾವು ನೂರಾರು ಜನರಿಂದ ಸುತ್ತುವರಿದಿರಬೇಕೆಂದು ಇಡೀ ಸೈನ್ಯ ಗಾಬರಿಯಿಂದ ಓಡಿ ಹೋಯಿತು. ಮುಂದೆ ಅಯರ್‌ಕುಟ್ ಎಂಬ ಮತ್ತೊಬ್ಬ ಬ್ರಿಟಿಶ್ ಅಧಿಕಾರಿ ದ್ವೇಷದಿಂದ ಸಿಕ್ಕ ಸಿಕ್ಕ ಆದಿವಾಸಿಗಳನ್ನು ಕೊಲ್ಲುವುದನ್ನು ಕಂಡು, ಸಾವಿರ ಸೈನಿಕರ ಎದುರಿಗೆ ತಿಲಕ ಮಾಂಜಿ ಬಂದ. ಅವನನ್ನು ಹಿಡಿದು ಕಾಲುಗಳನ್ನು ನಾಲ್ಕು ಕುದುರೆಗಳಿಗೆ ಕಟ್ಟಿ ಹತ್ತಾರು ಮೈಲಿ ನೆಲದಲ್ಲಿ ದರದರನೆ ಎಳೆದಾಡುತ್ತಾರೆ. ಅವನ ದೇಹ ಇಂಚಿಂಚೂ ಹರಿದು ಹೋಗಿತ್ತು. ಆತ, 'ನೀವು ಈ ದೇಹವನ್ನು ಕೊಲ್ಲಬಹುದೇ ವಿನಃ ಸ್ವಾತಂತ್ರ್ಯ ಹೋರಾಟಗಾರನನ್ನಲ್ಲ' ಎಂದು ನಗುನಗುತ್ತ ನೇಣು ಹಗ್ಗಕ್ಕೆ ಮುತ್ತು ಕೊಟ್ಟು ವೀರ-ಮರಣವನ್ನು ಪಡೆಯುತ್ತಾನೆ.

ತಾನು ಏಕಾಂಗಿ ಎಂದು ಮಾಂಜಿ ಹೆದರಿದನೆ? ಬದುಕಬೇಕೆಂದು ವೈರಿಗಳ ಜೊತೆಗೆ ಶಾಮೀಲಾದನೆ? ಹಾಗೆ ಮಾಡಿಲ್ಲವಾದ್ದರಿಂದ ಅನೇಕ ಭಾರತೀಯರ ಹೃದಯಗಳಲ್ಲಿ ಪ್ರತಿಷ್ಠಾಪಿತ-ನಾಗಿದ್ದಾನೆ. ಕಗ್ಗ ಈ ಮಾತನ್ನು ಮನಮುಟ್ಟುವಂತೆ ಹೇಳುತ್ತದೆ. ನೀನು ಏಕಾಂಗಿಯಾಗಿ, ಸೋಲುತ್ತೇನೆ ಎಂದು ಖಚಿತವಾದರೂ ಹೋರಾಡು. ಹೀಗೆ ಹೋರಾಡುವಾಗ ಸದಾಕಾಲ ಧೀರರ ಮಾರ್ಗವನ್ನೇ ಆಯ್ದುಕೋ. ಅದನ್ನು ಬಿಟ್ಟು, ದೂರದಲ್ಲಿ ಯಾವಾಗಲೂ, ಏನಾದರೂ ಗೊಣಗುತ್ತ ಕುಳಿತರೆ, ಆ ಬಾಳಿಗೆ ಏನು ಬೆಲೆ? ಬದುಕಿನ ಸತ್ವ ಇರುವುದೇ ಹೀಗೆ ಒಂದು ಧ್ಯೇಯಕ್ಕೋಸ್ಕರ, ನ್ಯಾಯಕ್ಕೋಸ್ಕರ ಹೋರಾಡುವಲ್ಲಿ, ಅದು ಸತ್ವಯುತವಾದ ಬದುಕು, ಶಾಶ್ವತವಾಗುವ ಬದುಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಸೋಮವಾರ ಫೆಬ್ರುವರಿ 28, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ–ಶಿಶಿರ ಋತು ಕುಂಭ ಮಾಸದ 16 ನೇ ದಿನ ತಿಥಿ: (ಮಾಘ ಕೃಷ್ಣ) ತ್ರಯೋದಶಿ ಗಂ. 27-17 ನಕ್ಷತ್ರ: ಉತ್ತರಾಷಾಢಾ ಗಂ. 07-02 ಉಪರಿ ಶ್ರವಣ ಗಂ 29-19 ಯೋಗ: ವರಿಯಾನ್ ಗಂ. 14-25, ಕರಣ: ಗರಜೆ ಗಂ. 16-29. ರಾಹುಕಾಲ : ಬೆಳಿಗ್ಗೆ 07:30 – 09:00 ಸೂರ್ಯೋದಯ : 06-50 ಸೂರ್ಯಾಸ್ತ : 06-36 ಮುಸ್ಲಿಂ ದಿನಾಂಕ : 26 ರಜಬ್ ಅದೃಷ್ಟ ಸಂಖ್ಯೆ: 4, 9

ಮೇಷ: ಜೀವನದಲ್ಲಿ ಸ್ಥಿರತೆ ಹಾಗೂ ಅಭಿವೃದ್ಧಿ ಸಾಧಿಸುವ ದಿನ. ಸಮಾಲೋಚಿಸಿ ನಿರ್ಧಾರ ಕೈಗೊಳ್ಳುವುದು ಸೂಕ್ತ. ಅನ್ನ ತಯಾರಿಕರು ಅದರಲ್ಲೂ ಸಿಹಿತಿಂಡಿ ತಯಾರು ಮಾಡಿ ಮಾರಾಟ ಮಾಡುವವರಿಗೆ ಬೇಡಿಕೆ ಹೆಚ್ಚುವುದು.

ವೃಷಭ: ಸ್ನೇಹಪರ ಸ್ವಭಾವ, ಪರೋಪಕಾರ ಅಥವಾ ಕೊನೇಪಕ್ಷ ನಿರ್ಲಿಪ್ತತೆಯಿಂದಾಗಿ ವೈಯಕ್ತಿಕ ಸ್ಥಾನಮಾನ ಲಭಿಸುವುದು. ಗೋ ಉತ್ಪನ್ನಗಳ ಮಾರಾಟದಿಂದ ಸಂಪಾದನೆ, ಗೋ ಪಾಲನೆಯಿಂದ ಪುಣ್ಯ ಪ್ರಾಪ್ತಿ.

ಮಿಥುನ: ಕುಟುಂಬದ ಸದಸ್ಯರಲ್ಲಿ ನಿಮ್ಮ ಬಾಲ್ಯದ ಕ್ಷಣಗಳನ್ನು ನೆನಪಿಸಿಕೊಳ್ಳುವ ಸಿಹಿ ಘಟನೆಗಳು ಈ ದಿನ ನೆಡೆಯಲಿದೆ. ವ್ಯಕ್ತಿಯನ್ನು ಅವರ ಮೊದಲ ಭೇಟಿಯಲ್ಲಿ ನೋಡಿದ ಸ್ವಭಾವವೆಂದು ತೂಕಹಾಕಿ ತೀರ್ಮಾನಿಸಬೇಡಿ.

ಕರ್ಕಾಟಕ: ಮಾತಿನ ಕುಶಲತೆಯಿಂದ ಇತರರನ್ನು ಗೆಲ್ಲುವ ಅಥವಾ ಎದುರಾಳಿಯನ್ನು ಕಟ್ಟಿಹಾಕುವ ಸಾಮರ್ಥ್ಯ ನಿಮ್ಮಲ್ಲಿದೆ. ಆದರೆ ನಿಮ್ಮ ತೀಕ್ಷ್ಣವಾದ ಮಾತುಗಳು ಬೇರೆಯವರ ದುಃಖಕ್ಕೆ ಕಾರಣವಾಗದಂತೆ ಗಮನಿಸಿ.

ಸಿಂಹ: ಜೀವನದಲ್ಲಿ ಪರಿಸ್ಥಿತಿಗೆ ಅನುಗುಣವಾಗಿ ಹೆಜ್ಜೆಹಾಕುವ, ಹೊಂದಿಕೊಳ್ಳುವ ಅನಿವಾರ್ಯತೆ ಕಂಡುಬರುತ್ತದೆ. ಈ ದಿನ ಸಿಹಿ-ಕಹಿಯ ಮಿಶ್ರಫಲ ನಿಮಗೆ ಅನುಭವಕ್ಕೆ ಬರಲಿದೆ.

ಕನ್ಯಾ: ಮನಸ್ಸಿಗೆ ಅಸಮಾಧಾನ ಆಗುವಂತಹ ಹಲವು ಘಟನೆಗಳು ನಿಮ್ಮ ಬಾಳಲ್ಲಿ ನಡೆಯಲಿವೆ. ಮರಗೆಲಸ ಮಾಡುವವರಿಗೆ ಹೆಚ್ಚಿನ ಅವಕಾಶಗಳು ಬಂದರೂ ಸಹ, ಕೆಲಸಕ್ಕೆ ಸೋಮಾರಿತನ ಅಡ್ಡಿಯನ್ನು ಉಂಟು ಮಾಡುವುದು.

ತುಲಾ: ನಿಮ್ಮೊಡನೆ ಹರಿದು ಬರುವ ಅವಕಾಶಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸುವಿರಿ. ಎಲೆಕ್ಟ್ರಿಕಲ್ ಕಂಟ್ರಾಕ್ಟರ್‌ಗಳಿಗೆ ಉತ್ತಮ ಅವಕಾಶ. ಅದೇ ರೀತಿಯಾಗಿ ಕೆಟ್ಟ ಮಾತು, ದೂರುಗಳನ್ನು ಕೇಳುವ ಸಂಭವವೂ ಇದೆ.

ವೃಶ್ಚಿಕ: ನಿಮ್ಮ ಸಂಗಾತಿಯೊಂದಿಗೆ ಇದ್ದ ದೀರ್ಘಕಾಲದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವಿರಿ. ಬೆನ್ನು ಮತ್ತು ಕಾಲಿನ ನೋವು ನಿವಾರಿಸಿಕೊಳ್ಳಲು ಸೂಕ್ತ ವ್ಯಾಯಾಮ, ತೈಲ ಲೇಪನದಂತಹ ಪರಿಹಾರ ತಿಳಿದುಕೊಳ್ಳುವಿರಿ.

ಧನು: ವಸ್ತ್ರ ವಿನ್ಯಾಸ ಸಲಹೆಗಾರರಿಗೆ ಪ್ರತಿಷ್ಠಿತ ಗಾರ್ಮೆಂಟ್ ಸಂಸ್ಥೆಯೊಂದರಲ್ಲಿ ಉದ್ಯೋಗ ಸಿಗುವುದು. ಸಾಕು ಪ್ರಾಣಿಗಳ ಆರೋಗ್ಯ ತಪಾಸಣೆ ಮಾಡಿಸಿ. ಅದರ ಆರೋಗ್ಯದ ವಿಚಾರದಲ್ಲಿ ಅಸಡ್ಡೆ ತೋರದಿರಿ.

ಮಕರ: ಈ ದಿನ ವ್ಯವಸ್ಥಿತವಾಗಿ ನಿಮ್ಮ ದಿನಚರಿ ರೂಪಿಸಿಕೊಂಡರೆ ಈಗಾಗಲೇ ಆರಂಭಿಸಿರುವ ಯೋಜನೆಗಳು ಪೂರ್ಣಗೊಳ್ಳಲಿದೆ. ಅವಿವಾಹಿತರಿಗೆ ಅವರ ಮನಸ್ಸಿಗೆ ಇಷ್ಟವಾಗುವ ರೀತಿಯ ಸಂಬಂಧಗಳು ಈ ದಿನ ಪ್ರಾಪ್ತಿಯಾಗುತ್ತದೆ.

ಕುಂಭ: ಸಹೋದರರರಲ್ಲಿರುವ ವೈಷಮ್ಯಗಳು ಅನುಭವಕ್ಕೆ ಬರಲಿದೆ. ಮನೆ ಜಾಗದ ಪಾಲುದಾರಿಕೆ ವಿಷಯದಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಳ್ಳ ಬೇಕಾಗುವ ಪರಿಸ್ಥಿತಿ. ಹಣಕಾಸಿನ ವಿಷಯದಲ್ಲಿ ಅಸ್ಥಿರತೆ ಎದುರಾಗುವುದು.

ಮೀನ: ಮುಕ್ತ ಮಾತುಕತೆಗಳಿಂದ ವ್ಯವಹಾರಗಳಲ್ಲಿ ಯಶಸ್ಸು. ಮಾಧ್ಯಮ ಸಂಸ್ಥೆಗಳವರಿಗೆ ಉತ್ತಮ ದಿನ. ಕಷ್ಟದ ದುಡಿಮೆಯಿಂದ ಹಣ ಉಳಿತಾಯ. ಅದರಿಂದಾಗಿ ಹಣಕಾಸಿನ ವಿಚಾರದಲ್ಲಿ ಇನ್ನೊಂದು ಮೆಟ್ಟಿಲು ಹತ್ತಲಿದ್ದೀರಿ.

ಪದಬಂಧ 4883


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಕ್ಯಾನ್ಸರ್ ಅನ್ನು ಕನ್ನಡೀಕರಿಸಿ! (3)
4. ಕೆಟ್ಟ ವಾಸನೆಯಿದು (4)
6. ಮಜದಲ್ಲಿರುವ ಮನ್ಮಥ ಕಾಣುತ್ತಿರುವನೇ? (4)
8. ಕಣ್ಣಿನಿಂದ ಬರುತ್ತಿರುವ ಪಿಚ್ಚು (3)
11. ಮುದದಿಂದಿರುವ ಅಜ್ಜ ! (3)
13. ಇದಿನ್ನೂ ಎಳೆ ಮಗು (4)
17. ಗುಣಿ ಹತ್ತಿರ ಬೆಳೆದ ಅಲಸಂದೆ (4)
18. ಕಳೆಯಲ್ಲಿರುವ ನಿಯಮ! (3)

ಮೇಲಿಂದ ಕೆಳಕ್ಕೆ

1. ಸ್ವಲ್ಪ ತಿಳಿದವನು (3)
2. ಬಾಜಿ ಕಟ್ಟಲು ಬಂದ ಮೋಸಗಾರ! (4)
3. ಆಲದ ಮರಕ್ಕೊರಗಿದ ಸೋಮಾರಿ (3)
5. ಪ್ರಿಯತಮನ ನೋಡುವಾಗ ಆವರಿಸಿದ ಕತ್ತಲು! (2)
7. ಗತಿಸಿದ ಪುಣ್ಯಪುರುಷರ ಹುಟ್ಟುಹಬ್ಬ (3)
9. ಕೊಡತಕ್ಕ ಹಣ (3)
10. ಕೊನೆಗೆ ಕಾಯ ಕಂಡಾಗಲೇ ಈ ಅನುಮಾನ! (3)
12. ಲೆಕ್ಕ ಬರೆಯುವವನು ಕೈ ಮುಂದಿಟ್ಟಿದ್ದಾನಲ್ಲಾ? (4)
14. ಕೇಳಲು ಇಂಪಾಗಿರುವುದು (3)
15. ಸುಭಾಷಿತ ಕೇಳುತ್ತಿರುವ ಮಗ (2)
16. ಮೂಗಿನ ಹೊಳ್ಳೆ (3)



4882ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1. ಭ್ರಮನಿರಸನ
4. ಗುಣಗ್ರಾಹಿ 5. ಚಾರ್ವಾಕ
7. ಪ್ರಥಮ
9. ಗಹನ 12. ಗಹ್ವರ 13. ಕನ್ನಡಕ
15. ವಿಗ್ರಹಾರಾಧನೆ

ಮೇಲಿಂದ ಕೆಳಕ್ಕೆ:
1. ಭ್ರಷ್ಟಾಚಾರ 2. ನಗು
3. ಮಹಿಳೆ 6. ಕನ್ನಡಿಗ
7. ಪ್ರಧಾನ 8. ಮದುಮಗ
10. ಅರಮನೆ 11. ತಾಕತ್ತು
14. ಕವಿ

ಸುಡೊಕು 5269

	2			5		8	4	
8			3		9			1
	4			1				7
	3	2				7		6
				7			9	
7	9							5
3	1		9				7	
	7			8		1	6	9
	6	9			1		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5268 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

‘ಸಾಯುವವರೆಗೆ ವಾರಾಣಸಿ ಸೇವೆ’

ವಾರಾಣಸಿ (ಪಿಟಿಐ): ‘ಸಾಯುವವರೆಗೆ ನಾನು ವಾರಾಣಸಿಯ ಸೇವೆ ಮಾಡುತ್ತೇನೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ. ವಾರಾಣಸಿಯ ಸಂಸದರೂ ಆಗಿರುವ ಅವರು, ಪಕ್ಷದ ಅಭ್ಯರ್ಥಿ ಪರವಾಗಿ ಪ್ರಚಾರ ನಡೆಸುವಾಗ ಈ ಮಾತು ಹೇಳಿದ್ದಾರೆ. ‘ವಾರಾಣಸಿಯಾಗಲೀ, ವಾರಾಣಸಿಯ ಜನರಾಗಲೀ ನನ್ನನ್ನು ಬಿಡುವುದಿಲ್ಲ, ನಾನೂ ವಾರಾಣಸಿಯನ್ನು ಬಿಡುವುದಿಲ್ಲ’ ಎಂದು ಅವರು ಹೇಳಿದ್ದಾರೆ.

ಬಿಜೆಪಿ ದುರಾಡಳಿತದಿಂದ ತೀವ್ರ ಬಡತನಕ್ಕೆ ಒಳಗಾದ ಉತ್ತರ ಪ್ರದೇಶ: ಚಿದಂಬರಂ ವಾಗ್ದಾಳಿ

‘ಯೋಗಿ ಅವಧಿಯಲ್ಲಿ ಸಾಲ ಶೇ 40ರಷ್ಟು ಏರಿಕೆ’

ಲಖನೌ (ಪಿಟಿಐ): ‘ಯೋಗಿ ಆದಿತ್ಯನಾಥ ಅವರ ಆಳ್ವಿಕೆಯಲ್ಲಿ ಉತ್ತರ ಪ್ರದೇಶದ ಸಾಲದ ಪ್ರಮಾಣ ಶೇ 40ರಷ್ಟು ಏರಿಕೆಯಾಗಿದೆ. ಬಡತನದ ವಿವಿಧ ಸೂಚ್ಯಂಕಗಳಲ್ಲಿ ಉತ್ತರ ಪ್ರದೇಶವು ಬಹಳ ಹಿಂದೆ ಉಳಿದಿದೆ. ಇದಕ್ಕೆಲ್ಲಾ ಯೋಗಿ ಅವರ ನೀತಿಗಳೇ ಕಾರಣ’ ಎಂದು ಕಾಂಗ್ರೆಸ್ ನಾಯಕ ಪಿ.ಚಿದಂಬರಂ ಆರೋಪಿಸಿದ್ದಾರೆ.

ತಮ್ಮ ಪಕ್ಷದ ಅಭ್ಯರ್ಥಿಗಳ ಪರವಾಗಿ ಇಲ್ಲಿ ನಡೆಸಿದ ಪ್ರಚಾರ ಸಭೆಯಲ್ಲಿ ಅವರು ಈ ಆರೋಪ ಮಾಡಿದ್ದಾರೆ. ರಾಜ್ಯದ ಈ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದರೆ ಕಾಂಗ್ರೆಸ್‌ಗೆ ಮತ ನೀಡಿ ಎಂದು ಅವರು ಕೋರಿದ್ದಾರೆ.

‘ಆದಿತ್ಯನಾಥ ಅವರ ಆಳ್ವಿಕೆಯು ಸರ್ವಾಧಿಕಾರ, ಧಾರ್ಮಿಕ ದ್ವೇಷ, ಜಾತಿಜಗಳ, ಪೊಲೀಸ್ ದಬ್ಬಾಳಿಕೆ ಮತ್ತು ಲಿಂಗ ತಾರತಮ್ಯದ ಮಿಶ್ರಣವಾಗಿತ್ತು. ಈ ಸ್ವರೂಪದ ಆಡಳಿತದ ಕಾರಣಕ್ಕೇ ರಾಜ್ಯದ ಬಡತನವು ಹೆಚ್ಚಾಗಿದೆ. ಬಡವರು ಮತ್ತಷ್ಟು ಬಡವರಾಗಿದ್ದಾರೆ. ಯೋಗಿ ಅವರ ಅವಧಿಯಲ್ಲಿ ರಾಜ್ಯದ ಸಾಲದ ಮೊತ್ತ ₹6.62 ಲಕ್ಷ ಕೋಟಿಗೆ ಏರಿಕೆಯಾಗಿದೆ’ ಎಂದಿದ್ದಾರೆ.

‘ಈ ಸರ್ಕಾರವು ಯಾವುದೇ ನೇಮಕಾತಿಯನ್ನು ನಡೆಸುತ್ತಲೇ ಇಲ್ಲ. ಏಕೆಂದರೆ ನೇಮಕ ಮಾಡಿಕೊಂಡರೆ ಸಂಬಳ ನೀಡಲು ಸರ್ಕಾರದ ಬಳಿ ಹಣ ವಿಲ್ಲ. ಹೀಗಾಗಿಯೇ ನೇಮಕಾತಿ ನಡೆಸುತ್ತಿಲ್ಲ. ಉದ್ಯೋಗಗಳೇ ಇಲ್ಲದ ಕಾರಣ ರಾಷ್ಟ್ರೀಯ ಸರಾಸರಿ ತಲಾ ಆದಾಯಕ್ಕಿಂತ, ಉತ್ತರ ಪ್ರದೇಶದ ತಲಾ ಆದಾಯ ಕಡಿಮೆ ಇದೆ. ಯೋಗಿ ಆಡಳಿತದ ಅವಧಿಯಲ್ಲಿ ರಾಜ್ಯದ ಜನರ ತಲಾ ಆದಾಯವು ಶೇ 1.9ರಷ್ಟು ಇಳಿಕೆಯಾಗಿದೆ. ರಾಜ್ಯದ ಸಾಲವು, ರಾಜ್ಯದ ಜಿಡಿಪಿಯ ಶೇ34.2ರಷ್ಟಾಗಿದೆ. ಇವೆಲ್ಲವನ್ನೂ ನೀತಿ ಆಯೋಗದ ವರದಿಯಲ್ಲೇ ಹೇಳಲಾಗಿದೆ’ ಎಂದು ಅವರು ವಿವರಿಸಿದ್ದಾರೆ.

‘ಉದ್ಯೋಗ ಇಲ್ಲದೇ ಇರುವ ಕಾರಣಕ್ಕೆ, ಉತ್ತರ ಪ್ರದೇಶದ ಬಡವರ ಪ್ರಮಾಣವು ಶೇ 37.9ಕ್ಕೆ ಏರಿಕೆಯಾಗಿದೆ. ದೇಶದ ಎಲ್ಲಾ ರಾಜ್ಯಗಳಿಗಿಂತ ಇಲ್ಲಿ ನಿರುದ್ಯೋಗದ ಪ್ರಮಾಣ ಹೆಚ್ಚು. ಸರ್ಕಾರದ ನೀತಿಗಳಿಂದ ಉದ್ಯೋಗ ಕಳೆದುಕೊಂಡವರಲ್ಲಿ ಯುವಜನರೇ ಹೆಚ್ಚು. 2018ರಿಂದ 15–29 ವರ್ಷದ ನಿರುದ್ಯೋಗಿಗಳ ಪ್ರಮಾಣ ಎರಡಂಕಿಗಿಂತ ಹೆಚ್ಚೇ ಇದೆ. ರಾಜ್ಯದ ಪ್ರತಿ ನಾಲ್ವರಲ್ಲಿ ಒಬ್ಬ ಯುವಕ ಅಥವಾ ಯುವತಿಗೆ ಕೆಲಸವಿಲ್ಲ’ ಎಂದು ಅವರು ನೀತಿ ಆಯೋಗದ ವರದಿಯನ್ನು ಉಲ್ಲೇಖಿಸಿದ್ದಾರೆ.‘ಸರ್ಕಾರ ಯಾವುದೇ ನೇಮಕಾತಿ ಮಾಡದೇ ಇರುವ ಕಾರಣ ಶಾಲೆಗಳಲ್ಲಿ 2.77 ಲಕ್ಷ ಶಿಕ್ಷಕರ ಕೊರತೆ ಇದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇದೆ. ಇಲ್ಲಿ ಉದ್ಯೋಗ ದೊರೆಯದೇ ಇರುವ ಕಾರಣ ರಾಜ್ಯದ ಪ್ರತಿ 16 ಜನರಲ್ಲಿ ಒಬ್ಬರು ಉದ್ಯೋಗ ಅರಸಿಕೊಂಡು ಬೇರೆ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದಾರೆ. ಇಂತಹ ಕೆಟ್ಟ ಆಡಳಿತ ನೀಡಿರುವ ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರುತ್ತೀರಾ’ ಎಂದು ಅವರು ಪ್ರಶ್ನಿಸಿದ್ದಾರೆ.



ರಾಜ್ಯವನ್ನು ಎಲ್ಲಾ ರೀತಿಯಲ್ಲೂ ಹಿಂದುಳಿಯುವಂತೆ ಮಾಡಿರುವ ಯೋಗಿ ಆದಿತ್ಯನಾಥ ಅವರ ಸರ್ಕಾರಕ್ಕೆ ಜನರು ಮತ್ತೆ ಏಕೆ ಮತ ನೀಡಬೇಕು?
ಪಿ.ಚಿದಂಬರಂ, ಕಾಂಗ್ರೆಸ್ ಹಿರಿಯ ನಾಯಕ



ಉತ್ತರ ಪ್ರದೇಶದ ಬಲರಾಮಪುರದಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ರೋಡ್ ಷೋ ನಡೆಸಿದರು –ಪಿಟಿಐ ಚಿತ್ರ

‘ಚತುಷ್ಕೋನ ಸ್ಪರ್ಧೆ’

‘ಉತ್ತರ ಪ್ರದೇಶದಲ್ಲಿ ಈ ಬಾರಿ ನಾಲ್ಕು ಕೋನದ ಸ್ಪರ್ಧೆ ಏರ್ಪಟ್ಟಿದೆ. ಬಿಜೆಪಿ, ಎಸ್‌ಪಿ, ಕಾಂಗ್ರೆಸ್ ಮತ್ತು ಬಿಎಸ್‌ಪಿ ಕಣದಲ್ಲಿ ಪೈಪೋಟಿ ನಡೆಸುತ್ತಿವೆ. ನಾಲ್ಕೂ ಪಕ್ಷಗಳಿಗೆ ಅವುಗಳದ್ದೇ ಆದ ಸಾಮರ್ಥ್ಯವಿದೆ. ಹಾಗೆಯೇ ದೌರ್ಬಲ್ಯವೂ ಇದೆ. ಇವು ಮತದಾನದಲ್ಲಿ ಪ್ರಭಾವ ಬೀರಲಿದೆ’ ಎಂದು ಚಿದಂಬರಂ ಹೇಳಿದ್ದಾರೆ. ‘ಈ ಚುನಾವಣೆಯಲ್ಲಿ ಕಾಂಗ್ರೆಸ್‌ನ ಹೋರಾಟ ಈಗ ಬದಲಾಗಿದೆ. ಹಲವು ದಶಕಗಳ ನಂತರ ಕಾಂಗ್ರೆಸ್ ಇದೇ ಮೊದಲ ಬಾರಿ ಎಲ್ಲಾ 403 ಕ್ಷೇತ್ರಗಳಲ್ಲೂ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದೆ. ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಆರಂಭಿಸಿದ, ‘ನಾನು ಹುಡುಗಿ, ಹೋರಾಡಬಲ್ಲೆ’ ಅಭಿಯಾನವು ಚುನಾವಣೆಗೆ ಹೊಸ ಆಯಾಮ ನೀಡಿದೆ. ಲಿಂಗ ತಾರತಮ್ಯ ಮತ್ತು ಲಿಂಗ ಸಮಾನತೆಯನ್ನು ಈ ಅಭಿಯಾನವು ಚುನಾವಣೆಯ ವಿಷಯವಾಗಿಸಿದೆ’ ಎಂದು ಅವರು ಹೇಳಿದ್ದಾರೆ.

‘ಎಸ್‌ಪಿ ಆಳ್ವಿಕೆಯಲ್ಲಿ ಮೊಹರಂಗೆ ವಿದ್ಯುತ್, ರಾಮನವಮಿಗೆ ಇಲ್ಲ’

ಬಲಿಯಾ (ಉತ್ತರ ಪ್ರದೇಶ) (ಪಿಟಿಐ): ಸಮಾಜವಾದಿ ಪಕ್ಷದ ಸರ್ಕಾರ ಇದ್ದಾಗ ಓಲೈಕೆ ರಾಜಕಾರಣ ಮಾಡಲಾಗುತ್ತಿತ್ತು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾನುವಾರ ಹೇಳಿದ್ದಾರೆ. ಆಗ, ಮೊಹರಂ ದಿನ ವಿದ್ಯುತ್ ಪೂರೈಕೆ ಇರುತ್ತಿತ್ತು. ಆದರೆ, ರಾಮನವಮಿ ಮತ್ತು ಶ್ರೀ ಕೃಷ್ಣ ಜನ್ಮೋತ್ಸವದ ದಿನ ವಿದ್ಯುತ್ ಪೂರೈಕೆ ಇರುತ್ತಿರಲಿಲ್ಲ ಎಂದು ಶಾ ಆರೋಪಿಸಿದ್ದಾರೆ.

ಎಸ್‌ಪಿ ಮತ್ತೆ ಅಧಿಕಾರಕ್ಕೆ ಬಂದರೆ, ಉತ್ತರ ಪ್ರದೇಶದಲ್ಲಿ ವಿದ್ಯುತ್ ಪೂರೈಕೆ ಇರುವುದಿಲ್ಲ ಎಂದು ಚುನಾವಣಾ ಪ್ರಚಾರ ಸಭೆಯಲ್ಲಿ ಶಾ ಹೇಳಿದ್ದಾರೆ.

‘ಅಖಿಲೇಶ್ ಯಾದವ್ ಅವರ ಗೂಂಡಾಗಳು ಬುಂದೇಲ್‌ಖಂಡದಲ್ಲಿ ನಾಡ ಪಿಸ್ತೂಲುಗಳು ಮತ್ತು ಗುಂಡುಗಳನ್ನು ಮಾಡುತ್ತಿದ್ದರು. ಸಮಾಜವಾದಿ ಪಕ್ಷವು ಯುವ ಜನರನ್ನು ಅಪರಾಧ ಜಗತ್ತಿಗೆ ತಳ್ಳಿದೆ. ನರೇಂದ್ರ ಮೋದಿ ಅವರು ಮಾಡಿದ ವ್ಯವಸ್ಥೆಯಿಂದಾಗಿ ಬುಂದೇಲ್‌ಖಂಡದಲ್ಲಿ ತಯಾರಾದ ಷೆಲ್‌ಗಳಿಂದ ಪಾಕಿಸ್ತಾನಕ್ಕೆ ಪ್ರತ್ಯುತ್ತರ ನೀಡುವುದು ಸಾಧ್ಯವಾಗಿದೆ’ ಎಂದರು.

ಉತ್ತರ ಪ್ರದೇಶದಲ್ಲಿ ಬಿಜೆಪಿ ಮತ್ತೆ ಸರ್ಕಾರ ರಚಿಸಲಿದೆ. ಈಗಾಗಲೇ ನಡೆದಿರುವ ನಾಲ್ಕು ಹಂತಗಳ ಮತದಾನವು ಅದಕ್ಕೆ ದಾರಿ ಮಾಡಿಕೊಟ್ಟಿದೆ ಎಂದು ಶಾ ಹೇಳಿದರು.

ಉತ್ತರ ಪ್ರದೇಶ– ಶೇ 54ರಷ್ಟು ಮತದಾನ: ಉತ್ತರ ಪ್ರದೇಶ ವಿಧಾನಸಭೆಯ 54 ಕ್ಷೇತ್ರಗಳಿಗೆ ಭಾನುವಾರ ನಡೆದ ಮತದಾನದಲ್ಲಿ ಶೇ 54ರಷ್ಟು ಜನರು ಮತ ಚಲಾಯಿಸಿದ್ದಾರೆ. 12 ಜಿಲ್ಲೆಗಳ 61 ಕ್ಷೇತ್ರಗಳಿಗೆ ಮತದಾನ ನಡೆಯಿತು.

ಪ್ರತಾಪ್‌ಗಡದ ಕುಂಡಾ ಕ್ಷೇತ್ರದ ಎಸ್‌ಪಿ ಅಭ್ಯರ್ಥಿ ಗುಲ್ಷನ್ ಯಾದವ್ ಅವರ ಬೆಂಗಾವಲು ಪಡೆಯ ಮೇಲೆ ದಾಳಿ ನಡೆದ ಘಟನೆ ಹೊರತುಪಡಿಸಿದರೆ, ಮತದಾನ ಬಹುತೇಕ ಶಾಂತಿಯುತವಾಗಿತ್ತು.

ಕಣದಲ್ಲಿ ಇಲ್ಲದಿದ್ದರೂ ಚುನಾವಣೆಯ ಕೇಂದ್ರ ಮುಖ್ತಾರ್

ಮಲು (ಉತ್ತರ ಪ್ರದೇಶ) (ಪಿಟಿಐ): ಅಖಿಲೇಶ್ ಯಾದವ್ ಅವರ ಸಮಾಜವಾದಿ ಪಕ್ಷದ ಆಡಳಿತದ ಅವಧಿಯಲ್ಲಿ ಮಾಫಿಯಾ ಡಾನ್ ಎಂದೇ ಹೆಸರಾಗಿದ್ದ ರಾಜಕಾರಣಿ ಮುಖ್ತಾರ್ ಅನ್ಸಾರಿ ಈ ಬಾರಿ ಚುನಾವಣಾ ಕಣದಲ್ಲಿ ಇಲ್ಲ. ಆದರೆ ಅವರು ಚುನಾವಣೆಯ ವಿಷಯವಾಗಿದ್ದಾರೆ. ಬಿಜೆಪಿ ನಾಯಕರು ತಮ್ಮ ಪ್ರತಿ ಪ್ರಚಾರ ಸಭೆಯಲ್ಲೂ ಅನ್ಸಾರಿಯ ಹೆಸರನ್ನು ಹೇಳುತ್ತಿದ್ದಾರೆ.

ಯೋಗಿ ಆದಿತ್ಯನಾಥ ಅವರ ಸರ್ಕಾರ ಬಂದ ನಂತರ ವಿವಿಧ ಪ್ರಕರಣಗಳಲ್ಲಿ ಅನ್ಸಾರಿಯನ್ನು ಜೈಲಿಗೆ ಕಳುಹಿಸಲಾಗಿದೆ. ಹೀಗಿದ್ದೂ ಅವರನ್ನು ಸಮಾಜವಾದಿ ಪಕ್ಷದ ಮಿತ್ರಪಕ್ಷ ರಾಜಬ್ಬರ್ ಸಮುದಾಯದ ಎಸ್‌ಬಿಎಸ್‌ಪಿಯ ಅಭ್ಯರ್ಥಿಯಾಗಿ ಅನ್ಸಾರಿಯನ್ನು ಕಣಕ್ಕೆ ಇಳಿಸಲು ನಿರ್ಧರಿಸಲಾಗಿತ್ತು. ಆದರೆ, ನಾಮಪತ್ರ ಸಲ್ಲಿಸುವ ದಿನ ಅನ್ಸಾರಿ ಅವರ ಮಗ ಅಬ್ಬಾಸ್ ಅನ್ಸಾರಿ ನಾಮಪತ್ರ ಸಲ್ಲಿಸಿದ್ದರು.



ಮುಖ್ತಾರ್ ಅನ್ಸಾರಿ

ಮುಖ್ತಾರ್ ಅನ್ಸಾರಿಯನ್ನು ಅಭ್ಯರ್ಥಿ ಎಂದು ಘೋಷಿಸಿದ್ದಾಗ ಬಿಜೆಪಿ ಮತ್ತು ಬಿಎಸ್‌ಪಿ, ‘ಮುಖ್ತಾರ್ ಅನ್ಸಾರಿ ಗೆದ್ದರೆ, ರಾಜ್ಯದಲ್ಲಿ ಮತ್ತೆ ಮಾಫಿಯಾ ರಾಜ್ ಅಧಿಕಾರಕ್ಕೆ ಬರುತ್ತದೆ. ಹೀಗಾಗಿ ಮಲು ಕ್ಷೇತ್ರವನ್ನು ಮತ್ತು ಆ ಮೂಲಕ ರಾಜ್ಯವನ್ನು ಮಾಫಿಯಾ ರಾಜ್‌ನಿಂದ ಸ್ವತಂತ್ರಗೊಳಿಸಿ’ ಎಂದು ಪದೇ ಪದೇ ಹೇಳುತ್ತಿದ್ದರು. ಹೀಗಾಗಿ ಮುಖ್ತಾರ್ ಬದಲಿಗೆ ಅವರ ಮಗನನ್ನು ಕಣಕ್ಕೆ ಇಳಿಸಲಾಯಿತು. ಹೀಗಿದ್ದೂ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮತ್ತು ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಅವರು ತಮ್ಮ ಭಾಷಣಗಳಲ್ಲಿ ಈ ವಿಷಯವನ್ನು ಪದೇ ಪದೇ ಪ್ರಸ್ತಾಪಿಸುತ್ತಿದ್ದಾರೆ.

ಮುಖ್ತಾರ್ ಅನ್ಸಾರಿಯ ಮಗ ಅಬ್ಬಾಸ್ ಅನ್ಸಾರಿ ಗೆದ್ದರೆ, ಮಲು ಕ್ಷೇತ್ರದಲ್ಲಿ ಮಾಫಿಯಾ ರಾಜ್ ಮುಂದುವರಿಯುತ್ತದೆ. ಅದನ್ನು ತಡೆಯಲು ಸಾಧ್ಯವಾಗುವುದಿಲ್ಲ
ಅಶೋಕ್ ಸಿಂಗ್, ಬಿಜೆಪಿ ಅಭ್ಯರ್ಥಿ

ಬಿಜೆಪಿ ಮತ್ತು ಬಿಎಸ್‌ಪಿಯ ಈ ಪ್ರತಿಪಾದನೆಯ ವಿರುದ್ಧ ಅಬ್ಬಾಸ್ ಅನ್ಸಾರಿ ಸಹ ತಂತ್ರ ಹೂಡಿದ್ದಾರೆ. ‘ಬಿಜೆಪಿ ಒಂದು ಜಾತಿಯ ಭೂಗತ ಪಾತಕಿಗಳನ್ನು ರಕ್ಷಿಸುತ್ತಿದೆ. ಯೋಗಿ ಆದಿತ್ಯನಾಥ ಅವರ ಸರ್ಕಾರ ಬಂದ ನಂತರ ಉತ್ತರ ಪ್ರದೇಶದಲ್ಲಿ ಅಪರಾಧ ಕೃತ್ಯಗಳ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಅಧಿಕಾರಕ್ಕೆ ಬಂದರೆ ಜನರ ಸ್ವತ್ತುಗಳನ್ನು ಉರುಳಿಸುತ್ತೇವೆ ಎಂದು ರಾಜ್ಯದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಬಹಿರಂಗವಾಗಿ ಘೋಷಿಸುತ್ತಾರೆ. ಇದು ಸಂವಿಧಾನಬಾಹಿರ’ ಎಂದು ಅಬ್ಬಾಸ್ ಅನ್ಸಾರಿ ಆರೋಪಿಸಿದ್ದಾರೆ.

‘ಅಬ್ಬಾಸ್‌ಗೆ ಅನುಕೂಲ’

‘ಈ ಕ್ಷೇತ್ರದಲ್ಲಿ ಒಟ್ಟು ಐದು ಲಕ್ಷ ಅರ್ಹ ಮತದಾರರಿದ್ದಾರೆ. ಅವರಲ್ಲಿ ಮುಸ್ಲಿಮರದ್ದೇ ಪ್ರಾಬಲ್ಯ. ಹೀಗಾಗಿ ಈ ಬಾರಿಯೂ ಗೆಲ್ಲುವ ಸಾಧ್ಯತೆ ಹೆಚ್ಚು ಇರುವುದು ಅಬ್ಬಾಸ್ ಅನ್ಸಾರಿಗೇ’ ಎನ್ನುತ್ತಾರೆ ರಾಜಕೀಯ ವಿಶ್ಲೇಷಕರು.

‘ಈ ಬಾರಿ ಬಿಜೆಪಿಯಾಗಲೀ, ಬಿಎಸ್‌ಪಿಯಾಗಲೀ, ಕೊನೆಗೆ ಕಾಂಗ್ರೆಸ್ ಸಹ ಮುಸ್ಲಿಮೇತರರನ್ನು ಕಣಕ್ಕೆ ಇಳಿಸಿವೆ. ಹೀಗಾಗಿ ಮುಸ್ಲಿಮರ ಮತಗಳೆಲ್ಲವೂ ಅಬ್ಬಾಸ್ ಅನ್ಸಾರಿಗೆ ಬೀಳುವ ಸಾಧ್ಯತೆ ಇದೆ. ಹೀಗಾಗಿ ಇದೂ ಸಹ ಅನ್ಸಾರಿಗೆ ಅನುಕೂಲವಾಗುವ ಸಾಧ್ಯತೆ ಇದೆ’ ಎಂದು ವಿಶ್ಲೇಷಿಸಲಾಗಿದೆ.

ಅಂಕಿ-ಅಂಶಗಳು

5 ಲಕ್ಷ — ಮಲು ಕ್ಷೇತ್ರದಲ್ಲಿರುವ ಅರ್ಹ ಮತದಾರರ ಸಂಖ್ಯೆ	1.25 ಲಕ್ಷ — ಮುಸ್ಲಿಂ ಮತದಾರರ ಸಂಖ್ಯೆ
1 ಲಕ್ಷ — ದಲಿತ ಮತದಾರರ ಸಂಖ್ಯೆ	55,000 — ರಾಜಬ್ಬರ್ ಸಮುದಾಯದ ಮತದಾರರ ಸಂಖ್ಯೆ

ಮಣಿಪುರ ವಿಧಾನಸಭೆ: ಮತದಾನ ಇಂದು

ಗುವಾಹಟಿ: ಮಣಿಪುರ ವಿಧಾನಸಭೆಗೆ ಸೋಮವಾರ ಮೊದಲ ಹಂತದ ಮತದಾನ ನಡೆಯಲಿದೆ. 38 ಕ್ಷೇತ್ರಗಳಿಗೆ ನಡೆಯುವ ಮತದಾನವು 173 ಅಭ್ಯರ್ಥಿಗಳ ಭವಿಷ್ಯವನ್ನು ನಿರ್ಧರಿಸಲಿದೆ.

ಐದು ಜಿಲ್ಲೆಗಳಾದ ಇಂಫಾಲ್ ಪೂರ್ವ, ಇಂಫಾಲ್ ಪಶ್ಚಿಮ, ವಿಷ್ಣುಪುರ, ಕಂಗ್‌ಪೋಕಪಿ ಮತ್ತು ಚುರಾಚಾಂದ್‌ಪುರಗಳಲ್ಲಿ 12 ಲಕ್ಷ ಜನರು ಮತ ಚಲಾಯಿಸಲಿದ್ದಾರೆ. 1,721 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

ಬಿಜೆಪಿ–ಜೆಡಿಯು ಮೈತ್ರಿಕೂಟ, ಎನ್‌ಪಿಪಿ ಎಲ್ಲ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ. 2017ರಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ರಚನೆಯಾದಾಗ, ಎನ್‌ಪಿಪಿ ಸರ್ಕಾರವನ್ನು ಬೆಂಬಲಿಸಿತ್ತು. ಈ ಬಾರಿ ಸ್ವತಂತ್ರವಾಗಿ ಸರ್ಕಾರ ರಚಿಸಲು ಎಲ್ಲ ಪಕ್ಷಗಳು ಬಯಸಿವೆ. ಕಾಂಗ್ರೆಸ್ ಪಕ್ಷವು ರಾಜ್ಯದ ಐದು ಸಣ್ಣ ಪಕ್ಷಗಳ ಜೊತೆ ಹೊಂದಾಣಿಕೆ ಮಾಡಿಕೊಂಡು ಕಣಕ್ಕೆ ಧುಮುಕಿದೆ.

60 ಸದಸ್ಯಬಲದ ವಿಧಾನಸಭೆಯ ಉಳಿದ 22 ಕ್ಷೇತ್ರಗಳಿಗೆ ಮಾರ್ಚ್ 5ರಂದು ಮತದಾನ ನಡೆಯಲಿದೆ.

ಗುಂಡಿನ ಸದ್ದು: ಚುನಾವಣೆಗೂ ಮುನ್ನ ರಾಜ್ಯದಲ್ಲಿ ಗುಂಡಿನ ಸದ್ದು ಕೇಳಿದೆ. ಕ್ಷೇತ್ರಿಗಾವ್ ವಿಧಾನಸಭಾ ಕ್ಷೇತ್ರದಿಂದ ಜೆಡಿಯು ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ವಾಂಗ್ಲೆಬಮ್ ರೋಹಿತ್ ಸಿಂಗ್ ಅವರ ಮೇಲೆ ದುಷ್ಕರ್ಮಿಗಳು ಗುಂಡು ಹಾರಿಸಿದ್ದಾರೆ. ಶನಿವಾರ ತಡರಾತ್ರಿ 12.30ರ ಸಮಯದಲ್ಲಿ ಈ ದಾಳಿ ನಡೆದಿದೆ ಎಂದು ಪೊಲೀಸರು ಹೇಳಿದ್ದಾರೆ. ಇಂಫಾಲ್ ಪಶ್ಚಿಮ ಜಿಲ್ಲೆಯ ನಹರುಪ್ ಮಖಾಪಟ್ ಎಂಬಲ್ಲಿ ಬೆಂಬಲಿಗರ ಜೊತೆ ಸಭೆ ನಡೆಸುತ್ತಿದ್ದಾಗ ದಾಳಿ ನಡೆದಿದೆ. ಎದೆಯಲ್ಲಿ ಗುಂಡು ಹೊಕ್ಕಿರುವ ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಈ ಘಟನೆ ನಡೆಯುವುದಕ್ಕೆ ಕೆಲವೇ ಗಂಟೆಗಳ ಮುನ್ನ, ಚುರಾಚಾಂದ್‌ಪುರ ಜಿಲ್ಲೆಯ ಗಂಗ್‌ಪಿಮುಲ್ ಗ್ರಾಮದಲ್ಲಿ ಸ್ಫೋಟ ನಡೆದಿದ್ದು, ಮೂವರು ಮೃತಪಟ್ಟಿದ್ದಾರೆ. ಕಚ್ಚಾಬಾಂಬ್ ದಾಳಿಯಲ್ಲಿ ಐವರು ಗಾಯಗೊಂಡಿದ್ದಾರೆ.

ಒಡಿಶಾ ಜಿಲ್ಲಾ ಪರಿಷತ್ ಚುನಾವಣೆ: ಬಿಜೆಡಿ ಮೇಲುಗೈ

ಭುವನೇಶ್ವರ (ಪಿಟಿಐ): ಘೋಷಿತ 300 ಜಿಲ್ಲಾ ಪರಿಷತ್ ಸ್ಥಾನಗಳ ಪೈಕಿ ಆಡಳಿತಾರೂಢ ಬಿಜೆಡಿ 268 ಕಡೆ ಜಯಭೇರಿ ಬಾರಿಸಿದೆ. ಮತ ಎಣಿಕೆ ಎರಡನೇ ದಿನವಾದ ಭಾನುವಾರವೂ ಮುಂದುವರಿದಿದೆ. ಶನಿವಾರ ಶುರುವಾದ ಮತ ಎಣಿಕೆಯು ಸೋಮವಾರವೂ ಮುಂದುವರಿಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯದ 851 ಜಿಲ್ಲಾ ಪರಿಷತ್‌ಗಳಿಗೆ ಐದು ಹಂತಗಳಲ್ಲಿ ಮತದಾನ ನಡೆದಿತ್ತು. 379 ಕ್ಷೇತ್ರಗಳ ಪೈಕಿ 329ರಲ್ಲಿ ಬಿಜೆಡಿ ಗೆದ್ದಿದೆ ಅಥವಾ ಮುನ್ನಡೆಯಲಿದೆ.

ಬೋಧಕೇತರ ಹುದ್ದೆಗೆ ಪರಿವರ್ತನೆ- ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆ ಕಾಡುತ್ತಿರುವ ಮಧ್ಯೆ, 44 ಉಪನ್ಯಾಸಕ ಹುದ್ದೆಗಳನ್ನು ಬೋಧಕೇತರ ಹುದ್ದೆಗಳಾದ 'ಶಾಖಾಧಿಕಾರಿ' ಹುದ್ದೆಗಳಾಗಿ ಪರಿವರ್ತಿಸಲು ನಿರ್ಧರಿಸಿರುವ ಪದವಿಪೂರ್ವ ಶಿಕ್ಷಣ ಇಲಾಖೆಯ ನಡೆಗೆ ಉಪನ್ಯಾಸಕರ ವಲಯದಿಂದ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಇಲಾಖೆಯಲ್ಲಿ ಹಾಲಿ 58 ಅಧೀಕ್ಷಕ ಹುದ್ದೆಗಳು, 15 ಶಾಖಾಧಿಕಾರಿ ಹುದ್ದೆಗಳಿವೆ. 44 ಉಪನ್ಯಾಸಕ ಹುದ್ದೆಗಳನ್ನು ಶಾಖಾಧಿಕಾರಿ ಹುದ್ದೆಗಳಾಗಿ ಪರಿವರ್ತಿಸಿದರೆ, ಅಧೀಕ್ಷಕ ಹುದ್ದೆಗಳಿಗಿಂತ ಹೆಚ್ಚು ಶಾಖಾಧಿಕಾರಿ ಹುದ್ದೆಗಳನ್ನು ಸೃಷ್ಟಿಸಿದಂತಾಗುತ್ತದೆ. ಇದರಿಂದ ಶೇಕಡಾ 100ರಷ್ಟು ಪದೋನ್ನತಿಗಳು ಅಧೀಕ್ಷಕರಿಗೆ ಸಿಕ್ಕಂತಾಗುತ್ತದೆ. ಇದು ನಿಯಮಬಾಹಿರ ಕ್ರಮ ಎಂದು ಉಪನ್ಯಾಸಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಕೋವಿಡ್‌ನಿಂದಾಗಿ ಸೂಕ್ತ ಕ್ರಮದಲ್ಲಿ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ ನಡೆದಿಲ್ಲ. ಹೀಗಾಗಿ, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗೆ ಉತ್ತೀರ್ಣ ಮಾಡಲಾಗಿದ್ದು, ಸರ್ಕಾರಿ ಕಾಲೇಜುಗಳಿಗೆ ದಾಖಲಾತಿ ಗಣನೀಯವಾಗಿ ಹೆಚ್ಚಾಗಿದೆ. ಹಲವು ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆ ಉಂಟಾಗಿದೆ. ಇಂಥ ಸಂದರ್ಭದಲ್ಲಿ ದೊಡ್ಡ ಸಂಖ್ಯೆಯಲ್ಲಿ ಉಪನ್ಯಾಸಕ ಹುದ್ದೆಗಳನ್ನು ಬೋಧಕೇತರ ಹುದ್ದೆಗಳಾದ ಪರಿವರ್ತಿಸಲು ಹೊರಟಿರುವುದು ಸರಿಯಲ್ಲ. ಈ ಬಗ್ಗೆ ಸಚಿವರು ಮತ್ತು ಕಾರ್ಯದರ್ಶಿಯ ಗಮನಕ್ಕೆ ತರುತ್ತೇವೆ’ ಎಂದು ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಸಂಘಟನಾ ಕಾರ್ಯದರ್ಶಿ ಹಂ.ಗು. ರಾಜೇಶ್ ಹೇಳಿದ್ದಾರೆ.

‘ಆರ್ಥಿಕ ಇಲಾಖೆಯ ಅನುಮೋದನೆ ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಬದಲಾವಣೆ ತರದೆ ಈ ರೀತಿ ಪರಿವರ್ತಿಸಲು ಹೊರಟಿರುವುದು ನಿಯಮ ಉಲ್ಲಂಘನೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ನಿಯಮಗಳನ್ನು ಅಧಿಕಾರಿಗಳು ಗಾಳಿಗೆ ತೂರಲು ಮುಂದಾಗಿದ್ದಾರೆ. ಪದೋನ್ನತಿಗಳು ಪಿರಮಿಡ್ ಮಾದರಿಯಲ್ಲಿ ಇರಬೇಕೆಂದು ಡಿಪಿಎಆರ್ ನಿಯಮದಲ್ಲಿದೆ. ಅದರ ಪ್ರಕಾರ 4 ಅಧೀಕ್ಷಕ ಹುದ್ದೆಗಳಿಗೆ ಒಂದು ಶಾಖಾಧಿಕಾರಿ ಹುದ್ದೆ ಇರಬೇಕು. ಆದರೆ, ಇಲ್ಲಿ 58 ಅಧೀಕ್ಷಕ ಹುದ್ದೆಗಳಿಗೆ 59 ಶಾಖಾಧಿಕಾರಿ ಹುದ್ದೆ ಸೃಷ್ಟಿ ಸರಿಯಲ್ಲ’ ಎಂದೂ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ವರ್ಗಾವಣೆಯಿಂದ ವಂಚಿತರಾಗುವ ಆತಂಕದಲ್ಲಿ 645 ಶಿಕ್ಷಕರು

ಪ್ರಾಥಮಿಕ ಸಹಶಿಕ್ಷಕರ ವರ್ಗಾವಣೆಗೆ ಕಂಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಗೆ ಮತ್ತೊಮ್ಮೆ ಕಂಟಕ ಎದುರಾಗಿದೆ. ಮಂಗಳವಾರದಿಂದ (ಫೆ. 28) ನಡೆಯಬೇಕಿದ್ದ ಪ್ರಾಥಮಿಕ ಶಾಲಾ ಸಹಶಿಕ್ಷಕರ ವರ್ಗಾವಣೆ ಕೌನ್ಸೆಲಿಂಗ್‌ಗೆ ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ತಡೆಯಾಜ್ಞೆ ನೀಡಿದೆ. ಹೀಗಾಗಿ, ಕೌನ್ಸೆಲಿಂಗ್ ಅನ್ನು ಶಿಕ್ಷಣ ಇಲಾಖೆ ಸ್ಥಗಿತಗೊಳಿಸಿದೆ.

ಪ್ರಾಥಮಿಕ ಶಾಲಾ ಸಹಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯನ್ನು ಎರಡು ಹಂತದಲ್ಲಿ ನಡೆಸಲಾಗಿದೆ. ಮೊದಲ ಹಂತದಲ್ಲಿ ಈಗಾಗಲೇ ಸುಮಾರು 8 ಸಾವಿರ ಶಿಕ್ಷಕರಿಗೆ ವರ್ಗಾವಣೆ ದೊರೆತಿದೆ. ಆದರೆ, ಎರಡನೇ ಹಂತದ ಅಂತರ ಘಟಕ ವಿಭಾಗದ ಹೊರಗಿನ (ವಿಭಾಗದಿಂದ ಹೊರಗೆ) ವರ್ಗಾವಣೆಗೆ ತಡೆಯಾಜ್ಞೆ ನೀಡಿರುವುದರಿಂದ ಅರ್ಜಿ ಸಲ್ಲಿಸಿದ್ದ 645 ಶಿಕ್ಷಕರು ವರ್ಗಾವಣೆಯಿಂದ ವಂಚಿತರಾಗುವ ಆತಂಕದಲ್ಲಿದ್ದಾರೆ.

ಪ್ರಾಥಮಿಕ ಶಾಲಾ ಪದವೀಧರ ಶಿಕ್ಷಕ (ಜಿಪಿಟಿ) ಹುದ್ದೆಗಳಿಗೆ ಪ್ರಾಥಮಿಕ ಶಾಲಾ ಸಹ ಶಿಕ್ಷಕರನ್ನು (ಪಿಎಸ್‌ಟಿ) ಕೌನ್ಸೆಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿರುವುದನ್ನು ಪ್ರಶ್ನಿಸಿ ಶ್ರೀಶೈಲ (ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು) ಎಂಬವರು ಕೆಎಟಿ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ ಕೆಎಟಿ ಮಧ್ಯಂತರ ಆದೇಶ ನೀಡಿದ್ದು, ಅಂತಿಮ ತೀರ್ಪು ಬರುವವರೆಗೂ ಪ್ರಾಥಮಿಕ ಶಾಲಾ ಸಹಶಿಕ್ಷಕರ ವರ್ಗಾವಣೆಗೆ ಕೌನ್ಸೆಲಿಂಗ್ ನಡೆಸದಂತೆ ಆದೇಶಿಸಿದೆ. ವರ್ಗಾವಣೆ ಪ್ರಕ್ರಿಯೆಯನ್ನೇ ರದ್ದುಪಡಿಸಬೇಕು ಎಂದು ಶ್ರೀಶೈಲ ಅವರು ಮನವಿ ಮಾಡಿದ್ದಾರೆ.

ವರ್ಗಾವಣೆ ಅಧಿಸೂಚನೆ ಹೊರಡಿಸಿದ್ದ 2020 ನ. 11ರ ಪ್ರಕಾರ ಮೊದಲ ಹಂತದ ವರ್ಗಾವಣೆ ಪೂರ್ಣಗೊಂಡಿದೆ. 2021 ಜೂನ್ 30ರ ಅಧಿಸೂಚನೆಯಂತೆ ಎರಡನೇ ಹಂತದ ವರ್ಗಾವಣೆ ನಡೆಯಬೇಕಿತ್ತು. ಈಗಾಗಲೇ ಘಟಕದ ಒಳಗೆ ಮತ್ತು ವಿಭಾಗದ ಪ್ರಾಥಮಿಕ ಸಹ ಶಿಕ್ಷಕರ ವರ್ಗಾವಣೆ ಪೂರ್ಣಗೊಂಡಿದೆ. ಅಲ್ಲದೆ, ಈಗಾಗಲೇ ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆಯು ಶೇ 90 ಮುಕ್ತಾಯವಾಗಿದ್ದು, ಇಡೀ ಪ್ರಕ್ರಿಯೆ ಕೊನೆ ಹಂತದಲ್ಲಿದೆ. ಈ ತಡೆಯಾಜ್ಞೆಯನ್ನು ಆದಷ್ಟು ಬೇಗ ತೆರವುಗೊಳಿಸಿ, ಕೌನ್ಸೆಲಿಂಗ್ ನಡೆಸಿ ಉಳಿದ ಶಿಕ್ಷಕರಿಗೆ ಸ್ಥಳ ಆಯ್ಕೆಗೆ ಅವಕಾಶ ಮಾಡಿಕೊಡಬೇಕು ಎಂದು ಪ್ರಾಥಮಿಕ ಶಾಲಾ ಸಹ ಶಿಕ್ಷಕರು ಆಗ್ರಹಿಸಿದ್ದಾರೆ.

ಅಂತರ್ ಘಟಕ ವಿಭಾಗದ ಹೊರಗಿನ ಪ್ರಾಥಮಿಕ ಶಾಲಾ ಸಹ ಶಿಕ್ಷಕರ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ಇದೇ 28ರಂದು ವರ್ಚುವಲ್ ಮೂಲಕ ಆಯಾ ಜಿಲ್ಲಾ ಉಪನಿರ್ದೇಶಕರ ಕಚೇರಿಗಳಲ್ಲಿ ನಡೆಸಲು ಶಿಕ್ಷಣ ಇಲಾಖೆ ನಿರ್ಧರಿಸಿತ್ತು. ವರ್ಗಾವಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿದ್ದರೂ ಎರಡು ವರ್ಷಗಳಿಂದ ಈ ಪ್ರಕ್ರಿಯೆ ಪೂರ್ಣಗೊಳಿಸಲು ಸಾಧ್ಯವಾಗಿಲ್ಲ. ವರ್ಗಾವಣೆ ಪ್ರಕ್ರಿಯೆಯನ್ನು ಇಲಾಖೆ ಆದಷ್ಟು ಬೇಗ ಪೂರ್ಣಗೊಳಿಸಬೇಕು ಎಂದೂ ಒತ್ತಾಯಿಸುತ್ತಿದ್ದಾರೆ.

ರಣಜಿ ಟ್ರೋಫಿ: ಗೌತಮ್, ಪ್ರಸಿದ್ಧ ಮೋಡಿ; ದೇವ್ ಸಿಂಗ್, ಸಮದ್ ವೀರೋಚಿತ ಹೋರಾಟ

ಕರ್ನಾಟಕಕ್ಕೆ ಜಯದ ಸಂಭ್ರಮ

ಚೆನ್ನೈ: ದಿಟ್ಟ ಪ್ರತಿರೋಧವೊಡ್ಡಿದ ಜಮ್ಮು ಕಾಶ್ಮೀರ ತಂಡದ ನಾಯಕ ಇಯಾನ್ ದೇವ್ ಸಿಂಗ್ ಮತ್ತು ಅಬ್ದುಲ್ ಸಮದ್ ಅವರನ್ನು ಕಟ್ಟಿಹಾಕುವಲ್ಲಿ ಯಶಸ್ವಿಯಾದ ಆಫ್‌ಸ್ಪಿನ್ನರ್ ಕೃಷ್ಣಪ್ಪ ಗೌತಮ್ ಕರ್ನಾಟಕ ತಂಡಕ್ಕೆ ರಣಜಿ ಟ್ರೋಫಿ ಟೂರ್ನಿಯಲ್ಲಿ ಜಯದ ಕಾಣಿಕೆ ನೀಡಿದರು.

ಐಐಟಿ ಕೆಮ್‌ಪ್ಲಾಸ್ಟ್ ಮೈದಾನದಲ್ಲಿ ಭಾನುವಾರ ಮುಕ್ತಾಯವಾದ ಪಂದ್ಯದಲ್ಲಿ ಮನೀಷ್ ಪಾಂಡೆ ಬಳಗವು 117 ರನ್‌ಗಳಿಂದ ಜಮ್ಮು ಕಾಶ್ಮೀರ ತಂಡವನ್ನು ಮಣಿಸಿತು. ಇದರೊಂದಿಗೆ ಆರು ಅಂಕಗಳನ್ನು ಜೇಬಿಗಿಳಿಸಿಕೊಂಡಿತು. ಮೊದಲ ಪಂದ್ಯದಲ್ಲಿ ರೈಲ್ವೆ ವಿರುದ್ಧ ಡ್ರಾ ಸಾಧಿಸಿದ್ದ ಕರ್ನಾಟಕ, ಈ ಬಾರಿಯ ಟೂರ್ನಿಯಲ್ಲಿ ಪ್ರಥಮ ಜಯದ ಸಂಭ್ರಮ ಆಚರಿಸಿತು. ಸಿ ಗುಂಪಿನ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಜಯಕ್ಕಾಗಿ 507 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಕಾಶ್ಮೀರ ತಂಡವು 98.5 ಓವರ್‌ಗಳಲ್ಲಿ 390 ರನ್ ಗಳಿಸಿತು. ಶನಿವಾರ ಮೂರನೇ ದಿನದಾಟದ ಅಂತ್ಯಕ್ಕೆ 57.5 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 189 ರನ್ ಗಳಿಸಿತ್ತು. ಕ್ರೀಸ್‌ನಲ್ಲಿದ್ದ ಇಯಾನ್ ದೇವ್ ಮತ್ತು ಸಮದ್ ಕೊನೆಯ ದಿನ ಬೆಳಗಿನ ಅವಧಿಯಲ್ಲಿ ಚೆಂದದ ಬ್ಯಾಟಿಂಗ್ ಮಾಡಿದರು. ಕರ್ನಾಟಕದ ಬೌಲರ್‌ಗಳನ್ನು ಕಾಡಿದರು ತಮ್ಮ ತಂಡದ ಸೋಲು ತಪ್ಪಿಸಲು ಇಯಾನ್ ದೇವ್ (110; 188ಎ, 4X15, 2X6) ಮತ್ತು ಅಬ್ದುಲ್ ಸಮದ್ (70; 78ಎ) ವಿರೋಚಿತ ಹೋರಾಟ ನಡೆಸಿದರು. ಐದನೇ ವಿಕೆಟ್ ಜೊತೆಯಾಟದಲ್ಲಿ 143 ರನ್ ಸೇರಿಸಿದರು.

ಇನಿಂಗ್ಸ್‌ನ 76ನೇ ಓವರ್‌ನಲ್ಲಿ ಸಮದ್ ವಿಕೆಟ್ ಗಳಿಸುವಲ್ಲಿ ಯಶಸ್ವಿಯಾದ ಗೌತಮ್ ಜೊತೆಯಾಟವನ್ನು ಮುರಿದರು. ಇದಾಗಿ ನಾಲ್ಕು ಓವರ್‌ಗಳ ನಂತರ ಗೌತಮ್ ಮತ್ತೊಂದು ಪೆಟ್ಟು ಕೊಟ್ಟರು. ಇಯಾನ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಆದರೂ ಛಲ ಬಿಡದ ಕಾಶ್ಮೀರದ ಪರ್ವೇಜ್ ರಸೂಲ್ (46; 63ಎ, 4X6) ಮತ್ತು ಅಬಿದ್ ಮುಷ್ತಾಕ್ (43; 35ಎ, 4X5, 6X3) ಪ್ರತಿರೋಧವೊಡ್ಡಿದರು. ದಿನದಾಟದ ತಂಡವನ್ನು ಡ್ರಾದತ್ತ ಕೊಂಡೊಯ್ಯುವ ಸಾಹಸ ಮಾಡಿದರು.

ಆದರೆ, ಮಧ್ಯಮವೇಗಿ ಪ್ರಸಿದ್ಧ ಕೃಷ್ಣ ಇದಕ್ಕೆ ಅವಕಾಶ ಕೊಡಲಿಲ್ಲ. ರಸೂಲ್ ಮತ್ತು ಅಬಿದ್ ಅವರಿಬ್ಬರಿಗೂ ಪೆವಿಲಿಯನ್ ದಾರಿ ತೋರಿದರು. ಉಮ್ರನ್ ಮಲೀಕ್ ವಿಕೆಟ್ ಕೂಡ ಕಬಳಿಸಿದ ಪ್ರಸಿದ್ಧ ಈ ಪಂದ್ಯದಲ್ಲಿ ಒಟ್ಟು 10 ವಿಕೆಟ್‌ಗಳನ್ನು ಗಳಿಸಿದ ಸಾಧನೆ ಮಾಡಿದರು. ಮೊದಲ ಇನಿಂಗ್ಸ್‌ನಲ್ಲಿ ಅವರು ಆರು ವಿಕೆಟ್ ಗಳಿಸಿದ್ದರು. ಅದರಿಂದಾಗಿ ಕಾಶ್ಮೀರ ತಂಡವು 93 ರನ್‌ಗಳಿಗೆ ಆಲೌಟ್ ಆಗಿತ್ತು.

ಮೊದಲ ಇನಿಂಗ್ಸ್‌ನಲ್ಲಿ 302 ರನ್ ಗಳಿಸಿದ್ದ ಕರ್ನಾಟಕವು 209 ರನ್‌ಗಳ ಭಾರಿ ಮುನ್ನಡೆ ಗಳಿಸಿತ್ತು. ಎರಡನೇ ಇನಿಂಗ್ಸ್‌ನಲ್ಲಿ 71 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 298 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತ್ತು. ಎರಡೂ ಇನಿಂಗ್ಸ್‌ಗಳಲ್ಲಿ ಮಿಂಚಿದ್ದ ಕರುಣ್ ನಾಯರ್ (175 ಮತ್ತು ಔಟಾಗದೆ 71) ಪಂದ್ಯಶ್ರೇಷ್ಠ ಗೌರವಕ್ಕೆ ಪಾತ್ರರಾದರು.



ಪ್ರಸಿದ್ಧ ಕೃಷ್ಣ

'ಸಿ' ಗುಂಪಿನ ಪಾಯಿಂಟ್ ಪಟ್ಟಿ					
ತಂಡ	ಪಂದ್ಯ	ಜಯ	ಸೋಲು	ಡ್ರಾ	ಪಾಯಿಂಟ್ಸ್
ಕರ್ನಾಟಕ	2	1	0	1	9
ಜಮ್ಮು–ಕಾಶ್ಮೀರ	2	1	1	0	6
ರೈಲ್ವೇಸ್	2	0	0	2	4
ಪುದುಚೇರಿ	2	0	1	1	1

ಸ್ಕೋರ್ ಕಾರ್ಡ್

ಕರ್ನಾಟಕ ಮೊದಲ ಇನಿಂಗ್ಸ್ 302 (103.1 ಓವರ್)
ಜಮ್ಮು ಮತ್ತು ಕಾಶ್ಮೀರ ಮೊದಲ ಇನಿಂಗ್ಸ್ 93 (29.5 ಓವರ್)
ಕರ್ನಾಟಕ ಎರಡನೇ ಇನಿಂಗ್ಸ್ 3ಕ್ಕೆ 298 ಡಿಕ್ಲೇರ್ (71 ಓವರ್)
ಜಮ್ಮು ಮತ್ತು ಕಾಶ್ಮೀರ ಎರಡನೇ ಇನಿಂಗ್ಸ್ 390 (98.5 ಓವರ್)
(ಶನಿವಾರ 57.5 ಓವರ್‌ಗಳಲ್ಲಿ 4ಕ್ಕೆ 189)
ಇಯಾನ್ ದೇವ್ ಎಲ್‌ಬಿಡಬ್ಲ್ಯು ಬಿ ಗೌತಮ್ 110 (188 ಎ, 4x15, 6x2), ಸಮದ್ ಸಿ ಶರತ್ ಬಿ ಗೌತಮ್ 70 (78ಎ, 4x6, 6x5), ರಸೂಲ್ ಸಿ ದೇವದತ್ತ ಬಿ ಪ್ರಸಿದ್ಧ 46 (63ಎ, 4X6), ಅಕೀಬ್ ಸಿ ಪಾಂಡೆ ಬಿ ಗೋಪಾಲ್ 4 (11ಎ, 4X1), ಅಬೀದ್ ಎಲ್‌ಬಿಡಬ್ಲ್ಯು ಬಿ ಪ್ರಸಿದ್ಧ 43 (35ಎ, 4X5, 6X3), ಮುಜ್ತಾಬಾ ಔಟಾಗದೆ 4 (9ಎ, 4X1), ಉಮ್ರಾನ್ ಬಿ ಪ್ರಸಿದ್ಧ 8 (4ಎ, 4X2)
ಇತರೆ (ಬೈ 5, ಲೆಗ್‌ಬೈ 5, ವೈಡ್ 2) 12
ವಿಕೆಟ್ ಪತನ: 5–279 (ಅಬ್ದುಲ್ ಸಮದ್, 75.5), 6–294 (ಇಯಾನ್ ದೇವ್ ಸಿಂಗ್, 81.5), 7–301 (ಅಕೀಬ್ ನಬಿ, 84.5), 8–371 (ಅಬೀದ್ ಮುಷ್ತಾಕ್, 94.5), 9–382 (ಪರ್ವೇಜ್ ರಸೂಲ್, 98.1), 10–390 (ಉಮ್ರಾನ್ ಮಲಿಕ್, 98.5)
ಬೌಲಿಂಗ್: : ಪ್ರಸಿದ್ಧ ಕೃಷ್ಣ 20.5–7–59–4, ಕೃಷ್ಣಪ್ಪ ಗೌತಮ್ 32–3–122–2, ವಿದ್ಯಾಧರ್ ಪಾಟೀಲ 14–4–44–0, ಶ್ರೇಯಸ್ ಗೋಪಾಲ್ 32–3–155–4

ಫಲಿತಾಂಶ: ಕರ್ನಾಟಕ ತಂಡಕ್ಕೆ 117 ರನ್‌ಗಳ ಜಯ


ಕೃಷ್ಣಪ್ಪ ಗೌತಮ್

ರೈಲ್ವೇಸ್–ಪುದುಚೇರಿ ಪಂದ್ಯ ಡ್ರಾ

ಎಲೀಟ್ 'ಸಿ' ಗುಂಪಿನ ರೈಲ್ವೇಸ್ ಮತ್ತು ಪುದುಚೇರಿ ನಡುವಿನ ಪಂದ್ಯ ಡ್ರಾದಲ್ಲಿ ಮುಕ್ತಾಯ ಕಂಡಿತು. ಪರಾಗ್ ಡೊಗ್ರಾ ಅವರ ಶತಕದ ಬಲದಿಂದ ಪುದುಚೇರಿ ಮೊದಲ ಇನಿಂಗ್ಸ್‌ನಲ್ಲಿ 342 ರನ್ ಗಳಿಸಿತ್ತು. ಅರಿಂದಂ ಘೋಷ್ (100), ಮೊಹಮ್ಮದ್ ಸೈಫ್ (99) ಮತ್ತು ವಿವೇಕ್ ಸಿಂಗ್ (92) ಅವರ ಅಮೋಘ ಆಟದಿಂದ ರೈಲ್ವೇಸ್ 525 ರನ್ ಗಳಿಸಿ ತಿರುಗೇಟು ನೀಡಿತ್ತು.

ಪುದುಚೇರಿ 2ನೇ ಇನಿಂಗ್ಸ್‌ನಲ್ಲಿ 3ವಿಕೆಟ್‌ಗಳಿಗೆ 208 ರನ್ ಗಳಿಸಿದ್ದಾಗ ಪಂದ್ಯ ಮುಕ್ತಾಯಗೊಳಿಸಲು ನಿರ್ಧರಿಸಲಾಯಿತು.

ವಿಶ್ವಕಪ್ ಕ್ರಿಕೆಟ್ ಅಭ್ಯಾಸ ಪಂದ್ಯ; ಭಾರತಕ್ಕೆ ರೋಚಕ ಜಯ

ಹರ್ಮನ್‌ಪ್ರೀತ್ ಶತಕ ವೈಭವ

ರಾಂಗ್ಯೊರ, ನ್ಯೂಜಿಲೆಂಡ್: ತಮ್ಮ ನೈಜ ಲಯಕ್ಕೆ ಮರಳಿರುವ ಹರ್ಮನ್‌ಪ್ರೀತ್ ಕೌರ್ ಅವರ ಶತಕ ಮತ್ತು ಎಡಗೈ ಸ್ಪಿನ್ನರ್, ಕರ್ನಾಟಕದ ರಾಜೇಶ್ವರಿ ಗಾಯಕವಾಡ್ ಅವರು ಪರಿಣಾಮಕಾರಿ ಬೌಲಿಂಗ್ ದಾಳಿ ಬಲದಿಂದ ಭಾರತ ತಂಡ ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಅಭ್ಯಾಸ ಪಂದ್ಯದಲ್ಲಿ ಜಯಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಭಾರತ ಎರಡು ರನ್‌ಗಳಿಂದ ದಕ್ಷಿಣ ಆಫ್ರಿಕಾವನ್ನು ಮಣಿಸಿತು. ಕೆಲವು ಕಾಲದಿಂದ ಫಾರ್ಮ್ ಕಳೆದುಕೊಂಡಿದ್ದ ಹರ್ಮನ್‌ಪ್ರೀತ್ ಕೌರ್ ಈಚೆಗೆ ನ್ಯೂಜಿಲೆಂಡ್ ವಿರುದ್ಧ ನಡೆದ ಕೊನೆಯ ಏಕದಿನ ಪಂದ್ಯದಲ್ಲಿ ಉತ್ತಮ ಬ್ಯಾಟಿಂಗ್ ಮಾಡಿ ಗಮನ ಸೆಳೆದಿದ್ದರು. ದಕ್ಷಿಣ ಆಫ್ರಿಕಾ ಎದುರಿನ ಹಣಾಹಣಿಯಲ್ಲಿ ಅವರು 114 ಎಸೆತಗಳಲ್ಲಿ 103 ರನ್ ಗಳಿಸಿದರು. 9 ಬೌಂಡರಿಗಳು ಅವರ ಇನಿಂಗ್ಸ್‌ನಲ್ಲಿದ್ದವು.

ಮೊದಲು ಬ್ಯಾಟ್ ಮಾಡಿದ ಭಾರತ 9ಕ್ಕೆ 244 ರನ್ ಗಳಿಸಿತ್ತು. ಗುರಿ ಬೆನ್ನತ್ತಿದ ದಕ್ಷಿಣ ಆಫ್ರಿಕಾ ಆರಂಭಿಕ ಬ್ಯಾಟರ್ ಲಾರಾ ವೊಲ್ವಾರ್ಟ್ (83; 95 ಎಸೆತ, 7 ಬೌಂಡರಿ, 2 ಸಿಕ್ಸರ್) ಮತ್ತು ಸೂನ್ ಲುಸ್ (86; 98 ಎ, 6 ಬೌಂ) ಅವರ ಭರ್ಜರಿ ಬ್ಯಾಟಿಂಗ್ ನೆರವಿನಿಂದ ಜಯದತ್ತ ಹೆಜ್ಜೆ ಹಾಕಿತ್ತು. ಆದರೆ ರಾಜೇಶ್ವರಿ ಗಾಯಕವಾಡ್ ಅವರ ಪ್ರಬಲ ದಾಳಿಗೆ ನಲುಗಿ ಇತರ ಬ್ಯಾಟರ್‌ಗಳು ವೈಫಲ್ಯ ಕಂಡರು. ತಂಡಕ್ಕೆ 7 ವಿಕೆಟ್ ಕಳೆದುಕೊಂಡು 242 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ಭಾರತದ ಪರ ಆರಂಭಿಕ ಬ್ಯಾಟರ್ ಯಷ್ತಿಕಾ ಭಾಟಿಯಾ (58; 78 ಎ, 4 ಬೌಂ, 1 ಸಿ) ಅರ್ಧಶತಕ ಗಳಿಸಿ ಮಿಂಚಿದರು. ಐವರು ಬ್ಯಾಟರ್‌ಗಳು ಎರಡಂಕಿ ಮೊತ್ತ ದಾಟದೆ ಮರಳಿದರು.

ಮಾರ್ಚ್ 6ರಂದು ನಡೆಯಲಿರುವ ಟೂರ್ನಿಯ ಮೊದಲ ಪಂದ್ಯದಲ್ಲಿ ಭಾರತ ಮಹಿಳೆಯರು ಪಾಕಿಸ್ತಾನ ಮಹಿಳೆಯರನ್ನು ಎದುರಿಸುವರು.


ಹರ್ಮನ್‌ಪ್ರೀತ್ ಕೌರ್ –ಎಎಫ್‌ಪಿ ಚಿತ್ರ

ಸ್ಮೃತಿ ತಲೆಗೆ ಪೆಟ್ಟು

ಭಾರತದ ಇನಿಂಗ್ಸ್ ಆರಂಭದಲ್ಲೇ ಆಘಾತ ಕಂಡಿತು. ಯಾಷ್ಟಿಕ ಭಾಟಿಯ ಜೊತೆ ಇನಿಂಗ್ಸ್ ಆರಂಭಿಸಲು ಬಂದ ಸ್ಫೋಟಕ ಬ್ಯಾಟರ್ ಸ್ಮೃತಿ ಮಂದಾನ ಅವರು ತಲೆಗೆ ಗಂಭೀರ ಪೆಟ್ಟುಬಿದ್ದು ಕ್ರೀಸ್ ತೊರೆದರು. 23 ಎಸೆತಗಳಲ್ಲಿ 12 ರನ್ ಗಳಿಸಿ ಆಡುತ್ತಿದ್ದ ವೇಳೆ ಶಬ್ನಿಮ್ ಇಸ್ಮಾಯಿಲ್ ಅವರ ಬೌನ್ಸರ್ ಸ್ಮೃತಿ ಅವರ ತಲೆಗೆ ಬಡಿಯಿತು. ಹೀಗಾಗಿ ನಿವೃತ್ತಿಯಾಗಿ ವಾಪಸಾದರು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 9ಕ್ಕೆ 244 (ಹರ್ಮನ್‌ಪ್ರೀತ್ ಕೌರ್ 103, ಯಷ್ತಿಕಾ ಭಾಟಿಯಾ 58, ಸ್ನೇಹಾ ರಾಣಾ 14, ಪೂಜಾ ವಸ್ತ್ರಕರ್ 16; ಅಯಬೊಂಗ ಕಾಕಾ 23ಕ್ಕೆ3); ದಕ್ಷಿಣ ಆಫ್ರಿಕಾ: 50 ಓವರ್‌ಗಳಲ್ಲಿ 7ಕ್ಕೆ 242 (ಲಾರಾ ವೊಲ್ವಾರ್ಟ್ 75, ಸೂನ್ ಲುಸ್ 94; ಮೇಘನಾ ಸಿಂಗ್ 38ಕ್ಕೆ1, ರಾಜೇಶ್ವರಿ ಗಾಯಕವಾಡ್ 46ಕ್ಕೆ4, ಸ್ನೇಹಾ ರಾಣಾ 38ಕ್ಕೆ1, ಪೂನಂ ಯಾದವ್ 54ಕ್ಕೆ1)

ಯೂತ್ ಪ್ರೀಮಿಯರ್ ಲೀಗ್: ವಿವಾನ್ ಹ್ಯಾಟ್ರಿಕ್

ಬೆಂಗಳೂರು: ವಿವಾನ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಬಿಬಿಎಫ್‌ಎಸ್ ತಂಡ ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ ಆಶ್ರಯದ ಯೂತ್ ಲೀಗ್‌ನಲ್ಲಿ ಭರ್ಜರಿ ಜಯ ಗಳಿಸಿತು.

ಭಾನುವಾರ ನಡೆದ 12 ವರ್ಷದೊಳಗಿನವರ ಪಂದ್ಯದಲ್ಲಿ ಬಿಬಿಎಸ್‌ಎಫ್ 5–1ರಲ್ಲಿ ಬಿಎಫ್‌ಸಿಯನ್ನು ಮಣಿಸಿತು. ಬಿಬಿಎಫ್‌ಎಸ್ ತಂಡಕ್ಕಾಗಿ ಸನಾರಾಯ್ ಮೊದಲ ನಿಮಿಷದಲ್ಲೇ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರು. 15, 19 ಮತ್ತು 37ನೇ ನಿಮಿಷದಲ್ಲಿ ವಿವಾನ್ ಚೆಂಡನ್ನು ಗುರಿ ಮುಟ್ಟಿಸಿದರು. 62ನೇ ನಿಮಿಷದಲ್ಲಿ ಶ್ರೇಹಿತ್ ಗೋಲು ಗಳಿಸಿದರು. ಬಿಎಫ್‌ಸಿಯ ಏಕೈಕ ಗೋಲು ರಾಹುಲ್ (68ನೇ ನಿ) ಅವರಿಂದ ಬಂತು.

17 ವರ್ಷದೊಳಗಿನವರ ಪಂದ್ಯದಲ್ಲಿ ಬಿಬಿಎಫ್‌ಎಸ್ 2–0ಯಿಂದ ಬಿಸಿಎಯನ್ನು ಮಣಿಸಿತು. ಶ್ರವಣ್ (28ನೇ ನಿ) ಮತ್ತು ಅದ್ಮಿತ್ ಸೋಣಿ (87ನೇ ನಿ) ಗೋಲು ಗಳಿಸಿದರು. ಟಿಎಸ್‌ಎಸ್ 3–2ರಲ್ಲಿ ಬಿಐಎಫ್‌ಎಯನ್ನು ಸೋಲಿಸಿತು. ಟಿಎಸ್‌ಎಸ್‌ಗಾಗಿ ಕುನಾಲ್ ರಾಘವ್ (45ನೇ ನಿ), ನಿರ್ಮಯನು ಅತ್ರಿ (52, 90ನೇ ನಿ) ಗೋಲು ಗಳಿಸಿದರೆ ಬಿಐಎಫ್‌ಎಗಾಗಿ ತನೀಶ್ ತಮ್ಮಣ್ಣ (54ನೇ ನಿ), ರಜತ್ (8ನೇ ನಿ) ಗೋಲು ಗಳಿಸಿದರು. ಬಿವೈಎಫ್‌ಎಲ್ 5–1ರಲ್ಲಿ ಬೋಕಾ ಎಲ್ಲೋವನ್ನು ಮಣಿಸಿತು. ಅಭಿಷೇಕ್ (18, 55ನೇ ನಿ), ನಮ್ರಿಂಗ್ (40, 88ನೇ ನಿ) ಮತ್ತು ಸಮ್‌ಸ್ವಾಯಿ (66ನೇ ನಿ) ಬಿವೈಎಫ್‌ಎಲ್‌ಗಾಗಿ, ಸಂಪ್ರಂಗ್ (60ನೇ ನಿ) ಬೋಕಾ ತಂಡಕ್ಕಾಗಿ ಗೋಲು ಗಳಿಸಿದರು.

ಎಫ್‌ಎಬಿ 6–0ಯಿಂದ ಬಿಬಿಎಫ್‌ಎಸ್ ಸ್ಟೈಪರ್ ತಂಡವನ್ನು ಮಣಿಸಿತು. ಜೋಮೋನ್ ಜೇಕಬ್ (1, 52, 68ನೇ ನಿ), ಶಿವಾನಂದ (48ನೇ ನಿ), ಅಂಶ್ ಮಿಶ್ರಾ (58ನೇ ನಿ) ಮತ್ತು ಫೈಜನ್ (70ನೇ ನಿ) ಗೋಲು ಗಳಿಸಿದರು. 12 ವರ್ಷದೊಳಗಿನವರ ಮತ್ತೊಂದು ಪಂದ್ಯದಲ್ಲಿ ರೂಟ್ಸ್ ಎಫ್‌ಎಸ್ 2–0ಯಿಂದ ಬಿಸಿಎಫ್‌ಸಿಯನ್ನು ಸೋಲಿಸಿತು.

ರ‍್ಯಾಪಿಡ್ ಚೆಸ್: ವಿಘ್ನೇಶ್‌ಗೆ ಪ್ರಶಸ್ತಿ


ಬಿ. ವಿಘ್ನೇಶ್

ಬೆಂಗಳೂರು: ಜಾಣ್ಮೆಯ ಆಟವಾಡಿದ ಬಿ. ವಿಘ್ನೇಶ್ ಅವರು ಬೆಂಗಳೂರು ಗ್ರಾಮಾಂತರ ಜಿಲ್ಲಾ ಚೆಸ್ ಸಂಸ್ಥೆ (ಬಿಆರ್‌ಡಿಸಿಎ) ಆಯೋಜಿಸಿದ್ದ ರ‍್ಯಾಪಿಡ್ ಚೆಸ್ ಟೂರ್ನಿಯ ಮುಕ್ತ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು.

ಹೊಸಕೋಟೆಯ ಸಾಯಿ ಪ್ಯಾಲೇಸ್‌ನಲ್ಲಿ ನಡೆದ ಟೂರ್ನಿಯಲ್ಲಿ ಚೆನ್ನೈನ ವಿಘ್ನೇಶ್ (ಎಲೊ ರೇಟಿಂಗ್ 1636) ಏಳು ಸುತ್ತುಗಳಲ್ಲಿ ಏಳು ಪಾಯಿಂಟ್ಸ್ ಗಳಿಸಿ ಅಗ್ರಸ್ಥಾನ ತಮ್ಮದಾಗಿಸಿಕೊಂಡರು.

ಸಾಯಿ ಅಳಗಪ್ಪನ್ ಎಸ್. ಎರಡನೇ ಸ್ಥಾನ ಮತ್ತು ಮಂಡ್ಯದ ಚಿರಂತನ್ ಎಂ.ಡಿ. 3ನೇ ಸ್ಥಾನ ಗಳಿಸಿದರು.

7 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಇಶಾನ್ ಖೆರ್, ಬಾಲಕಿಯರ ವಿಭಾಗದಲ್ಲಿ ಸಾನ್ವಿಕಾ ಬಿ.ವಿ. ಪ್ರಶಸ್ತಿ ಜಯಿಸಿದರು. 9 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಸುಮನ್ ಸಾಯಿ ದೀಪ್, ಬಾಲಕಿಯರ ವಿಭಾಗದಲ್ಲಿ ಇಂದುಶೀತಲಾ, 11 ವರ್ಷದೊಳಗಿನ ಬಾಲಕರಲ್ಲಿ ಪವನ ಪುತ್ರನ್, ಬಾಲಕಿಯರಲ್ಲಿ ಸಹನಾ ಪ್ರಶಸ್ತಿ ಗೆದ್ದರು.


ಪ್ರಶಸ್ತಿಯೊಂದಿಗೆ ರಫೆಲ್ ನಡಾಲ್ ಸಂಭ್ರಮ –ಎಎಫ್‌ಪಿ ಚಿತ್ರ

ನಡಾಲ್‌ಗೆ 91ನೇ ಎಟಿಪಿ ಪ್ರಶಸ್ತಿ

ಅಕಾಪಲ್ಕೊ (ಎಪಿ): ಸ್ಪೇನ್‌ನ ರಫೆಲ್ ನಡಾಲ್ ಮತ್ತೊಮ್ಮೆ ತಮ್ಮ ಸಾಮರ್ಥ್ಯ ಸಾಬೀತು ಮಾಡಿದರು. ಭಾನುವಾರ ಮುಕ್ತಾಯಗೊಂಡ ಮೆಕ್ಸಿಕನ್ ಓಪನ್ ಟೆನಿಸ್ ಟೂರ್ನಿಯಲ್ಲೂ ಪಾರಮ್ಯ ಮೆರೆದು ಪ್ರಶಸ್ತಿ ಗೆದ್ದುಕೊಂಡರು. ಈ ಮೂಲಕ 91ನೇ ಎಟಿಪಿ ಪ್ರಶಸ್ತಿಯ ಸಾಧನೆ ಮಾಡಿದರು.

ನಡಾಲ್ ಫೈನಲ್ ಹಣಾಹಣಿಯಲ್ಲಿ ಬ್ರಿಟನ್‌ನ ಕ್ಯಾಮರಾನ್ ನೋರಿ ವಿರುದ್ಧ 6-4, 6-4ರಲ್ಲಿ ಗೆಲುವು ಸಾಧಿಸಿದರು. ಈ ವರ್ಷ ಆಡಿದ ಎಲ್ಲ 15 ಪಂದ್ಯಗಳನ್ನು ಗೆದ್ದ ಸಾಧನೆಯೂ ಅವರದಾಯಿತು. ಅತಿ ಹೆಚ್ಚು ಬಾರಿ ಚಾಂಪಿಯನ್ ಆದವರ ಪೈಕಿ ನಡಾಲ್ ಈಗ ನಾಲ್ಕನೇ ಸ್ಥಾನದಲ್ಲಿದ್ದಾರೆ. ಜಿಮ್ಮಿ ಕೇನರ್ಸ್ ಒಟ್ಟು 109 ಪ್ರಶಸ್ತಿ ಗೆದ್ದುಕೊಂಡಿದ್ದು ರೋಜರ್ ಫೆಡರರ್ 103 ಮತ್ತು ಇವಾನ್ ಲೆಂಡ್ಲ್ 94 ಪ್ರಶಸ್ತಿ ಗಳಿಸಿದ್ದಾರೆ.

ಭಾನುವಾರದ ಪಂದ್ಯದ ಆರಂಭದ ಸೆಟ್‌ನ ಐದನೇ ಗೇಮ್‌ನಲ್ಲಿ ಬ್ರೇಕ್ ಪಾಯಿಂಟ್‌ನೊಂದಿಗೆ 3–2ರ ಮುನ್ನಡೆ ಗಳಿಸಿದರು. 51 ನಿಮಿಷಗಳಲ್ಲಿ ಮೊದಲ ಸೆಟ್ ಗೆದ್ದುಕೊಂಡರು. 2ನೇ ಸೆಟ್‌ನ ಮೊದಲ ಗೇಮ್‌ನಲ್ಲಿ ಬ್ರೇಕ್ ಪಾಯಿಂಟ್ ಗಳಿಸಿದರು. ಆದರೆ ನೋರಿ ತಿರುಗೇಟು ನೀಡಿ ಚೇತರಿಸಿಕೊಂಡರು. ಆದರೆ ಐದು ಮತ್ತು ಏಳನೇ ಗೇಮ್‌ನಲ್ಲಿ ಬ್ರೇಕ್ ಪಾಯಿಂಟ್ ಕಲೆ ಹಾಕಿ ಗೇಮ್ ಮತ್ತು ಪಂದ್ಯವನ್ನು ಗೆದ್ದುಕೊಂಡರು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ದರ ಏರಿಕೆ

ಹೆಚ್ಚಲಿದೆ ತೈಲ ಆಮದು ವೆಚ್ಚ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರವು ಏಳು ವರ್ಷಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ. ಇದರಿಂದಾಗಿ, ಭಾರತವು ಕಚ್ಚಾ ತೈಲ ಆಮದಿಗೆ ಮಾಡುವ ವೆಚ್ಚವು ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ಪ್ರಸ್ತಕ ಹಣಕಾಸು ವರ್ಷದಲ್ಲಿ ಬಹುತೇಕ ಎರಡು ಪಟ್ಟು ಹೆಚ್ಚಾಗಲಿದೆ ಎಂದು ಪೆಟ್ರೋಲಿಯಂ ಸಚಿವಾಲಯದ 'ಪೆಟ್ರೋಲಿಯಂ ಯೋಜನೆ ಮತ್ತು ವಿಶ್ಲೇಷಣೆ ಘಟಕ' (ಪಿಪಿಎಸಿ) ಹೇಳಿದೆ.

2020–21ನೇ ಹಣಕಾಸು ವರ್ಷದಲ್ಲಿ ಕಚ್ಚಾ ತೈಲ ಆಮದು ವೆಚ್ಚವು ₹ 4.66 ಲಕ್ಷ ಕೋಟಿಗಳಷ್ಟು ಆಗಿತ್ತು. ಇದು ಪ್ರಸಕ್ತ ಹಣಕಾಸು ವರ್ಷದಲ್ಲಿ (2021–22) ₹ 8.25 ಲಕ್ಷ ಕೋಟಿಗಳಿಂದ ₹ 8.62 ಲಕ್ಷ ಕೋಟಿಗಳಷ್ಟು ಆಗಲಿದೆ ಎಂದು ತಿಳಿಸಿದೆ. 2020-21ನೇ ಹಣಕಾಸು ವರ್ಷದಲ್ಲಿ ಕೋವಿಡ್ ಸಾಂಕ್ರಾಮಿಕದ ಕಾರಣಕ್ಕಾಗಿ ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲ ದರವು ಹೆಚ್ಚಿನ ಏರಿಕೆ ಕಂಡಿರಲಿಲ್ಲ.

ತೈಲ ಆಮದು ವೆಚ್ಚ	
ವರ್ಷ	ಮೌಲ್ಯ (ಲಕ್ಷ ಕೋಟಿ)
2019–20	₹ 7.60
2020–21	₹ 4.66
2021–22	₹ 8.25

ಪ್ರಸಕ್ತ ಹಣಕಾಸು ವರ್ಷದಲ್ಲಿ ಈವರೆಗೆ 17.59 ಕೋಟಿ ಟನ್‌ಗಳಷ್ಟು ಕಚ್ಚಾ ತೈಲ ಆಮದು ಮಾಡಿಕೊಳ್ಳಲಾಗಿದೆ. ಪ್ರಸಕ್ತ ಹಣಕಾಸು ವರ್ಷದ 10 ತಿಂಗಳಿನಲ್ಲಿ (ಏಪ್ರಿಲ್–ಜನವರಿ) ಆಮದಿಗೆ ₹ 7.07 ಲಕ್ಷ ಕೋಟಿಗಳಷ್ಟು ವೆಚ್ಚ ಮಾಡಲಾಗಿದೆ. ಜನವರಿ ತಿಂಗಳಿನಲ್ಲಿ ಕಚ್ಚಾ ತೈಲ ದರ ಏರಿಕೆ ಆಗಲು ಆರಂಭವಾದಾಗ ₹ 87 ಸಾವಿರ ಕೋಟಿ ವೆಚ್ಚ ಮಾಡಲಾಗಿತ್ತು. ಇದು ಕಳೆದ ವರ್ಷದ ಜನವರಿಯಲ್ಲಿ ₹ 57,750 ಕೋಟಿ ವೆಚ್ಚ ಆಗಿತ್ತು.

ಭಾರತವು ತನ್ನ ದೇಶಿ ಬೇಡಿಕೆಯ ಶೇ 85ರಷ್ಟು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. ರಷ್ಯಾ–ಉಕ್ರೇನ್ ಸಂಘರ್ಷದಿಂದಾಗಿ ಫೆಬ್ರುವರಿ 24ರಂದು ಬ್ರೆಂಟ್ ಕಚ್ಚಾ ತೈಲ ದರವು ಬ್ಯಾರಲ್‌ಗೆ 105.58 ಡಾಲರ್‌ಗಳಿಗೆ ತಲುಪಿತು. ಐರೋಪ್ಯ ಒಕ್ಕೂಟವು ರಷ್ಯಾ ಮೇಲೆ ಆರ್ಥಿಕ ನಿರ್ಬಂಧ ಹೇರಿದ ಬಳಿಕ ತೈಲ ದರವು ಬ್ಯಾರಲ್‌ಗೆ 100 ಡಾಲರ್‌ಗಳಿಂದ ಕೆಳಕ್ಕೆ ಇಳಿಕೆ ಆಯಿತು.

2021–22ರ ಏಪ್ರಿಲ್–ಜನವರಿ ಅವಧಿಯಲ್ಲಿ ₹ 1.49 ಲಕ್ಷ ಕೋಟಿ ಮೌಲ್ಯದ 3.36 ಕೋಟಿ ಟನ್‌ಗಳಷ್ಟು ಪೆಟ್ರೋಲಿಯಂ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳಲಾಗಿದೆ.

ಉತ್ಪಾದನೆ ಇಳಿಕೆ: ದೇಶದಲ್ಲಿ ಕಚ್ಚಾ ತೈಲ ಉತ್ಪಾದನೆಯು ಇಳಿಮುಖವಾಗಿದೆ. 2019–20ರಲ್ಲಿ 3.05 ಕೋಟಿ ಟನ್‌ಗಳಷ್ಟು ಉತ್ಪಾದನೆ ಆಗಿತ್ತು. 2020–21ರಲ್ಲಿ 2.91 ಲಕ್ಷ ಕೋಟಿಗಳಿಗೆ ಇಳಿಕೆ ಆಗಿದೆ. ಪ್ರಸಕ್ತ ಹಣಕಾಸು ವರ್ಷದ 10 ತಿಂಗಳಿನಲ್ಲಿ 2.44 ಕೋಟಿ ಟನ್‌ಗಳಷ್ಟು ಉತ್ಪಾದನೆ ಆಗಿದೆ.

ಪಿಎಫ್‌ಗೆ ಕಂಪನಿಗಳ ಕೊಡುಗೆ ವಿಳಂಬಕ್ಕೆ ದಂಡ ಭರಿಸಬೇಕು: ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾರ್ಮಿಕರ ಭವಿಷ್ಯ ನಿಧಿಗೆ, ಕಂಪನಿಗಳು ತಮ್ಮ ಪಾಲನ್ನು ನೀಡದೇ ಇದ್ದರೆ ಅಥವಾ ವಿಳಂಬ ಮಾಡಿದರೆ ದಂಡವನ್ನು ಭರಿಸಬೇಕಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ಕಂಪನಿಯು ಇಪಿಎಫ್‌ನ ತನ್ನ ಪಾಲನ್ನು ವಿಳಂಬ ಮಾಡಲು ಯಾವುದೇ ದುರುದ್ದೇಶ ಹೊಂದಿರದೆ ಇದ್ದರೂ ನಾಗರಿಕ ಹೊಣೆಗಾರಿಕೆಗಳು ಅಥವಾ ಜವಾಬ್ದಾರಿಯ ಉಲ್ಲಂಘನೆ ಮಾಡಿದ್ದಕ್ಕಾಗಿ ದಂಡ ಅಥವಾ ನಷ್ಟವನ್ನು ಭರಿಸಬೇಕಾಗುತ್ತದೆ' ಎಂದು ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಬಿ.ವಿ. ನಾಗರತ್ನ ಅವರ ಪೀಠ ಹೇಳಿದೆ.

ಉದ್ಯೋಗಿಗಳ ಭವಿಷ್ಯ ನಿಧಿ ಮತ್ತು ಇತರೆ ನಿಬಂಧನೆಗಳ ಕಾಯ್ದೆ–1952ರ ನಿಬಂಧನೆಗಳನ್ನು ಅನುಸರಿಸಲು ಕೊಡಗಿನ ಗೋಣಿಕೊಪ್ಪಲದ ತೋಟಗಾರಿಕೆ ಪ್ರಾಯೋಗಿಕ ಕೇಂದ್ರ ವಿಫಲವಾದ ಕಾರಣಕ್ಕಾಗಿ ನಷ್ಟ ಪರಿಹಾರ ನೀಡುವಂತೆ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರು ತೀರ್ಪು ನೀಡಿದ್ದರು. ಇದನ್ನು ಕರ್ನಾಟಕ ಹೈಕೋರ್ಟ್ ಎತ್ತಿ ಹಿಡಿದಿತ್ತು. ಇದರ ವಿರುದ್ಧ ಕೊಡಗಿನ ಗೋಣಿಕೊಪ್ಪಲದ ತೋಟಗಾರಿಕೆ ಪ್ರಾಯೋಗಿಕ ಕೇಂದ್ರ ಸಲ್ಲಿಸಿದ ಮೇಲ್ಮನವಿಯನ್ನು ನ್ಯಾಯಪೀಠ ವಜಾಗೊಳಿಸಿದೆ.

ಇಪಿಎಫ್ ವಂತಿಗೆ ನೀಡುವಲ್ಲಿ ಕಂಪನಿಯು ವಿಳಂಬ ಮಾಡುತ್ತಿದೆ. ಸಾಮಾಜಿಕ ಭದ್ರತೆಯನ್ನು ಒದಗಿಸುವಲ್ಲಿ ಲೋಪ ಎಸಗಿದ್ದು, ಇದು ಅತ್ಯಂತ ಪ್ರಮುಖ ಅಂಶವಾಗಿದೆ. ಆದರೆ, ಸಂಬಂಧಪಟ್ಟ ಪ್ರಾಧಿಕಾರವು ಇದನ್ನು ಗಮನಕ್ಕೆ ತೆಗೆದುಕೊಂಡಿಲ್ಲ ಎಂದು ಅರ್ಜಿದಾರರು ವಾದಿಸಿದರು.

ಎಫ್‌ಪಿಐ: ₹ 35,506 ಕೋಟಿ ಹೊರಹರಿವು

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಸತತ ಐದನೇ ತಿಂಗಳಿನಲ್ಲಿಯೂ ದೇಶದ ಮಾರುಕಟ್ಟೆಗಳಿಂದ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ.

ಫೆಬ್ರುವರಿ 1 ರಿಂದ 25ರವರೆಗಿನ ವಹಿವಾಟು ಅವಧಿಯಲ್ಲಿ ₹ 35,506 ಕೋಟಿ ಮೊತ್ತವನ್ನು ಬಂಡವಾಳ ಮಾರುಕಟ್ಟೆಯಿಂದ ಹಿಂದಕ್ಕೆ ಪಡೆದಿದ್ದಾರೆ. ಇದರಲ್ಲಿ ₹ 31,158 ಕೋಟಿ ಮೊತ್ತದ ಷೇರುಗಳು ಹಾಗೂ ₹ 4,467 ಕೋಟಿ ಮೊತ್ತದ ಸಾಲಪತ್ರಗಳು ಸೇರಿಕೊಂಡಿವೆ.

2021ರ ಅಕ್ಟೋಬರ್‌ನಿಂದಲೂ ಬಂಡವಾಳ ಹೊರಹರಿವು ಕಂಡುಬರುತ್ತಿದೆ. 2020ರ ಮಾರ್ಚ್ ನಂತರದ 2022ರ ಫೆಬ್ರುವರಿಯಲ್ಲಿ ಆಗಿರುವ ಗರಿಷ್ಠ ಮಟ್ಟದ ಹೊರಹರಿವು ಇದಾಗಿದೆ. 2020ರ ಮಾರ್ಚ್‌ನಲ್ಲಿ ₹ 1.18 ಲಕ್ಷ ಕೋಟಿ ಬಂಡವಾಳ ಹೊರಹರಿವು ಕಂಡಿತ್ತು. ಈ ಅವಧಿಯಲ್ಲಿ ಹೈಬ್ರಿಡ್ ಫಂಡ್‌ನಲ್ಲಿ ₹ 120 ಕೋಟಿ ಹೂಡಿಕೆ ಮಾಡಿದ್ದಾರೆ.

ಶೀಘ್ರವೇ ಬಡ್ಡಿದರ ಹೆಚ್ಚಳದ ನಿರ್ಧಾರ ತೆಗೆದುಕೊಳ್ಳುವುದಾಗಿ ಅಮೆರಿಕದ ಫೆಡರಲ್ ರಿಸರ್ವ್ ಹೇಳಿರುವುದು ಬಂಡವಾಳ ಹೊರಹರಿವಿಗೆ ಮುಖ್ಯ ಕಾರಣ ಆಗಿದೆ. ರಷ್ಯಾ ಮತ್ತು ಉಕ್ರೇನ್ ಮಧ್ಯೆ ನಡೆಯುತ್ತಿರುವ ಸಂಘರ್ಷ ಸಹ ವಿದೇಶಿ ಹೂಡಿಕೆದಾರರನ್ನು ಎಚ್ಚರಿಕೆಯಿಂದ ವಹಿವಾಟು ನಡೆಸುವಂತೆ ಮಾಡಿದೆ ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾ ಸಂಸ್ಥೆಯ ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾಸ್ತ ಹೇಳಿದ್ದಾರೆ.

ರಷ್ಯಾ–ಉಕ್ರೇನ್ ಬಿಕ್ಕಟ್ಟು ಯಾವ ಸ್ವರೂಪ ಪಡೆಯಲಿದೆ ಎಂದು ನಿರೀಕ್ಷಿಸುವುದು ಕಷ್ಟ. ಸಂಘರ್ಷವು ಮುಂದುವರಿದರೆ, ಜಾಗತಿಕ ಆರ್ಥಿಕತೆಯ ಮೇಲಿನ ಪರಿಣಾಮಗಳು ತೀವ್ರಗೊಳ್ಳಲಿವೆ ಎಂದು ಜಿಯೋಜಿತ್ ಹಣಕಾಸು ಸೇವೆಗಳ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ತಿಳಿಸಿದ್ದಾರೆ.

ಹಣಕಾಸಿನ ಭದ್ರತೆಗೆ ನಾಲ್ಕು ಸೂತ್ರಗಳು


ಬಂಡವಾಳ ಮಾರುಕಟ್ಟೆ
ಅವಿನಾಶ್ ಕೆ.ಟಿ.

ಆರ್ಥಿಕವಾಗಿ ಸಬಲರಾಗಲು ಬೇಕಿರುವ ಅಡಿಪಾಯ ಆರ್ಥಿಕ ಶಿಸ್ತು. ಹೌದು, ಹಣಕಾಸು ನಿರ್ವಹಣೆಯನ್ನು ಸರಿಯಾಗಿ ಕಲಿತರೆ ಮುಗ್ಗಟ್ಟಿನ ಪರಿಸ್ಥಿತಿಯನ್ನೂ ಸಮರ್ಥವಾಗಿ ನಿಭಾಯಿಸಬಹುದು. ಬನ್ನಿ, ವೈಯಕ್ತಿಕ ಹಣಕಾಸು ನಿರ್ವಹಣೆಯಲ್ಲಿ ಬಹಳ ಮುಖ್ಯ ಅನ್ನಿಸುವ ನಾಲ್ಕು ಪ್ರಮುಖ ಸೂತ್ರಗಳ ಬಗ್ಗೆ ತಿಳಿದುಕೊಳ್ಳೋಣ.

ಸುಲಭವಾಗಿ ಸಿಗುತ್ತದೆ ಎಂದು ಸಾಲ ಮಾಡಬೇಡಿ: ನಾನು ಬಹಳಷ್ಟು ಜನರನ್ನು 'ಸಾಲ ಯಾಕೆ ಮಾಡಿದ್ದೀರಿ' ಎಂದು ಕೇಳಿದಾಗ ಅವರಿಂದ ಬರುವ ಉತ್ತರ 'ಸಾಲ ಸಿಗುತ್ತೆ ಅಂದ್ರು, ಅದಕ್ಕೆ ಸಾಲ ತೆಗೆದುಕೊಂಡ್ವಿ' ಅಂತ. ಹೀಗೆ ಗೊತ್ತು ಗುರಿಯಿಲ್ಲದೆ ಸಾಲ ಮಾಡುವವರ ಸಂಖ್ಯೆಯೇ ಹೆಚ್ಚು. 25ರಿಂದ 30 ವರ್ಷ ವಯಸ್ಸಿನ ನಡುವೆ ಇರುವಾಗ ಹಲವು ರೀತಿಯ ಜವಾಬ್ದಾರಿಗಳಿರುತ್ತವೆ. ಗೃಹ ಸಾಲ, ವೈಯಕ್ತಿಕ ಸಾಲ, ಕ್ರೆಡಿಟ್ ಕಾರ್ಡ್ ಸಾಲ, ಇಎಂಐ ಹೀಗೆ ಹತ್ತಾರು ಬಗೆಯ ಸಾಲಗಳನ್ನು ಪಡೆಯುವಾಗ ಮುಂದೆ ಎದುರಿಸಬಹುದಾದ ಸಮಸ್ಯೆಗಳ ಬಗ್ಗೆ ಅರಿವಿರಬೇಕು. ಎಲ್ಲ ಮಾದರಿಗಳ ಸಾಲ ಪಡೆದು ತಿಂಗಳ ಸಂಬಳದಲ್ಲೇ ಅವನ್ನು ತೀರಿಸುತ್ತೇವೆ ಎನ್ನುವುದು ಮೂರ್ಖತನವಾಗುತ್ತದೆ.

ಶೇಕಡ 8.5ರಿಂದ ಶೇ 13ರವರೆಗೆ ಬಡ್ಡಿದರ ಇರುವ ಸಾಲದ ಹೊರೆಯನ್ನು ಇಳಿಸಿಕೊಳ್ಳುವುದು ಅಷ್ಟು ಸುಲಭದ ಮಾತಲ್ಲ. ಸರಳವಾಗಿ ಹೇಳುವುದಾದರೆ, ಹಾಸಿಗೆ ಇದ್ದಷ್ಟು ಮಾತ್ರ ಕಾಲು ಚಾಚಬೇಕು ಎನ್ನುವ ಗಾದೆಯನ್ನು ಅರಿತು ಮುನ್ನಡೆದರೆ ಸಂಕಷ್ಟ ನಿಮ್ಮ ಹತ್ತಿರ ಸುಳಿಯುವುದಿಲ್ಲ.

ಎಲ್ಲ ಖರ್ಚುಗಳಿಗೂ ಯೆಸ್ ಎನ್ನಬೇಡಿ: ಯಾವುದಕ್ಕೆ ಹಣ ಖರ್ಚು ಮಾಡಬೇಕು, ಯಾವುದಕ್ಕೆ ಖರ್ಚು ಮಾಡಬಾರದು ಎನ್ನುವುದನ್ನು ನಿರ್ದಾಕ್ಷಿಣ್ಯವಾಗಿ ಹೇಳುವ ಜಾಣ್ಮೆಯನ್ನು ಯಾವ ವ್ಯಕ್ತಿ ರೂಢಿಸಿಕೊಂಡಿದ್ದಾನೋ ಆತ ಹಣಕಾಸಿನ ನಿರ್ವಹಣೆಯಲ್ಲಿ ಯಶಸ್ಸು ಗಳಿಸುತ್ತಾನೆ. ಯಾವ ವ್ಯಕ್ತಿ ಕುಟುಂಬದವರ, ಸಂಬಂಧಿಕರ ಮುಲಾಜಿಗೆ ಸಿಲುಕಿ ಹಣ ವ್ಯಯಿಸುವ ಬಗ್ಗೆ ತೀರ್ಮಾನಿಸುತ್ತಾನೋ ಆ ವ್ಯಕ್ತಿ ಆರ್ಥಿಕ ಹಿನ್ನಡೆ ಅನುಭವಿಸುತ್ತಾನೆ ಎಂದು ಖ್ಯಾತ ಹೂಡಿಕೆ ತಜ್ಞ ವಾರನ್ ಬಫೆಟ್ ಹೇಳುತ್ತಾರೆ.

ಮಕ್ಕಳು, ಪತ್ನಿ ಮತ್ತು ತಂದೆ–ತಾಯಿಯೊಂದಿಗಿನ ಭಾವನಾತ್ಮಕ ಸಂಬಂಧಕ್ಕೆ ಜೋತು ಬಿದ್ದು ಮನೆಯ ಯಜಮಾನ ಹಣಕಾಸಿನ ತೀರ್ಮಾನಗಳನ್ನು ತೆಗೆದುಕೊಂಡರೆ ಹಣಕಾಸಿನ ಕೊರತೆ ನಿರಂತರವಾಗಿ ಕಾಡುವುದು ನಿಶ್ಚಿತ. ಹಣ ವ್ಯಯಿಸುವಾಗ ದೀರ್ಘಾವಧಿ ಉದ್ದೇಶಗಳನ್ನು ಗಮನದಲ್ಲಿ ಇಟ್ಟುಕೊಳ್ಳುವುದು ಬಹಳ ಮುಖ್ಯ.

ವಿಮೆ ಮತ್ತು ಹೂಡಿಕೆ ನಡುವೆ ವ್ಯತ್ಯಾಸ ತಿಳಿಯಿರಿ: ಅನೇಕರು ವಿಮೆ ಮತ್ತು ಹೂಡಿಕೆಯನ್ನು ಒಂದೇ ತಕ್ಕಡಿಯಲ್ಲಿ ಇರಿಸಿ ತೂಗುತ್ತಾರೆ. ಆದರೆ ವಿಮೆಯನ್ನು ಹೂಡಿಕೆ ಎಂದು ತಿಳಿಯಬಾರದು. ವಿಮೆ ಎನ್ನುವುದು ನಿಮ್ಮ ಪಾಲಿನ ರಕ್ಷಾ ಕವಚ. ಸಂಕಷ್ಟದ ಸಮಯದಲ್ಲಿ ಅದು ನಿಮ್ಮ ನೆರವಿಗೆ ಬರುತ್ತದೆ. ಹೂಡಿಕೆ ಎಂದರೆ ನೀವು ಗಳಿಸಿರುವ ಹಣವನ್ನು ಮತ್ತಷ್ಟು ಹೆಚ್ಚು ಮಾಡಲು ಇರುವ ಮಾರ್ಗ. ಹೂಡಿಕೆಯಿಂದ ಸಂಪತ್ತು ವೃದ್ಧಿಯಾದರೆ, ಅನಿಶ್ಚಿತ ಸಂದರ್ಭಗಳನ್ನು ಎದುರಿಸಲು ವಿಮೆ ನೆರವು ನೀಡುತ್ತದೆ. ಹಾಗಾಗಿ ನೀವು ವಿಮೆ ಹೊಂದುವುದು ಅವಶ್ಯಕ.

ಒಂದೇ ಕಡೆ ಹೂಡಿಕೆ ಸಲ್ಲದು: ನಾವು ಆರೋಗ್ಯವಾಗಿ ಇರಬೇಕಾದರೆ, ಸಮತೂಕದ ಆಹಾರ ಅಗತ್ಯ. ಅಂತೆಯೇ ಉಳಿತಾಯದಲ್ಲಿಯೂ ಸಮತೋಲನ ಕಾಯ್ದುಕೊಳ್ಳುವುದು ಅಗತ್ಯ. ಒಂದೇ ಕಡೆ ಹೆಚ್ಚು ಹೂಡಿಕೆ ಮಾಡಿದಾಗ ಆ ಹೂಡಿಕೆ ಉತ್ಪನ್ನ ನಷ್ಟ ಅನುಭವಿಸಿದರೆ ನಿಮಗೂ ದೊಡ್ಡ ಮಟ್ಟದಲ್ಲಿ ನಷ್ಟವಾಗುತ್ತದೆ. ನಿಮ್ಮ ಹೂಡಿಕೆಯು ವಿವಿಧ ಕಂಪನಿಗಳ ಷೇರು, ಬಾಂಡ್‌ಗಳಲ್ಲಿ ಹಾಗೂ ವಿವಿಧ ಸಾಂಪ್ರದಾಯಿಕ ಹೂಡಿಕೆ ಉತ್ಪನ್ನಗಳಲ್ಲಿ ಇದ್ದಾಗ ರಿಸ್ಕ್ ಪ್ರಮಾಣ ಕಡಿಮೆ. ಉದಾಹರಣೆಗೆ: ನಿವೇಶನ ಖರೀದಿ, ಕೃಷಿ ಜಮೀನು ಖರೀದಿ, ಪಿಪಿಎಫ್ ಹೂಡಿಕೆ, ಎಫ್.ಡಿ, ಮ್ಯೂಚುವಲ್ ಫಂಡ್ ಹೂಡಿಕೆ, ಷೇರುಗಳಲ್ಲಿ ಹೂಡಿಕೆ, ಪಿಂಚಣಿ ಯೋಜನೆಯಲ್ಲಿ ಹೂಡಿಕೆ... ಹೀಗೆ ಹತ್ತಾರು ಕಡೆ ಹೂಡಿಕೆ ಮಾಡಿದಾಗ ಭದ್ರತೆ ಹೆಚ್ಚು.

(ಲೇಖಕ: ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹ ವಿಭಾಗದ ಮುಖ್ಯಸ್ಥ)



ಅನಿಶ್ಚಿತತೆಯತ್ತ ಮುಖ ಮಾಡಿದ ಷೇರುಪೇಟೆ

ಫೆಬ್ರುವರಿ 25ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಕುಸಿತ ಕಂಡಿವೆ. 55,858 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 3.41ರಷ್ಟು ತಗ್ಗಿದ್ದರೆ, 16,658 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 3.58ರಷ್ಟು ಇಳಿಕೆಯಾಗಿದೆ. ರಷ್ಯಾ–ಉಕ್ರೇನ್ ನಡುವಿನ ಯುದ್ಧ, ಕಚ್ಚಾ ತೈಲದ ಬೆಲೆ ಏರಿಕೆ, ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಹಿಂಜರಿಕೆ ಸೇರಿ ಹಲವು ಅಂಶಗಳು ಷೇರುಪೇಟೆ ಕುಸಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಬ್ಯಾಂಕ್ ಶೇ 3ರಷ್ಟು, ಮಿಡ್ ಕ್ಯಾಪ್ ಶೇ 3.5ರಷ್ಟು, ಸ್ಮಾಲ್ ಕ್ಯಾಪ್ ಶೇ 5.3ರಷ್ಟು, ಸರ್ಕಾರಿ ಸ್ವಾಮ್ಯದ ಸೂಚ್ಯಂಕ ಶೇ 6ರಷ್ಟು, ನಿಫ್ಟಿ ರಿಯಲ್ ಎಸ್ಟೇಟ್ ಶೇ 3.40ರಷ್ಟು ಮತ್ತು ನಿಫ್ಟಿ ಮೂಲಸೌಕರ್ಯ ಸೂಚ್ಯಂಕ ಶೇ 4.92ರಷ್ಟು ಕುಸಿದಿವೆ.

ಇಳಿಕೆ–ಗಳಿಕೆ: ನಿಫ್ಟಿಯಲ್ಲಿ ಬಿಪಿಸಿಎಲ್ ಶೇ 10ರಷ್ಟು, ಯುಪಿಎಲ್ ಶೇ 10ರಷ್ಟು, ಗ್ರಾಸಿಮ್ ಶೇ 9ರಷ್ಟು, ಎಚ್‌ಡಿಎಫ್‌ಸಿ ಲೈಫ್ ಶೇ 9ರಷ್ಟು, ಎಸ್‌ಬಿಐ ಲೈಫ್ ಶೇ 9ರಷ್ಟು ಇಳಿಕೆ ಕಂಡಿವೆ. ಸಿಪ್ಲಾ ಶೇ 1.7ರಷ್ಟು, ಕೋಟಕ್ ಬ್ಯಾಂಕ್ ಶೇ 1.5ರಷ್ಟು, ಪವರ್ ಗ್ರಿಡ್ ಶೇ 0.8ರಷ್ಟು ಮತ್ತು ಹಿಂಡಾಲ್ಕೊ ಶೇ 0.8ರಷ್ಟು ಗಳಿಕೆ ಕಂಡಿವೆ.

ಪ್ಯೂಚರ್ ಆ್ಯಂಡ್ ಆಪ್ಶನ್‌ನಲ್ಲಿ ಇಂಡಿಯಾ ಬುಲ್ಸ್ ಹೌಸಿಂಗ್ ಫೈನಾನ್ಸ್ ಶೇ 19ರಷ್ಟು, ಇಂಡಸ್ ಟವರ್ಸ್ ಶೇ 15ರಷ್ಟು, ರೇನ್ ಇಂಡಸ್ಟ್ರೀಸ್ ಶೇ 13ರಷ್ಟು, ದಾಲ್ಮಿಯಾ ಸಿಮೆಂಟ್ ಶೇ 12ರಷ್ಟು, ಜೀ ಶೇ 12ರಷ್ಟು ಕುಸಿದಿವೆ. ಡಿಕ್ಸಾನ್ ಟೆಕ್ನಾಲಜೀಸ್ ಶೇ 10ರಷ್ಟು, ಕ್ರಾಂಪ್ಟನ್ ಕನ್ಸೂಮರ್ ಶೇ 7ರಷ್ಟು, ಅಬೋಟ್ ಶೇ 6.5ರಷ್ಟು, ಯುನೈಟೆಡ್ ಸ್ಪಿರಿಟ್ಸ್ ಶೇ 5ರಷ್ಟು ಗಳಿಸಿವೆ.

ಮುನ್ನೋಟ: ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ ಮುಂದೆ ಯಾವ ತಿರುವು ಪಡೆಯಲಿದೆ ಎನ್ನುವುದು ಷೇರುಪೇಟೆ ಸೂಚ್ಯಂಕದ ಗತಿ ನಿರ್ಧರಿಸಲಿದೆ. ಬಿಕ್ಕಟ್ಟು ಶಮನಗೊಳ್ಳದಿದ್ದರೆ ಸೂಚ್ಯಂಕಗಳು ಮತ್ತಷ್ಟು ಕುಸಿಯುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಕುಸಿತದ ಸಮಯದಲ್ಲಿ ಉತ್ತಮ ಕಂಪನಿಗಳ ಷೇರುಗಳನ್ನು ಕಡಿಮೆ ದರದಲ್ಲಿ ಕೊಂಡುಕೊಳ್ಳಲು ಅಡ್ಡಿಯಿಲ್ಲ.

ಮಾರ್ಚ್ 10ರಂದು ಉತ್ತರ ಪ್ರದೇಶ ಚುನಾವಣೆಯ ಫಲಿತಾಂಶ ಹೊರಬೀಳಲಿದೆ. ಕಚ್ಚಾ ತೈಲ ಬೆಲೆ ಎಷ್ಟರ ಮಟ್ಟಿಗೆ ಏರಿಕೆ ಕಾಣಲಿದೆ ಎನ್ನುವುದು ಕೂಡ ಮಾರುಕಟ್ಟೆಯ ಮೇಲೆ ಪರಿಣಾಮ ಬೀರಲಿದೆ. ಇದಲ್ಲದೆ ಹಣದುಬ್ಬರದ ಕುರಿತಾಗಿ ಹೊರಬೀಳುವ ದತ್ತಾಂಶ, ವಿದೇಶಿ ಸಾಂಸ್ಥಿಕ ಹೂಡಿಕೆದಾರರ ನಡೆ ಕೂಡ ಮುಖ್ಯವಾಗಲಿದೆ. ಮಾರ್ಚ್ 15-16ರಂದು ಅಮೆರಿಕದ ಫೆಡರಲ್ ಬ್ಯಾಂಕ್ ಬಡ್ಡಿ ದರದ ಕುರಿತು ನಿರ್ಣಯ ಮಾಡುವ ಸಾಧ್ಯತೆಯಿದೆ.

ಫ್ಯೂಚರ್ ಮಳಿಗೆಗಳ ಕಾರ್ಯಾಚರಣೆ ಸ್ಥಗಿತ

ನವದೆಹಲಿ (ರಾಯಿಟರ್ಸ್): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್) ಕಂಪನಿಯು ಫ್ಯೂಚರ್ ರಿಟೇಲ್‌ನ ಮಳಿಗೆಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಆರಂಭಿಸಿದ ಬೆನ್ನಲ್ಲೇ ಫ್ಯೂಚರ್ ರಿಟೇಲ್ ಲಿಮಿಟೆಡ್ ಭಾರತದಲ್ಲಿನ ತನ್ನ ಬಹುತೇಕ ಸೂಪರ್‌ಮಾರ್ಕೆಟ್‌ಗಳ ಆನ್‌ಲೈನ್ ಮತ್ತು ಆಫ್‌ಲೈನ್ ಕಾರ್ಯಾಚರಣೆಗಳನ್ನು ಸ್ಥಗಿತಗೊಳಿಸಿದೆ.

ದೇಶದಾದ್ಯಂತ ಇರುವ ಬಹುತೇಕ ಫ್ಯೂಚರ್ ಮಳಿಗೆಗಳು ಭಾನುವಾರ ಬಾಗಿಲು ಮುಚ್ಚಿದ್ದವು.

ಫ್ಯೂಚರ್ ರಿಟೇಲ್‌ನ ಬಿಗ್ ಬಜಾರ್ ಮಳಿಗೆಗಳು ಇರುವ ಕಟ್ಟಡವನ್ನು ರಿಲಯನ್ಸ್ ರಿಟೇಲ್ ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು ಆರಂಭಿಸಿದೆ, ಅಲ್ಲಿ ತನ್ನ ಬ್ರ್ಯಾಂಡ್ ಅಳವಡಿಸುತ್ತಿದೆ ಎಂದು ಮೂಲಗಳು ಶನಿವಾರ ತಿಳಿಸಿವೆ. ಫ್ಯೂಚರ್ ರಿಟೇಲ್‌ನ ನೌಕರರಿಗೆ ತನ್ನ ಕಡೆಯಿಂದ ಉದ್ಯೋಗ ಕಲ್ಪಿಸಿ, ಅವರಿಗೆ ರಿಲಯನ್ಸ್ ರಿಟೇಲ್ ಕಡೆಯಿಂದ ವೇತನ ಪಾವತಿಸಲು ಆರಂಭಿಸಿದೆ.

ಫ್ಯೂಚರ್ ಬಳಿ 1,700ಕ್ಕೂ ಅಧಿಕ ಮಳಿಗೆಗಳು ಇದ್ದು, ಅವುಗಳಲ್ಲಿ 200 ಮಳಿಗೆಗಳನ್ನು ರಿಲಯನ್ಸ್ ಕಂಪನಿಯು ತನ್ನ ಬ್ರ್ಯಾಂಡ್ ಆಗಿ ಪರಿವರ್ತಿಸಲಿದೆ. ಇದರಲ್ಲಿ ಪ್ರಮುಖವಾಗಿ ಕಿಶೋರ್ ಬಿಯಾನಿ ಅವರು ಎರಡು ದಶಕಗಳ ಹಿಂದೆ ಆರಂಭಿಸಿರುವ ಬಿಗ್ ಬಜಾರ್ ಸೇರಿಕೊಂಡಿದೆ. ಈ ಬೆಳವಣಿಗೆ ಕುರಿತಾಗಿ ಎರಡೂ ಕಂಪನಿಗಳು ಪ್ರತಿಕ್ರಿಯೆ ನೀಡಿಲ್ಲ. ತನ್ನ ಕಾರ್ಯಾಚರಣೆಗಳನ್ನು ಕಡಿಮೆ ಮಾಡುತ್ತಿರುವುದಾಗಿ ಫ್ಯೂಚರ್ ರಿಟೇಲ್ ಕಂಪನಿಯು ಷೇರುಪೇಟೆಗೆ ಶನಿವಾರ ತಿಳಿಸಿದೆ.

'ಮಳಿಗೆಗಳು ಎರಡು ದಿನಗಳ ವರೆಗೆ ಕಾರ್ಯನಿರ್ವಹಿಸುವುದಿಲ್ಲ ಎಂದು ನಿಮಗೆ ತಿಳಿಸಲು ನಾವು ವಿಷಾದಿಸುತ್ತೇವೆ' ಎಂದು ಬಿಗ್ ಬಜಾರ್ ಮುಚ್ಚುವಿಕೆಯ ಬಗ್ಗೆ ದೂರು ನೀಡಿದ ಟ್ವಿಟರ್ ಬಳಕೆದಾರರಿಗೆ ಅದು ಹೇಳಿದೆ.

ಮೊಬೈಲ್ ಆ್ಯಪ್ ಮತ್ತು ವೆಬ್‌ಸೈಟ್ ಮೂಲಕ ಆರ್ಡರ್ ಮಾಡುವ ಆಯ್ಕೆಯೂ ಲಭ್ಯವಿಲ್ಲದಂತಾಗಿದೆ.

ರಿಲಯನ್ಸ್ ಕಂಪನಿಯು ಸ್ವಾಧೀನಕ್ಕೆ ತೆಗೆದುಕೊಳ್ಳುತ್ತಿರುವ ಮಳಿಗೆಗಳೆಲ್ಲವೂ ನಷ್ಟದಲ್ಲಿವೆ. ಇನ್ನುಳಿದ ಮಳಿಗೆಗಳನ್ನು ಫ್ಯೂಚರ್ ರಿಟೇಲ್ ಮುನ್ನಡೆಸಲಿದೆ. ಇದರಿಂದ ಫ್ಯೂಚರ್ ರಿಟೇಲ್‌ನ ಕಾರ್ಯಾಚರಣೆ ನಷ್ಟವು ಕಡಿಮೆ ಆಗುತ್ತದೆ ಎಂದು ಮೂಲಗಳು ಹೇಳಿವೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹390
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹395



ಟಿ20 ಸರಣಿಯಲ್ಲಿ ಶ್ರೀಲಂಕಾ ತಂಡವನ್ನು 3–0ಯಿಂದ ಮಣಿಸಿ ಪ್ರಶಸ್ತಿ ಜಯಿಸಿದ ಭಾರತದ ಆಟಗಾರರ ಸಂಭ್ರಮ– ಎಎಫ್‌ಪಿ ಚಿತ್ರ

ಮೂರನೇ ಟಿ20 ಪಂದ್ಯ: ದಸುನ್ ಶನಕ ಅರ್ಧಶತಕ– ಆವೇಶ್ ಖಾನ್ ಅಮೋಘ ಬೌಲಿಂಗ್

ಶ್ರೇಯಸ್ 'ಹ್ಯಾಟ್ರಿಕ್'; ಭಾರತ ಕ್ಲೀನ್‌ಸ್ವೀಪ್

ಧರ್ಮಶಾಲಾ (ಪಿಟಿಐ): ಸರಣಿಯಲ್ಲಿ ಸತತ ಮೂರನೇ ಅರ್ಧಶತಕ ಬಾರಿಸಿದ ಶ್ರೇಯಸ್ ಅಯ್ಯರ್ ಬ್ಯಾಟಿಂಗ್ ಬಲದಿಂದ ಭಾರತ ತಂಡವು ಶ್ರೀಲಂಕಾ ವಿರುದ್ಧ ಕ್ಲೀನ್‌ಸ್ವೀಪ್ ಸಾಧನೆ ಮಾಡಿತು.

ಹಿಮಾಚಲಪ್ರದೇಶ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ನಡೆದ ಮೂರನೇ ಟಿ20 ಪಂದ್ಯದಲ್ಲಿ ಟಾಸ್ ಗೆದ್ದ ಶ್ರೀಲಂಕಾ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ, ಕೆಟ್ಟ ಆರಂಭ ಕಂಡಿತು. 60 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡ ಶ್ರೀಲಂಕಾ ತಂಡಕ್ಕೆ ನಾಯಕ ದಸುನ್ ಶನಕ (ಔಟಾಗದೆ 74; 38ಎ, 4X9, 6X2) ಆಸರೆಯಾದರು. ಅದರಿಂದಾಗಿ ಶ್ರೀಲಂಕಾ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 146 ರನ್ ಗಳಿಸಿತು. ಅದಕ್ಕುತ್ತರವಾಗಿ ಭಾರತ ತಂಡವು 16.5 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 148 ರನ್ ಗಳಿಸಿತು. 3–0ಯಿಂದ ಸರಣಿಯನ್ನು ಕ್ಲೀನ್‌ಸ್ವೀಪ್ ಮಾಡಿತು. ಸತತ 12ನೇ ಟಿ20 ಪಂದ್ಯ ಗೆದ್ದ ಸಾಧನೆ ಮಾಡಿತು.

ಗುರಿ ಬೆನ್ನಟ್ಟಿದ ಭಾರತದ ಆರಂಭವೂ ಚೆನ್ನಾಗಿರಲಿಲ್ಲ. 51 ರನ್‌ಗಳಿಗೇ ಎರಡು ವಿಕೆಟ್ ಕಳೆದುಕೊಂಡಿತು. ಆದರೆ, ಅಮೋಘ ಲಯದಲ್ಲಿರುವ ಮುಂಬೈಕರ್ ಶ್ರೇಯಸ್ (ಅಜೇಯ 73; 45ಎ, 9ಬೌಂಡರಿ, 1ಸಿಕ್ಸರ್) ಮತ್ತೆ ಮಿಂಚಿದರು. ಎದುರಾಳಿ ಬೌಲರ್‌ಗಳ ಬೆವರಿಳಿಸಿದರು. ರವೀಂದ್ರ ಜಡೇಜ (ಅಜೇಯ 22) ಕೂಡ ಮಿಂಚಿದರು. ಇದರಿಂದಾಗಿ ತಂಡ,19 ಎಸೆತ ಬಾಕಿಯಿರುವಾಗಲೇ ಜಯಿಸಿತು. ಶ್ರೇಯಸ್ ಸರಣಿಯಲ್ಲಿ 200ಕ್ಕೂ ಹೆಚ್ಚು ರನ್ ಗಳಿಸಿದ ಸಾಧನೆ ಮಾಡಿದರು.

ಶನಕ ಅರ್ಧಶತಕ: ಮೊದಲ ಓವರ್‌ನಲ್ಲಿ ಮೊಹಮ್ಮದ್ ಸಿರಾಜ್ ಎಸೆತದಲ್ಲಿ ಗುಣತಿಲಕ ಕ್ಲೀನ್‌ಬೌಲ್ಡ್ ಆಗಿ ನಿರ್ಗಮಿಸಿದರು. ಎರಡನೇ ಓವರ್‌ನಲ್ಲಿ ಆವೇಶ್ ಖಾನ್ ಎಸೆತದಲ್ಲಿ ಚರಿತಾ ಅಸಲಂಕಾ ಔಟಾದರು. ಮೂರನೇ ಅಂತರರಾಷ್ಟ್ರೀಯ ಪಂದ್ಯ ಆಡಿದ ಆವೇಶ್ ತಮ್ಮ ಇನ್ನೊಂದು ಓವರ್‌ನಲ್ಲಿ ಪಥುಮ್ ನಿಸಾಂಕಾ ಅವರ ವಿಕೆಟ್ ಕೂಡ ಕಬಳಿಸಿದರು.

ಲಂಕೆಯ ಗಾಯದ ಮೇಲೆ ಬರೆ ಎಳೆದ ಯುವ ಸ್ಪಿನ್ನರ್ ರವಿ ಬಿಷ್ಣೋಯಿ ಕೂಡ ಜೆನಿತ್ ಲಿಯಾನಗೆ ವಿಕೆಟ್ ಕಿತ್ತರು. ಸ್ವಲ್ಪ ಚೆನ್ನಾಗಿ ಆಡುತ್ತಿದ್ದ ಚಾಂಡಿಮಲ್ (22 ರನ್) ಅವರು ಹರ್ಷಲ್ ಪಟೇಲ್ ಬೌಲಿಂಗ್‌ನಲ್ಲಿ ದೊಡ್ಡ ಹೊಡೆತಕ್ಕೆ ಯತ್ನಿಸಿ ವೆಂಕಟೇಶ್ ಅಯ್ಯರ್ ಪಡೆದ ಆಕರ್ಷಕ ಕ್ಯಾಚ್‌ಗೆ ನಿರ್ಗಮಿಸಿದರು. ಇದರಿಂದಾಗಿ ಲಂಕಾ ತಂಡವು 60 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡು ಸಂಕಷ್ಟ ಎದುರಿಸಿತು.

ಈ ಹಂತದಲ್ಲಿ ಕ್ರೀಸ್‌ಗೆ ಬಂದ ಶನಕ ಆತ್ಮವಿಶ್ವಾಸಭರಿತ ಆಟವಾಡಿದರು. ಭಾರತದ ಬೌಲರ್‌ಗಳನ್ನು ಕಾಡಿದರು. ಇನ್ನೊಂದು ಬದಿಯಲ್ಲಿದ್ದ ಚಾಮಿಕಾ ಕರುಣಾರತ್ನೆ (ಔಟಾಗದೆ 12; 19ಎ) ಯಾವುದೇ ಅವಸರದ ಹೊಡೆತಗಳಿಗೆ ಕೈಹಾಕದೇ ತಮ್ಮ ನಾಯಕನಿಗೆ ಸಂಪೂರ್ಣ ಬೆಂಬಲ ನೀಡಿದರು. ಶನಕಾ ಮಿಂಚಿನ ಹೊಡೆತಗಳನ್ನು ಕರುಣಾರತ್ನೆ ಕಣ್ತುಂಬಿಕೊಂಡರು. ಇಬ್ಬರೂ ಮುರಿಯದ ಆರನೇ ವಿಕೆಟ್ ಜೊತೆಯಾಟದಲ್ಲಿ 86 ರನ್ ಸೇರಿಸಿದರು. ಶನಕಾ ಎರಡು ಭರ್ಜರಿ ಸಿಕ್ಸರ್‌ಗಳನ್ನೂ ಸಿಡಿಸಿದರು.

ಇಶಾನ್ ಕಿಶನ್ ಕಂಕಷನ್: ವಿಕೆಟ್‌ಕೀಪರ್ ಬ್ಯಾಟ್ಸ್‌ಮನ್ ಇಶಾನ್ ಕಿಶನ್ ಅವರಿಗೂ ಮೂರನೇ ಟಿ20 ಪಂದ್ಯದ ಕಣಕ್ಕಿಳಿಯಲು ಅವಕಾಶ ನೀಡಲಿಲ್ಲ. ಶನಿವಾರ ನಡೆದಿದ್ದ ಪಂದ್ಯದಲ್ಲಿ ಅವರು ಬ್ಯಾಟಿಂಗ್ ಮಾಡುವ ಸಂದರ್ಭದಲ್ಲಿ ಲಾಹಿರು ಕುಮಾರ ಹಾಕಿದ್ದ ಬೌನ್ಸರ್ ಹೆಲ್ಮೆಟ್‌ಗೆ ಅಪ್ಪಳಿಸಿತ್ತು. ಇದರಿಂದಾಗಿ ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿತ್ತು.

'ಇಶಾನ್ ಕಿಶನ್ ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಅವರ ತಲೆಯ ಸಿ.ಟಿ. ಸ್ಕ್ಯಾನ್ ಕೂಡ ಮಾಡಲಾಗಿದೆ. ಅವರಿಗೆ ಯಾವುದೇ ಅಪಾಯವಾಗಿಲ್ಲ. ಆರೋಗ್ಯವಾಗಿದ್ದಾರೆ. ರಾತ್ರಿಯಿಡಿ ಆಸ್ಪತ್ರೆಯಲ್ಲಿದ್ದರು. ಭಾನುವಾರ ಭಾರತ ತಂಡ ತಂಗಿರುವ ಹೋಟೆಲ್‌ಗೆ ಮರಳಿದ್ದಾರೆ.' ಎಂದು ಬಿಸಿಸಿಐ ತಿಳಿಸಿದೆ.

ಸ್ಕೋರ್ ಕಾರ್ಡ್

ಶ್ರೀಲಂಕಾ 5ಕ್ಕೆ 146 (20 ಓವರ್))
ನಿಸಾಂಕ ಸಿ ವೆಂಕಟೇಶ್ ಬಿ ಆವೇಶ್ 1 (10 ಎ), ಗುಣತಿಲಕ ಬಿ ಸಿರಾಜ್ 0 (1 ಎ), ಅಸಲಂಕ ಸಿ ಸಂಜು ಬಿ ಆವೇಶ್ 4 (6 ಎ, 4x1), ಜನಿತ್ ಬಿ ರವಿ 9 (19 ಎ), ದಿನೇಶ್ ಸಿ ವೆಂಕಟೇಶ್ ಬಿ ಹರ್ಷಲ್ 22 (27 ಎ, 4x2), ಶನಕ ಔಟಾಗದೆ 74 (38 ಎ, 4x9, 6x2), ಚಮಿಕ ಔಟಾಗದೆ 12 (19 ಎ,))
ಇತರೆ (ಬೈ 4, ಲೆಗ್ ಬೈ 14, ವೈಡ್ 6) 24
ವಿಕೆಟ್ ಪತನ: 1-1 (ದನುಷ್ಕ ಗುಣತಿಲಕ, 0.6), 2-5 (ಪಾಥುಮ್ ನಿಸಾಂಕ, 1.5), 3-11 (ಚರಿತ್, 3.6), 4-29 (ಜನಿತ್ ಲಿಯಾನಗೆ, 8.3), 5-60 (ದಿನೇಶ್ ಚಾಂಡಿಮಲ್, 12.1)
ಬೌಲಿಂಗ್: ಮೊಹಮ್ಮದ್ ಸಿರಾಜ್ 4–0–22–1, ಆವೇಶ್ ಖಾನ್ 4–1–23–2, ಹರ್ಷಲ್ ಪಟೇಲ್ 4–0–29–1, ಕುಲದೀಪ್ ಯಾದವ್ 4–0–22–0, ರವಿ ಬಿಷ್ಣೋಯಿ 4–0–32–1

ಭಾರತ 4ಕ್ಕೆ148 (16.5 ಓವರ್‌ಗಳಲ್ಲಿ)
ಸಂಜು ಸಿ ಚಾಂಡಿಮಲ್ ಬಿ ಕರುಣಾರತ್ನೆ 18 (12ಎ, 4X3), ರೋಹಿತ್ ಸಿ ಕರುಣಾರತ್ನೆ ಬಿ ಚಾಮಿರಾ 5 (9ಎ, 4X1), ಶ್ರೇಯಸ್ ಔಟಾಗದೆ 73 (45ಎ,4X9, 6X1) ದೀಪಕ್ ಬಿ ಕುಮಾರ 21(16ಎ, 4X1, 6X1), ವೆಂಕಟೇಶ್ ಸಿ ಜಯವಿಕ್ರಂ (ಬದಲೀ) ಬಿ ಕುಮಾರ 5 (4ಎ, 4X1), ಜಡೇಜ ಔಟಾಗದೆ 22 (15ಎ, 4X3)
ಇತರೆ 4 (ವೈಡ್ 4)
ವಿಕೆಟ್ ಪತನ: 1–6 (ರೋಹಿತ್ ಶರ್ಮಾ; 1.4), 2–51 (ಸಂಜು ಸ್ಯಾಮ್ಸನ್; 6.2), 3–89 (ದೀಪಕ್ ಹೂಡಾ; 10.5), 4–103 (ವೆಂಕಟೇಶ್ ಅಯ್ಯರ್; 12.2)
ಬೌಲಿಂಗ್: ಬೆನುರಾ ಫರ್ನಾಂಡೊ 4–0–35–0, ದುಷ್ಮಂತ ಚಾಮಿರಾ 3–0–19–1, ಲಹೀರು ಕುಮಾರ 3.5–0–39–2, ಚಾಮಿಕಾ ಕರುಣಾರತ್ನೆ 3.4–0–31–1, ಜೆಫ್ರಿ ವಾಂಡರ್ಸೆ 2.2–0–24–0

ಫಲಿತಾಂಶ: ಭಾರತ ತಂಡಕ್ಕೆ 6 ವಿಕೆಟ್‌ಗಳ ಜಯ. ಸರಣಿಯಲ್ಲಿ 3–0 ಗೆಲುವು.

ಪಾಕಿಸ್ತಾನಕ್ಕೆ ಆಸ್ಟ್ರೇಲಿಯಾ ತಂಡ

ಇಸ್ಲಾಮಾಬಾದ್ (ಎಎಫ್‌ಪಿ): ಆಸ್ಟ್ರೇಲಿಯಾ ಕ್ರಿಕೆಟ್ ತಂಡವು ಭಾನುವಾರ ಪಾಕಿಸ್ತಾನಕ್ಕೆ ಬಂದಿಳಿಯಿತು.

24 ವರ್ಷಗಳ ನಂತರ ಆಸ್ಟ್ರೇಲಿಯಾ ತಂಡವು ಪಾಕಿಸ್ತಾನ ಪ್ರವಾಸ ಕೈಗೊಂಡಿದೆ. ತಂಡದ ಸುರಕ್ಷತೆಗಾಗಿ ಬಿಗಿ ಭದ್ರತೆ ಒದಗಿಸಲಾಗಿದೆ. ನಾಲ್ಕು ಸಾವಿರ ಪೊಲೀಸರು ಮತ್ತು ಸೇನೆಯ ತುಕಡಿಗಳು ಕ್ರಿಕೆಟ್ ತಂಡಗಳು ತಂಗಲಿರುವ ಹೋಟೆಲ್ ಮತ್ತು ಆಡಲಿರುವ ಕ್ರಿಕೆಟ್ ಕ್ರೀಡಾಂಗಣಕ್ಕೆ ಭದ್ರತೆ ಒದಗಿಸಿವೆ. ವಿಮಾನ ನಿಲ್ದಾಣದಿಂದ ಹೋಟೆಲ್‌ಗೆ ತೆರಳುವ ಮಾರ್ಗದಲ್ಲಿ ಜನಸಂಚಾರವನ್ನು ನಿರ್ಬಂಧಿಸಲಾಗಿತ್ತು. ಸೇನಾ ಹೆಲಿಕಾಪ್ಟರ್ ಪಡೆಯ ಗಸ್ತು ಕೂಡ ಏರ್ಪಡಿಸಲಾಗಿತ್ತು.

ಆಸ್ಟ್ರೇಲಿಯಾ ಆಟಗಾರ ಸ್ಟೀವನ್ ಸ್ಮಿತ್ ಅವರು ತಂಡದ ಆಟಗಾರರೊಂದಿಗೆ ಇರುವ ಚಿತ್ರವನ್ನು ಟ್ವೀಟ್ ಮಾಡಿದ್ದಾರೆ. ಪಾಕ್ ಎದುರು 3 ಟೆಸ್ಟ್, 3 ಏಕದಿನ ಮತ್ತು ಒಂದು ಟಿ20 ಪಂದ್ಯವನ್ನು ಆಸ್ಟ್ರೇಲಿಯಾ ಆಡಲಿದೆ.

ಕ್ರಿಕೆಟ್: ದಕ್ಷಿಣ ಆಫ್ರಿಕಾಕ್ಕೆ ಮುನ್ನಡೆ

ಕ್ರೈಸ್ಟ್‌ಚರ್ಚ್ (ಪಿಟಿಐ): ರಸಿ ವಾನ್ ಡರ್ ಡಸೆನ್ ಮತ್ತು ತೆಂಬಾ ಬವುಮಾ ಅವರ ತಾಳ್ಮೆಯ ಆಟದ ಫಲವಾಗಿ ದಕ್ಷಿಣ ಆಫ್ರಿಕಾ ತಂಡವು ಇಲ್ಲಿ ನಡೆಯುತ್ತಿರುವ ನ್ಯೂಜಿಲೆಂಡ್ ಎದುರಿನ ಟೆಸ್ಟ್ ಪಂದ್ಯದಲ್ಲಿ ಉತ್ತಮ ಮುನ್ನಡೆ ಗಳಿಸಿದೆ.

ಮೂರನೇ ದಿನದಾಟದ ಮುಕ್ತಾಯಕ್ಕೆ ದಕ್ಷಿಣ ಆಫ್ರಿಕಾ ತಂಡವು 2ನೇ ಇನಿಂಗ್ಸ್‌ನಲ್ಲಿ 53 ಓವರ್‌ಗಳಲ್ಲಿ 5 ವಿಕೆಟ್‌ಗೆ 140 ರನ್ ಗಳಿಸಿದೆ. ಮೊದಲ ಇನಿಂಗ್ಸ್‌ನಲ್ಲಿ 71 ರನ್‌ಗಳ ಮುನ್ನಡೆ ಪಡೆದ ದಕ್ಷಿಣ ಆಫ್ರಿಕಾ 2ನೇ ಇನಿಂಗ್ಸ್ ಆರಂಭಿಸಿದೆ. ಒಟ್ಟು 211 ರನ್‌ಗಳ ಮುನ್ನಡೆಯಲ್ಲಿದೆ. ಕೈಲ್ ವೆರೆಯೆನ್ ಮತ್ತು ವಿಯಾನ್ ಮಲ್ದಾರ್ ಕ್ರೀಸ್‌ನಲ್ಲಿದ್ದಾರೆ.

ಮೊದಲ ಇನಿಂಗ್ಸ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವು 364 ರನ್ ಗಳಿಸಿತು. ಅದಕ್ಕುತ್ತರವಾಗಿ ನ್ಯೂಜಿಲೆಂಡ್ ತಂಡವು 80 ಓವರ್‌ಗಳಲ್ಲಿ 293 ರನ್ ಗಳಿಸಲಷ್ಟೇ ಶಕ್ತವಾಯಿತು. ಕಿವೀಸ್ ಬಳಗದ ಕಾಲಿನ್ ಡಿ ಗ್ರ್ಯಾಂಡ್‌ಹೋಮ್ (ಔಟಾಗದೆ 120; 158ಎ, 4X12, 6X3) ಆಕರ್ಷಕ ಶತಕ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ: 133 ಓವರ್‌ಗಳಲ್ಲಿ 364, ನ್ಯೂಜಿಲೆಂಡ್: 80 ಓವರ್‌ಗಳಲ್ಲಿ 293 (ಕಾಲಿನ್ ಡಿ ಗ್ರ್ಯಾಂಡ್‌ಹೋಮ್ 120, ಕಗಿಸೊ ರಬಾಡ 60ಕ್ಕೆ5, ಮಾರ್ಕೊ ಜೆನ್ಸನ್ 98ಕ್ಕೆ4) 2ನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ: 53 ಓವರ್‌ಗಳಲ್ಲಿ 5ಕ್ಕೆ140 (ರಸಿ ವಾನ್ ಡರ್ ಡಸೆನ್ 45, ತೆಂಬಾ ಬವುಮಾ 23, ಕೈಲ್ ವೆರೆಯೆನ್ ಬ್ಯಾಟಿಂಗ್ 22, ಟಿಮ್ ಸೌಥಿ 28ಕ್ಕೆ2, ನೀಲ್ ವಾಗ್ನರ್ 44ಕ್ಕೆ2).

ಐಎಸ್‌ಎಲ್: ಎಟಿಕೆಎಂಬಿಗೆ ಜಯ

ಬಿಎಫ್‌ಸಿ ಕನಸು ಭಗ್ನ

ಫತೋರ್ಡ: ಲಿಸ್ಟನ್ ಕೊಲ್ಯಾಸೊ ಹಾಗೂ ಮನ್‌ವೀರ್ ಸಿಂಗ್ ಗಳಿಸಿದ ಗೋಲಿನಿಂದ ಎಟಿಕೆ ಮೋಹನ್ ಬಾಗನ್ (ಎಟಿಕೆಎಂಬಿ) ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಭಾನುವಾರ ಜಯಿಸಿತು. ಇದರೊಂದಿಗೆ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ತಂಡವು ಸ್ಪರ್ಧೆಯಿಂದ ಹೊರಬಿದ್ದಿತು.

ಇಲ್ಲಿ ನಡೆದ ಪಂದ್ಯದಲ್ಲಿ ಎಟಿಕೆ ಮೋಹನ್ ಬಾಗನ್ 2–0ಯಿಂದ ಬಿಎಫ್‌ಸಿ ಎದುರು ಗೆದ್ದಿತು. ಈ ಜಯದೊಂದಿಗೆ ಎಟಿಕೆಎಂಬಿ ತಂಡದ ನಾಲ್ಕರ ಘಟ್ಟದ ಆಸೆ ಜೀವಂತವಾಗುಳಿಯಿತು. ವಿಜೇತ ತಂಡದ ಲಿಸ್ಟನ್ 45ನೇ ನಿಮಿಷ ಮತ್ತು ಮನ್‌ವೀರ್ 85ನೇ ನಿಮಿಷದಲ್ಲಿ ಗೋಲು ಹೊಡೆದರು.


ಲಿಸ್ಟನ್ ಕೊಲ್ಯಾಸೊ

ವಾಸ್ಕೊದ ತಿಲಕ್ ಮೈದಾನ್ ಕ್ರೀಡಾಂಗಣದಲ್ಲಿ ಸೋಮವಾರ ಈಸ್ಟ್ ಬೆಂಗಾಲ್ ಮತ್ತು ನಾರ್ತ್ ಈಸ್ಟ್ ಯುನೈಟೆಡ್ ತಂಡಗಳು ಮುಖಾಮುಖಿಯಾಗಲಿವೆ.

ವಾಲಿಬಾಲ್: ಕೋಲ್ಕತ್ತಕ್ಕೆ ಪ್ರಶಸ್ತಿ

ಹೈದರಾಬಾದ್: ರಾಹುಲ್ ಮತ್ತು ವಿನೀತ್ ಅವರ ಅಮೋಘ ಆಟದ ಬಲದಲ್ಲಿ ಮಿನುಗಿದ ಕೋಲ್ಕತ್ತ ಥಂಡರ್‌ಬೋಲ್ಟ್ಸ್ ತಂಡವು ಚೊಚ್ಚಲ ಪ್ರೈಮ್ ವಾಲಿಬಾಲ್ ಲೀಗ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿತು.

ಗಚ್ಚಿಬೌಳಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್ ಹಣಾಹಣಿಯಲ್ಲಿ ಕೋಲ್ಕತ್ತ 15–13, 15–10 ಮತ್ತು 15–12ರಿಂದ ಅಹಮದಾಬಾದ್ ಡಿಫೆಂಡರ್ಸ್ ತಂಡಕ್ಕೆ ಸೋಲುಣಿಸಿತು.

ವಿನೀತ್ ಕುಮಾರ್ ಅವರು ಪಂದ್ಯಶ್ರೇಷ್ಠ ಆಟಗಾರ ಗೌರವ ಗಳಿಸಿದರೆ, ಅಹಮದಾಬಾದ್ ತಂಡದ ಶಾನ್ ಟಿ. ಜಾನ್ ಆವೃತ್ತಿಯ ಶ್ರೇಷ್ಠ ಆಟಗಾರ ಎನಿಸಿಕೊಂಡರು.

ಹಾಕಿ: ಸ್ಪೇನ್‌ಗೆ ಮಣಿದ ಭಾರತ

ಭುವನೇಶ್ವರ (ಪಿಟಿಐ): ಮೊದಲ ಪಂದ್ಯದಲ್ಲಿ ಗೆದ್ದು ಶುಭಾರಂಭ ಮಾಡಿದ್ದ ಭಾರತ ಪುರುಷ ಮತ್ತು ಮಹಿಳಾ ಹಾಕಿ ತಂಡಗಳು ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯ 2ನೇ ಹಣಾಹಣಿಯಲ್ಲಿ ಸ್ಪೇನ್ ಎದುರು ಎಡವಿದವು.

ಭಾನುವಾರ ನಡೆದ ಪಂದ್ಯದಲ್ಲಿ ಪುರುಷರ ತಂಡವು 3–5ರಿಂದ ಸ್ಪೇನ್‌ಗೆ ಮಣಿಯಿತು.ಭಾರತ ಆರನೇ ನಿಮಿಷದಲ್ಲಿ ಅಭಿಷೇಕ್ ಮೂಲಕ ಗೋಲಿನ ಖಾತೆ ತೆರೆಯಿತು. ಆದರೆ ಪ್ರವಾಸಿ ತಂಡವು ಪಾವ್ ಕುನಿಲ್ (14, 24ನೇ ನಿಮಿಷ), ಜೊವಾನ್ ಟರೆಸ್ (14ನೇ ನಿ.) ತೋರಿದ ಕೈಚಳಕದ ನೆರವಿನಿಂದ ಮುನ್ನಡೆ ಸಾಧಿಸಿತು. ಬಳಿಕ ಪೆಪೆ ಕುನಿಲ್ (54ನೇ ನಿ.) ಮತ್ತು ಮಾರ್ಕ್ ಮಿರಾಲ್ಲೆಸ್ (59ನೇ ನಿ.) ತಂಡಕ್ಕೆ ಮತ್ತೆರಡು ಗೋಲು ತಂದರು. ಭಾರತದ ಪರ ಹರ್ಮನ್ ಪ್ರೀತ್ ಸಿಂಗ್ (27ನೇ ನಿ.) ಮತ್ತು ಸುಖಜೀತ್ ಸಿಂಗ್ (51ನೇ ನಿ.) ತಲಾ ಒಂದು ಗೋಲು ದಾಖಲಿಸಿದರು.


ಭಾರತ ಮಹಿಳಾ ತಂಡವೂ ಸ್ಪೇನ್ ಎದುರು ಭಾನುವಾರ 3-4ರಿಂದ ಸ್ಪೇನ್ ತಂಡಕ್ಕೆ ಸೋತಿತು.

ಜೂಡೊ ಫೆಡರೇಷನ್; ಪುಟಿನ್ ವಜಾ

ಬುಡಾಪೆಸ್ಟ್, ಹಂಗರಿ (ರಾಯಿಟರ್ಸ್): ಅಂತರರಾಷ್ಟ್ರೀಯ ಜೂಡೊ ಫೆಡರೇಷನ್‌ನ ಗೌರವ ಅಧ್ಯಕ್ಷ ಸ್ಥಾನದಿಂದ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು ಅಮಾನತು ಮಾಡಲಾಗಿದೆ. ಉಕ್ರೇನ್ ಮೇಲೆ ಅತಿಕ್ರಮಣ ಮಾಡಿರುವುದನ್ನು ವಿರೋಧಿಸಿ ಈ ಕ್ರಮಕ್ಕೆ ಮುಂದಾಗಿರುವುದಾಗಿ ಫೆಡರೇಷನ್‌ನ ಆಡಳಿತ ಭಾನುವಾರ ತಿಳಿಸಿದೆ.

ನೆಲ, ಜಲ ಮತ್ತು ವಾಯುಮಾರ್ಗದ ಮೂಲಕ ರಷ್ಯಾವು ಉಕ್ರೇನ್ ಮೇಲೆ ಗುರುವಾರ ದಿಢೀರ್ ಆಕ್ರಮಣ ನಡೆಸಿತ್ತು. ಹೀಗಾಗಿ ಉಕ್ರೇನ್‌ನಲ್ಲಿ ಈಗ ಯುದ್ಧದ ವಾತಾವರಣ ಸೃಷ್ಟಿಯಾಗಿದೆ. ಜೂಡೊದಲ್ಲಿ ಬ್ಲ್ಯಾಕ್‌ಬೆಲ್ಟ್ ಹೊಂದಿರುವ 69 ವರ್ಷದ ಪುಟಿನ್ 'ಜೂಡೊ: ಇತಿಹಾಸ, ಸಿದ್ಧಾಂತ ಮತ್ತು ಅಭ್ಯಾಸ' ಎಂಬ ಪುಸ್ತಕ ರಚಿಸಿದ್ದಾರೆ.

ರಷ್ಯಾದ ಕಜಾನ್‌ನಲ್ಲಿ ಮೇ 20ರಿಂದ 22ರ ವರೆಗೆ ನಡೆಯಬೇಕಾಗಿದ್ದ ಜೂಡೊ ಗ್ರ್ಯಾನ್‌ಸ್ಲಾಂ ಟೂರ್ನಿಯನ್ನು ರದ್ದುಗೊಳಿಸಿರುವುದಾಗಿ ಜೂಡೊ ಫೆಡರೇಷನ್ ಶುಕ್ರವಾರ ತಿಳಿಸಿತ್ತು.


ಪುಟಿನ್

ರಷ್ಯಾ ವಿರುದ್ಧ ಆಡುವುದಿಲ್ಲ: ಜೆಕ್ ಗಣರಾಜ್ಯ ಸ್ಪಷ್ಟನೆ: ಈ ವರ್ಷ ನಡೆಯಲಿರುವ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಪ್ಲೇ ಆಫ್ ಹಂತದ ಪಂದ್ಯದಲ್ಲಿ ರಷ್ಯಾ ವಿರುದ್ಧ ಸೆಣಸುವ ಪರಿಸ್ಥಿತಿ ನಿರ್ಮಾಣವಾದರೆ ಆಡುವುದಿಲ್ಲ ಎಂದು ಜೆಕ್ ಗಣರಾಜ್ಯದ ಫುಟ್‌ಬಾಲ್ ಸಂಸ್ಥೆ ಭಾನುವಾರ ಸ್ಪಷ್ಟಪಡಿಸಿದೆ.

'ಉಕ್ರೇನ್ ಮೇಲೆ ರಷ್ಯಾ ಆಕ್ರಮಣ ನಡೆಸುತ್ತಿದೆ. ಆದ್ದರಿಂದ ಪ್ಲೇ ಆಫ್‌ನಲ್ಲಿ ಆ ದೇಶದ ತಂಡದೊಂದಿಗೆ ಆಡುವುದು ಸರಿಯಲ್ಲ ಎಂಬುದು ನಮ್ಮ ನಿರ್ಧಾರ' ಎಂದು ಜೆಕ್ ಫುಟ್‌ಬಾಲ್ ಸಂಸ್ಥೆ ತಿಳಿಸಿದೆ. ಸ್ವೀಡನ್ ಮತ್ತು ಪೋಲೆಂಡ್ ಫುಟ್‌ಬಾಲ್ ಸಂಸ್ಥೆಗಳು ಈಗಾಗಲೇ ರಷ್ಯಾ ವಿರುದ್ಧ ಆಡುವುದಿಲ್ಲ ಎಂದು ತಿಳಿಸಿವೆ.

ವಿಶ್ವಕಪ್ ಪ್ಲೇ ಆಫ್ ಹಂತದ ಮೊದಲ ಸುತ್ತಿನ ಪಂದ್ಯದಲ್ಲಿ ಜೆಕ್ ಗಣರಾಜ್ಯ ತಂಡ ಮಾರ್ಚ್ 24ರಂದು ಸ್ವೀಡನ್ ವಿರುದ್ಧ ಸ್ಟಾಕ್ ಹೋಂನಲ್ಲಿ ಆಡಲಿದೆ. ರಷ್ಯಾ ಅದೇ ದಿನ ಪೋಲೆಂಡ್ ವಿರುದ್ಧ ಸೆಣಸಲಿದೆ. ಈ ಪಂದ್ಯಗಳಲ್ಲಿ ಜೆಕ್ ಗಣರಾಜ್ಯ ಮತ್ತು ರಷ್ಯಾ ಗೆದ್ದರೆ ಪರಸ್ಪರ ಮುಖಾಮುಖಿಯಾಗಲಿವೆ.

ಚಿನ್ನಕ್ಕೆ ಮುತ್ತಿಟ್ಟ ನೀತು, ಜರೀನ್

ಸ್ಟ್ರಾಂಡ್‌ಜಾ ಮೆಮೊರಿಯಲ್ ಬಾಕ್ಸಿಂಗ್ ಟೂರ್ನಿ

ನವದೆಹಲಿ (ಪಿಟಿಐ): ಭಾರತದ ನೀತು ಮತ್ತು ನಿಖತ್ ಜರೀನ್ ಅವರು ಸ್ಟ್ರಾಂಡ್‌ಜಾ ಮೆಮೊರಿಯಲ್ ಬಾಕ್ಸಿಂಗ್ ಟೂರ್ನಿಯಲ್ಲಿ ಚಿನ್ನದ ಪದಕಕ್ಕೆ ಕೊರಳೊಡ್ಡಿದರು.

ಬಲ್ಗೇರಿಯಾದ ಸೋಫಿಯಾದಲ್ಲಿ ನಡೆಯುತ್ತಿರುವ ಟೂರ್ನಿಯ ಮಹಿಳೆಯರ 48 ಕೆಜಿ ವಿಭಾಗದ ಫೈನಲ್‌ನಲ್ಲಿ ಭಾನುವಾರ ನೀತು ಇಟಲಿಯ ಎರಿಕಾ ಪ್ರಿಸಿಯಾಂಡ್ರೊ ಅವರನ್ನು 5–0ಯಿಂದ ಪರಾಭವಗೊಳಿಸಿದರು. ತಮ್ಮ ಶರೀರದ ಎತ್ತರದ ಪ್ರಯೋಜನ ಪಡೆದ ನೀತು, ಅದ್ಭುತ ಪ್ರತಿದಾಳಿಯ ಮೂಲಕ ಮಾಜಿ ವಿಶ್ವ ಯೂತ್ ಚಾಂಪಿಯನ್ ಆಟಗಾರ್ತಿಗೆ ಆಘಾತ ನೀಡಿದರು.


ನೀತು (ಬಲ)– ಪಿಟಿಐ ಸಂಗ್ರಹ ಚಿತ್ರ

52 ಕೆಜಿ ವಿಭಾಗದಲ್ಲಿ ಕಣಕ್ಕಿಳಿದಿದ್ದ ಜರೀನ್ ಅವರು ಫೈನಲ್ ಹಣಾಹಣಿಯಲ್ಲಿ 4–1ರಿಂದ ಉಕ್ರೇನ್‌ನ ತೆತಿಯಾನಾ ಕೊಬ್ ಅವರ ಸವಾಲು ಮೀರಿದರು. ತೆತಿಯಾನ ಅವರು 3 ಬಾರಿ ಯೂರೋಪಿಯನ್ ಚಾಂಪಿಯನ್ ಆಗಿದ್ದರು.

ನಿಖತ್ ಅವರಿಗೆ 2019ರ ಆವೃತ್ತಿಯಲ್ಲೂ ಚಿನ್ನದ ಪದಕ ಒಲಿದಿತ್ತು. ಭಾರತ ಈ ಆವೃತ್ತಿಯಲ್ಲಿ ಒಟ್ಟು ಮೂರು ಪದಕಗಳನ್ನು ಗೆದ್ದುಕೊಂಡಿತು. 81 ಕೆಜಿ ವಿಭಾಗದಲ್ಲಿ ನಂದಿನಿ ಶುಕ್ರವಾರ ಕಂಚು ಗಳಿಸಿದ್ದರು.

ಕಳೆದ ಆವೃತ್ತಿಯಲ್ಲಿ ಭಾರತದ ದೀಪಕ್ ಕುಮಾರ್ ಮತ್ತು ನವೀನ್ ಬೂರಾ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡಿದ್ದರು.


ನಿಖತ್ ಜರೀನ್– ಪಿಟಿಐ ಚಿತ್ರ

ಕಾಮನ್‌ವೆಲ್ತ್ ಗೇಮ್ಸ್‌ಗೆ ವಿಕಾಸ್, ವೆಂಕಟ್

ಸಿಂಗಪುರ (ಪಿಟಿಐ): ಭಾರತದ ವಿಕಾಸ್ ಠಾಕೂರ್ ಹಾಗೂ ವೆಂಕಟ್ ರಾಹುಲ್ ರಾಗಾಲ ಅವರು ಸಿಂಗಪುರ ಅಂತರರಾಷ್ಟ್ರೀಯ ವೇಟ್‌ಲಿಫ್ಟಿಂಗ್ ಟೂರ್ನಿಯಲ್ಲಿ ಕ್ರಮವಾಗಿ ಚಿನ್ನ ಮತ್ತು ಕಂಚಿನ ಪದಕಗಳಿಗೆ ಮುತ್ತಿಕ್ಕಿದ್ದಾರೆ. ಇದರೊಂದಿಗೆ ಕಾಮನ್‌ವೆಲ್ತ್ ಗೇಮ್ಸ್‌ಗೆ ಅರ್ಹತೆ ಗಳಿಸಿದ್ದಾರೆ.

ಪುರುಷರ 96 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ವಿಕಾಸ್ ಒಟ್ಟು 339 ಕೆಜಿ (151 ಕೆಜಿ + 188 ಕೆಜಿ) ಭಾರ ಎತ್ತುವುದರೊಂದಿಗೆ ಚಿನ್ನದ ಪದಕಕ್ಕೆ ಕೊರಳೊಡ್ಡಿದರು. ಇದೇ ವಿಭಾಗದ ಸ್ಪರ್ಧೆಯಲ್ಲಿ ವೆಂಕಟ್ 328 ಕೆಜಿ (146 + 188) ತೂಕ ಸಾಧನೆಯೊಂದಿಗೆ 3ನೇ ಸ್ಥಾನ ಗಳಿಸಿದರು.